ಮಂಗಳೂರು
ಶುಕ್ರವಾರ, 26 ಜೂನ್ 2026
ಸಂಪುಟ 48, ಸಂಚಿಕೆ 99 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಸೂಪರ್ ಎಲ್ ನೀನೋ ಎದುರಿಸಲು ಸಜ್ಜಾಗಿ | ೦೫
ಖಾಲಿ ಹುದ್ದೆಗಳಿಗೆ ತ್ವರಿತ ನೇಮಕಾತಿ | ೦೫
48 ಶತಕೋಟಿ ಡಾಲರ್ ಹೂಡಿಕೆ | ೦೯

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ವಿಶಾಖೆ

ದಿನದ ಮಾತು

ಅಪಾಯದ ಪರಿಸ್ಥಿತಿಯಲ್ಲಿ ತೋರಿಸುವ ಧೈರ್ಯವೇ ಅರ್ಧ ಗೆಲುವನ್ನು ತಂದು ಕೊಡುತ್ತದೆ.

▲ನಾಣ್ನುಡಿ

ಪೆರಿಯಾರ್ ನಾಸ್ತಿಕ್ಯಕ್ಕೂ ತಮಿಳುನಾಡು ವಿಶಿಲ್!

ಉಘೇ ವೀರ ಭೂಮಿಗೆ

• ಸಂತೋಷ್ ತಮ್ಮಯ್ಯ

• ಪುಟ ೬

ಕಿರುಸುದ್ದಿ

ವಾಣಿಜ್ಯ ಸಿಲಿಂಡರ್ ನಿರ್ಬಂಧ ತೆರವುಗೊಳಿಸಿದ ಕೇಂದ್ರ: ಗ್ರಾಹಕರು ನಿರಾಳ

• **ಹೊಸದಿಲ್ಲಿ :** ಕೇಂದ್ರ ಸರಕಾರವು ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ವಿತರಣೆಯ ಮೇಲಿನ ನಿರ್ಬಂಧವನ್ನು ತೆಗೆದುಹಾಕಿದ್ದು, ಇದರಿಂದಾಗಿ ಹೋಟೆಲ್, ರೆಸಟೋರೆಂಟ್‌ಗಳು, ವಿವಾಹ ಸಂಘಟಕರು ಸೇರಿದಂತೆ ವಿವಿಧ ವರ್ಗಗಳು ನಿರಾಳಗೊಂಡಿವೆ. ಮಧ್ಯಪ್ರಾಚ್ಯ ಯುದ್ಧದಿಂದಾಗಿ ಹಾರ್ಮುಜ್ ಜಲಸಂಧಿ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಕೈಗೊಳ್ಳಲಾಗಿದ್ದ ನಿರ್ಬಂಧಗಳನ್ನ ಸಡಿಲಗೊಳಿಸಿ ಕೇಂದ್ರ ಸರಕಾರ ಪೂರ್ವೆಕೆ ನಿಯಮಗಳನ್ನು ಇದೀಗ ಸಡಿಲಗೊಳಿಸಿದ್ದು, ವಿವಿಧ ವಾಣಿಜ್ಯ ಗ್ರಾಹಕವಲಯ ತಮ್ಮ ಅಗತ್ಯಕ್ಕೆ ತಕ್ಕಂತೆ ಸಿಲಿಂಡರ್‌ಗಳನ್ನು ಪಡೆಯಬಹುದಾಗಿದ್ದು, ನಿರಾಳತೆ ಹೊಂದಿದ್ದಾರೆ.

➡ಪುಟ ೪

ತುಂಗಭದ್ರಾ ಡ್ಯಾಂ ನೂತನ 33 ಕ್ರಸ್ಟ್ ಗೇಟ್‌ಗಳ ಲೋಕಾರ್ಪಣೆ

ದೇಶದ ಅಣೆಕಟ್ಟುಗಳ ನೀರು ಸಂಗ್ರಹ ಹೆಚ್ಚಿಸಲು ಕೇಂದ್ರ ಸಿದ್ಧತೆ

ಹೂಳೆತ್ತಲು ಯೋಜನೆ



❝ ನವಲಿ ಡ್ಯಾಂ ನಿರ್ಮಾಣ ಇರಬಹುದು ಅಥವಾ ಜಲಾಶಯದಲ್ಲಿ ಶೇಖರಣೆಯಾಗಿರುವ ಹೂಳನ್ನು ತೆಗೆದು ನೀರನ್ನು ಸಂರಕ್ಷಿಸುವ ವಿಚಾರವಾಗಿರಬಹುದು. ಇವೆಲ್ಲದರ ಬಗ್ಗೆ ಗಂಟೆಗಳ ಕಾಲ ಸುದೀರ್ಘವಾಗಿ ಹಾಗೂ ವ್ಯಾಪಕವಾಗಿ ಚರ್ಚೆ ನಡೆಸಲಾಗಿದೆ. ರೈತರ ಹಿತವನ್ನು ಕಾಯಲು ಮತ್ತು ಅವರ ರಕ್ಷಣೆ ಮಾಡಲು ನಾವೆಲ್ಲರೂ ಸೇರಿ ಒಮ್ಮತದ ಅಭಿಪ್ರಾಯಕ್ಕೆ ಬಂದಿದ್ದೇವೆ.

■ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

• **ಕೊಪ್ಪಳ:** ದೇಶದಾದ್ಯಂತ ಇರುವ ಬಹುತೇಕ ಅಣೆಕಟ್ಟುಗಳಲ್ಲಿ ಶೇ.15ಕ್ಕಿಂತಲೂ ಹೆಚ್ಚು ಹೂಳು ತುಂಬಿಕೊಂಡಿದ್ದು, ಇದರಿಂದ ಜಲಾಶಯಗಳ ನೀರು ಸಂಗ್ರಹಣಾ ಸಾಮರ್ಥ್ಯ ಗಣನೀಯವಾಗಿ ಕುಸಿದಿದೆ. ದೇಶದ ಅಣೆಕಟ್ಟುಗಳಿಂದ ಹೂಳು ತೆಗೆಯುವ ಬೃಹತ್ ಯೋಜನೆಯೊಂದನ್ನು ಕೇಂದ್ರ ಸರ್ಕಾರ ಸಿದ್ಧಪಡಿಸುತ್ತಿದೆ ಎಂದು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಹೇಳಿದರು.

ಜಲಸಂಪನ್ಮೂಲ ಇಲಾಖೆ ಹಾಗೂ ತುಂಗಭದ್ರಾ ಮಂಡಳಿಯ ಸಹಯೋಗದಲ್ಲಿ ಮುನಿರಾಬಾದ್‌ನ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ಆಯೋಜಿಸಲಾಗಿದ್ದ ತುಂಗಭದ್ರಾ ಜಲಾಶಯದ ನೂತನ 33 ಕ್ರಸ್ಟ್ ಗೇಟುಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಲಶಕ್ತಿ ಸಚಿವಾಲಯವು ಹೂಳು ತೆಗೆಯುವ ವಿಶೇಷ ಯೋಜನೆಯನ್ನು ರೂಪಿಸುತ್ತಿದೆ. ಈ ಯೋಜನೆಯ ತಾಂತ್ರಿಕ ಸಹಯೋಗವನ್ನು ಕೇಂದ್ರ ಸರ್ಕಾರ ನೀಡಲಿದ್ದು, ಅನುಷ್ಠಾನದ ಜವಾಬ್ದಾರಿಯನ್ನು ಆಯಾ ರಾಜ್ಯ ಸರ್ಕಾರಗಳು ಹೊರಬೇಕಾಗುತ್ತದೆ. ಈ ಯೋಜನೆ ಯಶಸ್ವಿಯಾದರೆ ತುಂಗಭದ್ರಾ ಜಲಾಶಯದ ನೀರು ಸಂಗ್ರಹಣಾ ಸಾಮರ್ಥ್ಯವನ್ನು ಶೇ.25ರಿಂದ 30ರಷ್ಟು ಹೆಚ್ಚಿಸಬಹುದಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

➡ಪುಟ ೪

ಗೋದಾವರಿ-ಕಾವೇರಿ ನದಿಗಳ ಜೋಡಣೆ: ಆಂಧ್ರ ಸಿಎಂ ನಾಯ್ಡು

ಆಂಧ್ರಪ್ರದೇಶ ಸಿಎಂ ಚಂದ್ರಬಾಬು ನಾಯ್ಡು ಮಾತನಾಡಿ, ಕೇಂದ್ರ ಸರ್ಕಾರವು ಈಗಾಗಲೇ ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದ ನಡುವಿನ 'ಕೆನ್-ಬೆತ್ವಾ' ಯೋಜನೆ ಹಾಗೂ ರಾಜಸ್ಥಾನ ಮತ್ತು ಮಧ್ಯಪ್ರದೇಶದ ನಡುವಿನ 'ಪಾರ್ವತಿ- ಕಾಳಿಸಿಂಧು-ಚಂಬಲ್' ನದಿ ಜೋಡಣೆ ಯೋಜನೆಗಳನ್ನು ಯಶಸ್ವಿಯಾಗಿ ಕೈಗೆತ್ತಿಕೊಂಡಿರುವುದು ಶ್ಲಾಘನೀಯ. ಇದೇ ಮಾದರಿಯಲ್ಲಿ, ದಕ್ಷಿಣ ಭಾರತದ ಪ್ರಮುಖ ನದಿಗಳಾದ ಗೋದಾವರಿ ಮತ್ತು ಕಾವೇರಿ ನದಿಗಳ ಜೋಡಣೆ ಯೋಜನೆ ಯನ್ನು ಕೇಂದ್ರವು 'ರಾಷ್ಟ್ರೀಯ ಯೋಜನೆ'ಯಾಗಿ ಪರಿಗಣಿಸಿ ಅನುಷ್ಠಾನಕ್ಕೆ ತರಬೇಕು ಎಂದು ಕೇಂದ್ರಕ್ಕೆ ಮನವಿ ಮಾಡಿದರು.

ತಲೆಮಾರುಗಳ ಸಮಸ್ಯೆಗೆ ಮುಕ್ತಿ: ತೆಲಂಗಾಣ ಸಿಎಂ

ಬಳ್ಳಾರಿ, ಅನಂತಪುರ, ಕರ್ನೂಲ್ ಹಾಗೂ ಪಾಲಮೂರು ಜಿಲ್ಲೆಗಳ ವಲಸೆ ಸಮಸ್ಯೆಗಳು ಮತ್ತು ರೈತರ ಸಂಕಷ್ಟಗಳ ಸರ್ಕಾರಗಳಿಗೆ ಸಂಪೂರ್ಣ ಅರಿವಿದೆ. ಜಲಾನಯನ ಪ್ರದೇಶದ ಮೂರು ತಲೆಮಾರುಗಳ ಸಮಸ್ಯೆಗೆ ಈ 33 ಗೇಟುಗಳ ನೂತನ ಅಳವಡಿಕೆ ಮತ್ತು ಆಧುನೀಕರಣವು ಮುಕ್ತಿ ನೀಡಲಿದೆ. ಲಕ್ಷಾಂತರ ರೈತರ ಕಣ್ಣೀರು ಒರೆಸುವ ನಿಟ್ಟಿನಲ್ಲಿ ಇದೊಂದು ದೊಡ್ಡ ಪರಿಹಾರವಾಗಲಿದೆ ಎಂದು ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಹೇಳಿದರು.

ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಇಂದು ಸೂರ್ಯವಂಶಿ ಪದಾರ್ಪಣೆ ನಿರೀಕ್ಷೆ

15ರ ವೈಭವಕ್ಕೆ ಕಾಯುತ್ತಿದೆ ಇತಿಹಾಸ!

ಐರ್ಲೆಂಡ್ ವಿರುದ್ಧ ಟಿ20 ಪಂದ್ಯ



• **ಮುಂಬೈ:** ವಿಶ್ವವೇ ತಿರುಗಿ ನೋಡುವ ವಿಸ್ಮಯವೊಂದು ವೇದಿಕೆ ಸಜ್ಜಾಗಿದೆ. ಕಲ್ಪನೆಗೂ ಮೀರಿದ ಬ್ಯಾಟಿಂಗ್‌ನೊಂದಿಗೆ ಐಪಿಎಲ್, ಅಂಡರ್-19 ಹಾಗೂ ಭಾರತ ಎ ತಂಡಗಳಲ್ಲಿ ಮಿಂಚುತ್ತಿದ್ದ 15 ವರ್ಷದ ವೈಭವ್ ಸೂರ್ಯವಂಶಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಶುಕ್ರವಾರ ಪದಾರ್ಪಣೆ ಮಾಡಲು ಸಿದ್ಧರಾಗಿದ್ದಾರೆ. ಭಾರತ ಐರ್ಲೆಂಡ್ ವಿರುದ್ಧ 2 ಟಿ20 ಪಂದ್ಯಗಳನ್ನಾಡಲಿದೆ. ಸಂಭಾವ್ಯ ತಂಡದಲ್ಲಿರುವ ವೈಭವ್ ಪದಾರ್ಪಣೆ ಮಾಡುವ ನಿರೀಕ್ಷೆಗಳಿವೆ. ಐಪಿಎಲ್‌ನಲ್ಲಿ ವಿಸ್ಮಯ ಪ್ರದರ್ಶನ ನೀಡಿರುವ ಅವರು, ದಾಖಲೆಗಳಿಂದಲೇ ವಿಶ್ವದ ಗಮನ ಸೆಳೆದಿದ್ದರು. ಈಗಾಗಲೇ ನೀಲಿ ಜೆರ್ಸಿ ಪಡೆದಿರುವ ವೈಭವ್ ತಂಡದೊಂದಿಗೆ ಐರ್ಲೆಂಡ್‌ಗೆ ತಲುಪಿದ್ದಾರೆ.

➡ಪುಟ ೪

ಇಂದು ಸಂಜೆ 6:00ಕ್ಕೆ ಪಂದ್ಯ ಆರಂಭ

ಆಡಿದರೆ ಏನೆಲ್ಲಾ ದಾಖಲೆ

- ಅಂತಾರಾಷ್ಟ್ರೀಯ ಟಿ20 ಆಡಿದ ವಿಶ್ವದ ಅತಿ ಕಿರಿಯ
- ಭಾರತ ಪ್ರತಿನಿಧಿಸಿದ ಅತಿ ಕಿರಿಯ ಕ್ರಿಕೆಟಿಗ
- 15 ವಯಸ್ಸಿನಲ್ಲೇ ಭಾರತ ಜೆರ್ಸಿ ಧರಿಸಿದ ಮೊದಲ ಪುರುಷ ಆಟಗಾರ

ಐಪಿಎಲ್‌ನಲ್ಲಿ ವೈಭವ್ ದಾಖಲೆಗಳು



- ಐಪಿಎಲ್ ಆಡಿದ ಅತಿ ಕಿರಿಯ ಕ್ರಿಕೆಟರ್
- ಐಪಿಎಲ್‌ನಲ್ಲಿ ಶತಕ ಬಾರಿಸಿದ ಅತಿ ಕಿರಿಯ
- ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಶತಕ ಬಾರಿಸಿದ ಅತಿ ಕಿರಿಯ
- ಒಂದೇ ಆವೃತ್ತಿಯಲ್ಲಿ ಅತಿ ಹೆಚ್ಚು ಸಿಕ್ಸರ್ ಬಾರಿಸಿದ ಆಟಗಾರ

ತ್ವರಿತಗತಿ ತನಿಖೆಗೆ ವಿಹಿಂಪ ಆಗ್ರಹ

ಶ್ರೀರಾಮ ಮಂದಿರ ದೇಣಿಗೆ ದುರುಪಯೋಗ ಆರೋಪ

• **ಹೊಸದಿಲ್ಲಿ:** ಅಯೋಧ್ಯೆ ಶ್ರೀರಾಮ ಮಂದಿರ ದೇಣಿಗೆ ದುರುಪಯೋಗ ಆರೋಪದ ಆಧಾರದಲ್ಲಿ ಎಫ್‌ಐಆರ್ ದಾಖಲಿಸಿ, ತ್ವರಿತಗತಿ ಯಲ್ಲಿ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ವಿಶ್ವ ಹಿಂದು ಪರಿಷತ್(ವಿಹಿಂಪ) ಗುರುವಾರ ಆಗ್ರಹಿಸಿದೆ. ನಾಲ್ಕು ತಿಂಗಳೊಳಗೆ ತನಿಖೆ ಪೂರ್ಣಗೊಳಿಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ವಿಹಿಂಪ ಅಂತಾರಾಷ್ಟ್ರೀಯ ಅಧ್ಯಕ್ಷ ಆಲೋಕ್ ಕುಮಾರ್ ಒತ್ತಾಯಿಸಿದ್ದಾರೆ. ಅಯೋಧ್ಯೆ ರಾಮಮಂದಿರ ದೇಣಿಗೆಯ ದುರುಪಯೋಗದ ಆರೋಪದಲ್ಲಿ ಎಫ್‌ಐಆರ್ ದಾಖಲಿಸಬೇಕೆಂಬುದು ನಮ್ಮ ಬೇಡಿಕೆ.

➡ಪುಟ ೪

1975ರ ತುರ್ತು ಪರಿಸ್ಥಿತಿ ಅತ್ಯಂತ ಕರಾಳ ಅಧ್ಯಾಯ

ಸಂವಿಧಾನದ ಮೇಲಿನ ನೇರ ದಾಳಿ

• **ಹೊಸದಿಲ್ಲಿ:** ನಾಗರಿಕರ ಸ್ವಾತಂತ್ರ್ಯಗಳನ್ನು ಅಮಾನತುಗೊಳಿಸಿದ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕತ್ತರಿ ಹಾಕಿದ, ರಾಜಕೀಯ ನಾಯಕರು, ಪತ್ರಕರ್ತರು, ಸಾಮಾಜಿಕ ಕಾರ್ಯಕರ್ತರನ್ನು ಅನ್ಯಾಯವಾಗಿ ಬಂಧಿಸಿ ಸೆರೆಮನೆಗೆ ನೂಕಿದ ಮತ್ತು ಭಾರತೀಯ ಪ್ರಜಾಸತ್ತೆಯ ಅಡಿಗಲ್ಲಾಗಿರುವ ಸಂಸ್ಥೆಗಳಿಗೆ ಮಾರಕ ಹಾನಿ ಎಸಗಿದ ತುರ್ತು ಪರಿಸ್ಥಿತಿಯು ಸಂವಿಧಾನದ ಮೇಲಿನ ನೇರ ದಾಳಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದಾರೆ.

ಭಾರತದ ಚರಿತ್ರೆಯಲ್ಲೇ ಅತ್ಯಂತ ಕರಾಳ ಅಧ್ಯಾಯವಾಗಿರುವ ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ನಿರಂತರ ದಿಟ್ಟತನದಿಂದ ಪ್ರಜಾತಾಂತ್ರಿಕ ಮೌಲ್ಯಗಳ ರಕ್ಷಿಸಿದವರೆಲ್ಲರಿಗೂ ನಮನ ಸಲ್ಲಿಸಿದ ಪ್ರಧಾನಿ ಮೋದಿ, ತುರ್ತು ಪರಿಸ್ಥಿತಿ ನಮ್ಮ ಘನ ಸಂವಿಧಾನ ಮೇಲಾದ ನೇರ ದಾಳಿಯಾಗಿದೆ.



ಅನ್ಯಾಯವಾಗಿ ಹೇರಲಾದ ತುರ್ತು ಪರಿಸ್ಥಿತಿಯನ್ನು ಮೌನವಾಗಿ ಸಹಿಸಿ ಕೊರಲೊಪ್ಪದ ಅಸಂಖ್ಯ ಪ್ರಜೆಗಳು, ಸಂವಿಧಾನದ ಸಿದ್ಧಾಂತಗಳ ಎತ್ತಿಹಿಡಿಯುವಲ್ಲಿ ಸಫಲರಾಗಿದ್ದಾರೆ.

➡ಪುಟ ೪

೯ನೇ ತರಗತಿ ಸಮಾಜ ವಿಜ್ಞಾನದಲ್ಲಿ ತುರ್ತು ಪರಿಸ್ಥಿತಿ ಪಾಠ • ಪುಟ ೨

ಸಚಿವರಿಗೆ ಪ್ರಕೃತಿ ವಿಕೋಪ ನಿರ್ವಹಣೆಯ ಮೇಲುಸ್ತುವಾರಿ

• **ಬೆಂಗಳೂರು:** ರಾಜ್ಯದ ಪ್ರತಿ ಜಿಲ್ಲೆಗಳ ಪ್ರಕೃತಿ ವಿಕೋಪ ನಿರ್ವಹಣೆಯ ಮೇಲುಸ್ತುವಾರಿಯ ಜವಾಬ್ದಾರಿಯನ್ನು ಸಚಿವರಿಗೆ ವಹಿಸಿ ರಾಜ್ಯ ಸರ್ಕಾರ ಆದೇಶಿಸಿದ್ದು, ಪ್ರತಿಯೊಬ್ಬ ಸಚಿವರಿಗೆ ತಲಾ ಎರಡರಿಂದ ಮೂರು ಜಿಲ್ಲೆಯ ಉಸ್ತುವಾರಿ ನೀಡಲಾಗಿದೆ.



ಸರ್ಕಾರದ ಆದೇಶದಂತೆ ಡಿಸಿಎಂ ಡಾ. ಜಿ. ಪರಮೇಶ್ವರಗೆ ತುಮಕೂರು, ಚಿತ್ರದುರ್ಗ, ಕೆ.ಎಚ್. ಮುನಿಯಪ್ಪಗೆ ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ವಿಜಯನಗರ, ರಾಮಲಿಂಗಾರೆಡ್ಡಿಗೆ ಬೆಂಗಳೂರು ದಕ್ಷಿಣ ಮತ್ತು ಮಂಡ್ಯ, ಎಂ.ಬಿ. ಪಾಟೀಲ್‌ಗೆ ವಿಜಯಪುರ ಮತ್ತು ಬಾಗಲಕೋಟೆ, ಕೆ.ಜೆ. ಜಾರ್ಜ್‌ಗೆ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಾವಣಗೆರೆ, ಕೃಷ್ಣ ಬೈರೇಗೌಡಗೆ ಬೆಂಗಳೂರು ನಗರ ಮತ್ತು ಹಾಸನ, ಈಶ್ವರ ಖಂಡ್ರೆಗೆ ಬೀದರ್ ಮತ್ತು ಗದಗ ಜಿಲ್ಲೆಗಳನ್ನು ನೀಡಲಾಗಿದೆ.

➡ಪುಟ ೪

ವೆನೆಜುವೆಲಾ ಕಂಪನ | ಕನಿಷ್ಠ 164 ಬಲಿ

ಪ್ರಬಲ ಭೂಕಂಪ ಜನಜೀವನ ತತ್ತರ



◆ **ಕಾರಕಾಸ್:** ವೆನೆಜುವೆಲಾದ ಉತ್ತರ ಕರಾವಳಿ ಪ್ರದೇಶದಲ್ಲಿ 7.5 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದೆ. ಇದಕ್ಕೂ ಮುನ್ನ ಕೇವಲ 40 ಸೆಕೆಂಡುಗಳಲ್ಲಿ 7.2 ತೀವ್ರತೆಯ ಮತ್ತೊಂದು ಭೂಕಂಪನ ನಡೆದಿದೆ. ಭೂಕಂಪನದಿಂದ ಕನಿಷ್ಠ 164 ಜನರು ಬಲಿಯಾಗಿದ್ದು, 1000ಕ್ಕೂ ಮಂದಿ ಗಾಯಗೊಂಡಿದ್ದಾರೆ. ತೀವ್ರವಾಗಿ ಹಾನಿಗೊಳಗಾದ ಪ್ರದೇಶಗಳಲ್ಲಿ ರಕ್ಷಣಾ ಕಾರ್ಯಾಚರಣೆಗಳು ನಡೆಯುತ್ತಿದೆ. ಕುಸಿದಿರುವ ಕಟ್ಟಡಗಳ ಅಡಿಯಲ್ಲಿ ಸಿಲುಕಿರುವ ಜನರನ್ನು ಹೊರತೆಗೆಯಲು ಅತ್ಯಂತ ಹೆಚ್ಚು ಹಾನಿಗೊಳಗಾಗಿರುವ ಪ್ರದೇಶಗಳಿಗೆ ಆದ್ಯತೆಯ ಮೇರೆಗೆ ರಕ್ಷಣಾ ತಂಡಗಳನ್ನು ರವಾನಿಸಲಾಗುತ್ತಿದೆ ಎಂದು ಹಂಗಾಮಿ ಅಧ್ಯಕ್ಷೆ ಡೆಲ್ಸಿ ರೊಡ್ರಿಗಸ್ ತಿಳಿದ್ದಾರೆ. ಅವರು ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದ್ದು, ಭೂಕಂಪದಿಂದ ಹಾನಿಗೊಳಗಾದ ಆಸ್ಪತ್ರೆಗಳು ಮತ್ತು ಮನೆಗಳ ಪುನರ್ನಿರ್ಮಾಣಕ್ಕಾಗಿ 200 ಮಿಲಿಯನ್ ಯುಎಸ್ ಡಾಲರ್ ನಿಧಿಯನ್ನು ಪ್ರಕಟಿಸಿದ್ದಾರೆ.

- 11ಸಾವಿರ ಮಂದಿ ನಾಪತ್ತೆ
- ಸಾವಿನ ಸಂಖ್ಯೆ ಏರಿಕೆ ಸಾಧ್ಯತೆ

ಮುಂದುವರಿದ ರಕ್ಷಣಾ ಕಾರ್ಯಾಚರಣೆ: ವೆನೆಜುವೆಲಾದಲ್ಲಿ ಕಳೆದ ಒಂದು ಶತಮಾನದಲ್ಲೇ ಸಂಭವಿಸಿದ ಅತ್ಯಂತ ಶಕ್ತಿಶಾಲಿ ಭೂಕಂಪ ಇದಾಗಿದೆ. ಲಾ ಗ್ವೈರಾ ರಾಜ್ಯದಲ್ಲಿ ಮೂವರು ಮಕ್ಕಳನ್ನು ಅವಶೇಷಗಳ ಅಡಿಯಿಂದ ಜೀವಂತವಾಗಿ ರಕ್ಷಿಸಲಾಗಿದೆ. ಅತಿ ಹೆಚ್ಚು ಕಟ್ಟಡಗಳು ಕುಸಿದಿರುವುದರಿಂದ ಲಾ ಗ್ವೈರಾ ಅತ್ಯಂತ ತೀವ್ರವಾಗಿ ಹಾನಿಗೊಳಗಾದ ಪ್ರದೇಶ ಎಂದು ಘೋಷಿಸಲಾಗಿದೆ. ದೇಶದ ಇತರ ಭಾಗಗಳಿಂದ ರಕ್ಷಣಾ ತಂಡಗಳನ್ನು ಲಾ ಗ್ವೈರಾಕ್ಕೆ ಸ್ಥಳಾಂತರಿಸಲಾಗಿದೆ. ವಿಶ್ವಸಂಸ್ಥೆಯ ಪ್ರಮಾಣೀಕೃತ ಶೋಧನೆ ಮತ್ತು ರಕ್ಷಣಾ ತಂಡಗಳು ಸಹಾಯಕ್ಕಾಗಿ ವೆನೆಜುವೆಲಾಕ್ಕೆ ಪ್ರಯಾಣ ಬೆಳೆಸಿವೆ.

ದೇಶಾದ್ಯಂತ ಹಾನಿ: ಭೂಕಂಪದಿಂದಾಗಿ ದೇಶದ ಪ್ರಮುಖ ವಿಮಾನ ನಿಲ್ದಾಣವಾದ ಸೈಮನ್ ಬೊಲಿವರ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾನಿಗೊಳಗಾಗಿದ್ದು, ಅದನ್ನು ಮುಚ್ಚಲಾಗಿದೆ. ರಾಜಧಾನಿ ಕಾರಕಾಸ್‌ನ ಹಲವು ಭಾಗಗಳಲ್ಲಿ ವಿದ್ಯುತ್ ಮತ್ತು ಮೊಬೈಲ್ ನೆಟ್‌ವರ್ಕ್ ಸೇವೆಗಳು ಸ್ಥಗಿತಗೊಂಡಿವೆ. ಸುರಂಗಮಾರ್ಗ (ಸಬ್ ವೇ) ಕಾರ್ಯಾಚರಣೆಯನ್ನು ಅಮಾನತುಗೊಳಿಸಲಾಗಿದೆ. ನೈಸರ್ಗಿಕ ಅನಿಲ ಪೂರೈಕೆಯನ್ನು ಸ್ಥಗಿತಗೊಳಿಸಲಾಗಿದೆ. ಶಾಲಾ ಕಟ್ಟಡಗಳನ್ನು ಆಶ್ರಯ ತಾಣಗಳಾಗಿ ಮತ್ತು ದೇಣಿಗೆ ಕೇಂದ್ರಗಳಾಗಿ ಬಳಸಲಾಗುವುದು, ಎಂದು ಶಿಕ್ಷಣ ಸಚಿವಾಲಯ ತಿಳಿಸಿದೆ.ಮತ್ತೆ ಭೂಕಂಪ ಸಂಭವಿಸುವ ಭೀತಿಯಿಂದಾಗಿ ಅನೇಕ ನಿವಾಸಿಗಳು ಮನೆಗಳಿಂದ ಹೊರಗೇ ಉಳಿದಿದ್ದಾರೆ. ಇನ್ನು ಕೆಲವರು ನಿಲ್ಲಿಸಿದ ಕಾರುಗಳು, ಸಬ್‌ವೇ ನಿಲ್ದಾಣಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ರಾತ್ರಿ ಕಳೆದಿದ್ದಾರೆ. ಸಂಪರ್ಕ ಸೇವೆಗಳು ಅಸ್ತವ್ಯಸ್ತಗೊಂಡಿರುವುದರಿಂದ ಕಾಣೆಯಾದ ಸಂಬಂಧಿಕರ ಬಗ್ಗೆ ಮಾಹಿತಿ ಪಡೆಯಲು ಸಾಮಾಜಿಕ ಮಾಧ್ಯಮಗಳನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ.

ಮೋದಿ ಸಂತಾಪ: ನೆರವಿನ ಭರವಸೆ

ವೆನೆಜುವೆಲಾವನ್ನು ವಸ್ತುಶಃ ನಡುಗಿಸಿರುವ , ಸುಮಾರು 32ಜನರನ್ನು ಆಹುತಿ ತೆಗೆದುಕೊಂಡ ಮತ್ತು ಅಂದಾಜು 700ಕ್ಕೂ ಅಧಿಕ ಮಂದಿ ಗಾಯಗೊಂಡ' ಭಯಾನಕ ಭೂಕಂಪನ ಬಗ್ಗೆ ಗಾಢ ಸಂತಾಪ ವ್ಯಕ್ತಪಡಿಸಿರುವ ಭಾರತದ ಪ್ರಧಾನಿ ನರೇಂದ್ರ ಮೋದಿ, ಸಂತ್ರಸ್ತ ಲ್ಯಾಟಿನ್ ಅಮೆರಿಕನ್ ರಾಷ್ಟ್ರಕ್ಕೆ ಎಲ್ಲಾ ರೀತಿಯ ನೆರವು ನೀಡಲು ಭಾರತ ಸಿದ್ಧವಿದೆ ಎಂದು ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ಭರವಸೆ ನೀಡಿದ್ದಾರೆ. ವೆನೆಜುವೆಲಾ ಸರಕಾರ ಮತು ಅಲ್ಲಿನ ಜನರಿಗೆ, ಮುಖ್ಯವಾಗಿ ಭೂಕಂಪನದಲ್ಲಿ ತಮ್ಮ ಪ್ರೀತಿಪಾತ್ರರನ್ನು ಕಳಕೊಂಡ ಕುಟುಂಬಗಳಿಗೆ ನನ್ನ ಹೃದಯಪೂರ್ವಕ ಗಾಢ ಸಂತಾಪ ವ್ಯಕ್ತಪಡಿಸುತ್ತೇನೆ. ಗಾಯಾಳುಗಳ ಶೀಘ್ರ ಚೇತರಿಕೆಗೆ ಭಾರತ ಪ್ರಾರ್ಥಿಸುವುದು. ಇಂತಹ ಸಂಕಷ್ಟದ ಸನ್ನಿವೇಶದಲ್ಲಿ ಸಂತ್ರಸ್ತರ ಜತೆ ಭಾರತ ಏಕತೆಯಿಂದ ನಿಲ್ಲುವುದು. ಸಂತ್ರಸ್ತ ರಾಷ್ಟ್ರಕ್ಕೆ ಎಲ್ಲಾ ರೀತಿಯ ನೆರವು ವಿಸ್ತರಿಸಲು ಭಾರತ ಸಿದ್ಧವಿದೆ ಎಂದು ಪ್ರಧಾನಿ ಮೋದಿ ಪೋಸ್ಟ್‌ನಲ್ಲಿ ಭರವಸೆ ನೀಡಿದ್ದಾರೆ.

ಅಂತಾರಾಷ್ಟ್ರೀಯ ನೆರವು

ದುರಂತದ ಈ ಸಂದರ್ಭದಲ್ಲಿ ಭಾರತ ವೆನೆಜುವೆಲಾಕ್ಕೆ ಸಹಾಯ ಹಸ್ತ ಚಾಚಿದ್ದು, ಅಗತ್ಯ ನೆರವು ಮತ್ತು ಬೆಂಬಲವನ್ನು ಪ್ರಕಟಿಸಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಈಕ್ವೆಡಾರ್ ಮಾನವೀಯ ನೆರವನ್ನು ಘೋಷಿಸಿದ್ದರೆ, ಕತಾರ್, ಮೆಕ್ಸಿಕೋ ಮತ್ತು ಎಲ್ ಸಾಲ್ವಡಾರ್ ರಕ್ಷಣಾ ಸಿಬ್ಬಂದಿಯನ್ನು ಕಳುಹಿಸಿವೆ. ಅಮೆರಿಕದ ಶೋಧನೆ ಮತ್ತು ರಕ್ಷಣಾ ತಂಡಗಳು, ವೈದ್ಯಕೀಯ ಸಂಪನ್ಮೂಲಗಳು ಮತ್ತು ಮಾನವೀಯ ಸಹಾಯವನ್ನು ತಕ್ಷಣವೇ ನಿಯೋಜಿಸುವುದಾಗಿ ಯುಎಸ್ ವಿದೇಶಾಂಗ ಕಾರ್ಯದರ್ಶಿ ರೂಬಿಯೋ ಪ್ರಕಟಿಸಿದ್ದಾರೆ.

ಆಂಧ್ರದ ಸ್ವರ್ಣಗಿರಿ

ಭಾರತದ ಮೊದಲ ಖಾಸಗಿ ಚಿನ್ನದ ಗಣಿ ಆಂಧ್ರಪ್ರದೇಶದಲ್ಲಿ ಪ್ರಾರಂಭ



ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಸ್ವರ್ಣಗಿರಿ ಚಿನ್ನದ ಗಣಿಯಲ್ಲಿ ವಾಣಿಜ್ಯ ಉತ್ಪಾದನೆ ಅಧಿಕೃತವಾಗಿ ಆರಂಭವಾಗಿದ್ದು, ಇದು ಕಾರ್ಯಾಚರಣೆಯಲ್ಲಿರುವ ಭಾರತದ ಮೊದಲ ಖಾಸಗಿ ಚಿನ್ನದ ಗಣಿಯಾಗಿದೆ. ಈ ಐತಿಹಾಸಿಕ ಯೋಜನೆ, ದೇಶದ ಆಂತರಿಕ ಚಿನ್ನದ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸುವ ನಿರೀಕ್ಷೆಯಿದೆ. ಜತೆಗೆ 2,000 ವರ್ಷಗಳಿಗಿಂತಲೂ ಹೆಚ್ಚು ಹಳೆಯದಾದ ಗಣಿಗಾರಿಕೆಯ ಇತಿಹಾಸ ಹೊಂದಿರುವ ಈ ಸ್ಥಳಕ್ಕೆ ಮರುಜೀವ ನೀಡಲಿದೆ.

405 ಕೋಟಿ ರೂ. ಒಟ್ಟು ಹೂಡಿಕೆ ಮೊತ್ತ

400 ಕಿಲೋಗ್ರಾಂ 2026-27ರ ಉತ್ಪಾದನಾ ಗುರಿ

700 ಸ್ಥಳೀಯ ಉದ್ಯೋಗ ಸೃಷ್ಟಿ

600 ಹೆಕ್ಟರ್ ಒಟ್ಟು ವ್ಯಾಪ್ತಿ



ಐತಿಹಾಸಿಕ ಉದ್ಘಾಟನೆ

ಬುಧವಾರ ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್ ಚಂದ್ರಬಾಬು ನಾಯ್ಡು ಈ ಐತಿಹಾಸಿಕ ಗಣಿಗಾರಿಕೆ ಯೋಜನೆಯನ್ನು ಅಧಿಕೃತವಾಗಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಗಣಿಯ ಎರಡನೇ ಹಂತದ ವಿಸ್ತರಣಾ ಕಾಮಗಾರಿಗಳಿಗೂ ಚಾಲನೆ ನೀಡಿದರು. ಈ ಯೋಜಿತ ವಿಸ್ತರಣೆ ಮುಂದಿನ ಕೆಲವು ವರ್ಷಗಳಲ್ಲಿ ಗಣಿಯ ವಾರ್ಷಿಕ ಚಿನ್ನದ ಉತ್ಪಾದನಾ ಸಾಮರ್ಥ್ಯವನ್ನು ಹಂತಹಂತವಾಗಿ ಗಣನೀಯವಾಗಿ ಹೆಚ್ಚಿಸಲು ರೂಪಿಸಲ್ಪಟ್ಟಿದೆ.

ಸ್ವರ್ಣಗಿರಿ ಎಂದು ಮರುನಾಮ

ಹಿಂದೆ ಜೊನ್ನಗಿರಿ ಎಂದು ಕರೆಯಲ್ಪಡುತ್ತಿದ್ದ ಈ ಗಣಿಗಾರಿಕೆ ಪ್ರದೇಶವನ್ನು ವಾಣಿಜ್ಯ ಕಾರ್ಯಾಚರಣೆ ಪ್ರಾರಂಭವಾಗುವ ಮುನ್ನ ಆಂಧ್ರಪ್ರದೇಶ ಸರ್ಕಾರ ಸ್ವರ್ಣಗಿರಿ ಎಂದು ಅಧಿಕೃತವಾಗಿ ಮರುನಾಮಕರಣ ಮಾಡಿದೆ. ಹೊಸದಾಗಿ ಹೆಸರಿಸಲಾದ ಈ ಪದದ ಅರ್ಥ 'ಚಿನ್ನದ ಪರ್ವತ' ಎಂದಾಗಿದ್ದು, ಈ ಪ್ರದೇಶ ಚಿನ್ನದ ಗಣಿಗಾರಿಕೆಯೊಂದಿಗೆ ಹೊಂದಿರುವ ಸುದೀರ್ಘ ಐತಿಹಾಸಿಕ ಸಂಬಂಧವನ್ನು ಪ್ರತಿಬಿಂಬಿಸಲು ಈ ಹೆಸರನ್ನು ಆಯ್ಕೆ ಮಾಡಲಾಗಿದೆ.



ಭವಿಷ್ಯದ ವಿಸ್ತರಣೆ

ಮೂಲ ಗಣಿಗಾರಿಕೆಯ ಜೊತೆಗೆ, ಆಂಧ್ರಪ್ರದೇಶ ಸರ್ಕಾರ ಸ್ವರ್ಣಗಿರಿ ಗಣಿಯ ಸಮೀಪದಲ್ಲೇ ವಿಶೇಷ ಚಿನ್ನದ ಆಭರಣ ತಯಾರಿಕಾ ಪಾರ್ಕ್ ಅನ್ನು ಸ್ಥಾಪಿಸುವ ಸಮಗ್ರ ಯೋಜನೆಯನ್ನು ಪ್ರಕಟಿಸಿದೆ. ಕಚ್ಚಾ ವಸ್ತುಗಳನ್ನು ಹೊರತೆಗೆಯುವ ಪ್ರಮುಖ ಮೂಲದ ಬಳಿಯೇ ಆಭರಣ ಉತ್ಪಾದನೆಯನ್ನು ಉತ್ತೇಜಿಸಲು ಮತ್ತು ಮೌಲ್ಯವರ್ಧನೆಗೆ ಪ್ರೋತ್ಸಾಹ ನೀಡಲು ಈ ಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ. ಇದು ಸಂಸ್ಕರಣೆಗಾಗಿ ದೂರದ ಕೇಂದ್ರಗಳಿಗೆ ಲೋಹವನ್ನು ಸಾಗಿಸುವ ಅಗತ್ಯವನ್ನು ತಪ್ಪಿಸುತ್ತದೆ. ಆಂಧ್ರಪ್ರದೇಶ, ಪ್ರಸ್ತುತ ಸಕ್ರಿಯ ಪರಿಶೋಧನೆಯ ಹಂತದಲ್ಲಿರುವ ಇನ್ನೂ ಹಲವಾರು ಭರವಸೆಯ ಚಿನ್ನದ ನಿಕ್ಷೇಪಗಳನ್ನು ಹೊಂದಿದೆ ಎಂದು ರಾಜ್ಯದ ಅಧಿಕಾರಿಗಳು ತಿಳಿಸಿದ್ದಾರೆ. ಭವಿಷ್ಯದಲ್ಲಿ ಈ ಹೆಚ್ಚುವರಿ ಖನಿಜ ನಿಕ್ಷೇಪಗಳನ್ನು ಯಶಸ್ವಿಯಾಗಿ ಗುರುತಿಸಿ ಅಭಿವೃದ್ಧಿಪಡಿಸಿದರೆ, ಆಂಧ್ರಪ್ರದೇಶ ಭಾರತದ ಪ್ರಮುಖ ಚಿನ್ನದ ಗಣಿಗಾರಿಕೆ ತಾಣವಾಗಿ ಹೊರಹೊಮ್ಮಲಿದೆ.

ಉತ್ಪಾದನೆಯ ಗುರಿಗಳು

ಕಾರ್ಯಾಚರಣೆಯ ಮುನ್ಸೂಚನೆಗಳ ಪ್ರಕಾರ, ಸ್ವರ್ಣಗಿರಿ ಗಣಿ 2026-27ರ ಹಣಕಾಸು ವರ್ಷದಲ್ಲಿ ಸುಮಾರು 400 ಕಿಲೋಗ್ರಾಂ ಚಿನ್ನವನ್ನು ಉತ್ಪಾದಿಸುವ ನಿರೀಕ್ಷೆಯಿದೆ. ಹೊಸದಾಗಿ ಪ್ರಾರಂಭಿಸಲಾದ ಎರಡನೇ ಹಂತದ ವಿಸ್ತರಣೆ ಯಶಸ್ವಿಯಾಗಿ ಪೂರ್ಣಗೊಂಡ ನಂತರ, ಈ ಸ್ಥಳದಲ್ಲಿ ವಾರ್ಷಿಕ ಚಿನ್ನದ ಉತ್ಪಾದನೆ ಸುಮಾರು ಎರಡು ಟನ್‌ಗಳಿಗೆ ಏರಲಿದೆ. ಈ ಪ್ರಮಾಣದ ಬೆಳವಣಿಗೆಯು ಈ ಗಣಿಯನ್ನು ದೇಶದ ಅತಿ ದೊಡ್ಡ ಚಿನ್ನ ಉತ್ಪಾದನಾ ಕೇಂದ್ರಗಳಲ್ಲಿ ಒಂದನ್ನಾಗಿ ಮಾಡಲಿದೆ. ಈ ಬೃಹತ್ ಯೋಜನೆಯನ್ನು ಸುಮಾರು 405 ಕೋಟಿ ರೂ. ಗಳ ಅಂದಾಜು ಹೂಡಿಕೆಯೊಂದಿಗೆ ಅಭಿವೃದ್ಧಿಪಡಿಸಲಾಗಿದೆ. ಈ ಸಂಪೂರ್ಣ ಮೂಲಸೌಕರ್ಯ ಮತ್ತು ಗಣಿಗಾರಿಕೆ ಗುತ್ತಿಗೆ ಪ್ರದೇಶವು ಕರ್ನೂಲು ಜಿಲ್ಲೆಯ ಸುಮಾರು 600 ಹೆಕ್ಟೇರ್ ಪ್ರದೇಶದಲ್ಲಿ ವಿಸ್ತರಿಸಿದೆ. ಇದರ ಪರಿಣಾಮವಾಗಿ, ಆಂಧ್ರಪ್ರದೇಶ ರಾಜ್ಯ ಸರ್ಕಾರ ಹೊರತೆಗೆಯಲಾದ ಚಿನ್ನದ ಪ್ರಮಾಣದ ಆಧಾರದ ಮೇಲೆ ಪ್ರತಿವರ್ಷ ಗಣನೀಯ ರಾಯಲ್ಟಿ ಆದಾಯ ಪಡೆಯುವ ನಿರೀಕ್ಷೆಯಲ್ಲಿದೆ.

ಸುಧಾರಿತ ತಂತ್ರಜ್ಞಾನಗಳ ಬಳಕೆ

ಪ್ರಾಚೀನ ಸಾಂಪ್ರದಾಯಿಕ ವಿಧಾನಗಳಿಂದ ಆಧುನಿಕ ಖಾಸಗಿ ಉದ್ಯಮದ ಕಡೆಗಿನ ಈ ಪರಿವರ್ತನೆ, ಭಾರತದ ಖನಿಜ ಸಂಪನ್ಮೂಲ ನಿರ್ವಹಣಾ ನೀತಿಯಲ್ಲಿ ಪ್ರಮುಖ ಬದಲಾವಣೆಯನ್ನು ಸೂಚಿಸುತ್ತದೆ. ಚಿನ್ನದ ಗಣಿಗಾರಿಕೆ ವಲಯವನ್ನು ಖಾಸಗಿ ಬಂಡವಾಳ ಹೂಡಿಕೆಗೆ ಮುಕ್ತಗೊಳಿಸುವ ಮೂಲಕ, ಶತಮಾನಗಳಿಂದ ಅನ್ವೇಷಿಸಲ್ಪಡದೆ ಉಳಿದಿರುವ ಆಳವಾದ ನಿಕ್ಷೇಪಗಳನ್ನು ಸುರಕ್ಷಿತವಾಗಿ ಹೊರತೆಗೆಯಲು ಸುಧಾರಿತ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವ ಉದ್ದೇಶವನ್ನು ಸರ್ಕಾರ ಹೊಂದಿದೆ.

ಐತಿಹಾಸಿಕ ಹಿನ್ನೆಲೆ

ಇತಿಹಾಸಕಾರರು ಮತ್ತು ಪುರಾತತ್ವ ತಜ್ಞರ ಪ್ರಕಾರ, ಕರ್ನೂಲು ಪ್ರದೇಶ ಐತಿಹಾಸಿಕ ಮೌರ್ಯ ಸಾಮ್ರಾಜ್ಯದ ಅವಧಿಯಲ್ಲಿ ಅತ್ಯಂತ ಪ್ರಮುಖ ಚಿನ್ನ ಉತ್ಪಾದನಾ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿತ್ತು. ಈ ಗಣಿಗಾರಿಕೆ ಚಟುವಟಿಕೆಯು ಪ್ರಮುಖವಾಗಿ ಕ್ರಿ.ಪೂ 3ನೇ ಶತಮಾನದಲ್ಲಿ ಸಾಮ್ರಾಟ್ ಅಶೋಕನ ಆಳ್ವಿಕೆಯ ಅವಧಿಯಲ್ಲಿ ವ್ಯಾಪಕವಾಗಿ ನಡೆದಿತ್ತು. ಈ ಪ್ರದೇಶದ ಸುತ್ತಮುತ್ತ ಪತ್ತೆಯಾಗಿರುವ ಪ್ರಾಚೀನ ಶಿಲಾಶಾಸನಗಳು ಇಲ್ಲಿ ನಡೆದಿದ್ದ ಐತಿಹಾಸಿಕ ಗಣಿಗಾರಿಕೆ ಚಟುವಟಿಕೆಗಳಿಗೆ ಸ್ಪಷ್ಟ ಪುರಾವೆಗಳನ್ನು ಒದಗಿಸುತ್ತವೆ.

ಆರ್ಥಿಕ ಪರಿಣಾಮಗಳು

ನೇರ ಖನಿಜ ಆದಾಯದ ಜೊತೆಗೆ, ಈ ಕೈಗಾರಿಕಾ ಯೋಜನೆ ಸುಮಾರು 700 ನೇರ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ. ಕಾರ್ಯಾಚರಣೆಯ ಮಾರ್ಗಸೂಚಿಗಳ ಪ್ರಕಾರ, ಈ ಉದ್ಯೋಗಾವಕಾಶಗಳಲ್ಲಿ ಹೆಚ್ಚಿನ ಪಾಲನ್ನು ಹತ್ತಿರದ ಗ್ರಾಮಗಳ ನಿವಾಸಿಗಳಿಗೆ ನೀಡಲು ಉದ್ದೇಶಿಸಲಾಗಿದೆ. ಇದರಿಂದಾಗಿ ಸ್ಥಳೀಯ ಗ್ರಾಮೀಣ ಆರ್ಥಿಕತೆಗೆ ಪ್ರಮುಖ ಆರ್ಥಿಕ ಉತ್ತೇಜನ ಸಿಗಲಿದೆ. ಇತಿಹಾಸದುದ್ದಕ್ಕೂ ನೆರೆಯ ಕರ್ನಾಟಕದಲ್ಲಿರುವ ಹಟ್ಟಿ ಚಿನ್ನದ ಗಣಿ ಭಾರತದ ಆಂತರಿಕ ಚಿನ್ನದ ಉತ್ಪಾದನೆಯ ಬಹುಪಾಲು ಪಾಲನ್ನು ಹೊಂದಿತ್ತು. ಆದ್ದರಿಂದ ಸ್ವರ್ಣಗಿರಿ ಯೋಜನೆ, ದೇಶೀಯ ಪೂರೈಕೆ ಸರಪಳಿಯನ್ನು ವೈವಿಧ್ಯಗೊಳಿಸಲು, ದೇಶದ ಒಟ್ಟು ಆಂತರಿಕ ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ಭಾರತ ಆಮದು ಮಾಡಿಕೊಳ್ಳುವ ಚಿನ್ನದ ಮೇಲಿನ ದೀರ್ಘಕಾಲೀನ ಅವಲಂಬನೆಯನ್ನು ಹಂತಹಂತವಾಗಿ ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದು ಅಂದಾಜಿಸಲಾಗಿದೆ.

ಕಿರುಸುದ್ದಿ

ನಾಳೆಯಿಂದ ಪ್ರಧಾನಿ ಸೀಶೆಲ್ಸ್ ಪ್ರವಾಸ ಶುರು

◆ **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಸೀಶೆಲ್ಸ್ ಪ್ರವಾಸ ಕೈಗೊಳ್ಳಲಿದ್ದು, ಸೀಶೆಲ್ಸ್ ರಾಷ್ಟ್ರೀಯ ದಿನದ ಸುವರ್ಣ ಮಹೋತ್ಸವದಲ್ಲಿ ಗೌರವ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ(ಎಂಇಎ) ತಿಳಿಸಿದೆ. ಈ ಸಂಭ್ರಮಾಚರಣೆಯಲ್ಲಿ ಭಾರತೀಯ ಸೇನಾ ತುಕಡಿ ಹಾಗೂ ನೌಕಾಪಡೆಯ ಎರಡು ಯುದ್ಧನೌಕೆಗಳು ಪಾಲ್ಗೊಳ್ಳಲಿವೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ. ಜೂ.27ರಿಂದ 29ರವರೆಗೆ ಪ್ರಧಾನಿ ಮೋದಿ ಸೀಶೆಲ್ಸ್‌ನಲ್ಲಿಯೇ ಇದ್ದು, ಅಲ್ಲಿನ ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನಿ ಅವರೊಂದಿಗೆ ಎಲ್ಲಾ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಒಪ್ಪಂದ ಬಲವರ್ಧನೆಗಾಗಿ ಚರ್ಚಿಸಲಿದ್ದಾರೆ.

ಪ್ರಾಜೆಕ್ಟ್ ಹಾಕ್ ಐ: ಅಮರನಾಥ ಯಾತ್ರೆ ಸುರಕ್ಷತೆಗೆ ಚಾಲನೆ

◆ **ಶ್ರೀನಗರ:** ಪಹಾಲ್ಗಾಮ್ ಮೂಲಕ ಸಾಗುವ ಸಾಂಪ್ರದಾಯಿಕ ಅಮರನಾಥ ಯಾತ್ರಾ ಮಾರ್ಗದ ಸುರಕ್ಷತೆಗಾಗಿ ಪೊಲೀಸರು ಪ್ರಾಜೆಕ್ಟ್ ಹಾಕ್ ಐ ಯೋಜನೆಗೆ ಚಾಲನೆ ನೀಡಿದ್ದಾರೆ. ಈ 57 ದಿನಗಳ ಸುದೀರ್ಘ ತೀರ್ಥಯಾತ್ರೆ ಜುಲೈ 3ರಂದು ಪ್ರಾರಂಭವಾಗಿ ಆ.28ರಂದು ಮುಕ್ತಾಯಗೊಳ್ಳಲಿದೆ.ಅನಂತನಾಗ್ ಜಿಲ್ಲೆಯಲ್ಲಿ ಕೈಗೊಳ್ಳಲಾಗಿರುವ ಈ ಭದ್ರತಾ ಯೋಜನೆ, ಐದು ಡ್ರೋನ್ ತಂಡಗಳು, 28 ಎತ್ತರದ ವೀಕ್ಷಣಾ ಗೋಪುರಗಳು ಮತ್ತು 22 ಸ್ನೈಪರ್ ತಂಡಗಳನ್ನು ಒಳಗೊಂಡಿದೆ. ನಿರಂತರ ನೈಜ-ಸಮಯದ ಕಣ್ಗಾವಲಿಗಾಗಿ ಅಧಿಕಾರಿಗಳು 416 ಹೈ-ರೆಸಲ್ಯೂಶನ್ ಸಿಸಿಟಿವಿ ಕ್ಯಾಮೆರಾಗಳು ಮತ್ತು ಮುಖ ಗುರುತಿಸುವಿಕೆ ತಂತ್ರಜ್ಞಾನ ಮೂಲಸೌಕರ್ಯವನ್ನು ಅಳವಡಿಸಿದ್ದಾರೆ.

ಚೀನಾ ಮೂಲದ ಹೂಡಿಕೆಗೆ ಕೇಂದ್ರ ಅನುಮತಿ ಸಾಧ್ಯತೆ

◆ **ಹೊಸದಿಲ್ಲಿ:** ಕಳೆದೊಂದು ದಶಕದಲ್ಲೇ ಮೊದಲ ಬಾರಿಗೆ ಆಟೋಮೊಬೈಲ್ ಉದ್ಯಮದಲ್ಲಿ ಚೀನಾ ಬೆಂಬಲಿತ ಕಂಪನಿಯ ಹೂಡಿಕೆಗೆ ಕೇಂದ್ರ ಸರ್ಕಾರ ಅನುಮತಿ ನೀಡುವ ಸಾಧ್ಯತೆಯಿದೆ. ಚೀನಾ ಬೆಂಬಲಿತ ಅತಿದೊಡ್ಡ ಹೈಬ್ರಿಡ್ ಕಾರು ಇಂಜಿನ್ ತಯಾರಕ ಹಾರ್ಸ್ ಪವರ್ ಟ್ರೈನ್ ಲಿ. ದೇಶದಲ್ಲಿ 370 ದಶಲಕ್ಷ ಡಾಲರ್ ಹೂಡಿಕೆ ಮಾಡಲು ಹೊರಟಿದೆ. ಚೆನ್ನೈನ ರೆನೊ ಘಟಕದಲ್ಲಿ ಹೈಬ್ರಿಡ್ ಇಂಜಿನ್‌ಗಳನ್ನು ಹಾರ್ಸ್ ಪವರ್‌ಟ್ರೈನ್ ಲಿ. ನಿರ್ಮಿಸುವ ಸಾಧ್ಯತೆಯಿದೆ. ದೇಶೀಯ ಉತ್ಪಾದನೆಗೆ ಉತ್ತೇಜನ ನೀಡುವ ಹಾಗೂ ಹೈಬ್ರಿಡ್ ವಾಹನಗಳಿಗೆ ಹೆಚ್ಚುತ್ತಿರುವ ಬೇಡಿಕೆಯಿಂದ ಕೇಂದ್ರ ಸರ್ಕಾರ ತನ್ನ ನೀತಿಗಳಲ್ಲಿ ಬದಲಾವಣೆ ಮಾಡಿಕೊಂಡಿದ್ದು, ಈ ಹೂಡಿಕೆಗೆ ಅನುಮತಿ ನೀಡುವ ಸಾಧ್ಯತೆಯಿದೆ.

ಸುಂಕ ಲಾಭ ಚೌಕಟ್ಟಿಲ್ಲದೆ ಒಪ್ಪಂದವಿಲ್ಲ: ಗೋಯಲ್

◆ **ಹೊಸದಿಲ್ಲಿ:** ಇತರ ಸ್ಪರ್ಧಾತ್ಮಕ ದೇಶಗಳಿಗಿಂತ ಭಾರತದ ರಫ್ತುಗಳಿಗೆ ತುಲನಾತ್ಮಕ ಸುಂಕ ಅನುಕೂಲ ಖಾತ್ರಿಯ ಚೌಕಟ್ಟೊಂದನ್ನು ಹೊಂದುವ ವರೆಗೆ ಅಮೆರಿಕದ ಜೊತೆಗೆ ಯಾವುದೇ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಭಾರತ ಮುಂದಾಗುವುದಿಲ್ಲ ಎಂಬುದಾಗಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಸ್ಪಷ್ಟಪಡಿಸಿದ್ದಾರೆ. ಅಮೆರಿಕದ ಜೊತೆಗಿನ ಸಂಧಾನ ಕುರಿತಂತೆ ಮಾತನಾಡಿದ ಅವರು, ಚರ್ಚೆಗಳು ಮುಂದುವರಿದಿದ್ದರೂ, ಈಗ ಭಾರತಕ್ಕೆ ಅಮೆರಿಕ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕತೆಯಲ್ಲಿ ಮೇಲುಗೈ ಲಭಿಸುವಂತಹ ತುಲನಾತ್ಮಕ ಸುಂಕ ಚೌಕಟ್ಟೊಂದನ್ನು ರೂಪಿಸುವುದಕ್ಕೆ ಹೆಚ್ಚು ಒತ್ತು ನೀಡಿದ್ದೇವೆ .ಸ್ಪರ್ಧಾತ್ಮಕತೆಯ ಅನುಕೂಲತೆಯನ್ನು ಹೊಂದುವ ಚೌಕಟ್ಟೊಂದು ರೂಪುಗೊಳ್ಳದ ಹೊರತು ನಾವು ಅಮೆರಿಕದ ಜತೆ ಒಪ್ಪಂದಕ್ಕೆ ಮುಂದಾಗುವುದಿಲ್ಲ ಎಂದಿದ್ದಾರೆ. ಕಳೆದ ಫೆ.6ರಂದು ಉಭಯ ದೇಶಗಳು ವ್ಯಾಪಾರ ಒಪ್ಪಂದ ಕುರಿತ ವಿಶಾಲ ರೂಪುರೇಷೆಗಳ ಬಗ್ಗೆ ಒಪ್ಪಿಕೊಂಡಿವೆ. ಅನಂತರ ಉಭಯ ದೇಶಗಳು ಸೂಕ್ಷ್ಮ ಅಂಶಗಳ ಕುರಿತು ಕೆಲಸ ಮಾಡುತ್ತಿವೆ .ಅಮೆರಿಕವು ಸ್ಪರ್ಧಾತ್ಮಕತೆಯ ಅನುಕೂಲವನ್ನು ಭಾರತಕ್ಕೆ ಒದಗಿಸಬಹುದಾಗಿದ್ದು , ಈಗ ಕಾನೂನು ಮತ್ತು ನೀತಿ ವ್ಯವಸ್ಥೆಗಳ ಚರ್ಚೆಗಳು ನಡೆಯುತ್ತಿವೆ .ಭಾರತಕ್ಕೆ ಕಾನೂನಾತ್ಮಕ ಮತ್ತು ನೀತಿಯ ನೆಲೆಯಲ್ಲಿ ಬಲ ಅಗತ್ಯವಿದೆ ಎಂದು ಅವರು ವಿವರಿಸಿದರು. ಭಾರತ-ಅಮೆರಿಕ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ(ಬಿಟಿಎ)ದ ಮೊದಲ ಹಂತವನ್ನು ಅಂತಿಮಗೊಳಿಸಿದಾಗ ಭಾರತಕ್ಕೆ ವಿಧಿಸಲಾಗಿರುವ ಸುಂಕವನ್ನು ಶೇ.25ರಿಂದ ಶೇ.18ಕ್ಕೆ ಇಳಿಸಲು ಅಮೆರಿಕ ಒಪ್ಪಿತ್ತು.



ದಂಗೆ ಎದ್ದ ಪಿಒಕೆಗೆ ಪಾಕಿಸ್ತಾನ ದಿಗ್ಬಂಧನ

◆ **ಇಸ್ಲಾಮಾಬಾದ್:** ಸ್ವಾರ್ಥಿ ಪಾಕಿಸ್ತಾನ ತನ್ನ ನಾಗರಿಕರನ್ನೇ ಉಪವಾಸಕ್ಕೆ ತಳ್ಳುತ್ತಿರುವುದು ವಿಪರ್ಯಾಸ. ಸರ್ಕಾರದ ವಿರುದ್ಧ ದಂಗೆ ಎದ್ದ ಒಂದೇ ಒಂದು ಕಾರಣಕ್ಕೆ ಪಾಕ್ ಆಕ್ರಮಿತ ಕಾಶ್ಮೀರಕ್ಕೆ ಆಹಾರ, ಔಷಧ ನೀಡದೇ ದಿಗ್ಬಂಧನ ಹೇರಿದೆ. ಈ ಬಗ್ಗೆ ನಿವಾಸಿಗಳು, ಟ್ರಕ್ ಚಾಲಕರು ಸ್ಥಳೀಯ ಮಾಧ್ಯಮಗಳಿಗೆ ತಿಳಿಸಿದ್ದು, ಅಗತ್ಯ ಸರಕುಗಳನ್ನು ಸಾಗಿಸುವ ವಾಹನಗಳನ್ನು ಪ್ರದೇಶವನ್ನು ಪ್ರವೇಶಿಸದಂತೆ ತಡೆಯಲಾಗುತ್ತಿದೆ ಎಂದಿದ್ದಾರೆ. ಈ ಪ್ರದೇಶದಲ್ಲಿ ಆರ್ಥಿಕ ಮತ್ತು ರಾಜಕೀಯ ಕುಂದುಕೊರತೆಗಳನ್ನು ಪ್ರಶ್ನಿಸಿ, ಪ್ರತಿಭಟನೆಗಳನ್ನು ಮುನ್ನಡೆಸುತ್ತಿರುವ ಪ್ರಮುಖ ನಾಗರಿಕ ಸಮಾಜದ ಒಕ್ಕೂಟವಾದ ಜಂಟಿ ಅವಾಮಿ ಕ್ರಿಯಾ ಸಮಿತಿ (ಜೆಎಎಸಿ)ಯನ್ನು ನಿಷೇಧಿಸಿದ ಬಳಿಕ ಪ್ರತಿಭಟನೆ ಭುಗಿಲೆದ್ದಿತ್ತು. ಆದರೇ ಪಾಕಿಸ್ತಾನಿ ಅಧಿಕಾರಿಗಳು ದಿಗ್ಬಂಧನ ಆರೋಪವನ್ನು ತಳ್ಳಿ ಹಾಕಿದ್ದಾರೆ. ಕೆಲವು ಮಾಧ್ಯಮಗಳ ಪ್ರಕಾರ, ಪ್ರತಿಭಟನೆಗಳು, ಧರಣಿಗಳು ಮತ್ತು ವ್ಯಾಪಾರ ಮುಷ್ಕರಗಳಿಂದ ಈ ಪ್ರದೇಶದ ಹಲವಾರು ಪಟ್ಟಣಗಳಲ್ಲಿ ದೈನಂದಿನ ಜೀವನವನ್ನು ಸ್ಥಗಿತಗೊಳಿಸಿವೆ. ಪ್ರತಿಭಟನೆ ಭುಗಿಲೆದ್ದ ದಿನದಿಂದ ಪಿಒಕೆಯ ದೈನಂದಿನ ಜೀವನವು ತೀವ್ರವಾಗಿ ಅಸ್ತವ್ಯಸ್ತಗೊಂಡಿದೆ. ಸಾರಿಗೆ ಜಾಲಗಳನ್ನು ದುರ್ಬಲಗೊಳಿಸಲಾಗಿದ್ದು, ಸರಕು ಮತ್ತು ಸೇವೆಗಳ ಸಂಚಾರವನ್ನು ಅಡ್ಡಿಪಡಿಸಿದೆ. ಪಾಕಿಸ್ತಾನಿ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಈ ಪ್ರದೇಶಕ್ಕೆ ಆಹಾರ, ಇಂಧನ ಮತ್ತು ವೈದ್ಯಕೀಯ ಸರಬರಾಜುಗಳ ಸಾಗಣೆಯನ್ನು ನಿರ್ಬಂಧಿಸಿರುವುದರಿಂದ ಬಿಕ್ಕಟ್ಟು ಉಲ್ಬಣಗೊಂಡಿದೆ ಎಂದು ನಿವಾಸಿಗಳು ಮತ್ತು ವಿರೋಧ ಪಕ್ಷಗಳು ಆರೋಪಿಸಿವೆ.

ಕನಿಷ್ಕಾ ಸ್ಫೋಟ ಖಲಿಸ್ತಾನಿ ಉಗ್ರರ ಕುಕೃತ್ಯ: ಕೆನಡಾ

◆ **ಒಟ್ಟಾವಾ:** ಏರ್ ಇಂಡಿಯಾದ ಕನಿಷ್ಕಾ ವಿಮಾನವನ್ನು 1985ರಲ್ಲಿ ಬಾಂಬ್ ಸ್ಫೋಟಿಸಿ 329 ಮಂದಿಯನ್ನು ಹತ್ಯೆಗೈದ ಕುಕೃತ್ಯದ ಹಿಂದೆ ಕೆನಡಾ ಮೂಲದ ಖಲಿಸ್ತಾನಿ ಉಗ್ರರ ಕೈವಾಡವಿತ್ತು ಎಂದು ಕೆನಡಾದ ಭದ್ರತಾ ಗುಪ್ತಚರ ಸೇವೆ ಮೊದಲ ಬಾರಿಗೆ ಸ್ಪಷ್ಟವಾಗಿ ಒಪ್ಪಿಕೊಂಡಿದೆ. ಭಾರತವು ಆರಂಭದಿಂದಲೂ ಇದು ಖಲಿಸ್ತಾನಿ ಉಗ್ರರ ಸಂಚು ಎಂದು ಪ್ರತಿಪಾದಿಸುತ್ತಲೇ ಬಂದಿದ್ದರೂ, ಕೆನಡಾದ ಸರ್ಕಾರಗಳು ಈವರೆಗೆ ಅಧಿಕೃತ ಹೇಳಿಕೆಗಳಲ್ಲಿ ಖಲಿಸ್ತಾನಿ ಎಂಬ ಪದವನ್ನು ನೇರವಾಗಿ ಬಳಸಲು ಹಿಂದೇಟು ಹಾಕುತ್ತಿದ್ದವು. ಇದೀಗ ಕೆನಡಾದ ಪ್ರಮುಖ ಗುಪ್ತಚರ ಸಂಸ್ಥೆಯ ಹೇಳಿಕೆಯು ಖಲಿಸ್ತಾನಿ ಉಗ್ರವಾದದ ಬಗ್ಗೆ ಭಾರತ ವ್ಯಕ್ತಪಡಿಸುತ್ತಿದ್ದ ಕಳವಳಕ್ಕೆ ಪುಷ್ಟಿ ನೀಡಿದೆ. ದುರಂತದ ಸ್ಮರಣಾರ್ಥ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿರುವ ಸಂದೇಶದಲ್ಲಿ, 1985ರ ಜೂ.23ರಂದು ಕೆನಡಾ ಮೂಲದ ಖಲಿಸ್ತಾನಿ ಉಗ್ರರು ಇರಿಸಿದ್ದ ಬಾಂಬ್‌ನಿಂದ ಏರ್ ಇಂಡಿಯಾ ವಿಮಾನ ಸ್ಫೋಟವಾಗಿದ್ದು, ಅದರಲ್ಲಿದ್ದ ಎಲ್ಲರೂ ಮೃತಪಟ್ಟಿದ್ದರು. ಕೆನಡಾದ ಇತಿಹಾಸದಲ್ಲಿಯೇ ಇದು ಅತ್ಯಂತ ಭೀಕರ ಭಯೋತ್ಪಾದಕ ದಾಳಿ ಎಂದು ಗುಪ್ತಚರ ಸಂಸ್ಥೆ ತಿಳಿಸಿದೆ.

ಬೋಯಿಂಗ್ 747 ಮಾದರಿಯ ಏರ್ ಇಂಡಿಯಾ ವಿಮಾನಕ್ಕೆ ಎಂಪರರ್ ಕನಿಷ್ಕಾ ಎಂದು ಹೆಸರಿಡಲಾಗಿತ್ತು. ವಿಮಾನದ ಸರಕು ವಿಭಾಗದಲ್ಲಿ ಇರಿಸಲಾಗಿದ್ದ ಬಾಂಬ್ ಅಟ್ಲಾಂಟಿಕ್ ಸಾಗರದ ಮೇಲೆ ಸ್ಫೋಟಗೊಂಡಿತ್ತು. ವಿಮಾನದಲ್ಲಿದ್ದ ಪ್ರಯಾಣಿಕರು ಹಾಗೂ ಸಿಬ್ಬಂದಿ ಸೇರಿದಂತೆ 329 ಮಂದಿ ಮೃತಪಟ್ಟಿದ್ದರು. ಮೃತರಲ್ಲಿ 268 ಮಂದಿ ಕೆನಡಾ ನಾಗರಿಕರಾಗಿದ್ದರು.

ಐಎಎಫ್ ನೇತ್ರಾ ಕಣ್ಗಾವಲು ವ್ಯವಸ್ಥೆಗೆ ಅಂತಿಮ ಅನುಮತಿ

◆ **ಹೊಸದಿಲ್ಲಿ:** ಸ್ವದೇಶಿ ನಿರ್ಮಿತ ನೇತ್ರಾ ಕಣ್ಗಾವಲು ಮತ್ತು ನಿಯಂತ್ರಣ ವ್ಯವಸ್ಥೆಗೆ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಒ) ಅಂತಿಮ ಕಾರ್ಯಾಚರಣಾ ಅನುಮತಿ(ಎಫ್‌ಒಸಿ) ನೀಡಿದೆ. ಇದರೊಂದಿಗೆ ಭಾರತೀಯ ವಾಯುಪಡೆ (ಐಎಎಫ್) ವೈಮಾನಿಕ ಕಣ್ಗಾವಲು ಮತ್ತು ಯುದ್ಧ ನಿರ್ವಹಣಾ ಸಾಮರ್ಥ್ಯ ಬಲವರ್ಧನೆಯಲ್ಲಿ ಹೊಸ ಮೈಲಿಗಲ್ಲು ಬರೆದಿದೆ. ಇದು ಆಪರೇಷನ್ ಸಿಂದೂರ ಮತ್ತು ಬಾಲಾಕೋಟ್ ದಾಳಿಗಳಲ್ಲಿ ಬಳಕೆಯಾಗಿತ್ತು ಎಂದು ವಾಯು ಸಿಬ್ಬಂದಿ ಉಪ ಮುಖ್ಯಸ್ಥ ಏರ್ ಮಾರ್ಷಲ್ ಅವಧೇಶ್ ಕುಮಾರ್ ಭಾರ್ತಿ ತಿಳಿಸಿದ್ದಾರೆ. ನೇತ್ರಾಗೆ ಆರಂಭಿಕ ಕಾರ್ಯಾಚರಣಾ ಅನುಮತಿ(ಐಒಸಿ)ಯನ್ನು 2017ರಲ್ಲಿ ನೀಡಲಾಗಿತ್ತು. ವೈಮಾನಿಕ ಕಣ್ಗಾವಲು, ಸಂದರ್ಭದ ಅರಿವು ಮತ್ತು ಯುದ್ಧ ನಿರ್ವಹಣಾ ಸಾಮರ್ಥ್ಯದೊಂದಿಗೆ ವಿನ್ಯಾಸಗೊಳಿಸಲಾಗಿದೆ.



ಮೋದಿ ಭೇಟಿ ಬಳಿಕ ಅಮೆಜಾನ್ ಸಿಇಒ ಘೋಷಣೆ

48 ಶತಕೋಟಿ ಡಾಲರ್ ಹೂಡಿಕೆ

◆ **ಹೊಸದಿಲ್ಲಿ:** ಮುಂದಿನ 5 ವರ್ಷಗಳಲ್ಲಿ ದಾಖಲೆಯ 48 ಶತಕೋಟಿ ಡಾಲರ್ ಹೂಡಿಕೆ ಮಾಡುವುದಾಗಿ ಅಮೆಜಾನ್ ಘೋಷಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರನ್ನು ಗುರುವಾರ ಭೇಟಿಯಾದ ಬಳಿಕ ಅಮೆಜಾನ್ ಸಿಇಒ ಆ್ಯಂಡಿ ಜೆಸ್ಸಿ ಈ ಘೋಷಣೆಯನ್ನು ಮಾಡಿದ್ದಾರೆ. ಈ ಬಾರಿ ಅಮೆಜಾನ್ 13 ಶತಕೋಟಿ ಡಾಲರ್ ಹೆಚ್ಚುವರಿ ಹೂಡಿಕೆ ಮಾಡಲಿದೆ. ಅಮೆಜಾನ್ ಕಂಪನಿಯ ಪಾಲಿಗೆ ಭಾರತವು ಜಾಗತಿಕ ಮಟ್ಟದಲ್ಲೇ ಅತ್ಯಂತ ಪ್ರಮುಖ ಮಾರುಕಟ್ಟೆಯಾಗಿದೆ. ಕಂಪನಿಯ ಹೊಸ ಹೂಡಿಕೆಗಳು ಭಾರತೀಯ ಮಾರುಕಟ್ಟೆಗೆ ಅಮೆಜಾನ್ ಬದ್ಧತೆಯನ್ನು ತೋರಿಸುತ್ತದೆ. ಅಮೆಜಾನ್‌ನ ಭಾರತದ ವ್ಯವಹಾರವು ಅತ್ಯಂತ ಆವೇಗದಲ್ಲಿ ಮುನ್ನುಗ್ಗುತ್ತಿದೆ. ಭಾರತದಲ್ಲಿ ಅಮೆಜಾನ್‌ನ ಇ-ಕಾಮರ್ಸ್, ಅಮೆಜಾನ್ ವೆಬ್ ಹಾಗೂ ಕ್ಲೌಡ್ ಕಂಪ್ಯೂಟಿಂಗ್ ಸೇವೆಗಳಿಗೆ ಅತ್ಯಂತ ಗ್ರಾಹಕ ಬೇಡಿಕೆಯಿದೆ ಎಂದು ಸಿಇಒ ಜೆಸ್ಸಿ ಹೇಳಿದ್ದಾರೆ.

ಕೇಂದ್ರ ಸರ್ಕಾರ ಡಿಜಿಟಲ್ ಆರ್ಥಿಕತೆ ವಿಸ್ತರಿಸಿದ್ದು, ಅಮೆಜಾನ್ ಕ್ಲೌಡ್ ಮತ್ತು ಎಐ ಸೇವೆಗಳ ಗ್ರಾಹಕರ ಸಂಖ್ಯೆ ಮತ್ತು ಬೇಡಿಕೆಗಳೂ ಹೆಚ್ಚುತ್ತಿವೆ. ಇದರಿಂದ ಜಾಗತಿಕ ಟೆಕ್ ದೈತ್ಯ ಅಮೆಜಾನ್ ಭಾರತದಲ್ಲಿ ಹೂಡಿಕೆಯನ್ನು ಹೆಚ್ಚಿಸುವುದಾಗಿ ಘೋಷಿಸಿದೆ. ಕಳೆದೊಂದು ದಶಕದಿಂದ ಕಂಪನಿ ಭಾರತದಲ್ಲಿ ತನ್ನ ಹೂಡಿಕೆಯನ್ನು ಹೆಚ್ಚಿಸುತ್ತಲೇ ಬಂದಿದೆ. ವಿಶ್ವದ ಅತಿ ವೇಗದ ಪ್ರಗತಿ ಕಾಣುತ್ತಿರುವ ಆರ್ಥಿಕತೆಯಲ್ಲಿ ಲಾಜಿಸ್ಟಿಕ್ಸ್ ಸಂಪರ್ಕಜಾಲ, ತಂತ್ರಜ್ಞಾನ ಮೂಲಸೌಕರ್ಯ, ಎಐ ಹಾಗೂ ಡಿಜಿಟಲ್ ಸೇವೆಗಳಲ್ಲಿ ಆಳವಾಗಿ ಬೇರೂರುವಲ್ಲಿ ಅಮೆಜಾನ್ ಯಶಸ್ವಿಯಾಗಿದೆ.



ಅಮೆಜಾನ್ ಹೂಡಿಕೆಗೆ ಪ್ರಧಾನಿ ಸ್ವಾಗತ: ಅಮೆಜಾನ್‌ನ ದಾಖಲೆಯ 48 ಶತಕೋಟಿ ಡಾಲರ್ ಹೂಡಿಕೆ ಘೋಷಣೆಯನ್ನು ಪ್ರಧಾನಿ ಮೋದಿ ಸ್ವಾಗತಿಸಿದ್ದಾರೆ. ಅಲ್ಲದೆ, ಅಮೆಜಾನ್ ಹೂಡಿಕೆಯಿಂದ ದೇಶದ ಯುವಜನತೆಗೆ ಹೊಸ ಉದ್ಯೋಗ ಅವಕಾಶಗಳನ್ನು ಒದಗಿಸಲಿದೆ ಎಂದು ಪ್ರಧಾನಿ ತಮ್ಮ ಎಕ್ಸ್ ಪೋಸ್ಟ್‌ನಲ್ಲಿ ಹೇಳಿದ್ದಾರೆ. ಪ್ರಧಾನಿ ಮೋದಿಯವರ ಭೇಟಿಯ ಬಳಿಕ ಭಾರತದಲ್ಲಿನ ದೀರ್ಘಕಾಲದ ಹೂಡಿಕೆ ಬದ್ಧತೆಯನ್ನು ಸಿಇಒ ಜೆಸ್ಸಿ ಪುನರುಚ್ಚರಿಸಿದ್ದಾರೆ.

ಎನ್‌ಸಿಇಆರ್‌ಟಿ ನಿರ್ಧಾರಕ್ಕೆ ಸಚಿವ ಪ್ರಧಾನ್ ಶ್ಲಾಘನೆ

ಸಮಾಜ ವಿಜ್ಞಾನದಲ್ಲಿ ತುರ್ತು ಪರಿಸ್ಥಿತಿ ಪಾಠ

◆ **ಹೊಸದಿಲ್ಲಿ :** ತುರ್ತು ಪರಿಸ್ಥಿತಿಗೆ ಸಂಬಂಧಪಟ್ಟ ಪಾಠವನ್ನು 9ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕಕ್ಕೆ ಎನ್‌ಸಿಇಆರ್‌ಟಿ ಸೇರ್ಪಡೆ ಮಾಡಿದೆ. ತುರ್ತು ಪರಿಸ್ಥಿತಿ ಭಾರತದ ಪ್ರಜಾಸತ್ತೆಗೊಂದು ಪ್ರಮುಖ ಸವಾಲಾಗಿದೆ ಎಂದು ಎನ್‌ಸಿಇಆರ್‌ಟಿ ವಿಶ್ಲೇಷಿಸಿದೆ. ದೇಶದಲ್ಲಿ ಹಿಂದೆ ನಡೆದಿರುವ ಕರಾಳ ಕೃತ್ಯಗಳನ್ನು ಭಾವೀ ಪೀಳಿಗೆ ಅರಿಯಬೇಕು ಎಂದು ಎನ್‌ಸಿಇಆರ್‌ಟಿಯ ಯೋಜನೆಯನ್ನು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಶ್ಲಾಘಿಸಿದ್ದಾರೆ. 1970ರ ಆರಂಭದಲ್ಲಿ ಇಂದಿರಾಗಾಂಧಿ ನೇತೃತ್ವದ ಸರಕಾರದ ಆಡಳಿತ ವೈಖರಿ ಬಗ್ಗೆ ಸಾರ್ವಜನಿಕ ಅಸಂತೃಪ್ತಿ ತೀವ್ರವಾಗಿತ್ತು. ಹೆಚ್ಚಿದ್ದ ನಿರುದ್ಯೋಗ ಸಮಸ್ಯೆ, ಹಣದುಬ್ಬರ ಮತ್ತು ತಪ್ಪು ಆಡಳಿತ ನೀತಿ ವಿರುದ್ಧ ಜನರಿಂದ ವ್ಯಾಪಕ ಪ್ರತಿಭಟನೆಗಳು ವ್ಯಕ್ತವಾಗಿದ್ದವು. ಈ ಹಿನ್ನೆಲೆಯಲ್ಲಿ ಆಂತರಿಕ ಕ್ಷೋಭೆಯ ನೆಪವೊಡ್ಡಿ ಸರಕಾರ 1975 ಜೂನ್‌ನಲ್ಲಿ ರಾಷ್ಟ್ರೀಯ ತುರ್ತುಪರಿಸ್ಥಿತಿಯನ್ನು ದೇಶದ ಮೇಲೆ ಹೇರಿತ್ತು. ತುರ್ತು ಪರಿಸ್ಥಿತಿ ಅವಧಿಯಲ್ಲಿ ಬಹುತೇಕ ಮೂಲಭೂತ ಹಕ್ಕುಗಳು ಅಮಾನತಾಗಿದ್ದವು. ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲಾಗಿತ್ತು. ಸಾಕಷ್ಟು ಸಂಖ್ಯೆಯಲ್ಲಿ ರಾಜಕೀಯ ನಾಯಕರು ಮತ್ತು ಸಾಮಾಜಿಕ ಕಾರ್ಯಕರ್ತರನ್ನು ವಿನಾಕಾರಣ ಬಂಧಿಸಲಾಗಿತ್ತು. ಪ್ರಜಾತಾಂತ್ರಿಕ ಸಂಸ್ಥೆಗಳ ಮೇಲೆ ಅನಗತ್ಯ ಒತ್ತಡತಂತ್ರ ಹೇರಲಾಗಿತ್ತು ಮತ್ತು ಜನರ ಸ್ವಾತಂತ್ರ್ಯಕ್ಕೆ ಕತ್ತರಿ ಹಾಕಲಾಗಿತ್ತು ಎಂದು ಹೊಸತಾಗಿ ರಚಿತ ಸಮಾಜ ವಿಜ್ಞಾನ ಪಠ್ಯಪುಸ್ತಕ 'ಅಂಡರ್‌ಸ್ಟ್ಯಾಂಡಿಂಗ್ ಸೊಸೈಟಿ : ಇಂಡಿಯಾ ಅಂಡ್ ಬಿಯಾಂಡ್'ನ ಪಾಠದಲ್ಲಿ ವಿವರಿಸಲಾಗಿದೆ.

ಸಸ್ಯಾಹಾರ ಪ್ರಚಾರ ಮಾಡಿಲ್ಲ ಕೃಷ್ಣಾನದಿ ಹೆಸರು, ದೇವರದ್ದಲ್ಲ

◆ **ಹೊಸದಿಲ್ಲಿ:** 6ನೇ ತರಗತಿ ಕನ್ನಡ ಪಠ್ಯಪುಸ್ತಕದಲ್ಲಿ ಸಸ್ಯಾಹಾರ ಪ್ರಚಾರವಿಲ್ಲ. ಕೃಷ್ಣ ಎಂಬ ಪದ ಕೃಷ್ಣಾ ನದಿಯಿಂದ ಪ್ರೇರಿತವಾಗಿದ್ದು, ಇದು ಭಗವಾನ್ ಶ್ರೀ ಕೃಷ್ಣನನ್ನು ಉಲ್ಲೇಖಿಸುವುದಿಲ್ಲ ಎಂದು ಎನ್‌ಸಿಇಆರ್‌ಟಿ ಸ್ಪಷ್ಟನೆ ನೀಡಿದೆ. ಎನ್‌ಸಿಇಆರ್‌ಟಿಯು ಆರ್3 ಭಾಷೆಯ ಪಠ್ಯಪುಸ್ತಕಗಳನ್ನು ಒಳಗೊಂಡಂತೆ ತನ್ನ ಭಾಷಾ ಪಠ್ಯಪುಸ್ತಕಗಳಿಗೆ ನದಿಗಳ ಹೆಸರಿಡುವ ಅಭ್ಯಾಸವನ್ನು ಅಳವಡಿಸಿಕೊಂಡಿದೆ. ಕೃಷ್ಣ ಎಂಬ ಹೆಸರು ಭಾರತದ ಪ್ರಮುಖ ನದಿಗಳಲ್ಲಿ ಒಂದಾದ ಕೃಷ್ಣ ನದಿಯಿಂದ ಸ್ಫೂರ್ತಿ ಪಡೆದಿದೆ. ಇದು ಕರ್ನಾಟಕದಲ್ಲಿಯೂ ಹರಿಯುತ್ತದೆ. ಇನ್ನೊಂದೆಡೆ, ಪಠ್ಯಪುಸ್ತಕದಲ್ಲಿ ಸಸ್ಯಾಹಾರವನ್ನು ಉತ್ತೇಜಿಸಲಾಗಿದೆ ಹಾಗೂ ಮಾಂಸಾಹಾರವನ್ನು ಕಡೆಗಣಿಸಲಾಗಿದೆ ಎಂಬ ಆರೋಪಕ್ಕೂ ಎನ್‌ಸಿಇಆರ್‌ಟಿ ಸ್ಪಷ್ಟನೆ ನೀಡಿದೆ. 6ನೇ ಅಧ್ಯಾಯದಲ್ಲಿ 'ಸಮತೋಲಿತ ಆಹಾರ' ಕುರಿತು ವಿವರವಾಗಿ ಪಾಠವಿದ್ದು, 63ನೇ ಪುಟದಲ್ಲಿ ಇದೇ ವಿಷಯವನ್ನು ಪ್ರತ್ಯೇಕ ಶೀರ್ಷಿಕೆಯಲ್ಲಿ ವಿವರಿಸಲಾಗಿದೆ ಎಂದು ತಿಳಿಸಿದೆ.

ಕಿರುಸುದ್ದಿ

ಜೂ.26-27: ಗುಡಿಗಳ ತೆರವು ಬಗ್ಗೆ ಧಾರ್ಮಿಕ ಕಾರ್ಯಕ್ರಮಗಳು

ಪುತ್ತೂರು: ಪ್ರಶ್ನಾ ಚಿಂತನೆಯಲ್ಲಿ ಕಂಡು ಬಂದಂತೆ ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ನಾಗನಗುಡಿ, ನವಗ್ರಹಗುಡಿ ಹಾಗೂ ಅಯ್ಯಪ್ಪ ಗುಡಿಗಳನ್ನು ತೆರವುಗೊಳಿಸುವ ಬಗ್ಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿಯವರ ನೇತೃತ್ವದಲ್ಲಿ ಜೂ.26 ಹಾಗೂ 27ರಂದು ಸಂಜೆ ನಡೆಯಲಿದೆ. ಸಂಜೆ 6.30ರಿಂದ ವಾಸ್ತುಹೋಮ, ವಾಸ್ತುಬಲಿ, ರಾಕ್ಷೋಘ್ನಹೋಮ ಹಾಗೂ ಜೂ. 27 ರಂದು ಬೆಳಗ್ಗೆ 7.30 ರಿಂದ ಮೂಲ ನಾಗಸನ್ನಿಧಿಯಲ್ಲಿ ನಾಗಪ್ರತಿಷ್ಠೆ, ಆಶ್ಲೇಷಬಲಿ, ವಟು ಆರಾಧನೆ ಕಾರ್ಯಕ್ರಮ, ದೇವಸ್ಥಾನದ ಒಳಾಂಗಣದಲ್ಲಿ ನವಗ್ರಹ ಪ್ರತಿಷ್ಠೆ ಹಾಗೂ ಶ್ರೀ ಶಾರದಾ ಭಜನಾ ಮಂದಿರದಲ್ಲಿ ಶ್ರೀ ಅಯ್ಯಪ್ಪ ವಿಗ್ರಹ ಬಾಲಾಲಯ ಪ್ರತಿಷ್ಠಾ ಕಾರ್ಯಕ್ರಮಗಳು ಜರಗಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರಸಾದ ಸ್ವೀಕರಿಸಿ ಶ್ರೀದೇವರ ಕೃಪೆಗೆ ಪಾತ್ರರಾಗುವಂತೆ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್ ತಿಳಿಸಿದ್ದಾರೆ.

ಜೂನ್ 29 ರಂದು ಕುದ್ಮುಲ್ ರಂಗರಾವ್ ದಿನಾಚರಣೆ

ಮಂಗಳೂರು: ಮನಪಾ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಕುದ್ಮುಲ್ ರಂಗರಾವ್ ದಿನಾಚರಣೆ ಜೂ. 29 ರಂದು ಬೆಳಿಗ್ಗೆ 10 ಗಂಟೆಗೆ ಕುದ್ಮುಲ್ ರಂಗರಾವ್ ಪುರಭವನದಲ್ಲಿ ನಡೆಯಲಿದೆ. ಆರೋಗ್ಯ ಸಚಿವ ಯು.ಟಿ. ಖಾದರ್ ಫರೀದ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಡಿ. ವೇದವ್ಯಾಸ್ ಕಾಮತ್ ಅಧ್ಯಕ್ಷತೆ ವಹಿಸಲಿದ್ದಾರೆ. ಗೋಕರ್ಣನಾಥ ಕಾಲೇಜಿನ ಪ್ರಾಂಶುಪಾಲ ರಘುರಾಜ್ ಕದ್ರಿ ಉಪನ್ಯಾಸ ನೀಡಲಿದ್ದಾರೆ.

ಸಿಎ ಅಂತಿಮ ಪರೀಕ್ಷೆ: ನಾಗರಾಜ ಉತ್ತೀರ್ಣ



ಬೆಳ್ತಂಗಡಿ: ಶ್ರೀ ಕ್ಷೇತ್ರ ಧರ್ಮಸ್ಥಳ ದೇವಸ್ಥಾನದ ಅರ್ಚಕ ರಾಮಕೃಷ್ಣ ಮಂಜಿತ್ತಾಯ ಮತ್ತು ಸುಮಾ ಮಂಜಿತ್ತಾಯ ದಂಪತಿಯ ಪುತ್ರ ನಾಗರಾಜ ಮಂಜಿತ್ತಾಯ ಕಳೆದ ಮೇ 2026ರಲ್ಲಿ ನಡೆದ ಚಾರ್ಟರ್ಡ್ ಅಕೌಂಟೆಂಟ್ ಅಂತಿಮ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲೇ ಉತ್ತೀರ್ಣರಾಗಿದ್ದಾರೆ .

ಅನಧಿಕೃತ ತಂಬಾಕು ಉತ್ಪನ್ನ ಘಟಕ ಪತ್ತೆ: ಇಬ್ಬರ ಸೆರೆ


ಕಾಸರಗೋಡು: ಆಪರೇಷನ್ ತೂಫಾನ್‌ನ ನಾರ್ಕೋ ಹಂಟ್ ಕಾರ್ಯಾಚರಣೆಯನ್ವಯ ಮೈಲಾಟಿ 220 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ ವಠಾರದ ರಾಷ್ಟ್ರೀಯ ಹೆದ್ದಾರಿ ಬದಿಯ ಕಟ್ಟಡವೊಂದಕ್ಕೆ ಮೇಲ್ಪರಂಬ ಠಾಣಾ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಕೇರಳದಲ್ಲಿ ನಿಷೇಧಿತ ತಂಬಾಕು ಉತ್ಪನ್ನಗಳ ನಿರ್ಮಾಣ ಘಟಕವನ್ನು ಪತ್ತೆಹಚ್ಚಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿ ಕೂಡ್ಲು ಮೀಪುಗುರಿ ನಿವಾಸಿ ಸಿ.ಎಂ.ಜಾಫರ್ (32) ಮತ್ತು ಬದಿಯಡ್ಕ ನಿವಾಸಿ ಮೊಹಮ್ಮದ್ ಹಾರೀಸ್ (29) ಎಂಬವರನ್ನು ಬಂಧಿಸಿದ್ದಾರೆ. ಮೇಲ್ಪರಂಬ ಠಾಣೆಯ ಇನ್‌ಸ್ಪೆಕ್ಟರ್ ಎನ್.ಪಿ.ರಾಘವನ್ ನೇತೃತ್ವದ ಕಾರ್ಯಾಚರಣೆ ನಡೆಸಿದೆ. ಅಕ್ರಮವಾಗಿ ಪಾನ್ ಮಸಾಲ ನಿರ್ಮಾಣ ಘಟಕದಿಂದ ಉತ್ಪನ್ನಗಳನ್ನು ಪ್ಯಾಕಿಂಗ್ ಮಾಡುವ ಯಂತ್ರ, ಉತ್ಪಾದನಾ ಘಟಕಗಳು, ಕಂಪ್ರೆಸರ್ ಯಂತ್ರ ಹಾಗೂ 15,000 ತಂಬಾಕು ಉತ್ಪನ್ನಗಳ ಪ್ಯಾಕೆಟ್‌ಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ತಂಬಾಕು ಉತ್ಪನ್ನಗಳ ಪ್ಯಾಕೆಟ್‌ಗಳನ್ನು 14 ಗೋಣಿ ಚೀಲಗಳಲ್ಲಾಗಿ ತುಂಬಿಸಿಡಲಾಗಿತ್ತೆಂದು ಪೊಲೀಸರು ತಿಳಿಸಿದ್ದಾರೆ. ಇಲ್ಲಿ ಅನಧಿಕೃತವಾಗಿ ಪಾನ್ ಮಸಾಲ ತಯಾರಿ ಘಟಕ ಕಾರ್ಯವೆಸಗುತ್ತಿರುವ ಬಗ್ಗೆ ಲಭಿಸಿದ ರಹಸ್ಯ ಮಾಹಿತಿಯನ್ವಯ ದಾಳಿ ನಡೆಸಲಾಗಿತ್ತು. ಶುಚೀಕರಣ ಉತ್ಪನ್ನ ತಯಾರಿ ಘಟಕ ಈ ಕಟ್ಟಡದಲ್ಲಿ ಕಾರ್ಯಾಚರಿಸುತ್ತಿದ್ದು, ಇದರ ಮರೆಯಲ್ಲಿ ಅನಧಿಕೃತ ತಂಬಾಕು ಉತ್ಪಾದನಾ ಘಟಕ ಕಾರ್ಯವೆಸಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಕುಡಿದು ಕಾರು ಚಲಾಯಿಸಿ ಅಪಘಾತವೆಸಗಿದ ಚಾಲಕನಿಗೆ ನ್ಯಾಯಾಂಗ ಬಂಧನ



ಉಡುಪಿ: ಮಣಿಪಾಲದ ಈಶ್ವರ ನಗರದ ರಾಷ್ಟ್ರೀಯ ಹೆದ್ದಾರಿಯಲ್ಲಿ ಮದ್ಯಪಾನ ಮಾಡಿ ನಿರ್ಲಕ್ಷ್ಯದಿಂದ ಕಾರು ಚಲಾಯಿಸಿ ಸ್ಕೂಟರ್‌ಗೆ ಡಿಕ್ಕಿ ಹೊಡೆದ ಆರೋಪಿಯನ್ನು ಮಣಿಪಾಲ ಪೊಲೀಸರು ಬಂಧಿಸಿದ್ದು, ನ್ಯಾಯಾಲಯವು ಆತನಿಗೆ ನ್ಯಾಯಾಂಗ ಬಂಧನ ವಿಧಿಸಿದೆ. ಕಾರ್ಕಳ ಮುಡಾರು ನಿವಾಸಿ ಸಮೇಗ್ದ್ ಎಲ್. ಜೆ. (25) ಬಂಧಿತ ಕಾರು ಚಾಲಕ. ಜೂನ್ 19ರಂದು ರಾತ್ರಿ ಮಣಿಪಾಲದ ಸಾಯಿ ಸಾಗರ್ ಹೋಟೆಲ್ ಬಳಿ ಈತ ಚಲಾಯಿಸುತ್ತಿದ್ದ ಕಾರು, ಅಲೆವೂರಿನ ಅಭಿಷೇಕ್ ನಾಯಕ್ (21) ಅವರ ಸ್ಕೂಟರ್‌ಗೆ ಡಿಕ್ಕಿ ಹೊಡೆದಿತ್ತು. ಅಪಘಾತದಲ್ಲಿ ಅಭಿಷೇಕ್ ಅವರಿಗೆ ಗಂಭೀರ ಗಾಯಗಳಾಗಿದ್ದು, ಚಾಲಕ ಮದ್ಯಪಾನ ಮಾಡಿರುವುದು ದೃಢಪಟ್ಟಿತ್ತು. ಮಣಿಪಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಜೂನ್ 22ರಂದು ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ತಲೆಮರೆಸಿಕೊಂಡಿದ್ದ ಆರೋಪಿ ಬಂಧನ



ಬಂಟ್ವಾಳ: ಎರಡು ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿಯೋರ್ವನನ್ನು ಬಂಟ್ವಾಳ ನಗರ ಪೊಲೀಸರು ಬಂಧಿಸಿದ್ದಾರೆ. ಕಾಟಿಪಳ್ಳ ಸುರತ್ಕಲ್ ನಿವಾಸಿ ಮೊಹಮ್ಮದ್ ಆಯುಬ್ ಎಂಬವರ ಪುತ್ರ ಮೊಹಮ್ಮದ್ ಫರಾಜ್ ಬಂಽತನಾಗಿದ್ದಾನೆ. 2023 ರಲ್ಲಿ ಬಂಟ್ವಾಳ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಪ್ರಕರಣವೊಂದಕ್ಕೆ ಸಂಬಂಽಸಿ ಬಂಟ್ವಾಳ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮಾರಿಸಿಕೊಂಡಿದ್ದು, ನ್ಯಾಯಾಲಯ ಈತನ ಬಂಧನಕ್ಕೆ ವಾರೆಂಟ್ ಜಾರಿಗೊಳಿಸಿತ್ತು. ಆರೋಪಿಯು ಮಂಗಳೂರಿನಲ್ಲಿರುವುದನ್ನು ಪತ್ತೆಹಚ್ಚಿದ ಬಂಟ್ವಾಳ ನಗರ ಪೊಲೀಸರ ತಂಡ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ. ಈತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ಈತನಿಗೆ ನ್ಯಾಯಾಂಗ ಬಂಧನ ವಿಧಿಸಿದೆ.



ಸಸಿಹಿತ್ಲು ಗ್ರಾಮದ ಮೀನುಗಾರಿಕಾ ದಕ್ಕೆ ಹಾಗೂ ಇತರ ಭಾಗಗಳಿಗೆ ಎಂಆರ್ ಪಿಎಲ್‌ನ ಸಿಎಸ್‌ಆರ್ ಯೋಜನೆ ಅಡಿಯಲ್ಲಿ ನೀಡಲ್ಪಟ್ಟ ಸೋಲಾರ್ ಹೈಮಾಸ್ಟ್ ಹಾಗೂ ಸೋಲಾರ್ ದಾರಿ ದೀಪವನ್ನು ಸಂಸದ ಕ್ಯಾ. ಬ್ರಿಜೇಶ್ ಚೌಟ ಉದ್ಘಾಟಿಸಿದರು. ಬಿಜೆಪಿ ಮುಖಂಡರಾದ ಭುವನಾಭಿರಾಮ ಉಡುಪ, ಸುನಿಲ್ ಆಳ್ವ, ರವೀಂದ್ರ ಶೆಟ್ಟಿ ಉಳಿದೊಟ್ಟು , ಶೋಭೇಂದ್ರ, ಅನಿಲ್ ಕುಂದರ್, ದಿನೇಶ್ ಪುತ್ರನ್, ಈಶ್ವರ್ ಕಟೀಲ್, ವಸಂತ್ ಸುವರ್ಣ, ಸೂರ್ಯ ಕಾಂಚನ್, ಮನೋಜ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಯಂಗ್ ಇಂಡಿಯನ್ಸ್ (ವೈಐ) ಸಂಸ್ಥೆಯ ವತಿಯಿಂದ ಜು.3 ಮತ್ತು 4ರಂದು

ಯಂಗ್ ಇಂಡಿಯನ್ಸ್ ಸಂಸತ್ 2026 ಕಾರ್ಯಕ್ರಮ

ಮಂಗಳೂರು: ದೇಶದ ಯುವಜನತೆಯಲ್ಲಿ ನಾಯಕತ್ವ, ರಾಷ್ಟ್ರ ನಿರ್ಮಾಣ ಮತ್ತು ಚಿಂತನಶೀಲತೆಯನ್ನು ಪ್ರೇರೇಪಿಸುವ ಉದ್ದೇಶದಿಂದ ಯಂಗ್ ಇಂಡಿಯನ್ಸ್ (ವೈಐ) ಸಂಸ್ಥೆಯ ವತಿಯಿಂದ ಯಂಗ್ ಇಂಡಿಯನ್ಸ್ ಸಂಸತ್ 2026 ಕಾರ್ಯಕ್ರಮ ಜು.3 ಮತ್ತು 4ರಂದು ಬೆಳಗ್ಗೆ 9 ರಿಂದ ಸಂಜೆ 4ರವರೆಗೆ ನಗರದ ಯೆಯ್ಯಾಡಿಯ ಬ್ಲೂಬೆರಿ ಹಿಲ್ಸ್ ರಸ್ತೆಯಲ್ಲಿರುವ ಭಾರತ್ ಅಕಾಡೆಮಿಯಲ್ಲಿ ನಡೆಯಲಿದೆ.

ಬೆಳಗ್ಗೆ 9 ಗಂಟೆಗೆ ಸಂಸದ ಕ್ಯಾ. ಬ್ರಿಜೇಶ್ ಚೌಟ, ಶಾಸಕ ವೇದವ್ಯಾಸ ಕಾಮತ್ ಉದ್ಘಾಟಿಸಲಿದ್ದಾರೆ. ದೇಶದ ಕರಾವಳಿ ಭಾಗಗಳಲ್ಲಿ ಆರ್ಥಿಕ ಬೆಳವಣಿಗೆ, ಪರಿಸರ ಸುಸ್ಥಿರತೆ ಮತ್ತು ಸಮುದಾಯಗಳ ಜೀವನೋಪಾಯದ ನಡುವಿನ ಸಮತೋಲನ, ಬಂದರು, ಮೀನುಗಾರಿಕೆ, ಪ್ರವಾಸೋದ್ಯಮ, ಸಮುದ್ರ ಪರಿಸರ ವ್ಯವಸ್ಥೆಗಳು ಮತ್ತು ನೀಲಿ ಆರ್ಥಿಕತೆಯ ಭವಿಷ್ಯ ಎಂಬ ವಿಷಯಗಳ ಆಧಾರದಲ್ಲಿ ಸಂಸತ್‌ನ ಕಾರ್ಯಕಲಾಪ ನಡೆಯಲಿದೆ ಎಂದು ಯಂಗ್ ಇಂಡಿಯನ್ಸ್ ಮಂಗಳೂರು ಘಟಕದ ಅಧ್ಯಕ್ಷ ಶರಣ್ ಶೆಟ್ಟಿ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

9ನೇ ತರಗತಿಯಿಂದ 12ನೇ ತರಗತಿಯವರೆಗೆ ಆಯ್ಕೆಯಾದ ಪ್ರತಿಭಾವಂತ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಸಂಸತ್ತಿನ ಕಾರ್ಯವಿಧಾನಗಳನ್ನು ಅನುಕರಿಸುವ ಮೂಲಕ ಪ್ರಜಾಪ್ರಭುತ್ವದ ಮೌಲ್ಯಗಳು, ಸಾರ್ವಜನಿಕ ನೀತಿಗಳು ಮತ್ತು ಶಾಸನಾತ್ಮಕ ಪ್ರಕ್ರಿಯೆಗಳ ಬಗ್ಗೆ ನೇರ ಅನುಭವ ಪಡೆಯಲಿದ್ದಾರೆ. 8ನೇ ತರಗತಿ ವಿದ್ಯಾರ್ಥಿಗಳು ವೀಕ್ಷಕರಾಗಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಪ್ರಶ್ನೋತ್ತರ ಅವಽ, ಶೂನ್ಯ ವೇಳೆ, ತುರ್ತು, ಮಹತ್ವದ ವಿಷಯಗಳ ಚರ್ಚೆ, ಸರಕಾರದ ಹೇಳಿಕೆಗಳು, ನೀತಿಗಳ ಚರ್ಚೆಗಳು, ಮಸೂದೆ ರಚನೆ ಹಾಗೂ ಶಾಸನಾತ್ಮಕ ಚರ್ಚೆಗಳು ಸೇರಿದಂತೆ ವಿವಿಧ ಸಂಸತ್ತಿನ ಕಾರ್ಯಚಟುವಟಿಕೆಗಳು ನಡೆಯಲಿವೆ ಎಂದರು.

ವೈಐ ಪ್ರಮುಖರಾದ ಆದಿತ್ಯ ಪದ್ಮನಾಭ ಪೈ, ಆಶಿಶ್ ರೈ, ಕೇದಾರನಾಥ್ ಶೆಣೈ ಉಪಸ್ಥಿತರಿದ್ದರು.

ಲಂಡನ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಗ್ರೀನ್ವಿಚ್ ಒಲಿಂಪಿಯಾಡ್

ಶಕ್ತಿಯ ಶಾಸ್ತಾ ನ್ಯಾಕ್‌ಗೆ ಕಂಚಿನ ಪದಕ

ಮಂಗಳೂರು: ಇತ್ತೀಚೆಗೆ ಉತ್ತರ ಲಂಡನಿನ ಗ್ರಾಮರ್ ಸ್ಕೂಲ್‌ಕ್ವೀನ್ ಮೇರಿ ವಿಶ್ವವಿದ್ಯಾಲಯದಲ್ಲಿ ನಡೆದ ಅಂತಾರಾಷ್ಟ್ರೀಯ ಗ್ರೀನ್ವಿಚ್ ಒಲಿಂಪಿಯಾಡ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ ಶಕ್ತಿ ರೆಸಿಡೆನ್ಶಿಯಲ್ ಶಾಲೆಯ 10ನೇ ತರಗತಿಯ ವಿದ್ಯಾರ್ಥಿ ಶಾಸ್ತಾ ನ್ಯಾಕ್ ವರ್ಕಾಡಿ ಅವರು ಕಂಚಿನ ಪದಕ ಗಳಿಸಿದ್ದಾರೆ. 58 ದೇಶಗಳಿಂದ 510 ಯುವವಿಜ್ಞಾನಿಗಳನ್ನು ಒಟ್ಟುಗೂಡಿಸಿದ ಈ ಜಾಗತಿಕ ಸಮಾರಂಭದಲ್ಲಿ ಅವರ ಸಾಧನೆಯು ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಗಮನಾರ್ಹ ಸಾಧನೆಯಾಗಿದೆ.

ತಮ್ಮ ನವೀನ ಕೃತಕ ಬುದ್ಧಿಮತ್ತೆ ಆಧಾರಿತ ಬಹು–ಕೃಷಿ ರೋಬೋಟಿಕ್ ವ್ಯವಸ್ಥೆಗಾಗಿ ಶಾಸ್ತಾ ಅವರು ಈ ಗೌರವವನ್ನು ಗಳಿಸಿದ್ದಾರೆ. ಇದು ರೈತರು ಬಹು ಕೃಷಿ ಕಾರ್ಯಾಚರಣೆಗಳನ್ನು ಸಮರ್ಥವಾಗಿ ನಿರ್ವಹಿಸಲು ನೆರವಾಗುವಂಥ ಸ್ಮಾರ್ಟ್ ತಂತ್ರಜ್ಞಾನವಾಗಿದೆ. ಕೃತಕ ಬುದ್ಧಿಮತ್ತೆ ಮತ್ತು ರೋಬೋಟಿಕ್ಸ್ ಅನ್ನು ಸಂಯೋಜಿಸಿರುವ ಈ ಮಾದರಿಯು ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವ, ಮಾನವ ಶ್ರಮವನ್ನು ಕಡಿಮೆ ಮಾಡುವ ಮತ್ತು ಸುಸ್ಥಿರ ಕೃಷಿ ಪದ್ಧತಿಗಳನ್ನು ಪ್ರೋತ್ಸಾಹಿಸುವ ಗುರಿಯನ್ನು ಹೊಂದಿದೆ. ಇದರ ಪ್ರಾಯೋಗಿಕ ಅನ್ವಯಗಳು, ನವೀನ ವಿನ್ಯಾಸ ಮತ್ತು ನೈಜ ಕೃಷಿ ಸವಾಲುಗಳನ್ನು ಎದುರಿಸುವ ಸಾಮರ್ಥ್ಯಕ್ಕೆ ಅಂತಾರಾಷ್ಟ್ರೀಯ ತೀರ್ಪುಗಾರರು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಈ ಪ್ರಾಜೆಕ್ಟನ್ನು ಭಾರತ ವಿಜ್ಞಾನ ಸೊಸೈಟಿಯ ನಿರ್ದೇಶಕ ನಾರಾಯಣ ಅಯ್ಯರ್ ಅವರ ಮಾರ್ಗದರ್ಶನದಲ್ಲಿ ಅಭಿವೃದ್ಧಿಪಡಿಸಲಾಗಿದ್ದು, ಯುವ ನಾವೀನ್ಯಕಾರರ ದೃಷ್ಟಿಕೋನ ಮತ್ತು ಸಂಶೋಧನೆಯನ್ನು ಪರಿಷ್ಕರಿಸುವಲ್ಲಿ ಅವರ ಮಾರ್ಗದರ್ಶನವು ಪ್ರಮುಖ ಪಾತ್ರ ವಹಿಸಿದೆ.





▸ ಶಾಸ್ತಾನ್ಯಾಕ್ ಅವರ ಸಾಧನೆಯು ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಗಮನಾರ್ಹ ಸಾಧನೆಯಾಗಿದೆ.

▸ ತಮ್ಮ ನವೀನ ಕೃತಕ ಬುದ್ಧಿಮತ್ತೆ ಆಧಾರಿತ ಬಹು–ಕೃಷಿ ರೋಬೋಟಿಕ್ ವ್ಯವಸ್ಥೆಗಾಗಿ ಶಾಸ್ತಾ ಅವರು ಈ ಗೌರವವನ್ನು ಗಳಿಸಿದ್ದಾರೆ.

ಶಾಸ್ತಾ ಅವರು ಶ್ರೀನಾಥ್ ನ್ಯಾಕ್‌ಮತ್ತು ಚಂದ್ರಿಕಾ ಶ್ರೀನಾಥ್ ನ್ಯಾಕ್ ದಂಪತಿಯ ಪುತ್ರರಾಗಿದ್ದು, ಅವರ ನಿರಂತರ ಪ್ರೋತ್ಸಾಹ ಮತ್ತು ಬೆಂಬಲವು ಅವರ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಶಾಸ್ತಾ ನ್ಯಾಕ್ ಅವರು ಡಿಸೆಂಬರ್ 4ರಂದು ಪುತ್ತೂರಿನ ವಿವೇಕಾನಂದ ಆಃಖಇ ಶಾಲೆಯಲ್ಲಿ ನಡೆದ ಪ್ರಾದೇಶಿಕ ಮಟ್ಟದ ಇಂಡಿಯನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ಫೇರ್‌ನಲ್ಲಿ ಭಾಗವಹಿಸಿ ಚಿನ್ನದ ಪದಕವನ್ನು ಪಡೆದು ರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದರು. ಜನವರಿ 18ರಂದು ಗುಜರಾತ್‌ನ ಗೊಂಡಲ್‌ನ ಧೋಲಕಿಯಾ ಇಂಟರ್ ನ್ಯಾಷನಲ್ ಶಾಲೆಯಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಇಂಡಿಯನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ಫೇರ್‌ನಲ್ಲಿ ಭಾಗವಹಿಸಿ ಪ್ರಥಮ ಸ್ಥಾನವನ್ನು ಪಡೆದು ಅಂತಾರಾಷ್ಟ್ರೀಯ ಗ್ರೀನ್‌ವಿಚ್ ಒಲಿಂಪಿಯಾಡ್‌ಗೆ ಆಯ್ಕೆಯಾದರು.

ಈ ಸಾಧನೆಯು ಅವರ ಕುಟುಂಬ ಮತ್ತು ಶಾಲೆಗೆ ಕೀರ್ತಿ ತಂದಿತಲ್ಲದೆ, ಭಾರತದ ಯುವ ಪ್ರತಿಭೆಗಳ ಅಪಾರ ಪ್ರತಿಭೆ ಮತ್ತು ವೈಜ್ಞಾನಿಕ ಸಾಮರ್ಥ್ಯವನ್ನು ಪ್ರದರ್ಶಿಸುತ್ತದೆ. ಅವರ ಯಶಸ್ಸು ದೇಶಾದ್ಯಂತದ ಮಹತ್ವಾಕಾಂಕ್ಷಿ ನಾವೀನ್ಯಕಾರರಿಗೆ ಸ್ಫೂರ್ತಿಯಾಗಿದ್ದು, ಜಾಗತಿಕ ವಿಜ್ಞಾನ ಮತ್ತು ತಂತ್ರಜ್ಞಾನ ವೇದಿಕೆಗಳಲ್ಲಿ ಭಾರತದ ಬೆಳೆಯುತ್ತಿರುವ ಉಪಸ್ಥಿತಿಯನ್ನು ಗುರುತಿಸಿದೆ.

ಈ ಸಂದರ್ಭದಲ್ಲಿ ಶಕ್ತಿ ರೆಸಿಡೆನ್ಶಿಯಲ್ ಶಾಲೆಯ ವತಿಯಿಂದ ಶಾಸ್ತಾ ನ್ಯಾಕ್‌ಗೆ ಅಭಿನಂದನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಸಂಸ್ಥೆಯ ಸಂಸ್ಥಾಪಕ ಡಾ ಕೆ.ಸಿ ನ್ಯಾಕ್ ಅವರು ಸಾವಿರಾರು ವಿದ್ಯಾರ್ಥಿಗಳ ಮುಂದೆ ಸಂಸ್ಥೆಯ ವತಿಯಿಂದ ಗೌರವಿಸಿದರು. ವೇದಿಕೆಯಲ್ಲಿ ಸಂಸ್ಥೆಯ ಪ್ರಧಾನ ಸಲಹೆಗಾರ ರಮೇಶ ಕೆ, ಶಕ್ತಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರದೀಪ್ ಶೆಟ್ಟಿ, ಶಕ್ತಿ ರೆಸಿಡೆನ್ಶಿಯಲ್ ಶಾಲೆಯ ಪ್ರಾಂಶುಪಾಲೆ ಸುರೇಖ ಆರ್. ಭಟ್ ಉಪಸ್ಥಿತರಿದ್ದರು.

ಓಂಬುಡ್ಸ್‌ಮೆನ್ ಅಧಿಕಾರ ಸ್ವೀಕಾರ



ಕಾಸರಗೋಡು: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಸರಗೋಡು ಜಿಲ್ಲಾ ಓಂಬುಡ್ಸ್‌ಮೆನ್ ಆಗಿ ಮುಳಿಯಾರು ನೆಕ್ರಂಪಾರೆ ನಿವಾಸಿ ಸಿ.ರಾಜಾರಾಮ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. ರಾಜ್ಯ ಲೆಕ್ಕಪರಿಶೋಧನಾ ಇಲಾಖೆಯಿಂದ ಜಂಟಿ ನಿರ್ದೇಶಕರಾಗಿ ಸೇವೆಯಿಂದ ನಿವೃತ್ತರಾದ ನಂತರ ಅವರು ಅಸ್ಸಾಂ ಸರಕಾರದ ಲೆಕ್ಕಪರಿಶೋಧನಾ ಇಲಾಖೆಯಲ್ಲಿ ಪ್ರಧಾನ ತಜ್ಞರಾಗಿ ಸೇವೆ ಸಲ್ಲಿಸುತ್ತಿದ್ದರು.

ಜಿಲ್ಲೆಯಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಆರಂಭಿಕ ಹಂತದಲ್ಲಿ ಅಧಿಕಾರಿಗಳು, ಕಾರ್ಮಿಕರು ಮತ್ತು ಸಹೋದ್ಯೋಗಿಗಳಿಗೆ ತರಬೇತಿ ನೀಡುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ಅವರು ಜನಪರ ಯೋಜನಾ ಸಂಯೋಜಕರು ಮತ್ತು ಕುಟುಂಬಶ್ರೀ ಮಿಷನ್ ಸಂಯೋಜಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಅಲ್ಲದೆ ಕಿಲಾ ಸಂಸ್ಥೆಯ ಶಿಕ್ಷಕರಾಗಿ, ಕಾರಡ್ಕ ಬ್ಲಾಕ್ ಪಂಚಾಯತ್ ಯೋಜನಾ ಸಮಿತಿಯ ಉಪಾಧ್ಯಕ್ಷರಾಗಿ ಮತ್ತು ಜಿಲ್ಲಾ ಪಂಚಾಯತ್ ಯೋಜನಾ ಸಮಿತಿಯ ಸದಸ್ಯರಾಗಿಯೂ ಅವರು ಸೇವೆ ಸಲ್ಲಿಸಿದ್ದರು.

ಆವರಣ ಗೋಡೆಯಿಲ್ಲದ ತೆರೆದ ಬಾವಿಗೆ ಬಿದ್ದ ಗರ್ಭಿಣಿ ಹಸು ರಕ್ಷಣೆ

ವಿಟ್ಲ: ಆವರಣ ಗೋಡೆಯಿಲ್ಲದ ತೆರೆದ ಬಾವಿಯೊಂದಕ್ಕೆ ಆಕಸ್ಮಿಕವಾಗಿ ಬಿದ್ದ 8 ತಿಂಗಳ ಗರ್ಭಿಣಿ ಹಸುವನ್ನು ಸಾರ್ವಜನಿಕರು, ಸಾಮಾಜಿಕ ಕಾರ್ಯಕರ್ತರು ಮತ್ತು ಪಶುವೈದ್ಯರ ತಂಡ ಜಂಟಿಯಾಗಿ ನಡೆಸಿದ 5 ಗಂಟೆಗಳ ಸುದೀರ್ಘ ಹಾಗೂ ರೋಚಕ ಕಾರ್ಯಾಚರಣೆಯ ಮೂಲಕ ಸುರಕ್ಷಿತವಾಗಿ ಮೇಲಕ್ಕೆತ್ತಿ ರಕ್ಷಿಸಿದ ಮಾನವೀಯ ಘಟನೆ ಕೇಪು ಗ್ರಾಮದಲ್ಲಿ ನಡೆದಿದೆ.

ಆಕಸ್ಮಿಕವಾಗಿ ಬಾವಿಗೆ ಬಿದ್ದ ಗೋಮಾತೆ

ಕೇಪು ಗ್ರಾಮದ ಕುದ್ದುಪದವು ಎಂಬಲ್ಲಿನ ಕಾಸಿಂ ಎಂಬವರ ಮನೆಯ ಸಮೀಪ ಮೇಯಲು ಬಿಟ್ಟಿದ್ದ ಸ್ಥಳೀಯ ನಿವಾಸಿ ಸದಾನಂದ ಶೆಟ್ಟಿ ಅವರಿಗೆ ಸೇರಿದ ಎಂಟು ತಿಂಗಳ ಗರ್ಭಿಣಿ ಹಸುವು, ಆವರಣ ಗೋಡೆಯಿಲ್ಲದ ಸುಮಾರು 43 ಅಡಿ ಆಳದ ತೆರೆದ ಬಾವಿಗೆ ಆಕಸ್ಮಿಕವಾಗಿ ಬಿದ್ದಿದೆ. ಬಾವಿಯೊಳಗೆ ನೀರಿದ್ದು, ಹಸುವು ಬದುಕುಳಿಯಲು ಸಹಾಯಕ್ಕಾಗಿ ಗೋಳಿಡುತ್ತಿರುವುದನ್ನು ಕಂಡು ಸ್ಥಳೀಯರು ಆತಂಕಗೊಂಡರು. ಬಾವಿಯು ಕುಸಿದು ಬೀಳುವ ಹಂತದಲ್ಲಿದ್ದ ಕಾರಣ ರಕ್ಷಣಾ ಕಾರ್ಯವು ಅತ್ಯಂತ ಸವಾಲಿನಿಂದ ಕೂಡಿತ್ತು

ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ "ಫ್ರೆಂಡ್ಸ್ ವಿಟ್ಲ" ತಂಡದ ಮುಖಂಡ, ಸಾಮಾಜಿಕ ಕಾರ್ಯಕರ್ತ ಮುರಳೀಧರ ಅವರು ತಮ್ಮ ಪ್ರಾಣದ ಹಂಗು ತೊರೆದು ಹಗ್ಗದ ಸಹಾಯದಿಂದ ಬಾವಿಯೊಳಗೆ ಇಳಿದರು . ನೀರಿನಲ್ಲಿ ಸುಮಾರು ಐದು ಗಂಟೆಗಳಿಂದ ಒದ್ದಾಡುತ್ತಿದ್ದ ಹಸುವಿನ ಹೊಟ್ಟೆಯ ಭಾಗಕ್ಕೆ ಹಗ್ಗ ಕಟ್ಟಿ ಆಧಾರ ನೀಡುವ ಮೂಲಕ ಅದಕ್ಕೆ ನೈತಿಕ ಶಕ್ತಿ ತುಂಬಿದರು.



ಬಾವಿಯಿಂದ ಕೇವಲ ಹಗ್ಗದ ಮೂಲಕ ಗೋವನ್ನು ಮೇಲಕ್ಕೆತ್ತಲು ಯತ್ನಿಸಿದರೆ ಹೊಟ್ಟೆಯಲ್ಲಿರುವ ಕರುವಿನ ಪ್ರಾಣಕ್ಕೆ ತೊಂದರೆಯಾಗುವ ಸಾಧ್ಯತೆ ಇತ್ತು. ಈ ಸೂಕ್ಷ್ಮತೆಯನ್ನು ಅರಿತು ತಕ್ಷಣವೇ ವಿಟ್ಲದ "ವಿಘ್ನೇಶ್ವರ ಕ್ರೇನ್" ಮಾಲಿಕರನ್ನು ಸಂಪರ್ಕಿಸಿ ಸ್ಥಳಕ್ಕೆ ಕರೆಯಿಸಿಕೊಳ್ಳಲಾಯಿತು.


ಮುರಳೀಧರ ಅವರು ಮೂರು ಬಾರಿ ಬಾವಿಯೊಳಗೆ ಇಳಿದು ಹಸುವಿನ ಹೊಟ್ಟೆ, ಎದೆ ಹಾಗೂ ಕುತ್ತಿಗೆಯ ಭಾಗಕ್ಕೆ ಸುರಕ್ಷಿತವಾಗಿ ಬೆಲ್ಟ್ ಅಳವಡಿಸಿದರು. ತದನಂತರ ಕ್ರೇನ್ ಮೂಲಕ ಹಸುವನ್ನು ಅತ್ಯಂತ ಜಾಗರೂಕತೆಯಿಂದ ಮೇಲಕ್ಕೆತ್ತಿ ರಕ್ಷಿಸುವಲ್ಲಿ ಯಶಸ್ವಿಯಾದರು.

ಗಾಯಗಳಿಂದ ಪಾರು

ಬಾವಿಯಿಂದ ಹಸುವನ್ನು ಮೇಲಕ್ಕೆತ್ತಿದ ತಕ್ಷಣವೇ ಚಿಕಿತ್ಸೆ ನೀಡಲು ಪಶುಸಂಗೋಪನಾ ಇಲಾಖೆಯ 1962 ತುರ್ತು ಅಂಬ್ಯುಲೆನ್ಸ್ ಸೇವೆಯನ್ನು ಸ್ಥಳಕ್ಕೆ ತರಿಸಲಾಗಿತ್ತು. ಪಶುಗಳ ತುರ್ತು ಚಿಕಿತ್ಸಕರಾದ ಡಾ. ಸುನಿಲ್ ಬಂಟ್ವಾಳ, ಚಾಲಕ ಜಯಗಣೇಶ್ ಹಾಗೂ ಅಡ್ಯನಡ್ಕ ಪಶು ಪರಿವೀಕ್ಷಕರಾದ ಲಕ್ಷ್ಮಣ ಸರವು ಅವರ ತಂಡವು ತಕ್ಷಣವೇ ಹಸುವಿಗೆ ಪ್ರಥಮ ಚಿಕಿತ್ಸೆ (ರಕ್ತನಾಳದ ಮೂಲಕ ಗ್ಲುಕೋಸ್/ಔಷಧಿ ನೀಡಿ) ನೀಡಿ ಪರೀಕ್ಷಿಸಿದರು. 43 ಅಡಿ ಆಳಕ್ಕೆ ಬಿದ್ದಿದ್ದರೂ ಹಸುವಿನ ದೇಹಕ್ಕೆ ಯಾವುದೇ ದೊಡ್ಡ ಪ್ರಮಾಣದ ಗಾಯಗಳಾಗಿಲ್ಲ ಹಾಗೂ ಹೊಟ್ಟೆಯಲ್ಲಿದ್ದ ಕರುವಿಗೂ ಯಾವುದೇ ಹಾನಿಯಾಗಿಲ್ಲ, ಕೇವಲ ಕಾಲುಗಳಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ವೈದ್ಯರ ತಂಡ ಸ್ಪಷ್ಟಪಡಿಸಿದೆ.

ಸಿ.ಎ. ಇಂಟರ್ ಮೀಡಿಯೇಟ್ ಪರೀಕ್ಷೆ ಫಲಿತಾಂಶ

ಆಳ್ವಾಸ್ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ



ಮೂಡುಬಿದಿರೆ: ಮೇ 2026ರಲ್ಲಿ ನಡೆದ ಸಿ.ಎ. ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಆಳ್ವಾಸ್ ಬಿ.ಕಾಂ. ವಿದ್ಯಾರ್ಥಿಗಳಾದ ಗೋಡ್ವಿಲ್ ವಿನ್ಸ್ಟನ್ ವಾಸ್ (355) , ಶೆಟ್ಟಿ ರಾಹುಲ್ ಉಮೇಶ್ (313), ಎನ್. ಚಿರಂತನಾ (312) ಹಾಗೂ ರೋಹಿತ್ ಪೂಜಾರಿ (304) ಗ್ರೂಪ್–01 ಮತ್ತು ಗ್ರೂಪ್–02 ವಿಭಾಗದಲ್ಲಿ ಮೊದಲ ಪ್ರಯತ್ನದಲ್ಲಿ ಉತ್ತಮ ಫಲಿತಾಂಶದೊಂದಿಗೆ ಉತ್ತೀರ್ಣರಾಗಿದ್ದಾರೆ.

ಇಂಟರ್ ಮೀಡಿಯಟ್ ಗ್ರೂಪ್–01 ವಿಭಾಗದಲ್ಲಿ ಪ್ರಸ್ತಿಯಾ (162), ಪನ್ನಗ ಜೈನ್ (157), ವಿಜಯ್ ಕುಮಾರ್ (164), ಸಾನಿಯಾ (150), ಪ್ರಸಿದ್ಧ್ ಪೂಜಾರಿ (150), ಮೋನಿಶಾ ಕುಂದರ್ (163) ಹಾಗೂ ಶ್ರೇಯಾ ಸುರೇಂದ್ರ ಪೂಜಾರಿ (150) ಉತ್ತೀರ್ಣರಾಗಿದ್ದಾರೆ.

ಇಂಟರ್ ಮೀಡಿಯಟ್ ಗ್ರೂಪ್ –02 ವಿಭಾಗದಲ್ಲಿ ಗಿರೀಶ್ (179) ಹಾಗೂ ತರುಣ್ ಕುಮಾರ್ (152) ಅಂಕದೊಂದಿಗೆ ಉತ್ತೀರ್ಣರಾಗಿದ್ದಾರೆ.

ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳಿಗೂ ಸಂಸ್ಥೆಯ ಅಧ್ಯಕ್ಷ ಡಾ.ಎಂ. ಮೋಹನ ಆಳ್ವರು ಅಭಿನಂದಿಸಿದ್ದಾರೆ.

ಮುಡಿಪುವಿನ ಸಾನಿಧ್ಯ ಶೆಟ್ಟಿ 'ಮಿಸ್ ಇಂಡಿಯಾ ಕರ್ನಾಟಕ'

ಕೊಣಾಜೆ: ಇತ್ತೀಚೆಗೆ ಮಂಗಳೂರಿನಲ್ಲಿ ನಡೆದ ಪಾಥ್ ವೇ ಎಂಟರ್‌ಪ್ರೈಸಸ್ ಹಾಗೂ ಬ್ಯೂಟೀ ಅಕಾಡೆಮಿ ಆಯೋಜಿಸಿದ ರಾಷ್ಟ್ರೀಯ ಮಟ್ಟದ ಸೌಂದರ್ಯ ಸ್ಪರ್ಧೆಯಲ್ಲಿ ಮುಡಿಪುವಿನ ಸಾನಿಧ್ಯ ಶೆಟ್ಟಿ ಅವರು ಮಿಸ್ ಇಂಡಿಯಾ ಕರ್ನಾಟಕ 2026 ವಿಜೇತರಾಗಿ ಹೊರಹೊಮ್ಮಿದ್ದಾರೆ. ಇವರು ಬಿಜೆಪಿ ಮಂಗಳೂರು ಮಂಡಲದ ಉಪಾಧ್ಯಕ್ಷರಾದ ಸುಮನಾ ಹರೀಶ್ ಶೆಟ್ಟಿ ಹಾಗೂ ಹರೀಶ್ ಶೆಟ್ಟಿ ನಾರ್ಯಗುತ್ತು ಇವರ ಪುತ್ರಿಯಾಗಿದ್ದಾರೆ.



ಉಡುಪಿ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ನಡೆದ 'ಸಂವಿಧಾನ ಹತ್ಯಾ ದಿವಸ್' ಕರಾಳ ದಿನಾಚರಣೆ ಕಾರ್ಯಕ್ರಮ

ತುರ್ತು ಪರಿಸ್ಥಿತಿ ಪ್ರಜಾಪ್ರಭುತ್ವ ಮೌಲ್ಯಗಳ ಮೇಲಿನ ದಾಳಿ: ಮಟ್ಟಾರ್

ಉಡುಪಿ: 1975 ಜೂ.12ರಂದು ಅಲಹಾಬಾದ್ ಹೈಕೋರ್ಟ್ ಇಂದಿರಾ ಗಾಂಧಿ ಅವರ 1971ರ ಲೋಕಸಭಾ ಚುನಾವಣಾ ಅಕ್ರಮದ ಕಾರಣದಿಂದ ಅವರ ಆಯ್ಕೆಯನ್ನು ಅಸಿಂಧುಗೊಳಿಸಿ, ಅವರು 6 ವರ್ಷ ಚುನಾವಣೆಯಲ್ಲಿ ಸ್ಪರ್ಧಿಸುವಂತಿಲ್ಲ ಎಂದು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ 1975 ಜೂ.25ರ ಮಧ್ಯರಾತ್ರಿ ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹ್ಮದ್ ಅವರ ಮೂಲಕ ಭಾರತದ ಸಂವಿಧಾನದ 352ನೇ ವಿಧಿಯ ಅಡಿಯಲ್ಲಿ ದೇಶದಲ್ಲಿ ಕರಾಳ 'ತುರ್ತು ಪರಿಸ್ಥಿತಿ'ಯನ್ನು ಘೋಷಿಸಿರುವುದು ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳ ಮೇಲಿನ ನೇರ ದಾಳಿಯಾಗಿದೆ ಎಂದು ಬಿಜೆಪಿ ಉಡುಪಿ ಮಾಜಿ ಜಿಲ್ಲಾಧ್ಯಕ್ಷ, ನ್ಯಾಯವಾದಿ ಮಟ್ಟಾರ್ ರತ್ನಾಕರ ಹೆಗ್ಡೆ ಹೇಳಿದರು.

ಅವರು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ನಡೆದ 'ಸಂವಿಧಾನ ಹತ್ಯಾ ದಿವಸ್' ಕರಾಳ ದಿನಾಚರಣೆ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.



ಜಯಪ್ರಕಾಶ್ ನಾರಾಯಣ್ ನೇತೃತ್ವದಲ್ಲಿ 'ಸಂಪೂರ್ಣ ಕ್ರಾಂತಿ' ಚಳುವಳಿ ದೇಶಾದ್ಯಂತ ಹಬ್ಬಿತ್ತು. ಇಂದಿರಾ ಗಾಂಧಿ ರಾಜೀನಾಮೆ ನೀಡಬೇಕೆಂಬ ಒತ್ತಡ ಹೆಚ್ಚಾಗಿತ್ತು. ಸಂವಿಧಾನದ 19ನೇ ವಿಯಡಿಯ ವಾಕ್, ಅಭಿವ್ಯಕ್ತಿ, ಸಭೆ ಸೇರುವ ಹಕ್ಕು ಸ್ಥಗಿತವಾಯಿತು. ವಿರೋಧ ಪಕ್ಷದ ನಾಯಕರಾದ ಅಟಲ್ ಬಿಹಾರಿ ವಾಜಪೇಯಿ, ಎಲ್.ಕೆ. ಅಡ್ವಾಣಿ, ಜಾರ್ಜ್ ಫರ್ನಾಂಡಿಸ್, ಜಯಪ್ರಕಾಶ್ ನಾರಾಯಣ್ ಸೇರಿದಂತೆ ಸಾವಿರಾರು ಮಂದಿಯನ್ನು 'ಮೀಸ' ಕಾಯ್ದೆಯಡಿ ಬಂಧಿಸಲಾಯಿತು. ಪತ್ರಿಕೆಗಳಿಗೆ ಸೆನ್ಸಾರ್ ಮಾಡಬೇಕೆಂದು ಆದೇಶವಾಯಿತು. ಸರ್ಕಾರದ ವಿರುದ್ಧ ಬರೆಯುವ ಪತ್ರಿಕೆಗಳ ಮೇಲೆ ಒತ್ತಡ, ವಿದ್ಯುತ್ ಕಡಿತ, ಕಾಗದ ಪೂರೈಕೆ ನಿಲ್ಲಿಸುವ ಕ್ರಮಗಳು ನಡೆದವು. ನ್ಯಾಯಾಧೀಶರ ವರ್ಗಾವಣೆ, ನೇಮಕಾತಿಯಲ್ಲಿ ರಾಜಕೀಯ ಹಸ್ತಕ್ಷೇಪ ಹೆಚ್ಚಾಯಿತು. ಸಂಜಯ್ ಗಾಂಧಿ ಅವರ 5 ಅಂಶದ ಕಾರ್ಯಕ್ರಮಗಳಾದ ಬಲವಂತದ ಸಂತಾನ ನಿಯಂತ್ರಣ, ಕೊಳೆಗೇರಿ ತೆರವು ಮುಂತಾದ ಕ್ರಮಗಳಿಂದ ಗ್ರಾಮೀಣ ಜನರಲ್ಲಿ ಭಯ ಹುಟ್ಟಿತು. ಕೈಗಾರಿಕೆಗಳು, ಸರ್ಕಾರಿ ಕಚೇರಿಗಳಲ್ಲಿ ಭಯದ ವಾತಾವರಣ ನಿರ್ಮಾಣವಾಯಿತು ಎಂದರು.

ವಾಜಪೇಯಿ, ಎಲ್.ಕೆ. ಅಡ್ವಾಣಿ, ಜಾರ್ಜ್ ಫರ್ನಾಂಡಿಸ್, ಜಯಪ್ರಕಾಶ್ ನಾರಾಯಣ್ ಸೇರಿದಂತೆ ಸಾವಿರಾರು ಮಂದಿಯನ್ನು 'ಮೀಸ' ಕಾಯ್ದೆಯಡಿ ಬಂಧಿಸಲಾಯಿತು. ಪತ್ರಿಕೆಗಳಿಗೆ ಸೆನ್ಸಾರ್ ಮಾಡಬೇಕೆಂದು ಆದೇಶವಾಯಿತು.

1977ರಲ್ಲಿ ಇಂದಿರಾ ಗಾಂಧಿ ತುರ್ತು ಪರಿಸ್ಥಿತಿ ಹಿಂಪಡೆದು ಚುನಾವಣೆ ಘೋಷಿಸಿದರು. ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೋತು ಜನತಾ ಪಕ್ಷ ಅಧಿಕಾರಕ್ಕೆ ಬಂದ ಪರಿಣಾಮವಾಗಿ 44ನೇ ಸಂವಿಧಾನ ತಿದ್ದುಪಡಿ ತರಲಾಯಿತು. 'ಆಂತರಿಕ ಗೊಂದಲ' ಬದಲಿಗೆ 'ಸಶಸ್ತ್ರ ದಂಗೆ' ಮಾತ್ರ ತುರ್ತು ಪರಿಸ್ಥಿತಿಗೆ ಕಾರಣವಾಗಬಹುದು, ಸಂಸತ್ತಿನ ಅನುಮೋದನೆ ಕಡ್ಡಾಯ, ಮೂಲಭೂತ ಹಕ್ಕುಗಳನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗದು ಎಂಬ ಬದಲಾವಣೆಗಳಾದವು. 1975ರಿಂದ 1977ರವರೆಗೆ 21 ತಿಂಗಳ ಪರ್ಯಂತ ನಡೆದ ಕರಾಳ ತುರ್ತು ಪರಿಸ್ಥಿತಿ ಭಾರತೀಯರಿಗೆ ಪ್ರಜಾಪ್ರಭುತ್ವ ಮತ್ತು ವೈಯಕ್ತಿಕ ಸ್ವಾತಂತ್ರ್ಯ ಎಷ್ಟು ಮೌಲ್ಯಯುತ ಎಂಬುದನ್ನು ನೆನಪಿಸುವ ಘಟನೆಯಾಗಿ, ದೇಶದ ಇತಿಹಾಸದಲ್ಲಿ ಶಾಶ್ವತ ಕಪ್ಪು ಚುಕ್ಕೆಯಾಗಿ ಉಳಿದಿದೆ ಎಂದು ಮಟ್ಟಾರ್ ತಿಳಿಸಿದರು.

ಜಿಲ್ಲಾ ಕಾರ್ಯಾಲಯ ಕಾರ್ಯದರ್ಶಿ ಸತ್ಯಾನಂದ ನಾಯಕ್, ಜಿಲ್ಲಾ ಕಾರ್ಯದರ್ಶಿ ಶಿವಕುಮಾರ್ ಅಂಬಲಪಾಡಿ ಸಹಿತ ಪಕ್ಷದ ಪ್ರಮುಖರು, ವಿವಿಧ ಸ್ತರದ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನಾಯಕ್ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ರಾಜ್ಯದಲ್ಲಿ ಏಕಕಾಲಕ್ಕೆ ಇಡಿ ಕಾರ್ಯಾಚರಣೆ

ಬೆಂಗಳೂರು: ಕರ್ನಾಟಕ ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ಮತ್ತು ಅಕ್ರಮ ಆಸ್ತಿ ಗಳಿಕೆ ಆರೋಪಗಳ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳು ರಾಜ್ಯದ ವಿವಿಧೆಡೆ ವ್ಯಾಪಕ ಶೋಧ ಕಾರ್ಯಾಚರಣೆ ನಡೆಸಿದ್ದು, 13.3 ಕೋಟಿ ರೂ. ಮೌಲ್ಯದ ನಗದು, ಚಿನ್ನಾಭರಣ ಹಾಗೂ ವಿದೇಶಿ ಕರೆನ್ಸಿಯನ್ನು ವಶಪಡಿಸಿಕೊಂಡಿದ್ದಾರೆ.

ಬೆಂಗಳೂರು ವಲಯ ಕಚೇರಿಯ ಇಡಿ ಅಧಿಕಾರಿಗಳು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ), ಅಡಿಯಲ್ಲಿ ಜೂ.24ರಂದು ಬೆಂಗಳೂರು, ಮೈಸೂರು ಹಾಗೂ ಬೆಳಗಾವಿಯ 14 ಸ್ಥಳಗಳಲ್ಲಿ ಏಕಕಾಲದಲ್ಲಿ ದಾಳಿ ನಡೆಸಿದ್ದರು.

ಕರ್ನಾಟಕ ಲೋಕಾಯುಕ್ತ ಪೊಲೀಸರು ದಾಖಲಿಸಿದ್ದ ಎಫ್‌ಐಆರ್ ಆಧರಿಸಿ ತನಿಖೆ ಆರಂಭಿಸಲಾಗಿದ್ದು, ಅಬಕಾರಿ ಇಲಾಖೆಯ ಹಿರಿಯ ಅಧಿಕಾರಿಗಳು ವಿವಿಧ ಪರವಾನಗಿಗಳನ್ನು ಮಂಜೂರು ಮಾಡುವ ಹಾಗೂ ನವೀಕರಿಸುವ ಸಂದರ್ಭದಲ್ಲಿ ಲಂಚ ಪಡೆಯುತ್ತಿರುವ ಆರೋಪ ಕೇಳಿಬಂದಿತ್ತು. ಈ ಅಕ್ರಮ ಹಣವನ್ನು ವೈಯಕ್ತಿಕ ಆಸ್ತಿ ಸಂಪಾದನೆಗೆ ಬಳಸಲಾಗಿದೆ ಎಂಬ ಆರೋಪದ ಮೇಲೆ ಇಡಿ ತನಿಖೆ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ. ಅಬಕಾರಿ ಇಲಾಖೆಯ ಅಧಿಕಾರಿಗಳಾದ ಜಗದೀಶ್ ನಾಯಕ್, ಕೆ.ಎಂ. ತಮ್ಮಣ್ಣ ಹಾಗೂ ವೈ.ಡಿ. ಮಂಜುನಾಥ್ ಸೇರಿದಂತೆ ಅವರ ಕುಟುಂಬ ಸದಸ್ಯರು, ವ್ಯವಹಾರ ಪಾಲುದಾರರು ಮತ್ತು ಆಪ್ತ ಸಹಚರರ ನಿವಾಸ ಹಾಗೂ ಕಚೇರಿಗಳ ಮೇಲೆ ಶೋಧ ಕಾರ್ಯಾಚರಣೆ ನಡೆಸಲಾಗಿದೆ ಎಂದು ಇಡಿ ಹೇಳಿದೆ.


13.3 ಕೋಟಿ ಮೌಲ್ಯದ ಆಸ್ತಿ ವಶ

ಶೋಧ ಕಾರ್ಯಾಚರಣೆ ವೇಳೆ ಡಿಜಿಟಲ್ ಸಾಧನಗಳು, ಆಸ್ತಿ ದಾಖಲೆಗಳು, ಲಂಚ ವಿತರಣೆಯ ದಾಖಲೆಗಳು ಸೇರಿದಂತೆ ಹಲವು ಮಹತ್ವದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದ್ದು, ವಿಶೇಷವಾಗಿ ವೈ.ಡಿ. ಮಂಜುನಾಥ್ ಅವರ ಚಾಲಕ, ಕುಟುಂಬ ಸದಸ್ಯರು ಹಾಗೂ ಸಹಚರರ ಬಳಿ ಸುಮಾರು 5.5 ಕೋಟಿ ರೂ. ನಗದು, 7.8 ಕೋಟಿ ರೂ. ಮೌಲ್ಯದ ಚಿನ್ನಾಭರಣ ಮತ್ತು 3.3 ಲಕ್ಷ ರೂ. ಮೌಲ್ಯದ ವಿದೇಶಿ ಕರೆನ್ಸಿ ಪತ್ತೆಯಾಗಿದೆ. ಒಟ್ಟಾರೆ ಈ ಪ್ರಕರಣದಲ್ಲಿ ಇದುವರೆಗೆ 13.3 ಕೋಟಿ ರೂ. ಮೌಲ್ಯದ ಅಪರಾಧದ ಆದಾಯ ವಶಪಡಿಸಿಕೊಳ್ಳಲಾಗಿದೆ. ಪ್ರಕರಣದ ಕುರಿತು ಹೆಚ್ಚಿನ ತನಿಖೆ ಮುಂದುವರಿದಿದೆ ಎಂದು ಇಡಿ ತಿಳಿಸಿದೆ.

ಭ್ರಷ್ಟಾಚಾರದ ಜಾಲ ಬಯಲು: ತನಿಖೆಯಲ್ಲಿ ಅಬಕಾರಿ ಇಲಾಖೆ ಅಧಿಕಾರಿಗಳು, ಮಧ್ಯವರ್ತಿಗಳು ಹಾಗೂ ಖಾಸಗಿ ವ್ಯಕ್ತಿಗಳನ್ನು ಒಳಗೊಂಡ ಸಂಘಟಿತ ಜಾಲವೊಂದು ಕಾರ್ಯನಿರ್ವಹಿಸುತ್ತಿರುವುದು ಬೆಳಕಿಗೆ ಬಂದಿದೆ. ರಾಜ್ಯದ ಮದ್ಯ ಮಾರಾಟ ಮಳಿಗೆಗಳಿಂದ ಪ್ರತಿ ತಿಂಗಳು ನಿಗದಿತ ಮೊತ್ತದ ಲಂಚ ಸಂಗ್ರಹಿಸಲಾಗುತ್ತಿತ್ತು. ಪರವಾನಗಿ ನವೀಕರಣ, ಸ್ಥಳಾಂತರ ಹಾಗೂ ಹೊಸ ಪರವಾನಗಿ ಮಂಜೂರಾತಿ ಸಂದರ್ಭಗಳಲ್ಲಿಯೂ ಹಣ ಸಂಗ್ರಹಿಸಲಾಗುತ್ತಿತ್ತು. ಈ ಹಣವನ್ನು ಕೇಂದ್ರಿಕೃತವಾಗಿ ಸಂಗ್ರಹಿಸಿ ಮಧ್ಯವರ್ತಿಗಳ ಮೂಲಕ ವಿವಿಧ ಹಂತಗಳ ಅಧಿಕಾರಿಗಳಿಗೆ ಹಂಚಿಕೆ ಮಾಡಲಾಗುತ್ತಿತ್ತು ಎಂದು ತನಿಖೆಯಲ್ಲಿ ಪತ್ತೆಯಾಗಿದೆ. ಈ ಹಣದ ಲೆಕ್ಕಪತ್ರಗಳನ್ನು ಅನಧಿಕೃತ ನಗದು ಪುಸ್ತಕದಲ್ಲಿ ದಾಖಲಿಸಲಾಗುತ್ತಿತ್ತು. ದಾಳಿ ವೇಳೆ ಅಂತಹ ನಗದು ಲೆಕ್ಕ ಪುಸ್ತಕವನ್ನೂ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ ಎಂದು ಇಡಿ ತಿಳಿಸಿದೆ.

ಕುಟುಂಬ ಸದಸ್ಯರ ಹೆಸರಲ್ಲಿ ಮದ್ಯ ವ್ಯಾಪಾರ: ಇಡಿ ತನಿಖೆಯಲ್ಲಿ ಬಹಿರಂಗಗೊಂಡ ಮತ್ತೊಂದು ಮಹತ್ವದ ಅಂಶವೆಂದರೆ, ಹಲವು ಅಬಕಾರಿ ಅಧಿಕಾರಿಗಳು ತಮ್ಮ ಕುಟುಂಬ ಸದಸ್ಯರ ಹೆಸರಿನಲ್ಲಿ ಅಥವಾ ಕುಟುಂಬದ ನಿಯಂತ್ರಣದಲ್ಲಿರುವ ಸಂಸ್ಥೆಗಳ ಹೆಸರಿನಲ್ಲಿ ಮದ್ಯ ಮಾರಾಟ ಪರವಾನಗಿಗಳನ್ನು ಪಡೆದು ವ್ಯವಹಾರ ನಡೆಸುತ್ತಿರುವುದು. ಈ ವ್ಯವಹಾರಗಳಿಂದ ಬಂದ ಆದಾಯವನ್ನು ಕಾನೂನುಬದ್ಧ ಆದಾಯವೆಂದು ತೋರಿಸುವ ಮೂಲಕ ಅಕ್ರಮ ಹಣವನ್ನು ಆರ್ಥಿಕ ವ್ಯವಸ್ಥೆಯಲ್ಲಿ ಬೆರೆಸುವ ಪ್ರಯತ್ನ ನಡೆದಿರುವುದು ಪತ್ತೆಯಾಗಿದೆ ಎಂದು ಇಡಿ ಹೇಳಿದೆ.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕನೇಜಿ

◈ ಶಾಲೆಯಲ್ಲಿ ಎಸ್ ಸಾರ್ ಎಂದು ಹೇಳುವ ಬದಲು ಜೈ ಶ್ರೀರಾಮ್ ಎನ್ನಿ
- ವಿದ್ಯಾರ್ಥಿಗಳಿಗೆ ಯತ್ನಾಳ್ ಕರೆ

- ಶಾಲೆಯಲ್ಲಿ ಹೇಳೋದಕ್ಕೂ ಮೊದಲು ಮನೆಯಲ್ಲಿ ಹೆತ್ತವರು ಅದನ್ನು ಮಕ್ಕಳಿಗೆ ಅಭ್ಯಾಸ ಮಾಡಿಸಬೇಕಿತ್ತು, ಅಲ್ವಾ?

ದಿನ ಭವಿಷ್ಯ

ಮೇಷ ವಿಶ್ವಾಸ ಹೆಚ್ಚಿಸುವ ವಿದ್ಯಮಾನ. ಕಾರ್ಯ ಸಕಾಲದಲ್ಲಿ ಪೂರ್ಣ. ಆರೋಗ್ಯ ಸುಧಾರಣೆ. ಕೌಟುಂಬಿಕ ಸಮಸ್ಯೆ ಶೀಘ್ರ ಇತ್ಯರ್ಥ ಕಾಣಲಿದೆ.

ವೃಷಭ ಅತಿಮುಖ್ಯ ಕೆಲಸದ ಹೊಣೆ ನಿಮಗೆ ಬೀಳಬಹುದು. ಸರಿಯಾಗಿ ನಿಭಾಯಿಸಿ. ಶಾಪಿಂಗ್‌ನಲ್ಲಿ ಅಧಿಕ ಕಾಲ ಕಳೆಯದಿರಿ. ಖರ್ಚು ಅಧಿಕವಾದೀತು.

ಮಿಥುನ ದಿನದ ಅಂತ್ಯಕ್ಕೆ ಮಹತ್ವದ ಕಾರ್ಯ ಸಾಧಿಸುವಿರಿ. ಆತ್ಮವಿಶ್ವಾಸ ಹೆಚ್ಚಳ. ಹಣದ ಬಗ್ಗೆ ದುರಾಸೆ ಬೇಡ. ಇತರರ ಕೆಲಸ ಮೆಚ್ಚಲು ಕಲಿಯಿರಿ.

ಕಟಕ ಹಣದ ವಿಚಾರದಲ್ಲಿ ಸಮಸ್ಯೆ ಉಂಟಾದೀತು. ಕೆಲಸದ ಒತ್ತಡದಿಂದ ಅಶಾಂತಿ. ಪ್ರೀತಿಪಾತ್ರರ ಸಂಗದಲ್ಲಿ ಸಮಾಧಾನ ಪಡೆಯುವಿರಿ.

ಸಿಂಹ ಮನಸ್ಸಿನ ಮೇಲೆ ಹತೋಟಿ ಸಾಧಿಸಿ. ಎತ್ತೆತ್ತಲೋ ಹರಿಯಲು ಬಿಡಬೇಡಿ. ಆರ್ಥಿಕ ಸಂಕಷ್ಟಕ್ಕೆ ಪರಿಹಾರ ಸಿಗಲಿದೆ. ಧನಾಗಮ.

ಕನ್ಯಾ ಅಧಿಕ ಒತ್ತಡದ ದಿನ. ಮಧ್ಯಾಹ್ನದ ವೇಳೆ ಎಲ್ಲ ನಿರಾಳವಾಗಲಿದೆ. ಮನೆಯ ಸಮಸ್ಯೆಗೂ ಪರಿಹಾರ ಸಿಗಲಿದೆ. ಕೌಟುಂಬಿಕ ಸಮಾಧಾನ.

ತುಲಾ ಅನ್ಯರ ದೂರುತ್ತಾ ಕೂರಬೇಡಿ. ನಿಮ್ಮ ಕರ್ತವ್ಯ ನೆರವೇರಿಸಿ. ಆಪ್ತರ ಜತೆ ಸಂಘರ್ಷ ನಡೆದೀತು. ವೃತ್ತಿ ಒತ್ತಡ ಆರೋಗ್ಯದ ಮೇಲೆ ಪರಿಣಾಮ.

ವೃಶ್ಚಿಕ ನಿಮ್ಮ ಸುತ್ತ ಉಲ್ಲಾಸದ ವಾತಾವರಣ. ವೃತ್ತಿಯಲ್ಲಿ ಶುಭ ಸುದ್ದಿ. ಮನೆಯಲ್ಲೂ ಸಾಮರಸ್ಯದ ಪರಿಸರ. ಚಿಂತೆ ಮರೆಯುವ ಕಾಲ.

ಧನು ಕೆಲವಾರು ಬೆಳವಣಿಗೆ ಈ ದಿನ ಸಂಭವಿಸಬಹುದು. ಅದಕ್ಕೆ ಹೊಂದಿಕೊಳ್ಳಲು ಕಲಿಯಿರಿ. ಕುಂಟುನೆಪ ಹೇಳುತ್ತಾ ಕೂರಬೇಡಿ.

ಮಕರ ನಿಮ್ಮ ಗುರಿ ಸಾಧಿಸಲು ಸೂಕ್ತ ಕಾಲ. ಆತ್ಮೀಯರ ಜತೆಗಿನ ಭಿನ್ನಮತ ತೊಡೆಯಲು ಗಮನ ಕೊಡಿ. ಅಧಿಕ ಖರ್ಚು ಚಿಂತೆ ತಂದೀತು.

ಕುಂಭ ಈ ದಿನ ಹೊಸ ಪ್ರಯೋಗ ನಡೆಸಲು ಹೋಗಬೇಡಿ. ಯಥಾಸ್ಥಿತಿ ಕಾಯ್ದುಕೊಂಡು ಹೋಗಿ. ವ್ಯಕ್ತಿಯೊಬ್ಬರು ಕಿರಿಕಿರಿ ಉಂಟು ಮಾಡಿಯಾರು.

ಮೀನ ಕಚೇರಿಯ ರಾಜಕೀಯ ನೆಮ್ಮದಿ ಕೆಡಿಸುವುದು. ಸಿಹಿಕಹಿ ಪ್ರಸಂಗಗಳೆರಡೂ ಉಂಟಾದೀತು. ವೆಚ್ಚ ಅಧಿಕಗೊಳ್ಳಬಹುದು.

ರಾಹುಕಾಲ : 10.30-12.00
ಗುಳಿಕಕಾಲ : 7.30-9.00

ಅದೃಷ್ಟ ಸಂಖ್ಯೆ : 8,5,0,3

ಗಿಗ್ ಕಾರ್ಮಿಕರಿಗಾಗಿ ರಾಜ್ಯ ಸರ್ಕಾರದ ನೀತಿ ಶ್ಲಾಘನೀಯ: ಬಿಎಂಎಸ್ ರಾಷ್ಟ್ರೀಯ ಉಪಾಧ್ಯಕ್ಷ ಪವನ್ ಕುಮಾರ್

ಕಾರ್ಮಿಕ ವರ್ಗಕ್ಕೆ ಭದ್ರತೆ ಸಹಿತ ಗೌರವ

ಬೆಂಗಳೂರು: ಕಾರ್ಮಿಕ ವರ್ಗಕ್ಕೆ ಭದ್ರತೆ ಸಹಿತ ಗೌರವ ತಂದುಕೊಡುವುದಕ್ಕೆ,ಆ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಲು ಮುಂದಾಗಿರುವ ಭಾರತೀಯ ಮಜ್ದೂರ್ ಸಂಘ(ಬಿಎಂಎಸ್)ದ ರಾಷ್ಟ್ರೀಯ ಉಪಾಧ್ಯಕ್ಷ, ಮಾಧ್ಯಮ ಉಸ್ತುವಾರಿ ಪವನ್‌ಕುಮಾರ್ ಅವರು ಹೊಸ ದಿಗಂತಕ್ಕೆ ವಿಶೇಷ ಸಂದರ್ಶನ ನೀಡಿದ್ದಾರೆ. ಪ್ರಸಕ್ತ ಹೊಸ ಕಾರ್ಮಿಕ ವರ್ಗವಾಗಿರುವ ಗಿಗ್ ಕಾರ್ಮಿಕರಿಗಾಗಿ ಕರ್ನಾಟಕ ಸರ್ಕಾರದ ನೀತಿಯನ್ನು ಅವರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.



▸ಭಾರತೀಯ ಮಜ್ದೂರ್ ಸಂಘದ ಉದ್ದೇಶವೇನು?

1955ರ ಜುಲೈ 23ರಂದು ಭಾರತೀಯ ಮಜ್ದೂರ್ ಸಂಘ ಪ್ರಾರಂಭವಾಯಿತು. ನಾವೀಗ 72 ವರ್ಷ ಪೂರೈಸುತ್ತಿದ್ದೇವೆ. ಕಾರ್ಮಿಕ ವರ್ಗದ ಆಸಕ್ತಿಯನ್ನು ಗಮನಿಸುತ್ತಾ ರಾಷ್ಟ್ರ ನಿರ್ಮಾಣದಲ್ಲಿ ಕೊಡುಗೆ ನೀಡುವುದು ನಮ್ಮ ಮೂಲ ಕೆಲಸವಾಗಿದೆ. ಬಿಎಂಎಸ್ ಯಾವುದೇ ರಾಜಕೀಯ ಸಂಘಟನೆಯಲ್ಲ. ನಾವು ಸರ್ಕಾರದ ಕ್ರಿಯೆಗೆ ಪ್ರತಿಕ್ರಿಯಿಸುತ್ತೇವೆ.

ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅದು ಯಾವುದೇ ಸರ್ಕಾರ ಆಗಿರಲಿ, ಅದು ರಾಷ್ಟ್ರದ ಹಿತಕ್ಕೆ, ಬಡ ಕಾರ್ಮಿಕ ವರ್ಗಕ್ಕೆ ಮತ್ತು ಬಡವರಿಗಾಗಿ ಕೆಲಸ ಮಾಡಿದರೆ ನಾವು ಅವರನ್ನು ಬೆಂಬಲಿಸುತ್ತೇವೆ. ಒಂದು ವೇಳೆ ಅವರು ಅದಕ್ಕೆ ವಿರುದ್ಧವಾಗಿ ಕೆಲಸ ಮಾಡಿದರೆ ನಾವು ರಸ್ತೆಗಿಳಿದು ಹೋರಾಟ ಮಾಡುತ್ತೇವೆ. ಪ್ರಸಕ್ತ 6000ಕ್ಕೂ ಅಧಿಕ ಯೂನಿಯನ್‌ಗಳು ಬಿಎಂಎಸ್ ಜೊತೆಗಿವೆ. ಸುಮಾರು 2.5 ಲಕ್ಷ ಸದಸ್ಯರನ್ನು ಹೊಂದಿದ್ದೇವೆ. ಬಿಎಂಎಸ್ ದೇಶದ ಅತೀ ದೊಡ್ಡ ಕಾರ್ಮಿಕ ಸಂಘಟನೆಯಾಗಿದೆ.

▸ಕಾರ್ಮಿಕರಿಗೆ ಅನುಕೂಲ ಮಾಡಲು ಬಿಎಂಎಸ್ ಹೇಗೆ ಕೆಲಸ ಮಾಡುತ್ತದೆ?

ನಾವೊಂದು ನೀತಿ ರೂಪಿಸಿದ್ದೇವೆ, ಅದು ಸಂವಾದ ಮತ್ತು ಸಂಘರ್ಷ. ನಾವು ಮಾತುಕತೆ ನಡೆಸುತ್ತೇವೆ, ಆದರಿಂದ ಸಮಸ್ಯೆ ಬಗೆಹರಿದರೆ ಉತ್ತಮ. ಇಲ್ಲದಿದ್ದರೆ ನಾವು ಹೋರಾಟ ಮಾಡುತ್ತೇವೆ. ನಮಗೆ ಅಂತಿಮವಾಗಿ ಕಾರ್ಮಿಕ ವರ್ಗದ ಸಮಸ್ಯೆಗಳನ್ನು ಬಗೆಹರಿಸು ವುದು, ಅವರ ಮೂಲಕ ದೇಶದ ಸಮಸ್ಯೆಗಳನ್ನು ಬಗೆಹರಿಸಬೇಕಿದೆ. ಸ್ವಾತಂತ್ರ್ಯ ಬಂದು 75 ವರ್ಷಗಳ ನಂತರವೂ ಇದು ಸಾಧ್ಯವಾಗದಿದ್ದರೆ ಬಡವರು ಇನ್ನೂ ಬಡವರಾಗಿಯೇ ಇರಬೇಕೇ? ಇನ್ನೂ ಅಪೌಷ್ಟಿಕತೆ ಇರಬೇಕೇ? ಇನ್ನೂ ತಾರತಮ್ಯ ಇರಬೇಕೇ? ಇದಾಗಬಾರದು, ಇದನ್ನು ಸಹಿಸುವುದಕ್ಕೆ ಸಾಧ್ಯವಿಲ್ಲ.

ದಿಗಂತ ಸಂದರ್ಶನ

▸ಗಿಗ್ ಕಾರ್ಮಿಕರ ಕುರಿತಾಗಿ ಬಿಎಂಎಸ್ ಏನು ಮಾಡಿದೆ?

ಪ್ರಸಕ್ತ ರಾಷ್ಟ್ರೀಯ ಸನ್ನಿವೇಶದಲ್ಲಿ ಅತೀ ದೊಡ್ಡ ಬದಲಾವಣೆಯಂತೆ ಕಾಣುತ್ತಿರುವುದು ಗಿಗ್ ಪ್ಲಾಟ್‌ಫಾರಂ ಎಕಾನಮಿ (ಆನ್‌ಲೈನ್ ಪ್ಲಾಟ್‌ಫಾರಂ ವ್ಯವಹಾರ). ದೇಶದಲ್ಲಿ ಗಿಗ್ ಕಾರ್ಮಿಕರ ಸಂಖ್ಯೆ ಒಂದು ಕೋಟಿಗೂ ಮಿಕ್ಕಿದೆ. ಅವರಿಗೆ ಸಾಮಾಜಿಕ ಭದ್ರತೆ, ಉದ್ಯೋಗ ಭದ್ರತೆ ಏನಿದೆ? ಸಾಮಾಜಿಕ ಭದ್ರತೆ, ಉದ್ಯೋಗ ಭದ್ರತೆಯ ಜೊತೆಗೆ ಅವರಿಗೆ ವೇತನವೂ ಇಲ್ಲ. ಇಂತಹ ಸಂಸ್ಥೆಗಳು (ಅಗ್ರಿಗೇಟರ್) ಹೆಚ್ಚು ಕಮಿಷನ್ ಪಡೆದುಕೊಳ್ಳುತ್ತವೆ. ಇದನ್ನು ಕಡಿಮೆ ಮಾಡಬೇಕಾಗಿದೆ. ಕೆಲ ಸಮಯದ ಹಿಂದೆ ಮಿನಿಟ್ ಸರ್ವಿಸ್ ಎನ್ನುವ ಸೇವೆಗಳು ಬಂದವು. ಬಿಎಂಎಸ್ ಇದನ್ನು ವಿರೋಧಿಸಿತು. ಇದು ಹೇಗೆ ಸಾಧ್ಯವಾಗುತ್ತದೆ? ಈ ಗಿಗ್ ಕಾರ್ಮಿಕರು ಅದನ್ನು ಹೇಗೆ ತಲುಪುತ್ತಾರೆ ಎಂದು ವಿರೋಧ ವ್ಯಕ್ತಪಡಿಸಿದೆವು. ನಮ್ಮ ಹೋರಾಟದ ತರುವಾಯ ಸರ್ಕಾರ ಇದನ್ನು ನಿಷೇಧಿಸಿತು.

ಗಿಗ್ ಕಾರ್ಮಿಕರಿಗಾಗಿ ಕರ್ನಾಟಕ ಸರ್ಕಾರವು ಉತ್ತಮ ಹೆಜ್ಜೆ ಇಟ್ಟಿದೆ. ಕರ್ನಾಟಕ ಸರ್ಕಾರದ ಈ ಕ್ರಮವನ್ನು ಬಿಎಂಎಸ್ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಸ್ವಾಗತಿಸಿದೆ. ರಾಜ್ಯದ ಕಾರ್ಮಿಕ ಸಚಿವರ ಬಳಿ ತೆರಳಿ ಅವರನ್ನು ಇದಕ್ಕಾಗಿ ಗೌರವಿಸಿದ್ದೇವೆ. ಯಾರು ಉತ್ತಮ ಕೆಲಸ ಮಾಡುತ್ತಾರೋ ಅವರನ್ನು ಗೌರವಿಸು ತ್ತೇವೆ. ನಾವು ಸರ್ಕಾರದ ಜೊತೆಗೆ ವ್ಯವಹರಿಸು ತ್ತೇವೆಯೇ ಹೊರತು ಪಕ್ಷದ ಜೊತೆಗಲ್ಲ.

ಬಿಎಂಎಸ್‌ನ ಪ್ರಮುಖ ಬೇಡಿಕೆ ಯಾವುವು?

ಮುಖ್ಯವಾಗಿ ಬಡವರ ಖರೀದಿಸುವ ಸಾಮರ್ಥ್ಯ ಹೆಚ್ಚಾಗಬೇಕು. ಎರಡನೆಯದ್ದು ದೇಶಾದ್ಯಂತ ಇರುವ 17 ಕಾರ್ಯಕ್ರಮಗಳಲ್ಲಿ ಕೆಲಸ ಮಾಡುವ ಎಲ್ಲಾ ಯೋಜನಾ ಕಾರ್ಯಕರ್ತರನ್ನು ಒಬ್ಬ ನೌಕರ ಎಂದು ಪರಿಗಣಿಸಬೇಕು ಮತ್ತು ಅವರಿಗೆ ನೌಕರರ ಎಲ್ಲ ಹಕ್ಕುಗಳನ್ನು ನೀಡಬೇಕು. ಬಿಪಿಎಲ್ ಮಾನದಂಡವನ್ನು ಪರಿಷ್ಕರಿಸಬೇಕು. ದೇಶಾದ್ಯಂತ ಇರುವ ತೈಲ ಉತ್ಪನ್ನ ಕಂಪನಿಗಳು ತಮ್ಮ ಸಿಎಸ್‌ಆರ್ ನಿಧಿಯನ್ನು ತಮ್ಮ ಗ್ರಾಹಕರಾದ ವಾಣಿಜ್ಯ ವಾಹನಗಳ ಚಾಲಕರ ಕಲ್ಯಾಣಕ್ಕಾಗಿ ವಿನಿಯೋಗಿಸಬೇಕು. ಇಪಿಎಸ್-95 ಯೋಜನೆಯನ್ನು 2014ರ ಸೆ.1ರಂದು ಪರಿಷ್ಕರಿಸಲಾಗಿತ್ತು. ಈಗ 12 ವರ್ಷಗಳಾಗಿರುವುದರಿಂದ ಅದನ್ನು ಮತ್ತೆ ಪರಿಷ್ಕರಿಸಬೇಕು. ಗುತ್ತಿಗೆ ನೌಕರರನ್ನು ಖಾಯಂಗೊಳಿಸಿ, ಖಾಯಂ ನೌಕರರ ಎಲ್ಲ ಸವಲತ್ತುಗಳನ್ನು ಅವರಿಗೆ ಒದಗಿಸಬೇಕು.

▸ಕೃತಕ ಬುದ್ಧಿಮತ್ತೆ (ಎಐ)ಯಿಂದ ಉದ್ಯೋಗಗಳಿಗೆ ಕತ್ತರಿ ಬೀಳುವುದಿಲ್ಲವೇ? ಉದ್ಯೋಗಿಗಳು ಉದ್ಯೋಗ ಕಳೆದುಕೊಳ್ಳುವುದಕ್ಕೆ ಏನು ಪರಿಹಾರವಿದೆ?

ಎಐ ತಂತ್ರಜ್ಞಾನವು ಕಾರ್ಮಿಕರು ಅಥವಾ ನೌಕರರ ಕೆಲಸವನ್ನು ಸುಲಭಗೊಳಿಸಬೇಕು. ಬದಲಿಗೆ ಅವರಿಗೆ ಪರ್ಯಾಯ ಆಗಬಾರದು. ಅದು ಕಾರ್ಮಿಕ ವರ್ಗವನ್ನು ಬೆಂಬಲಿಸಬೇಕು. ಆದ್ದರಿಂದ ಈ ತಂತ್ರಜ್ಞಾನವನ್ನು ಮಾನವ ಕೇಂದ್ರಿತ ತಂತ್ರಜ್ಞಾನವಾಗಿಸಬೇಕು. ಬ್ರಿಕ್ಸ್‌ನ ಟ್ರೇಡ್ ಯೂನಿಯನ್ ಫಾರಂನ ಸಮ್ಮೇಳನ ಹೈದರಾಬಾದ್‌ನಲ್ಲಿ ಜುಲೈ 14 ಮತ್ತು 15ರಂದು ನಡೆಯಲಿದೆ.

ಅದರ ಅಜೆಂಡಾದಲ್ಲಿ ಮಾನವ ಕೇಂದ್ರಿತ ತಂತ್ರಜ್ಞಾನ, ಕೌಶಲ ಅಭಿವೃದ್ಧಿ, ಎಲ್ಲರಿಗೂ ಸಾಮಾಜಿಕ ಭದ್ರತೆ ಸೇರಿದಂತೆ ಅನೇಕ ವಿಷಯಗಳ ಕುರಿತು ಚರ್ಚಿಸಲಾಗುತ್ತದೆ. ಜಗತ್ತಿಗೆ ನಾಯಕತ್ವ ನೀಡುವುದು ನಮ್ಮ ಜವಾಬ್ದಾರಿಯಾಗಿದೆ. ಈ ಫಾರಂನ ಅಧ್ಯಕ್ಷ ಬಿಎಂಎಸ್ ಆಗಿದೆ. ಆದ್ದರಿಂದ ಜಗತ್ತಿನ ಬೇರೆ ಬೇರೆ ದೇಶಗಳ ಸಂಘಟನೆಗಳೊಂದಿಗೆ ಚರ್ಚಿಸಿ ಈ ವಿಷಯವನ್ನು ಮುಂದುವರಿಸಲಾಗುತ್ತದೆ.

▸ಭಾರತದ ಅಮೃತಕಾಲ 2047ಕ್ಕೆ ಕೊಡುಗೆ ನೀಡಲು ಬಿಎಂಎಸ್ ಏನು ಮಾಡುತ್ತದೆ? ಏನಾದರೂ ಅಜೆಂಡಾ ಇದೆಯಾ?

ಈಗ ದೇಶ ಅಮೃತ ಕಾಲ ಆಚರಿಸುತ್ತಿದೆ. ಭಾರತವು 2047ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಬೇಕೆಂದು ಸರ್ಕಾರ ಗುರಿ ನಿಗದಿಪಡಿಸಿದೆ. ಇವತ್ತಿಗೂ ನಾವು ಕನಿಷ್ಠ ವೇತನಕ್ಕಾಗಿ ಹೋರಾಟ ನಡೆಸುತ್ತಿದ್ದೇವೆ. ನಮಗೆ ಜೀವನಾಧಾರ ವೇತನ (ಲೀವಿಂಗ್ ವೇಜ್) ಬೇಕು. ಬಡ ವ್ಯಕ್ತಿಗಳ ಕೊಳ್ಳುವ ಶಕ್ತಿ ಹೆಚ್ಚಾಗಬೇಕು. ಆಗ ಆರ್ಥಿಕ ಚಕ್ರ ನಡೆಯುತ್ತದೆ. ಒಂದು ವೇಳೆ ಅವರ ಕೊಳ್ಳುವ ಸಾಮರ್ಥ್ಯ ಹೆಚ್ಚಳವಾಗದಿದ್ದರೆ ಆರ್ಥಿಕ ಚಕ್ರ ಮುನ್ನಡೆಯುವುದಿಲ್ಲ. ಇವತ್ತಿಗೂ ಈ ದೇಶದಲ್ಲಿ ಬಡತನ ರೇಖೆಗಿಂತ ಕೆಳಗಿರುವವರು ಇದ್ದಾರೆ. ಪ್ರತಿಯೊಬ್ಬರಿಗೂ ಆಹಾರ, ವಸ್ತ್ರ, ವಸತಿ, ಶಿಕ್ಷಣ, ಆರೋಗ್ಯ ಮತ್ತು ಗೌರವ ಈ ಆರು ಮೂಲ ಸೌಕರ್ಯಗಳು ಲಭಿಸಬೇಕು. ಆದರೆ, ಈಗ ಕಾರ್ಮಿಕರಿಗೆ ಗೌರವವಿಲ್ಲದಂತಾಗಿದೆ. ಇದು ಮೂಲ ಸಮಸ್ಯೆಯಾಗಿದೆ. ಅವರ ಕೆಲಸಗಳಿಗೆ ಗೌರವ ಲಭಿಸಬೇಕಾಗಿದೆ. ಯಾವುದೇ ಕೆಲಸ ಕಡಿಮೆಯಲ್ಲ. ಇಷ್ಟು ಅಭಿವೃದ್ಧಿಯಾಗಿದೆ, ಅಮೃತಮಹೋತ್ಸವ ನಡೆದಿದೆ. ಆದರೂ ಈಗಲೂ ಒಳಚರಂಡಿ ಸಂಸ್ಕರಣಾ ಘಟಕದಲ್ಲಿ ಕಾರ್ಮಿಕರು ಮೃತಪಡುತ್ತಿದ್ದಾರೆ.

ಮಾಧ್ಯಮಗಳಲ್ಲಿ ಈ ರೀತಿಯ ಸುದ್ದಿಗಳನ್ನು ಓದುತ್ತಿದ್ದೇವೆ. ಸರ್ಕಾರ ಅವರಿಗೆ ಘೋಷಣೆ ಮಾಡಿದ ಸವಲತ್ತುಗಳು ಲಭಿಸುತ್ತಿಲ್ಲ. ಇದು ಹೇಗಾಗುತ್ತದೆ? ಇದು ಕೇವಲ ಕರ್ನಾಟಕದ ಸಮಸ್ಯೆ ಮಾತ್ರವಲ್ಲ, ಹೆಚ್ಚು ಕಡಿಮೆ ಇಡೀ ದೇಶದ ಸಮಸ್ಯೆಯಾಗಿದೆ. ಮೊದಲು ಕಾರ್ಮಿಕ ವರ್ಗವನ್ನು ಸದೃಢಗೊಳಿಸಬೇಕು, ಅವರನ್ನು ಮುಖ್ಯವಾಹಿನಿಗೆ ತಂದು ರಾಷ್ಟ್ರ ನಿರ್ಮಾಣದಲ್ಲಿ ತೊಡಗಿಸಿಕೊಳ್ಳಬೇಕು.

ಸಂವಿಧಾನದ ಮೇಲಿನ ನೇರ ದಾಳಿ

ಪುಟ ೧➡ ತುರ್ತು ಪರಿಸ್ಥಿತಿ ಸಂದರ್ಭದಲ್ಲೇ ದೇಶದ ಕೋಟ್ಯಂತರ ಜನರ ಅಸಾಧಾರಣ ಧೈರ್ಯ ತನ್ಮೂಲಕ ಪ್ರತಿಫಲಿತವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸಂವಿಧಾನವು 140 ಕೋಟಿ ಭಾರತೀಯರ ಆಶೋತ್ತರಗಳು, ಹಕ್ಕುಗಳು ಮತ್ತು ಕರ್ತವ್ಯಗಳ ಮೂರ್ತರೂಪವಾಗಿದೆ ಎಂದು ಪ್ರಧಾನಿ ಮೋದಿಯವರು 1975ರ ಜೂ.25ರಂದು ಕರಾಳ ತುರ್ತು ಪರಿಸ್ಥಿತಿ ಘೋಷಣೆಯಾದದ್ದನ್ನು ಉಲ್ಲೇಖಿಸಿ ಎಕ್ಸ್‌ಗೆ ಪೋಸ್ಟ್ ಹಾಕಿದ್ದಾರೆ. ಸಾಂವಿಧಾನಿಕ ಮೌಲ್ಯಗಳನ್ನು ಸಂರಕ್ಷಿಸುವಲ್ಲಿ ನಮ್ಮ ಸಾಮೂಹಿಕ ಬದ್ಧತೆಯನ್ನು ನಾವು ಪುನರ್‌ದೃಢೀಕರಿಸುತ್ತೇವೆ. ನಮ್ಮ ಸಂವಿಧಾನದ ಸ್ಫೂರ್ತಿಯ ಮಾರ್ಗದರ್ಶನದಲ್ಲಿ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಕ್ಕೆ ಬದ್ಧ ಭಾರತವನ್ನು ನಾವು ಕಟ್ಟಲಿದ್ದೇವೆ ಎಂದು ಪ್ರಧಾನಿ ಮೋದಿ ಘೋಷಿಸಿದ್ದಾರೆ.

ಪ್ರಜಾಸತ್ತೆಯ ಕಗ್ಗೊಲೆ: 1975ರ ಜೂ.25ಮತ್ತು 1977ರ ಮಾ.21ನಡುವಣ ಅವಧಿಯಲ್ಲಿ ಸಂವಿಧಾನದ ಕಲಂ 352ರಲ್ಲಿ ಭಾರತವನ್ನು ತುರ್ತು ಪರಿಸ್ಥಿತಿಗೆ ನೂಕಲಾಗಿತ್ತು. 1975ರ ಜೂ.25ರಂದು ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿತ್ತು ಎಂದು ಈ ಕುರಿತ ಗೆಜೆಟ್ ಅಧಿಸೂಚನೆ ಹೇಳಿದೆ. ತುರ್ತು ಪರಿಸ್ಥಿತಿ ಹೆಸರಲ್ಲಿ ಆಗಿನ ಕಾಂಗ್ರೆಸ್ ಸರ್ಕಾರ ಅಧಿಕಾರವನ್ನು ಸಖತ್ ದುರ್ಬಳಸಿತ್ತು ಮತ್ತು ದೇಶದ ಜನರ ವಿರುದ್ಧ ಮೇರೆ ಮೀರಿ ಅನ್ಯಾಯ, ದೌರ್ಜನ್ಯವೆಸಗಿತ್ತು. 2025ರಿಂದ ಜೂ.25ನ್ನು ನರೇಂದ್ರ ಮೋದಿ ಸರ್ಕಾರ ಸಂವಿಧಾನ ಹತ್ಯಾ ದಿನವಾಗಿ ಆಚರಿಸುತ್ತಿದೆ. ಭಾರತೀಯ ಪ್ರಜಾಸತ್ತೆಯನ್ನು ಕ್ರೂರವಾಗಿ ಹೊಸಕಿಹಾಕಿದ ಕರಾಳ ಸನ್ನಿವೇಶವನ್ನು ಸಂವಿಧಾನ ಹತ್ಯಾ ದಿವಸ್ ಪ್ರತಿಯೊಬ್ಬರಿಗೂ ನೆನಪಿಸುತ್ತದೆ ಎಂದು ಪ್ರಧಾನಿ ಮೋದಿ ಎಕ್ಸ್‌ಗೆ ಹಾಕಿರುವ ಮತ್ತೊಂದು ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಪ್ರಜಾಸತ್ತೆ, ಸಂವಿಧಾನ ಮತ್ತು ನಾಗರಿಕರ ಹಕ್ಕುಗಳ ಸಂರಕ್ಷಣೆಗೆ ಸದಾ ಬದ್ಧರಿರಲು ಸಂವಿಧಾನ ಹತ್ಯಾ ದಿವಸವು ಪ್ರೇರಣೆಯಾಗಿದೆ. ತುರ್ತು ಪರಿಸ್ಥಿತಿಯನ್ನು ವಿರೋಧಿಸಿದ ಎಲ್ಲಾ ಮಹಾನ್ ವ್ಯಕ್ತಿಗಳಿಗೂ ನನ್ನ ವಂದನೆಗಳು ಎಂದು ಪ್ರಧಾನಿ ಮೋದಿ ಹಿಂದಿಯಲ್ಲಿ ಹಾಕಿರುವ ಮಗದೊಂದು ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಪತ್ರಿಕೆಗಳ ಮೇಲೆ ಬಲಪ್ರಯೋಗ: ತುರ್ತು ಪರಿಸ್ಥಿತಿ ಘೋಷಣೆಯು ಭಾರತೀಯ ಸಾಂವಿಧಾನಿಕ ಚರಿತ್ರೆಯಲ್ಲೇ ತಿರುವಾಗಿತ್ತು. ಅಧಿಕಾರ ಮೀರಿ ವರ್ತಿಸುವ ಅಧಿಕಾರ ಕಾರ್ಯಾಂಗಕ್ಕೆ ಲಭಿಸಿತ್ತು ಮತ್ತು ರಾಜ್ಯಗಳು ಕೇಂದ್ರದ ಹಿಡಿತಕ್ಕೊಳಗಾಗಿದ್ದವು. ಸಾಂವಿಧಾನಿಕ ಸುರಕ್ಷೆಗಳು ವ್ಯವಸ್ಥಿತವಾಗಿ ಅಮಾನತಾಗಿದ್ದವು.

ಸಾಂಸ್ಥಿಕ ವ್ಯವಸ್ಥೆಗಳು ಮತ್ತು ಆಡಳಿತಾತ್ಮಕ ಆದೇಶಗಳ ಮುಖೇನ ಪತ್ರಿಕೆಗಳು, ಸಾರ್ವಜನಿಕ ಮಾಹಿತಿ ವ್ಯವಸ್ಥೆಗಳ ಮೇಲೆ ನಿಯಂತ್ರಣ ಸಾಧಿಸಲಾಗಿತ್ತು. ನ್ಯಾಯಾಂಗ ಪರಾಮರ್ಶೆ ಮತ್ತು ಸಾಂಸ್ಥಿಕ ಪರಿಶೋಧನಾ ವ್ಯವಸ್ಥೆಗಳನ್ನು ದುರ್ಬಲಗೊಳಿಸುವಂತಹ ಸರಣಿ ಸಾಂವಿಧಾನಿಕ ತಿದ್ದುಪಡಿಗಳನ್ನು ಸಂಸತ್ತು ಅಂಗೀಕರಿಸಿತ್ತು. ಬಲವಂತದ ಸಂತಾನ ಹರಣ ಅಭಿಯಾನವು ತುರ್ತು ಪರಿಸ್ಥಿತಿ ಸಂದರ್ಭದ ತೀರಾ ವಿವಾದಾಸ್ಪದ ಅಂಶಗಳಲ್ಲೊಂದಾಗಿದೆ. ಸಾರ್ವತ್ರಿಕ ಚುನಾವಣೆಗಳು ಸೃಜಿಸಿದ ರಾಜಕೀಯ ತಿರುವುಗಳ ಪರಿಣಾಮ 1977 ಮಾರ್ಚ್‌ನಲ್ಲಿ ತುರ್ತು ಪರಿಸ್ಥಿತಿ ಕೊನೆಗೂ ಅಂತ್ಯಗೊಂಡಿತ್ತು.

ಅಯೋಧ್ಯೆ ಕಾಣಿಕೆ ಪ್ರಕರಣ: 8ಮಂದಿ ವಿರುದ್ಧ ಎಫ್‌ಐಆರ್

ಲಖ್ನೋ : ಅಯೋಧ್ಯಾ ಶ್ರೀರಾಮ ಮಂದಿರದ ಕಾಣಿಕೆ ಪ್ರಕರಣಕ್ಕೆ ಸಂಬಂಧಿಸಿ ಎಂಟು ಮಂದಿಯ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದ್ದು, ಭಾರತೀಯ ನ್ಯಾಯ ಸಂಹಿತೆಯ ವಿವಿಧ ವಿಧಿಗಳಡಿ ಕೇಸು ದಾಖಲಿಸಲಾಗಿದೆ.7ಕೋ.ರೂ. ದೇಣಿಗೆ ವ್ಯತ್ಯಯವಾಗಿದೆ ಎಂದು ಮಾಜಿ ಎಸ್‌ಪಿ ಶಾಸಕ ಪವನ್‌ಪಾಂಡೆ ಆರೋಪಿಸಿದ್ದು, ಇದರಂತೆ ತನಿಖೆ ನಡೆಸುವಂತೆ ಶ್ರೀರಾಮ ಜನ್ಮಭೂಮಿ ಮಂದಿರ ಟ್ರಸ್ಟ್ ಸರಕಾರಕ್ಕೆ ಮನವಿ ಸಲ್ಲಿಸಿತ್ತು. ಮನವಿಗೆ ಸ್ಪಂದಿಸಿದ ಉತ್ತರಪ್ರದೇಶ ಸರಕಾರ ವಿಶೇಷ ತನಿಖಾ ತಂಡ ರಚಿಸಿ ತನಿಖೆಗೆ ಆದೇಶಿಸಿತ್ತು.

ನಿರ್ಬಂಧ ತೆರವುಗೊಳಿಸಿದ ಕೇಂದ್ರ: ಗ್ರಾಹಕರು ನಿರಾಳ

ಪುಟ ೧➡ ಕೇಂದ್ರ ಪೆಟ್ರೋಲಿಯಂ ಮತ್ತು ನ್ಯಾಚುರಲ್ ಗ್ಯಾಸ್ ಸಚಿವಾಲಯವು ಗುರುವಾರ ಹೊರಡಿಸಿದ ಆದೇಶದಂತೆ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಮೇಲಿನ ನಿರ್ಬಂಧಗಳನ್ನು ಸಡಿಲಗೊಳಿಸಲಾಗಿದೆ. ಮಧ್ಯಪ್ರಾಚ್ಯ ಬಿಕ್ಕಟ್ಟು ಬಗೆಹರಿಯುವ ಸಾಧ್ಯತೆ ಕಂಡುಬಂದಿರುವ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಗ್ರಾಹಕರಿಗೆ ಈ ನಿರಾಳತೆ ನೀಡಿದೆ.



15ರ ವೈಭವಕ್ಕೆ ಕಾಯುತ್ತಿದೆ ಇತಿಹಾಸ!

ಪುಟ ೧➡ **ಸಚಿನ್ ಬಳಿಕವಲ್ಲ, ಸಚಿನ್‌ಗೂ ಮೊದಲೇ!:** ಕ್ರಿಕೆಟ್ ದೇವರು ಅನಿಸಿಕೊಳ್ಳುವ ಸಚಿನ್ ತೆಂಡೂಲ್ಕರ್ ಇಂಥದ್ದೇ ದಾಖಲೆಯೊಂದನ್ನು ಆಗಿನ ದಿನಗಳಲ್ಲಿ ಮಾಡಿದ್ದರು. 1989ರಲ್ಲಿ ಪಾಕಿಸ್ತಾನದೊಂದಿಗೆ ನಡೆದ ಪಂದ್ಯವೊಂದರಲ್ಲಿ 16 ವರ್ಷ 205 ದಿನ ವಯಸ್ಸಿನ ಸಚಿನ್ ತೆಂಡೂಲ್ಕರ್ ಭಾರತ ತಂಡವನ್ನು ಪ್ರತಿನಿಧಿಸಿದ್ದರು. ಅಂದಿನಿಂದಿನ ಇಂದಿನವರೆಗೆ ಸಚಿನ್ ಮಾಡಿದ ದಾಖಲೆ ಅಚಲವಾಗಿತ್ತು. ವೈಭವ್ ಸೂರ್ಯವಂಶಿ ಬಗ್ಗೆ ಮಾತನಾಡುವಾಗ ಎಲ್ಲರೂ ಸಚಿನ್ ಬಳಿಕ ಅತಿ ಕಿರಿಯ ಎಂಬ ಮಾತನ್ನು ಹೇಳುತ್ತಾ ಬಂದರು. ಆದರೆ ವಾಸ್ತವವಾಗಿ ವೈಭವ್ ಸಚಿನ್ ಬಳಿಕವಲ್ಲ, ಸಚಿನ್‌ಗೂ ಮೊದಲೇ. ಏಕೆಂದರೆ ವೈಭವ್ ಈ ದಾಖಲೆಯನ್ನು 15 ವರ್ಷ 88 ದಿನದಲ್ಲಿ ಮುರಿಯಲಿದ್ದಾರೆ. ಭಾರತ ಪರ ಅವರೇನಾದರೂ ಆಡಿದರೆ ಇತಿಹಾಸವಾಗಲಿದೆ.

ಅತಿ ಕಿರಿಯ ದಾಖಲೆ ಯಾರ ಹೆಸರಲ್ಲಿದೆ?: ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಆಡಿದ ಅತಿ ಕಿರಿಯ ಆಟಗಾರ ಎಂಬ ದಾಖಲೆ ವಿಶ್ವದ ಹಲವಾರು ಕ್ರಿಕೆಟಿಗರ ಹೆಸರಲ್ಲಿದೆ. ಆದರೆ ಅಂತಾರಾಷ್ಟ್ರೀಯ ಕ್ರಿಕೆಟ್ ಸಂಸ್ಥೆಯ ಸಂಪೂರ್ಣ ಸದಸ್ಯತ್ವ ಹೊಂದಿದ ದೇಶಗಳಿಂದ ಪ್ರತಿನಿಧಿಸುವುದೇ ಅಧಿಕೃತ ದಾಖಲೆ. ವೈಭವ್ 15 ವರ್ಷದವರು. ಅತಿ ಕಿರಿಯ ಎಂದು ಕರೆದರೂ ತಪ್ಪಿಲ್ಲ. ಇದಲ್ಲದೆ ಟಿ20 ಕ್ರಿಕೆಟ್‌ನಲ್ಲಿ ಐರ್ಲೆಂಡ್‌ನ ಜೋಶ್ವಾ ಲಿಟಲ್ ಎಂಬಾತರು 16 ವರ್ಷ 309 ದಿನದಲ್ಲಿ ಮಾಡಿದ್ದರು. ಈ ದಾಖಲೆ ವೈಭವ್ ಅಳಿಸಿ ಹಾಕಲಿದ್ದಾರೆ.

ಹೂಳೆತ್ತಲು ಯೋಜನೆ

ಪುಟ ೧➡ **ನೀರಿನ ಸದ್ಬಳಕೆಯಿಂದ ರೈತರ ಆದಾಯ ವೃದ್ಧಿ:** ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯಂತೆ ದೇಶವನ್ನು ರಸ್ತೆಗಳ ಮೂಲಕ ಹೇಗೆ ಜೋಡಿಸಲಾಗುತ್ತಿದೆಯೋ, ಅದೇ ರೀತಿ ನೀರಿನ ಯೋಜನೆಗಳ ಮೂಲಕವೂ ಇಡೀ ದೇಶವನ್ನು ಬೆಸೆಯಲಾಗುತ್ತಿದೆ. ರೈತರಿಗೆ ಹೆಚ್ಚಿನ ನೀರು ಲಭ್ಯವಾದರೆ, ಅವರು ವರ್ಷಕ್ಕೆ ಒಂದರ ಬದಲು ಎರಡು ಬೆಳೆಗಳನ್ನು ತೆಗೆಯಲು ಸಾಧ್ಯವಾಗುತ್ತದೆ ಮತ್ತು ಇದರಿಂದ ಅವರ ಆದಾಯವೂ ದ್ವಿಗುಣಗೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟರು.

ಸಚಿವರಿಗೆ ಪ್ರಕೃತಿ ವಿಕೋಪ ನಿರ್ವಹಣೆಯ ಮೇಲುಸ್ತುವಾರಿ

ಪುಟ ೧➡ ಸತೀಶ್ ಜಾರಕಿಹೊಳಿಗೆ ಬೆಳಗಾವಿ, ಧಾರವಾಡ ಮತ್ತು ಹಾವೇರಿ, ಪ್ರಿಯಾಂಕ ಖರ್ಗೆಗೆ ಕಲಬುರ್ಗಿ ಮತ್ತು ಯಾದಗಿರಿ, ಡಾ. ಶರಣಪ್ರಕಾಶ್ ಪಾಟೀಲಗೆ ರಾಯಚೂರು ಮತ್ತು ಕೊಪ್ಪಳ, ಯು.ಟಿ ಖಾದರ್‌ಗೆ ಉಡುಪಿ, ಕೊಡಗು, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ, ಭೈರತಿ ಸುರೇಶ್‌ಗೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಹಾಗೂ ಯತೀಂದ್ರ ಸಿದ್ದರಾಮಯ್ಯಗೆ ಮೈಸೂರು, ಚಾ.ನಗರ ಜಿಲ್ಲೆಗಳ ಮೇಲುಸ್ತುವಾರಿ ವಹಿಸಲಾಗಿದೆ. ಈ ಸಚಿವರು ಬರ ಹಾಗೂ ಇನ್ನಿತರೆ ಪ್ರಕೃತಿ ವಿಕೋಪಗಳ ಕುರಿತು ಆಯಾ ಜಿಲ್ಲೆಗಳಲ್ಲಿ ಅಧಿಕಾರಿಗಳ ಸಭೆ ನಡೆಸಿ ಮೇಲುಸ್ತುವಾರಿ ವಹಿಸುವಂತೆ ತಿಳಿಸಲಾಗಿದೆ.

ಆರೋಗ್ಯ ಸಚಿವ ಯು.ಟಿ.ಖಾದರ್ ಹೇಳಿಕೆ

ಆಂಬುಲೆನ್ಸ್ ಸೇವೆಗೆ ಮತ್ತಷ್ಟು ಬಲ

ಬೆಂಗಳೂರು: ರಾಜ್ಯದಲ್ಲಿ 108 ಆರೋಗ್ಯ ಕವಚ ಯೋಜನೆ ಅಡಿಯಲ್ಲಿ ಆಂಬುಲೆನ್ಸ್ ಸೇವೆಯನ್ನು ಮತ್ತಷ್ಟು ಬಲಪಡಿಸಲು ಸರ್ಕಾರ ಆದ್ಯತೆ ನೀಡಿದೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ತಿಳಿಸಿದರು.



ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಷ್ಟ್ರೀಯ ಮಾನದಂಡದ ಪ್ರಕಾರ ತುರ್ತು ಪರಿಸ್ಥಿತಿಯಲ್ಲಿ ರೋಗಿಯನ್ನು ಚಿಕಿತ್ಸಾ ಕೇಂದ್ರಕ್ಕೆ ಕರೆದೊಯ್ಯುವ ಗೋಲ್ಡನ್ ಅವರ್ ಅವಧಿಯನ್ನು 20 ನಿಮಿಷಗಳಾಗಿ ನಿಗದಿಪಡಿಸಲಾಗಿದೆ. ಆದರೆ ವಿವಿಧ ಕಾರಣಗಳಿಂದ ರಾಜ್ಯದಲ್ಲಿ ಈ ಅವಧಿಯೊಳಗೆ ರೋಗಿಗಳನ್ನು ಆಸ್ಪತ್ರೆಗೆ ತಲುಪಿಸುವುದು ಸಾಧ್ಯವಾಗುತ್ತಿರಲಿಲ್ಲ ಎಂದು ಹೇಳಿದರು.

ಈ ಸಮಸ್ಯೆಯನ್ನು ನಿವಾರಿಸಲು ವ್ಯವಸ್ಥೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಗುತ್ತಿದ್ದು, ಇನ್ನು ಮುಂದೆ 10 ನಿಮಿಷಗಳ ಪ್ಲಾಟಿನಂ ಅವರ್ ಗುರಿಯನ್ನು ಹೊಂದಲಾಗಿದೆ. ಆ್ಯಂಬುಲೆನ್ಸ್ ರೋಗಿಯ ಬಳಿ ತಲುಪಿದ ತಕ್ಷಣವೇ ತುರ್ತು ಚಿಕಿತ್ಸೆ ಆರಂಭವಾಗುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಆ್ಯಂಬುಲೆನ್ಸ್‌ಗಳಲ್ಲಿ ತರಬೇತಿ ಪಡೆದ ಶುಶ್ರೂಷಕರು ಹಾಗೂ ತಂತ್ರಜ್ಞರನ್ನು ನಿಯೋಜಿಸಲಾಗಿದ್ದು, ರೋಗಿಗಳಿಗೆ ಸ್ಥಳದಲ್ಲಿಯೇ ಪ್ರಾಥಮಿಕ ಚಿಕಿತ್ಸೆ ದೊರೆಯಲಿದೆ ಎಂದು ಖಾದರ್ ವಿವರಿಸಿದರು.

ಜನಔಷಧ ಕೇಂದ್ರಗಳಲ್ಲಿ ಬ್ರ್ಯಾಂಡೆಡ್ ಔಷಧಗಳ ಮಾರಾಟದ ಕುರಿತು ಪ್ರತಿಕ್ರಿಯಿಸಿದ ಸಚಿವರು, ಯಾವುದೇ ಖಾಸಗಿ ಕಂಪನಿಯ ಔಷಧಗಳನ್ನು ನೇರವಾಗಿ ಮಾರಾಟ ಮಾಡಲು ಅವಕಾಶ ಇಲ್ಲ ಎಂದು ಸ್ಪಷ್ಟಪಡಿಸಿದರು. ಆರೋಗ್ಯ ಇಲಾಖೆ ಹಾಗೂ ಸರ್ಕಾರ ನಿಗದಿಪಡಿಸಿರುವ ಮಾನದಂಡಗಳಿಗೆ ಅನುಗುಣವಾಗಿ ಮಾತ್ರ ಔಷಧಗಳ ಮಾರಾಟ ನಡೆಯಬೇಕು. ಜನಔಷಧ ಕೇಂದ್ರಗಳಲ್ಲಿ ಕಡಿಮೆ ಬೆಲೆಗೆ ಔಷಧಗಳು ದೊರೆಯುತ್ತವೆ ಎಂಬ ಕಾರಣವನ್ನು ದುರುಪಯೋಗಪಡಿಸಿಕೊಂಡು, ಸರ್ಕಾರದ ಮಾನದಂಡಗಳಿಗೆ ಹೊಂದಿಕೆಯಾಗದ ಔಷಧಗಳನ್ನು ಮಾರಾಟ ಮಾಡಿ ಸಾರ್ವಜನಿಕರನ್ನು ತಪ್ಪುದಾರಿಗೆಳೆಯುವ ಕೆಲಸ ನಡೆಯಬಾರದು ಎಂದು ಎಚ್ಚರಿಸಿದರು. ರಾಜ್ಯದ ಆರೋಗ್ಯ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸುವ ಜತೆಗೆ ಜನರಿಗೆ ತ್ವರಿತ ಹಾಗೂ ಸುರಕ್ಷಿತ ವೈದ್ಯಕೀಯ ನೆರವು ಒದಗಿಸಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

ಅಕ್ರಮ ತನಿಖೆ ಮಾಡಲು ಎಸ್‌ಐಟಿ ರಚಿಸಿ: ಅಶೋಕ್

ಬೆಂಗಳೂರು: ಗೃಹಲಕ್ಷ್ಮಿ ಯೋಜನೆಯಲ್ಲಿ 225 ಕೋಟಿ ರೂ. ಸರ್ಕಾರಿ ಪ್ರಾಯೋಜಿತ ಲೂಟಿ ನಡೆದಿದ್ದು, ಇದರ ಹಿಂದೆ ಅಧಿಕಾರಿಗಳು ಹಾಗೂ ರಾಜಕಾರಣಿಗಳ ಗ್ಯಾಂಗ್ ಇದೆ. ಈ ಅಕ್ರಮದ ವಿರುದ್ಧ ತನಿಖೆ ಮಾಡಲು ಕೂಡಲೇ ಎಸ್‌ಐಟಿ ರಚಿಸಬೇಕೆಂದು ವಿಪಕ್ಷ ನಾಯಕ ಆರ್.ಅಶೋಕ್ ಆಗ್ರಹಿಸಿದರು. ವಿಧಾನಸೌಧದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಅವರು, 225 ಕೋಟಿ ರೂ. ಅಕ್ರಮ ಆಗಿದೆ ಎಂದು ಸಿಎಜಿ ವರದಿಯಲ್ಲಿ ಹೇಳಿದ್ದರೂ ಯಾವುದೇ ಕ್ರಮ ವಹಿಸಿಲ್ಲ. ನಕಲಿ ಖಾತೆಗಳಿಗೆ ಹಣ ಸಂದಾಯವಾಗಿದ್ದು, ಅಧಿಕಾರಿ ಹಾಗೂ ರಾಜಕಾರಣಿಗಳ ದೊಡ್ಡ ಗ್ಯಾಂಗ್ ಇದರ ಹಿಂದಿದೆ. ಸತ್ತವರ ಹೆಸರಿಗೆ ಹಣ ಹೋಗಿದೆ ಎಂದರೆ ಕಂದಾಯ ಇಲಾಖೆ ಕತ್ತೆ ಕಾಯುತ್ತಿದೆಯೇ ಎಂದು ಪ್ರಶ್ನಿಸಿದರು.



ಕರ್ನಾಟಕ ಐಟಿ ರಾಜ್ಯ ಎಂದು ಹೆಸರಾಗಿದ್ದರೂ ರಾಜ್ಯ ಸರ್ಕಾರಕ್ಕೆ ಸತ್ತವರ ಹೆಸರಿಗೆ ಹಣ ಹೋಗುವುದನ್ನು ತಪ್ಪಿಸಲು ಸಾಧ್ಯವಾಗಿಲ್ಲ. ಬೇಕೆಂದೇ ಸಾಫ್ಟ್‌ವೇರ್ ತಯಾರಿ ಮಾಡಿ ಸತ್ತವರ ಹೆಸರಲ್ಲಿ ಹಣ ಲೂಟಿ ಮಾಡಲಾಗಿದೆ. ಇದು ಅತಿ ದೊಡ್ಡ ಸೈಬರ್ ಕ್ರೈಂ ಆಗಿದ್ದು, ಇದರ ತನಿಖೆಗೆ ಎಸ್‌ಐಟಿ ರಚಿಸಬೇಕಿದೆ. 2.11 ಲಕ್ಷ ಫಲಾನುಭವಿಗಳು ಸತ್ತಿದ್ದಾರೆಂದು ಗೊತ್ತಾಗಿದೆ. ಇನ್ನೂ 77,000 ಜನರ ದತ್ತಾಂಶ ಪತ್ತೆಯಾಗಿಲ್ಲ. ಈಗಾಗಲೇ 5,000 ಕೋಟಿ ರೂ. ನುಂಗಿದ್ದು, ಈಗ ಮತ್ತೆ ಹಗರಣ ನಡೆದಿದೆ. ಕಾಂಗ್ರೆಸ್‌ನ ನಿರಾಶ್ರಿತರಿಗೆ ಹುದ್ದೆ ಕೊಡಲು ಗ್ಯಾರಂಟಿ ಸಮಿತಿ ರಚಿಸಿ ಅದಕ್ಕೆ 150 ಕೋಟಿ ರೂ. ಖರ್ಚು ಮಾಡಲಾಗುತ್ತಿದೆ. ಈ ಸಮಿತಿ ಅಕ್ರಮ ತಡೆದಿಲ್ಲ. ಇವರೇ ಅಕ್ರಮಗಳ ಸರದಾರರು ಎಂದು ಆರೋಪಿಸಿದರು.

ತ್ವರಿತಗತಿ ತನಿಖೆಗೆ ವಿಹಿಂಪ ಆಗ್ರಹ

ಪುಟ ೧➡ ತ್ವರಿತಗತಿ ನ್ಯಾಯಾಲಯ ಪ್ರಕರಣವನ್ನು ಕೈಗೆತ್ತಿಕೊಂಡು ವಿಚಾರಣೆ ನಡೆಸಬೇಕು. ತಪ್ಪಿತಸ್ಥರಿಗೆ ಕಠಿಣವಾದ ಶಿಕ್ಷೆಯಾಗಬೇಕು ಎಂದು ತಿಳಿಸಿದ್ದಾರೆ. ತ್ವರಿತಗತಿ ನ್ಯಾಯಾಲಯದಲ್ಲಿ ದಿನನಿತ್ಯವೂ ವಿಚಾರಣೆ ನಡೆಸಿ ನಾಲ್ಕು ತಿಂಗಳೊಳಗೆ ತನಿಖೆ ಪೂರ್ಣಗೊಳಿಸಬೇಕು. ಯಾವುದೇ ವಿಳಂಬವಿಲ್ಲದೆ ತಪ್ಪಿತಸ್ಥರಿಗೆ ಶಿಕ್ಷೆಯನ್ನು ನೀಡಬೇಕೆಂದು ಅಲೋಕ್ ಕುಮಾರ್ ಅವರು ಹೇಳಿದ್ದಾರೆ.

ಪ್ರಾಥಮಿಕ ವರದಿ ಸಲ್ಲಿಸಿದ ಎಸ್‌ಐಟಿ: ರಾಮ ಮಂದಿರ ದೇಣಿಗೆ ದುರುಪಯೋಗ ಪ್ರಕರಣದಲ್ಲಿ ವಿಶೇಷ ತನಿಖಾ ತಂಡ(ಎಸ್‌ಐಟಿ) ಪ್ರಾಥಮಿಕ ತನಿಖಾ ವರದಿಯನ್ನು ಉತ್ತರಪ್ರದೇಶ ಸರ್ಕಾರಕ್ಕೆ ಮಂಗಳವಾರ ಸಲ್ಲಿಸಿದೆ. ಎಸ್‌ಐಟಿ ತನಿಖೆ ಇನ್ನೂ ಪ್ರಗತಿಯಲ್ಲಿದ್ದು, ಇನ್ನಷ್ಟು ಮಾಹಿತಿಗಳನ್ನು ಕಲೆ ಹಾಕುವುದು ಬಾಕಿಯಿದೆ. ಮುಂದಿನ 10ರಿಂದ 15 ದಿನಗಳಲ್ಲಿ ಅಂತಿಮ ವರದಿಯನ್ನು ಸಲ್ಲಿಸುವುದಾಗಿ ಎಸ್‌ಐಟಿ ಅಧಿಕಾರಿಗಳು ಹೇಳಿದ್ದಾರೆ. ಯೋಗಿ ಆದಿತ್ಯನಾಥ್ ನೇತೃತ್ವದ ಉತ್ತರಪ್ರದೇಶ ಸರ್ಕಾರ ಜೂ.13 ರಂದು ಎಸ್‌ಐಟಿ ತನಿಖೆಗೆ ಆದೇಶಿಸಿತ್ತು.

ಲಿಂಗತ್ವ ಅಲ್ಪಸಂಖ್ಯಾತರು ಗೃಹಲಕ್ಷ್ಮಿ ಫಲಾನುಭವಿಗಳು

ಬೆಂಗಳೂರು: ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ವಿತರಿಸುವ ಅಂತ್ಯೋದಯ, ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿಗಳಲ್ಲಿ ಕುಟುಂಬದ ಯಜಮಾನಿ ಎಂದು ನಮೂದಿಸಿರುವ ಮಹಿಳೆಯರು ಹಾಗೂ ಲಿಂಗತ್ವ ಅಲ್ಪಸಂಖ್ಯಾತರು ಗೃಹಲಕ್ಷ್ಮಿ ಯೋಜನೆ ಅರ್ಹ ಫಲಾನುಭವಿಯಾಗಿದ್ದಾರೆ ಎಂದು ರಾಜ್ಯ ಸರ್ಕಾರ ಸ್ಪಷ್ಟಪಡಿಸಿದೆ.

ಗೃಹಲಕ್ಷ್ಮಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸ್ಪಷ್ಟೀಕರಣ ನೀಡಿದೆ. ಕುಟುಂಬದ ಯಜಮಾನಿ ಅಥವಾ ಯಜಮಾನಿಯ ಪತಿ ಆದಾಯ ತೆರಿಗೆ ಪಾವತಿದಾರರಾಗಿದ್ದಲ್ಲಿ ಮತ್ತು ಜಿಎಸ್‌ಟಿ ರಿಟರ್ನ್ಸ್ ಸಲ್ಲಿಸುವವರಾಗಿದ್ದಲ್ಲಿ ಅಂತಹ ಮಹಿಳೆಯರು ಈ ಯೋಜನೆಗೆ ಅರ್ಹರಾಗಿರುವುದಿಲ್ಲ. ನೋಂದಣಿಯಾದ ಫಲಾನುಭವಿಗಳ ಪೈಕಿ ಈವರೆಗೆ ಆದಾಯ ತೆರಿಗೆ ಪಾವತಿದಾರರು ಮತ್ತು ಜಿಎಸ್‌ಟಿ ರಿಟರ್ನ್ಸ್ ಸಲ್ಲಿಸುತ್ತಿರುವ ಒಟ್ಟು 1,94,560 ಮಹಿಳೆಯರಿದ್ದಾರೆ ಎಂದು ತಿಳಿಸಿದೆ.

ಏಪ್ರಿಲ್ 2026ರ ಅಂತ್ಯಕ್ಕೆ 1,30,35,318 ಫಲಾನುಭವಿಗಳು ಯಶಸ್ವಿಯಾಗಿ ನೋಂದಣಿ ಮಾಡಿಕೊಂಡಿದ್ದಾರೆ. ಈ ಪೈಕಿ ಇತರೆ 95,66,679 ಫಲಾನುಭವಿಗಳು, ಪರಿಶಿಷ್ಟ ಜಾತಿಯ 24,95,604 ಫಲಾನುಭವಿಗಳು ಹಾಗೂ ಪರಿಶಿಷ್ಟ ಪಂಗಡದ 9,73,035 ಫಲಾನುಭವಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಆರ್ಥಿಕ ಇಲಾಖೆಯು ಕಾಲಕಾಲಕ್ಕೆ ಬಿಡುಗಡೆ ಮಾಡುವ ಅನುದಾನದಂತೆ ಇಲಾಖೆಯಿಂದ ಗೃಹಲಕ್ಷ್ಮಿ ಯೋಜನೆ ಯ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಧನಸಹಾಯ ಪಾವತಿಸಲಾಗುತ್ತಿದೆ. ಪ್ರತಿ ತಿಂಗಳು ನೋಂದಣಿಯಾದ ಫಲಾನುಭವಿಗಳಿಗೆ ಧನಸಹಾಯ ಪಾವತಿಗೂ ಮುನ್ನ ನೋಂದಣಿಯಾದ ಫಲಾನುಭವಿ ಹಾಗೂ ಅವರ ಪತಿ ಆದಾಯ ತೆರಿಗೆ ಪಾವತಿದಾರರೇ ಮತ್ತು ಜಿಎಸ್‌ಟಿ ಪಾವತಿದಾರರೇ ಎಂಬ ಬಗ್ಗೆ ಆದಾಯ ತೆರಿಗೆ ಇಲಾಖೆ ಮತ್ತು ವಾಣಿಜ್ಯ ತೆರಿಗೆ ಇಲಾಖೆಯು ನೀಡಿರುವ ಎಪಿಐ ಮೂಲಕ ಕುಟುಂಬ ತಂತ್ರಾಂಶದಲ್ಲಿ ಲಭ್ಯವಾಗುವ ಮಾಹಿತಿ ಪರಿಶೀಲಿಸಲಾಗುತ್ತದೆ.

ಕ್ರಸ್ಟ್ ಗೇಟುಗಳ ಲೋಕಾರ್ಪಣೆ



ತುಂಗಭದ್ರಾ ಜಲಾಶಯದ 33 ಕ್ರಸ್ಟ್ ಗೇಟುಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ತೆಲಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರು ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾದರು.

27 ವಾರ್ಡ್‌ಗಳಲ್ಲಿ ಎಸ್‌ಐಆರ್ ಕಾನೂನು ಬಾಹಿರ: ಛಲವಾದಿ

ಬೆಂಗಳೂರು: ರಾಜ್ಯದ ಕಾಂಗ್ರೆಸ್ ಸರ್ಕಾರದ ಕೈಗೊಂಬೆಯಾಗಿ ರಾಜ್ಯ ಚುನಾವಣಾ ಆಯೋಗವು ಬೆಂಗಳೂರಿನ 27 ವಾರ್ಡ್‌ಗಳಲ್ಲಿ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ



(ಎಸ್‌ಐಆರ್) ನಡೆಸುತ್ತಿದೆ. ಇದು ಕಾನೂನು ಬಾಹಿರ ಎಂದು ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆಕ್ಷೇಪಿಸಿದ್ದಾರೆ.

ಚುನಾವಣಾ ಆಯೋಗದ ಕಚೇರಿಗೆ ಭೇಟಿ ನೀಡಿ ದೂರು ಸಲ್ಲಿಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈಗಾಗಲೇ ಭಾರತ ಚುನಾವಣಾ ಆಯೋಗವು ಎಸ್‌ಐಆರ್ ನಡೆಸುತ್ತಿದೆ. ಆದರೆ ಇದಕ್ಕೆ ಸಮಾನಾಂತರವಾಗಿ ರಾಜ್ಯ ಚುನಾವಣಾ ಆಯೋಗವು ಎಸ್ ಐಆರ್ ನಡೆಸುತ್ತಿದೆ. ಇದು ತಪ್ಪು. ಈ ಬಗ್ಗೆ ಕರ್ನಾಟಕ ಚುನಾವಣಾ ಆಯುಕ್ತ ಅನ್ಬುಕುಮಾರ್ ಅವರಿಗೆ ಮನವಿ ಸಲ್ಲಿಸಿರುವುದಾಗಿ ಹೇಳಿದರು.

ಅನಧಿಕೃತವಾಗಿ ಈ ರೀತಿ ಎಸ್‌ಐಆರ್ ನಡೆಸುವುದು ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತದೆ. ಒಬ್ಬರ ಹೆಸರು ಬೇರೆ ಬೇರೆ ಕ್ಷೇತ್ರಗಳಲ್ಲಿ ಹೆಸರು ಇದ್ದರೆ ಅದನ್ನು ಎಸ್‌ಐಆರ್‌ನಲ್ಲಿ ತೆಗೆಯಲಾಗುತ್ತದೆ. ಇಲ್ಲಿ ಪಕ್ಷಗಳ ಪ್ರಶ್ನೆ ಬರುವುದಿಲ್ಲ, ವ್ಯಕ್ತಿ ಮುಖ್ಯವಾಗುವುದಿಲ್ಲ. ಒಬ್ಬರ ಹೆಸರು ಒಂದೇ ಕಡೆ ಇರಬೇಕು ಎಂಬುದೇ ಇದರ ಪ್ರಮುಖ ಉದ್ದೇಶ ಎಂದು ವಿವರಿಸಿದರು. ಕೇಂದ್ರ ಚುನಾವಣಾ ಆಯೋಗವು ಕಾನೂನು ಪ್ರಕಾರ ಎಸ್‌ಐಆರ್ ನಡೆಸುತ್ತಿದೆ. ಆದರೆ, ತಮಗೆ ಬೇಕಾದವರ ಹೆಸರು ಉಳಿಸಲು ಹೀಗೆ ಎಸ್‌ಐಆರ್ ನಡೆಸಲಾಗುತ್ತಿದೆ ಎಂದು ದೂರಲಾಗುತ್ತಿದೆ. ಇದು ಸರಿಯಲ್ಲ. ಕೇಂದ್ರ ಚುನಾವಣಾ ಆಯೋಗದ ಅನುಮತಿ ಇಲ್ಲದೆ ಮತ್ತೊಂದು ಎಸ್‌ಐಆರ್ ಅನ್ನು ರಾಜ್ಯ ಚುನಾವಣಾ ಆಯೋಗ ಮಾಡುವಂತಿಲ್ಲ. ಆದರೆ, ಇಲ್ಲಿ ಕಾಂಗ್ರೆಸ್ ಸರ್ಕಾರ ಮಾಡಿಸುತ್ತಿದೆ. ತಕ್ಷಣ ಇದನ್ನು ಕೈಬಿಡಬೇಕು ಎಂದು ಮನವಿಯಲ್ಲಿ ಆಗ್ರಹಿಸಿರುವುದಾಗಿ ತಿಳಿಸಿದರು.

ಕಿರುಸುದ್ದಿ

ವಾರ್ತಾ ಆಯುಕ್ತರಾಗಿ ಅನುಚೇತ್ ಅಧಿಕಾರ ಸ್ವೀಕಾರ

ಬೆಂಗಳೂರು: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೂತನ ಆಯುಕ್ತರಾಗಿ ಐಪಿಎಸ್ ಅಧಿಕಾರಿ ಎಂ.ಎನ್.ಅನುಚೇತ್ ಅವರು ಗುರುವಾರ ಅಧಿಕಾರ ಸ್ವೀಕರಿಸಿದರು.



ಇದುವರೆಗೆ ಇಲಾಖೆಯ ಆಯುಕ್ತರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಹೇಮಂತ್ ನಿಂಬಾಳ್ಕರ್ ಅವರು ಅಧಿಕಾರ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳು ನೂತನ ಆಯುಕ್ತರಿಗೆ ಶುಭಕೋರಿದರು. ಎಂ.ಎನ್. ಅನುಚೇತ್ ಅವರಿಗೆ ವಾರ್ತಾ ಇಲಾಖೆ ಜತೆಗೆ ಯುವ ಜನ ಸೇವೆ ಹಾಗೂ ಕ್ರೀಡಾ ಇಲಾಖೆಯ ಆಯುಕ್ತರ ಹೆಚ್ಚುವರಿ ಪ್ರಭಾರದಲ್ಲೂ ಇರಿಸಿ ಸರ್ಕಾರ ಆದೇಶಿಸಿದೆ. 2009ರ ಬ್ಯಾಚ್‌ನ ಕರ್ನಾಟಕ ವೃಂದದ ಐಪಿಎಸ್ ಅಧಿಕಾರಿಯಾಗಿರು ಎಂ.ಎನ್. ಅನುಚೇತ್ ಅವರು ಮೂಲತಃ ಕೋಲಾರ ಜಿಲ್ಲೆಯವರಾಗಿದ್ದಾರೆ. ಬೆಂಗಳೂರಿನ ಆರ್.ವಿ.ಇಂಜಿನಿಯರಿಂಗ್ ಕಾಲೇಜಿನಿಂದ 2006ರಲ್ಲಿ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಪದವಿ ಮುಗಿಸಿರುವ ಇವರು ತಾಂತ್ರಿಕ ಹಿನ್ನೆಲೆಯನ್ನು ಹೊಂದಿದ್ದಾರೆ. ವಾರ್ತಾ ಇಲಾಖೆಯ ಕಾರ್ಯವೈಖರಿಗೆ ಹೊಸ ವೇಗ ನೀಡಬಲ್ಲ ಸಾಮರ್ಥ್ಯ ಹೊಂದಿರುವ ಅನುಚೇತ್ ಅವರು, ಪೊಲೀಸ್ ಇಲಾಖೆಯಲ್ಲಿ ತಂತ್ರಜ್ಞಾನ ಆಧಾರಿತ ಪೊಲೀಸ್ ವ್ಯವಸ್ಥೆ ಹಾಗೂ ಸಮರ್ಥ ಆಡಳಿತಕ್ಕಾಗಿ ಹೆಸರಾಗಿದ್ದಾರೆ.

ಟೌನ್‌ಶಿಪ್: ಸಿಎಂಗೆ ಮತ್ತೊಂದು ಪತ್ರ ಬರೆದ ಎಚ್ಡಿಕೆ

ರಾಮನಗರ: ಬಿಡದಿ ಉಪನಗರ ಯೋಜನೆಗೆ ಸಂಬಂಧಿಸಿದಂತೆ ಚರ್ಚಿಸಲು ಬೈರಮಂಗಲಕ್ಕೆ ಬರುವಂತೆ ಕೋರಲಾಗಿದ್ದ ಪತ್ರಕ್ಕೆ ರಾಜ್ಯ ಸರ್ಕಾರ ಮತ್ತು ಮುಖ್ಯಮಂತ್ರಿಗಳಿಂದ ಯಾವುದೇ ಪ್ರತ್ಯುತ್ತರ ಬಾರದ ಹಿನ್ನೆಲೆಯಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಮತ್ತೊಂದು ಪತ್ರವನ್ನು ಮುಖ್ಯಮಂತ್ರಿಗಳಿಗೆ ಬರೆದಿದ್ದಾರೆ. ನೊಂದ ರೈತರ ಸಮ್ಮುಖದಲ್ಲಿಯೇ ಚರ್ಚೆ ನಡೆಯಬೇಕು ಎಂಬ ತಮ್ಮ ನಿಲುವಿಗೆ ಬದ್ಧರಾಗಿರುವ ಕೇಂದ್ರ ಸಚಿವರು, ತಮ್ಮ ಅಧಿಕಾರಿಗಳೊಂದಿಗೆ ಬೈರಮಂಗಲಕ್ಕೆ ಬರುವಂತೆ ಮುಖ್ಯಮಂತ್ರಿಗಳನ್ನು ಮತ್ತೊಮ್ಮೆ ಕೋರಿದ್ದಾರೆ. ಈ ಸಂಬಂಧ ಗುರುವಾರ ಮುಖ್ಯಮಂತ್ರಿಗಳಿಗೆ ಮತ್ತೊಂದು ಪತ್ರವನ್ನು ಬರೆದಿರುವ ಸಚಿವರು, ತಮ್ಮಿಂದ ಉತ್ತರದ ನಿರೀಕ್ಷೆಯಲ್ಲಿ ಇದ್ದೇನೆ ಎಂದು ತಿಳಿಸಿದ್ದಾರೆ.

ಮಗುವಿನೊಂದಿಗೆ ಬಾವಿಗೆ ಹಾರಿ ಗರ್ಭಿಣಿ ಆತ್ಮಹತ್ಯೆ

ಕಲಬುರಗಿ: ಒಂದೂವರೆ ವರ್ಷದ ಮಗುವಿನೊಂದಿಗೆ ನಾಲ್ಕು ತಿಂಗಳ ಗರ್ಭಿಣಿಯೊಬ್ಬರು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಹೃದಯವಿದ್ರಾವಕ ಘಟನೆ ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಚಿಂಚನಸೂರ್ ಗ್ರಾಮದಲ್ಲಿ ನಡೆದಿದೆ. ಅಂಬಿಕಾ (25) ಎಂಬ ಮಹಿಳೆ ತನ್ನ ಒಂದೂವರೆ ವರ್ಷದ ಪುತ್ರ ಆರಾಧ್ಯನೊಂದಿಗೆ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಂಬಿಕಾ ಅವರು ನಾಲ್ಕು ತಿಂಗಳ ಗರ್ಭಿಣಿಯಾಗಿದ್ದರು ಎಂದು ತಿಳಿದುಬಂದಿದೆ. ಮೂರು ವರ್ಷಗಳ ಹಿಂದೆ ಅಂಬಿಕಾ ಅವರು ವೀರಭದ್ರಪ್ಪ ಅವರೊಂದಿಗೆ ವಿವಾಹವಾಗಿದ್ದರು. ಮಂಗಳವಾರ ಬೆಳಗ್ಗೆ ಅಂಬಿಕಾ ಅವರು ಮನೆಯಿಂದ ಹೊರಟು ಹೋಗಿದ್ದು, ಮಗುವನ್ನು ಬಟ್ಟೆಯಿಂದ ತನ್ನ ಹೊಟ್ಟೆಗೆ ಕಟ್ಟಿಕೊಂಡು ಗ್ರಾಮದ ಹೊರವಲಯದ ಬಾವಿಗೆ ಹಾರಿದ್ದಾರೆ ಎನ್ನಲಾಗಿದೆ.

ತುಂಗಭದ್ರಾ ಜಲಾಶಯದ 33 ಕ್ರಸ್ಟ್ ಗೇಟುಗಳ ಲೋಕಾರ್ಪಣೆ

ಒಮ್ಮತದ ಐತಿಹಾಸಿಕ ನಿರ್ಧಾರ

ಕೊಪ್ಪಳ: ತುಂಗಭದ್ರಾ ನದಿ ಪಾತ್ರದ ರೈತರ ಹಿತರಕ್ಷಣೆಗೆ ಕರ್ನಾಟಕ, ಆಂಧ್ರ ಪ್ರದೇಶ ಹಾಗೂ ತೆಲಂಗಾಣ ಮೂರೂ ರಾಜ್ಯಗಳು ಸೇರಿ ಒಮ್ಮತದ ಐತಿಹಾಸಿಕ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿದರು.

ಕೊಪ್ಪಳ ಜಿಲ್ಲೆ ಮುನಿರಾಬಾದ್ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ತುಂಗಭದ್ರಾ ಅಣೆಕಟ್ಟೆಯ 33 ಕ್ರಸ್ಟ್ ಗೇಟುಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಇದು ದಕ್ಷಿಣ ಭಾರತದ ಐತಿಹಾಸಿಕ ಕಾರ್ಯಕ್ರಮ. 19ನೇ ಗೇಟ್ ತುಂಡರಿಸಿದಾಗ ಈ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾದ ಶಿವರಾಜ ತಂಗಡಗಿ ಹಾಗೂ ಅಧಿಕಾರಿಗಳು ಮಧ್ಯರಾತ್ರಿ ನನಗೆ ಕರೆ ಮಾಡಿ, ಅಣೆಕಟ್ಟು ನಡುಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು. ನಾನು ಅಂದು ಬೆಳಗ್ಗೆ 8ಗಂಟೆಗೆ ಸ್ಥಳಕ್ಕೆ ಭೇಟಿ ನೀಡಿದೆವು. ತಕ್ಷಣವೇ ಏನು ಮಾಡಬೇಕು ಎಂದು ತಜ್ಞರೊಂದಿಗೆ ಚರ್ಚಿಸಿ ಒಂದೇ ವಾರದಲ್ಲಿ ಗೇಟ್ ಬದಲಾವಣೆ ಮಾಡಲಾಯಿತು. ಆ ಮೂಲಕ ಈ ಭಾಗದ ರೈತರನ್ನು ರಕ್ಷಣೆ ಮಾಡಲಾಯಿತು ಎಂದು ತಿಳಿಸಿದರು.

ಒಂದು ತಾಸು ಚರ್ಚಿಸಿ, ಐತಿಹಾಸಿಕ ತೀರ್ಮಾನ: ಈ ಅಣೆಕಟ್ಟಿನ 33 ಟಿಎಂಸಿ ನೀರನ್ನು ಉಳಿಸುವ ಬಗ್ಗೆ ರೈತ ಮುಖಂಡರು ಸಲ್ಲಿಸಿರುವ ಮನವಿ ಸೇರಿದಂತೆ ಯಾವ ರೀತಿ ರಕ್ಷಿಸಿ, ರೈತ ಕುಟುಂಬಗಳನ್ನು ಕಾಪಾಡಬೇಕು ಎಂದು ನಾವು ಚರ್ಚೆ ಮಾಡಿದ್ದೇವೆ. ನವಲಿ ಸಮನಾಂತರ ಜಲಾಶಯ, ಹೂಳೆತ್ತುವ ವಿಚಾರ ಸೇರಿದಂತೆ ಎಲ್ಲ ಅವಕಾಶಗಳ ಬಗ್ಗೆ ಸುದೀರ್ಘ ಚರ್ಚೆ ಮಾಡಿ ನಾವೆಲ್ಲರೂ ಒಮ್ಮತದ ಅಭಿಪ್ರಾಯಕ್ಕೆ ಬಂದಿದ್ದೇವೆ. ಈ ತೀರ್ಮಾನವನ್ನು ಕೇಂದ್ರ ಸಚಿವರೇ ಪ್ರಕಟಿಸಲಿದ್ದಾರೆ.



> ನಮ್ಮ ಭಾಗದ ಕುಡಿಯುವ ಹಾಗೂ ಕೃಷಿ ನೀರಿನ ಸಮಸ್ಯೆಯಿಂದಾಗಿ ಜನರು ಜಿಲ್ಲೆ, ರಾಜ್ಯ ದಾಟಿ ವಲಸೆ ಹೋಗುವ ಪರಿಸ್ಥಿತಿ ಇದೆ. ಆದರೆ, ನಮಗೆ ಸಿಗಬೇಕಾದ ನೀರು ಸಮುದ್ರ ಪಾಲಾಗುತ್ತಿದೆ. ರಾಜಕೀಯವನ್ನು ಬದಿಗಿಟ್ಟು, ಈ ಭಾಗದ ರೈತಾಪಿ ವರ್ಗದ ಹಿತದೃಷ್ಟಿಯಿಂದ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡಲು ನಿರ್ಧರಿಸಿದ್ದೇವೆ.
> ■ ರೇವಂತ್ ರೆಡ್ಡಿ, ತೆಲಂಗಾಣ ಮುಖ್ಯಮಂತ್ರಿ

ಇಂದು ನಾವು ಒಂದು ತಾಸುಗಳ ಕಾಲ ಮಾಡಿರುವ ಚರ್ಚೆ ದೇಶದ ನೀರಾವರಿ ಹಾಗೂ ಒಕ್ಕೂಟ ವ್ಯವಸ್ಥೆಯಲ್ಲಿ ಇತಿಹಾಸದ ಪುಟಕ್ಕೆ ಸೇರಲಿದೆ. ನಮ್ಮ ನೀರು, ನಮ್ಮ ಹಕ್ಕು ಆಶಯದ ಅಡಿ ಮೂರು ರಾಜ್ಯಗಳ ರೈತರ ರಕ್ಷಣೆಗೆ ನಾವು ಐತಿಹಾಸಿಕ ತೀರ್ಮಾನ ಕೈಗೊಂಡಿದ್ದೇವೆ.

ರೈತರಿಗಾಗಿ ದೃಢ ತೀರ್ಮಾನ: ರೈತನಿಗೆ ಸಂಬಳವಿಲ್ಲ, ಭಡ್ತಿ ಇಲ್ಲ, ಪಿಂಚಣಿ ಇಲ್ಲ, ರಜೆಯೂ

> ದೇಶದ ಎಲ್ಲ ನದಿಗಳನ್ನು ಜೋಡಿಸುವುದೊಂದೇ ಇರುವ ಏಕೈಕ ಮಾರ್ಗವಾಗಿದೆ. ಹೆಚ್ಚುವರಿ ನೀರಿರುವ ನದಿಗಳಿಂದ ಕೊರತೆಯಿರುವ ನದಿಗಳಿಗೆ ನೀರನ್ನು ಹರಿಸುವ ಮೂಲಕ ಬರಗಾಲವನ್ನು ಸಮರ್ಥವಾಗಿ ಎದುರಿಸಬಹುದು. ಇದರಿಂದ ರಾಜ್ಯಗಳ ನಡುವಿನ, ಜಿಲ್ಲೆಗಳ ನಡುವಿನ ಹಾಗೂ ರೈತರ ನಡುವಿನ ನೀರಿನ ಸಂಘರ್ಷ ಸಂಪೂರ್ಣವಾಗಿ ತಡೆಯಬಹುದು.
> ■ ಚಂದ್ರಬಾಬು ನಾಯ್ಡು, ಆಂಧ್ರ ಪ್ರದೇಶ ಸಿಎಂ

ಇಲ್ಲ ಹಾಗೂ ನಿವೃತ್ತಿಯೂ ಇಲ್ಲ. ಇಂತಹ ಕಷ್ಟದ ಪರಿಸ್ಥಿತಿಯಲ್ಲೂ ದೇಶಕ್ಕೆ ಅನ್ನ ನೀಡುವ ರೈತನ ಬದುಕನ್ನು ಉಳಿಸಬೇಕು ಮತ್ತು ಈ ಭಾಗದ ಭತ್ತದ ಕಣಜವನ್ನು ಕಾಪಾಡಬೇಕು ಎಂಬ ದೃಢ ತೀರ್ಮಾನವನ್ನು ನಿಮ್ಮೆಲ್ಲರ ಆಶೀರ್ವಾದದೊಂದಿಗೆ ನಾವು ತೆಗೆದುಕೊಂಡಿದ್ದೇವೆ ಎಂದರು.

ಅಂತಾರಾಜ್ಯ ಸಹಕಾರಕ್ಕೆ ಶ್ಲಾಘನೆ: ಹಿಂದೆ ಆಂಧ್ರಪ್ರದೇಶ, ತೆಲಂಗಾಣ ಮತ್ತು ಕರ್ನಾಟಕ ರಾಜ್ಯಗಳ ನಡುವೆ ನೀರು ಹಂಚಿಕೆ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿದ್ದವು. ಆದರೆ, ಇಂದು ಮೂರೂ ರಾಜ್ಯಗಳ ಮುಖ್ಯಮಂತ್ರಿಗಳು ಒಂದೇ ವೇದಿಕೆಗೆ ಬಂದು ಒಗ್ಗಟ್ಟು ಪ್ರದರ್ಶಿಸಿರುವುದನ್ನು ಸಚಿವರು ಮುಕ್ತ ಕಂಠದಿಂದ ಶ್ಲಾಘಿಸಿದರು. ಯಾವುದೇ ಆಕ್ಷೇಪಣೆಗಳಿಲ್ಲದೆ, ಪರಸ್ಪರ ಸಹಕಾರ ಹಾಗೂ ಆರ್ಥಿಕ ನೆರವು ನೀಡಿದ್ದರಿಂದಲೇ ತುಂಗಭದ್ರಾ ಜಲಾಶಯಕ್ಕೆ ಕೇವಲ ಕೆಲವೇ ದಿನಗಳಲ್ಲಿ ನೂತನ ಗೇಟುಗಳನ್ನು ಅಳವಡಿಸಲು ಸಾಧ್ಯವಾಯಿತು ಎಂದು ಕೇಂದ್ರ ಸಚಿವ ಸಿ.ಆರ್.ಪಾಟೀಲ ಸ್ಮರಿಸಿದರು.

ಖಾಲಿ ಹುದ್ದೆಗಳಿಗೆ ತ್ವರಿತ ನೇಮಕಾತಿ

ಬೆಂಗಳೂರು: ಕರ್ನಾಟಕ ಸರ್ಕಾರವು ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಮಹತ್ವದ ಆದೇಶ ಹೊರಡಿಸಿದೆ. ಒಟ್ಟು 72,186 ಹುದ್ದೆಗಳ ನೇಮಕಾತಿಗೆ ಅನುಮೋದನೆ ನೀಡಲಾಗಿದ್ದು, ಈ ಕುರಿತು ಉನ್ನತ ಮಟ್ಟದ ಅಧಿಕಾರಿಗಳಿಗೆ ಮೇಲುಸ್ತುವಾರಿ ಜವಾಬ್ದಾರಿ ನೀಡಲಾಗಿದೆ.

2023-24ನೇ ಸಾಲಿನಿಂದ ಇಲ್ಲಿಯ ವರೆಗೆ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 40,009 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆ ಸಹಮತಿ ನೀಡಿದೆ. ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದಲ್ಲಿ ಖಾಲಿ ಇರುವ 32,177 ಹುದ್ದೆಗಳ ಪೈಕಿ ಶೇ. 80ರಷ್ಟು ಹುದ್ದೆಗಳನ್ನು ಭರ್ತಿ ಮಾಡಲು ಕಳೆದ ಶನಿವಾರ ನಡೆದ ಸಂಪುಟದಲ್ಲಿ ಅನುಮತಿಸಲಾಗಿತ್ತು.

ಈ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಆಯ್ಕೆ ಪ್ರಾಧಿಕಾರಗಳಿಂದ ಕ್ರಿಯಾ ಯೋಜನೆಗಳನ್ನು ಪಡೆದು ಸಚಿವ ಸಂಪುಟದ ಅನುಮೋದನೆಗೆ ಮಂಡಿಸಲಾಗಿತ್ತು. ಸಚಿವ ಸಂಪುಟವು ಈ ಪ್ರಕ್ರಿಯೆಗೆ ಅನುಮೋದನೆ ನೀಡಿದೆ.

17 ಇಲಾಖೆಗಳಲ್ಲಿನ ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ಹುದ್ದೆಗಳನ್ನು ತ್ವರಿತಗತಿಯಲ್ಲಿ ಭರ್ತಿ ಮಾಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರಿಗೆ ಜವಾಬ್ದಾರಿ ನೀಡಲಾಗಿದೆ.

34 ಇಲಾಖೆಗಳಲ್ಲಿನ ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ಹುದ್ದೆಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗೆ ಜವಾಬ್ದಾರಿ ನೀಡಲಾಗಿದೆ. ನೇಮಕಾತಿ ಪ್ರಕ್ರಿಯೆ ಸಂಪೂರ್ಣವಾಗಿ ಪಾರದರ್ಶಕವಾಗಿದ್ದು, ಯಾವುದೇ ರೀತಿಯ ಅಕ್ರಮ ಅಥವಾ ಅಸಮರ್ಪಕತೆ ನಡೆಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತದೆ.

6 ತಿಂಗಳಲ್ಲಿ ನೇಮಕಾತಿ ಪೂರ್ಣಗೊಳಿಸಿ

ಎಲ್ಲಾ ನೇರ ನೇಮಕಾತಿ ಹುದ್ದೆಗಳಿಗೆ ಮುಂದಿನ ಎರಡು ತಿಂಗಳುಗಳಲ್ಲಿ



ನೇಮಕಾತಿ ಅಧಿಸೂಚನೆ ಹೊರಡಿಸಲು ಸೂಚಿಸಲಾಗಿದೆ. ಮುಂದಿನ ನಾಲ್ಕು ತಿಂಗಳುಗಳಲ್ಲಿ ನೇಮಕಾತಿ ಪರೀಕ್ಷೆಗಳನ್ನು ನಡೆಸಿ, ಆರು ತಿಂಗಳುಗಳಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ನೇಮಕಾತಿ ಆದೇಶಗಳನ್ನು ಹೊರಡಿಸಲು ಸರ್ಕಾರ ಸೂಚಿಸಿದೆ.

ಪ್ರಸ್ತುತ ರಾಜ್ಯದಲ್ಲಿದೆ ನೀರಿಗೆ ಅಭಾವ: ಬಿ.ವೈ.ರಾಘವೇಂದ್ರ

ಶಿವಮೊಗ್ಗ: ನಮ್ಮ ರಾಜ್ಯದಲ್ಲೇ ಕುಡಿಯಲು ಮತ್ತು ಕೃಷಿಗೆ ನೀರಿಲ್ಲದ ಪರಿಸ್ಥಿತಿ ಇರುವಾಗ, ನೆರೆ ರಾಜ್ಯಕ್ಕೆ ನೀರು ಬಿಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಸಂಸದ ಬಿ.ವೈ.ರಾಘವೇಂದ್ರ ಪ್ರತಿಕ್ರಿಯಿಸಿದ್ದಾರೆ. ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ತಮಿಳುನಾಡಿನವರು ಪ್ರತಿ ವರ್ಷ ಅವರ ಪಾಲಿನ ನೀರನ್ನು ಕೇಳುವುದು ಮಾಮೂಲಿಯಾಗಿದೆ.



ಆದರೆ ಪ್ರಸ್ತುತ ನಮ್ಮಲ್ಲಿಯೇ ನೀರಿನ ಅಭಾವವಿದೆ. ಇಂತಹ ಪರಿಸ್ಥಿತಿಯಲ್ಲಿ ಅವರಿಗೆ ನೀರು ಹರಿಸಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು.

ಈ ಗಂಭೀರ ವಿಚಾರದಲ್ಲಿ ರಾಜ್ಯ ಸರ್ಕಾರ ಮತ್ತು ಅಡ್ವೋಕೇಟ್ ಜನರಲ್(ಎಜಿ) ಅವರು ತಕ್ಷಣ ಸಮಾಲೋಚನೆ ನಡೆಸಿ, ಬಲವಾದ ಕಾನೂನು ಹೋರಾಟದ ಮೂಲಕ ತಮಿಳುನಾಡಿನ ಹಠಾತ್ ಧೋರಣೆ ವಿರೋಧಿಸಬೇಕಿದೆ ಎಂದು ಆಗ್ರಹಿಸಿದರು. ಸಾಮಾನ್ಯವಾಗಿ ಪ್ರತಿ ವರ್ಷ ಮಳೆಗಾಲಕ್ಕೆ ಮುನ್ನ ಕರ್ನಾಟಕ, ತ.ನಾಡು ನಡುವೆ ನೀರಿನ ಹಂಚಿಕೆ ಕುರಿತು ಚರ್ಚೆಗಳು, ಸಂಘರ್ಷಗಳು ಮುನ್ನೆಲೆಗೆ ಬರುತ್ತವೆ. ಈ ಪ್ರಕ್ರಿಯೆಯಲ್ಲಿ ಸುಪ್ರೀಂ ಕೋರ್ಟ್ ಹಾಗೂ ಕೇಂದ್ರ ಜಲ ಸಮಿತಿ ಕೂಡ ಮಧ್ಯಸ್ಥಿಕೆ ವಹಿಸಿ ನಿರ್ದೇಶನಗಳನ್ನು ನೀಡುತ್ತವೆ. ಆದರೆ ಪ್ರಸಕ್ತ ಸಾಲಿನಲ್ಲಿ ಕಾವೇರಿ ವಿವಾದ ದೊಡ್ಡಮಟ್ಟದ ಬಿಕ್ಕಟ್ಟಾಗಿ ಪರಿಣಮಿಸುವ ಮುನ್ಸೂಚನೆ ಸಿಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಪ್ರಸ್ತುತ ತಮಿಳುನಾಡು ಸರ್ಕಾರ ಕೃಷ್ಣರಾಜಸಾಗರ ಜಲಾಶಯ ಹಾಗೂ ಅದರ ಸುತ್ತಮುತ್ತಲಿನ ಉಪ ಡ್ಯಾಂಗಳಲ್ಲಿರುವ ನೀರನ್ನು ತನಗೇ ಬಿಡಬೇಕು ಎಂದು ಹಠ ಹಿಡಿದಿರುವುದು ಆತಂಕ ಮೂಡಿಸಿದೆ ಎಂದರು.

ಸಿಎಂ ಸದ್ಯ ಅತಿ ಉತ್ಸಾಹದಿಂದ ತುಂಗಭದ್ರಾ ಜಲಾಶಯದ ಕ್ರಸ್ಟ್ ಗೇಟ್‌ಗಳ ಉದ್ಘಾಟನಾ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ. ಈ ಕಾರ್ಯಕ್ರಮಕ್ಕೆ ಬೇರೆ ಬೇರೆ ರಾಜ್ಯಗಳ ಮುಖ್ಯಮಂತ್ರಿಗಳು ಸಹ ಆಗಮಿಸಿದ್ದಾರೆ. ಇಷ್ಟೆಲ್ಲಾ ಗಂಭೀರ ವಿದ್ಯಮಾನಗಳ ಮಧ್ಯೆ, ಕಾವೇರಿ ನದಿ ನೀರಿನ ರಕ್ಷಣೆ ಹಾಗೂ ತಮಿಳುನಾಡಿನ ತಗಾದೆಯ ವಿರುದ್ಧ ಮುಖ್ಯಮಂತ್ರಿಗಳು ರಾಜ್ಯದ ಹಿತದೃಷ್ಟಿಯಿಂದ ಯಾವ ರೀತಿಯ ದೃಢ ತೀರ್ಮಾನ ಕೈಗೊಳ್ಳಲಿದ್ದಾರೆ ಎಂಬುದನ್ನು ನಾವು ಕಾದು ನೋಡುತ್ತಿದ್ದೇವೆ ಎಂದು ತಿಳಿಸಿದರು.

ಆರ್‌ಎಸ್‌ಎಸ್ ನಿಷೇಧಿಸಲು ಹೋರಾಟ: ಹರಿಪ್ರಸಾದ್

ಹುಬ್ಬಳ್ಳಿ: ಮೂರು ಬಾರಿ ಈಗಾಗಲೇ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ನಿಷೇಧಿಸಲಾಗಿತ್ತು. ನಮ್ಮ ಮುಂದಿನ ಹೋರಾಟ ಆರ್‌ಎಸ್‌ಎಸ್ ನಿಷೇಧಿಸುವುದಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ತಿಳಿಸಿದರು.

ನಗರದಲ್ಲಿ ಗುರುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಆರ್‌ಎಸ್‌ಎಸ್ ಬಗ್ಗೆ ಗೃಹಸಚಿವ ಪ್ರಿಯಾಂಕ್ ಖರ್ಗೆ ನಿರಂತರ ಟೀಕೆ ಮಾಡುತ್ತಿರುವುದರಿಂದ ಅವರ ಗಮನ ಬೇರೆಡೆ ಸೆಳೆಯಲು ಬಿಜೆಪಿ ಭೂ ಹಗರಣದಲ್ಲಿ ಮಲ್ಲಿಕಾರ್ಜುನ ಖರ್ಗೆ ಭಾಗಿಯಾಗಿದ್ದಾರೆ ಎಂದು ಸುಳ್ಳು ಆರೋಪ ಮಾಡುತ್ತಿದೆ ಎಂದರು.

ನಾಲ್ಕು ಸಾವಿರ ಕೋಟಿ ಹಣವನ್ನು ಬಿಜೆಪಿ ಕೇಂದ್ರದಲ್ಲಿ ಬಂದ ಬಳಿಕ ಸಂಗ್ರಹಿಸಿದೆ. ನಮ್ಮದು ಬಡವರ ಪಕ್ಷವಾಗಿದ್ದು, ಖಜಾನೆಯಲ್ಲಿ 700 ಕೋಟಿ ಮಾತ್ರವಿದೆ. ಚೆಕ್ ಮೂಲಕವೇ ನಮ್ಮ ವ್ಯವಹಾರ ನಡೆಯುತ್ತವೆ. ಬಿಜೆಪಿ ಹಾಗೂ ಆರ್‌ಎಸ್‌ಎಸ್ ತಮ್ಮನ್ನು ವಿರೋಧಿಸುವವರನ್ನು ಚುನಾವಣಾ ಆಯೋಗ ಮೂಲಕ ಮತದಾರರ ಪಟ್ಟಿಯಿಂದ ತೆಗೆದು ಹೊರಗಿಡುತ್ತಿದ್ದಾರೆ. ಎಸ್‌ಐಆರ್ ಬಗ್ಗೆ ನಮ್ಮ ವಿರೋಧವಿಲ್ಲ. ಆದರೆ, ನಿಜವಾದ ಯಾವೊಬ್ಬ ಮತದಾರನೂ ಪಟ್ಟಿಯಿಂದ ಬಿಟ್ಟು ಹೋಗಬಾರದು ಎನ್ನುವುದು ನಮ್ಮ ಉದ್ದೇಶ. ಈ ನಿಟ್ಟಿನಲ್ಲಿ ನಾವು ವಿಭಾಗ ಮಟ್ಟದಲ್ಲಿ ಜಾಗೃತಿ ಸಮಾವೇಶ ನಡೆಸುತ್ತಿದ್ದೇವೆ ಎಂದು ಹೇಳಿದರು. ಸಚಿವ ಸಂಪುಟ ವಿಸ್ತರಣೆಯಲ್ಲಿ ಯಾವುದೇ ಗೊಂದಲವಿಲ್ಲ. ಆದರೆ, ನಾವು ಸದ್ಯ ಎಸ್‌ಐಆರ್ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ನಿರತರಾಗಿದ್ದೇವೆ. ಜಿಲ್ಲಾ ಪಂಚಾಯ್ತಿ, ತಾಲೂಕು ಪಂಚಾಯ್ತಿ ಹಾಗೂ ಉಪ ಚುನಾವಣೆಗಳು ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ನಡೆಯುತ್ತದೆ ಎಂದರು.

ಪಿಂಚಣಿದಾರರ ಪರಿಶೀಲನೆ

ಬೆಂಗಳೂರು: ರಾಜ್ಯದಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳ ಅಡಿಯಲ್ಲ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಪಾರದರ್ಶಕತೆ ಮತ್ತು ಅರ್ಹತೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಮೊಬೈಲ್ ಆ್ಯಪ್ ಮೂಲಕ ಪರಿಶೀಲನೆ ಕೈಗೊಂಡಿದೆ.

ರಾಜ್ಯಾದ್ಯಂತ ಪ್ರಸ್ತುತ ಒಟ್ಟು 83,11,493 ಫಲಾನುಭವಿಗಳು ಪಿಂಚಣಿ ಪಡೆಯುತ್ತಿದ್ದು, ಇವರ ಪೈಕಿ ಪ್ರಾಥಮಿಕ ತಪಾಸಣೆಯಲ್ಲಿ 23,13,664 ಫಲಾನುಭವಿಗಳ ವಿವರಗಳು ಸಂದೇಹಾಸ್ಪದ ಎಂದು ಕಂಡು ಬಂದಿರುತ್ತದೆ. ಈ ಸಂದೇಹಾಸ್ಪದ ಖಾತೆಗಳನ್ನು ಸಂಯೋಜನೆ ಮೊಬೈಲ್ ಆ್ಯಪ್ ಮೂಲಕ ಪ್ರಸ್ತುತ ಕೂಲಂ ಕಷವಾಗಿ ಪರಿಶೀಲಿಸಲಾಗುತ್ತಿದೆ. ಮಂಜೂರಾತಿ ಸಮಯದಲ್ಲಿ ವಯಸ್ಸಿನ ದೃಢೀಕರಣದ ಬಗ್ಗೆ ತಪ್ಪು ಮತ್ತು ನಕಲಿ ದಾಖಲೆಗಳನ್ನು ನೀಡಿ ಕಾನೂನು ಬಾಹಿರವಾಗಿ ಪಿಂಚಣಿ ಪಡೆಯುತ್ತಿದ್ದ 91,152 ಅನರ್ಹ ಫಲಾನುಭವಿಗಳನ್ನು ಪತ್ತೆ ಹಚ್ಚಲಾಗಿದ್ದು, ಇವರ ಪಿಂಚಣಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಗೊಳಿಸಲು ತೀರ್ಮಾನಿಸಲಾಗಿದೆ.

> 91,152 ಅನರ್ಹ ಫಲಾನುಭವಿ ಪತ್ತೆ, ಪಿಂಚಣಿ ರದ್ದತಿಗೆ ತೀರ್ಮಾನ

ಗ್ರಾಮ ಆಡಳಿತ ಅಧಿಕಾರಿಗಳ ಪರಿಶೀಲನೆ ಸಮಯದಲ್ಲಿ ಯಾವುದೇ ಅಧಿಕೃತ ದಾಖಲೆಗಳನ್ನು ಹಾಜರುಪಡಿಸಲು ವಿಫಲರಾದ, ನೀಡಲಾದ ವಿಳಾಸದಲ್ಲಿ ವಾಸವಿಲ್ಲದ ಹಾಗೂ ಆದಾಯ ಪ್ರಮಾಣ ಪತ್ರ ಸಲ್ಲಿಸದ ಒಟ್ಟು 16,42,303 ಫಲಾನುಭವಿಗಳ ಪಿಂಚಣಿಯನ್ನು ಸದ್ಯ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ದಾಖಲೆಗಳ ಕೊರತೆಯಿಂದಾಗಿ ಪಿಂಚಣಿ ಸ್ಥಗಿತಗೊಂಡಿರುವ 16,42,303 ಫಲಾನುಭವಿಗಳಿಗೆ ಕಂದಾಯ ಇಲಾಖೆಯು ಸೂಕ್ತ ತಿಳುವಳಿಕೆ ಪತ್ರವನ್ನು ನೀಡಲು ಆದೇಶಿಸಿದೆ. ಸಂಬಂಧಪಟ್ಟ ತಹಸೀಲ್ದಾರರ ಮೂಲಕ ಇವರಿಗೆ ನೋಟಿಸ್ ನೀಡಿ, ತಮ್ಮ ಅರ್ಹತಾ ದಾಖಲೆಗಳನ್ನು ಸಲ್ಲಿಸಲು 30 ದಿನಗಳ ಕಾಲಾವಕಾಶವನ್ನು ಕಲ್ಪಿಸಿಕೊಡಲಾಗಿದೆ. ಫಲಾನುಭವಿಗಳು ದಾಖಲೆಗಳನ್ನು ಪರಿಶೀಲಿಸಿದ ನಂತರ, ಅರ್ಹರಾಗಿದ್ದಲ್ಲಿ ಅಂತಹವರ ಪಿಂಚಣಿ ಸೌಲಭ್ಯವನ್ನು ತಕ್ಷಣವೇ ಮುಂದುವರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿ ಹಾಗೂ ತಹಸೀಲ್ದಾರ್‌ಗಳಿಗೆ ಕಂದಾಯ ಇಲಾಖೆಯು ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ.

ಅರ್ಹರಿಗೆ ಪಿಂಚಣಿ ಪಾವತಿ: ಸಂದೇಹಾಸ್ಪದವೆಂದು ಗುರುತಿಸಲಾಗಿದ್ದ ಖಾತೆಗಳ ಪೈಕಿ, ಗ್ರಾಮ ಆಡಳಿತ ಅಧಿಕಾರಿಗಳು ಸ್ಥಳದಲ್ಲೇ ಪರಿಶೀಲನೆ ನಡೆಸಿ ಅರ್ಹರೆಂದು ವರದಿ ಮಾಡಿದ 3,35,610 ಫಲಾನುಭವಿಗಳು ಸೇರಿದಂತೆ ರಾಜ್ಯದ ಒಟ್ಟು 63,04,554 ಅರ್ಹ ಫಲಾನುಭವಿಗಳಿಗೆ ಮೇ ತಿಂಗಳ ವರೆಗಿನ ಪಿಂಚಣಿಯನ್ನು ಯಶಸ್ವಿಯಾಗಿ ಪಾವತಿಸಲಾಗಿದೆ.

ಈ ಬಾರಿ 64.84 ಲಕ್ಷ ಮಕ್ಕಳಿಗೆ ಪೋಲಿಯೊ ಲಸಿಕೆ ನೀಡುವ ಗುರಿ: ಆರೋಗ್ಯ ಸಚಿವ

ಪೋಲಿಯೊ ಮುಕ್ತ ಭಾರತ ಸಾಧನೆ ನಿರಂತರ

ಬೆಂಗಳೂರು: ಪೋಲಿಯೊ ಮುಕ್ತ ಭಾರತದ ಸಾಧನೆಯನ್ನು ಮುಂದುವರಿಸುವ ಉದ್ದೇಶದಿಂದ ಆರೋಗ್ಯ ಇಲಾಖೆಯು ರಾಜ್ಯಾದ್ಯಂತ ಜೂ.28ರಂದು ಪಲ್ಸ್ ಪೋಲಿಯೊ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಬಾರಿ 64.84 ಲಕ್ಷ 5 ವರ್ಷದೊಳಗಿನ ಮಕ್ಕಳಿಗೆ ಪೋಲಿಯೊ ಲಸಿಕೆ ನೀಡುವ ಗುರಿ ಹೊಂದಿದೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ತಿಳಿಸಿದರು.

ಗುರುವಾರ ನಗರದ ಆರೋಗ್ಯಸೌಧದಲ್ಲಿ ಪೋಲಿಯೊ ಲಸಿಕೆ ಅಭಿಯಾನದ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜೂ.28ರಂದು ಬೆಳಗ್ಗೆ 8 ಗಂಟೆಗೆ ಪಲ್ಸ್ ಪೋಲಿಯೊ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದರು. ವಿಶೇಷವಾಗಿ ವಲಸೆ ಕಾರ್ಮಿಕರ ಮಕ್ಕಳು, ನಗರ ಸ್ಲಂ ಪ್ರದೇಶಗಳಲ್ಲಿ ವಾಸಿಸುವ ಮಕ್ಕಳು, ಅಪಾಯದಂಚಿನ ಪ್ರದೇಶಗಳ ಮಕ್ಕಳು ಸೇರಿದಂತೆ ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಂತೆ ಕ್ರಮ ಕೈಗೊಳ್ಳಲಾಗಿದೆ. ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ಅಡಿಯಲ್ಲಿ ಪ್ರತಿ ಮಗುವಿಗೆ ಐದು ಡೋಸ್ ಓರಲ್ ಪೋಲಿಯೊ ವ್ಯಾಕ್ಸಿನ್ ಹಾಗೂ ಮೂರು ಡೋಸ್ ಇಂಜೆಕ್ಟಬಲ್ ಪೋಲಿಯೊ ವ್ಯಾಕ್ಸಿನ್ (ಐಪಿವಿ) ನೀಡಲಾಗುತ್ತಿದೆ. ಜತೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೊ ಅಭಿಯಾನದಲ್ಲಿ ಹೆಚ್ಚುವರಿ ರಕ್ಷಣೆಯಾಗಿ ಎರಡು ಹನಿ ಲಸಿಕೆ ನೀಡಲಾಗುತ್ತದೆ ಎಂದರು.



> ಪೋಲಿಯೊ ಮುಕ್ತ ಭಾರತ, ಪೋಲಿಯೊ ಮುಕ್ತ ಕರ್ನಾಟಕ ಎಂಬ ಗುರಿಯನ್ನು ಎಲ್ಲರೂ ಸೇರಿ ಸಾಧಿಸೋಣ. ಜೀವರಕ್ಷಕ ಎರಡು ಹನಿಗಳಿಂದ ಪೋಲಿಯೊ ವಿರುದ್ಧದ ನಮ್ಮ ನಿರಂತರ ಗೆಲುವನ್ನು ಮುಂದುವರಿಸೋಣ.
> ■ ಯು.ಟಿ.ಖಾದರ್, ಆರೋಗ್ಯ ಸಚಿವ

36 ಸಾವಿರಕ್ಕೂ ಹೆಚ್ಚು ಬೂತ್‌ಗಳ ಸ್ಥಾಪನೆ: ಈ ವರ್ಷದ ಪಲ್ಸ್ ಪೋಲಿಯೊ ಕಾರ್ಯಕ್ರಮದ ಅಡಿಯಲ್ಲಿ ರಾಜ್ಯದಲ್ಲಿ ಈ ವರ್ಷ 36,076 ಬೂತ್‌ಗಳನ್ನು ಸ್ಥಾಪಿಸಲಾಗಿದ್ದು, 988 ಸಂಚಾರಿ ತಂಡಗಳು ಹಾಗೂ 2,125 ಟ್ರಾನ್ಸಿಟ್ ತಂಡವು ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಸೇರಿದಂತೆ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಲಸಿಕೆ ವಿತರಿಸಲಿದ್ದಾರೆ.

ಈ ಕಾರ್ಯಕ್ರಮಕ್ಕೆ 1,14,213 ಲಸಿಕಾ ಕಾರ್ಯಕರ್ತರು ಮತ್ತು 7,197 ಮೇಲ್ವಿಚಾರಕರು ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ಲಸಿಕಾ ಕೇಂದ್ರ ಪತ್ತೆಗೆ ಆ್ಯಪ್

ಪೋಲಿಯೊ ಮುಕ್ತ ಭಾರತ ನಿರ್ಮಿಸುವ ಸಲುವಾಗಿ ಎಲ್ಲ ತಾಯಂದಿರು ತಮ್ಮ ಮಕ್ಕಳಿಗೆ ಪೋಲಿಯೊ ಲಸಿಕೆ ಹಾಕಿಸಬೇಕು. ಬೇರೆ ಯಾವುದೇ ರೀತಿಯ ಲಸಿಕೆ ಪಡೆಯುತ್ತಿದ್ದರೂ ಈ ಲಸಿಕೆಯನ್ನು ತಪ್ಪಿಸುವಂತಿಲ್ಲ. ಹತ್ತಿರದ ಲಸಿಕಾ ಕೇಂದ್ರ ಪತ್ತೆಗೆ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ನಿಯರ್ ಬೈ ವ್ಯಾಕ್ಸಿನೇಷನ್ ಸೆಂಟರ್ ಆ್ಯಪ್ ಅಭಿವೃದ್ಧಿಪಡಿಸಲಾಗಿದ್ದು, ಈ ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡು ಕೇಂದ್ರ ಹುಡುಕಬಹುದು ಎಂದರು.

ಪ್ರಕೃತಿ ವಿಕೋಪ ನಿರ್ವಹಣೆ ಕುರಿತು ಹಿರಿಯ ಅಧಿಕಾರಿಗಳೊಂದಿಗೆ ಪರಂ ಸಭೆ

ಸೂಪರ್ ಎಲ್ ನೀನೋ ಎದುರಿಸಲು ಸಜ್ಜಾಗಿ

ಬೆಂಗಳೂರು: ರಾಜ್ಯದಲ್ಲಿ ಸಂಭವನೀಯ ಪ್ರಕೃತಿ ವಿಕೋಪಗಳು ಹಾಗೂ ಸೂಪರ್ ಎಲ್ ನೀನೋ ಪರಿಣಾಮದಿಂದ ಉಂಟಾಗಬಹುದಾದ ಬರ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಎದುರಿಸಲು ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಿ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.



ಗುರುವಾರ ವಿಧಾನಸೌಧದಲ್ಲಿ ಪ್ರಕೃತಿ ವಿಕೋಪ ನಿರ್ವಹಣೆ ಕುರಿತು ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಈವರೆಗೆ ಕೈಗೊಂಡಿರುವ ಅಗತ್ಯ ಕ್ರಮಗಳ ಕುರಿತು ಮಾಹಿತಿ ಪಡೆದರು. ಮಳೆ ಕೊರತೆ, ಕುಡಿಯುವ ನೀರು, ಜಾನುವಾರುಗಳಿಗೆ ಮೇವಿನ ಸಮಸ್ಯೆ ಸೇರಿದಂತೆ ವಿವಿಧ ವಿಚಾರಗಳ ಕುರಿತು ಸಮಗ್ರವಾಗಿ ಚರ್ಚಿಸಿದರು. ಜಾಗತಿಕ ಹವಾಮಾನ ವೈಪರೀತ್ಯದ ಭಾಗವಾಗಿ ಸೂಪರ್ ಎಲ್ ನೀನೋ ಪರಿಣಾಮದಿಂದ ರಾಜ್ಯದಲ್ಲಿ ಉಂಟಾಗಬಹುದಾದ ಸಂಭವನೀಯ ಪರಿಣಾಮಗಳು, ಮಳೆಯ ಕೊರತೆಯಿಂದ ಜನರು ಎದುರಿಸಬಹುದಾದ ಸಮಸ್ಯೆಗಳು ಹಾಗೂ ರಾಜ್ಯದ ಕೆಲವು ಪ್ರದೇಶಗಳಲ್ಲಿ ಬರ ಪರಿಸ್ಥಿತಿ ನಿರ್ಮಾಣವಾಗುವ ಸಾಧ್ಯತೆಗಳ ಕುರಿತು ಅಧಿಕಾರಿಗಳೊಂದಿಗೆ ಸುದೀರ್ಘವಾಗಿ ಚರ್ಚಿಸಿದರು.

> 122 ತಾಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, 139 ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. 789 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಪಡೆಯಲಾಗಿದ್ದು, 669 ಹಳ್ಳಿಗಳಲ್ಲಿ ಖಾಸಗಿ ಕೊಳವೆಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ.
> ■ ಡಾ. ಜಿ. ಪರಮೇಶ್ವರ್, ಉಪಮುಖ್ಯಮಂತ್ರಿ

ಸಂಭವನೀಯ ಬರ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕುಡಿಯುವ ನೀರಿನ ಲಭ್ಯತೆ, ಜಾನುವಾರುಗಳಿಗೆ ಮೇವು, ಕೃಷಿ ಚಟುವಟಿಕೆಗಳ ನಿರ್ವಹಣೆ ಹಾಗೂ ನೀರಿನ ಸಂರಕ್ಷಣೆಗೆ ಸಂಬಂಧಿಸಿದಂತೆ ಜಿಲ್ಲಾವಾರು ಕಾರ್ಯಯೋಜನೆಗಳನ್ನು ಸಿದ್ಧಪಡಿಸಬೇಕು. ಎಲ್ಲ ಜಿಲ್ಲಾಧಿಕಾರಿಗಳು ಹಾಗೂ ಜಿ.ಪಂ. ಸಿಇಒಗಳಿಗೆ ಅಗತ್ಯ ಸೂಚನೆಗಳನ್ನು ನೀಡಬೇಕು ಎಂದು ಡಿಸಿಎಂ ಸೂಚಿಸಿದರು. ಜಲಾಶಯಗಳ ನೀರಿನ ಮಟ್ಟ, ಅಂತರ್ಜಲ ಪರಿಸ್ಥಿತಿ ಹಾಗೂ ನೀರಿನ ಬಳಕೆಯ ಮೇಲ್ವಿಚಾರಣೆಯನ್ನು ನಿರಂತರವಾಗಿ ನಡೆಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಯಾವುದೇ ರೀತಿಯ ಪ್ರಕೃತಿ ವಿಕೋಪ, ಬರ ಪರಿಸ್ಥಿತಿ ಎದುರಾದರೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ಸಂಬಂಧಿತ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಿ ತ್ವರಿತ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

ಸಂಪಾದಕೀಯ

ಕಠಿಣ ಕಾನೂನಿನ ಅವಶ್ಯಕತೆ ಇದೆ

ಪ್ರತಿ ದಿನ ಎಲ್ಲಾ ಪತ್ರಿಕೆ–ಮಾಧ್ಯಮಗಳಲ್ಲಿ ನೂರಾರು ಸಂಗತಿಗಳು ಗಮನ ಸೆಳೆಯುತ್ತವೆ. ಆದರೆ ಸಮಾಜೋವಲೋಕನದ ದೃಷ್ಟಿಯಿಂದ ಕೆಲವು ಮುಖ್ಯವೆನಿಸುತ್ತವೆ. ಅಬಕಾರಿ ಹೆಚ್ಚುವರಿ ಆಯುಕ್ತರೊಬ್ಬರ ಮನೆ ಮತ್ತು ಕಚೇರಿಯ ಮೇಲೆ ನಡೆದ ಜಾರಿ ನಿರ್ದೇಶನಾಲಯ(ಇಡಿ) ನಡೆಸಿದ ದಾಳಿ ಒಂದು ಸುದ್ದಿಯಾದರೆ, ದಾವಣಗೆರೆ ಜಿಲ್ಲೆಯ ಹರಿಹರದ ಪುಟ್ಟ ಗ್ರಾಮವೊಂದರಲ್ಲಿ ಸೋಹೆಲ್ ಎಂಬ ಉಗ್ರನ ಬಂಧನ ಇನ್ನೊಂದು. ಅದೂ ಉತ್ತರ ಪ್ರದೇಶ ಮೂಲದ ಉಗ್ರನಿಗೆ ಪಾಕಿಸ್ತಾನದ ಉಗ್ರ ಸಂಘಟನೆಗಳೊಂದಿಗೆ ನಂಟಿರುವುದು, ಅಯೋಧ್ಯೆ ರಾಮಮಂದಿರದ ಸ್ಫೋಟಕ್ಕೆ ಸಂಚು ರೂಪಿಸಿರುವ ಆಘಾತಕಾರಿ ಸಂಗತಿ. ಸಾಮಾನ್ಯವಾಗಿ ಈ ರೀತಿಯ ಸುದ್ದಿಗಳು ಪದೇ ಪದೇ ಪ್ರಕಟವಾಗುತ್ತಿರುತ್ತವೆ. ಕೆಲವೊಮ್ಮೆ ಭ್ರಷ್ಟ ಅಧಿಕಾರಿಗಳ ಅಕ್ರಮ ಸಂಪಾದನೆಯ ಚಿತ್ರಗಳು ಪ್ರಕಟವಾಗಿ ಆತನ ಬಂಧನವಾಗಿದೆ ಎಂದು



ಜನರು ಹಗುರವಾಗುತ್ತಾರೆ. ಭ್ರಷ್ಟಾಚಾರಿಗಳಿಗೆ ಈ ರೀತಿಯಲ್ಲಿ ಭಯಹುಟ್ಟಿಸಿದರೆ ಭ್ರಷ್ಟಾಚಾರ ಕಡಿಮೆಯಾಗುತ್ತದೆ ಎಂದು ಜನಸಾಮಾನ್ಯರು ಮಾತಾಡಿಕೊಳ್ಳುತ್ತಾರೆ. ಅದೇ ರೀತಿ ಜೈಲಿಗಟ್ಟಲ್ಪಡುವ ಉಗ್ರರು ಮತ್ತೆಮತ್ತೆ ಉತ್ತರ ಪ್ರದೇಶದಿಂದಲೇ ಸಿಕ್ಕಿಬೀಳುತ್ತಿರುತ್ತಾರೆ. ಅದೂ ಅವರೆಲ್ಲರೂ ಸಹರಾನ್‌ಪುರದಂಥ ಜಿಲ್ಲೆಗಳವರೇ ಆಗಿರುತ್ತಾರೆ! ಹಿಂದೆಲ್ಲೋ ಯೋಗಿ ಸರ್ಕಾರ ಇಂಥ ಶಂಕಿತ ಉಗ್ರರ ಮನೆಗಳನ್ನು ಬುಲ್ಡೋಜರ್ ಬಳಸಿ ನಾಶಮಾಡಿದೆ ಎಂಬ ಸುದ್ದಿಗಳು ಬರುತ್ತಿದ್ದವು. ಆಗಲೂ ದೇಶವನ್ನು ಪ್ರೀತಿಸುವವನು ನಿರಾಳವಾಗುತ್ತಿದ್ದ, ಭಯೋತ್ಪಾದಕ ಸಂತಾನವನ್ನು ಹುಟ್ಟಡಗಿಸಲು ಇಂಥ ನಿರ್ದಾಕ್ಷಿಣ್ಯ ಕ್ರಮಗಳು ಮಾತ್ರ ಅಗತ್ಯ ಎಂದುಕೊಳ್ಳುತ್ತಿದ್ದ.

ಈಗೇಕೋ ಭ್ರಷ್ಟ ಮತ್ತು ಉಗ್ರರ ದಮನಕ್ಕೆ ಇವು ಸಾಕಾಗದು ಎನಿಸುತ್ತಿವೆ. ರಕ್ತಬೀಜಾಸುರರಂತೆ ಇವರು ಸತತವಾಗಿ ಹುಟ್ಟಿಬರಲು ಕಾರಣ ಏನು? ಅದರಲ್ಲೂ ಉತ್ತರ ಪ್ರದೇಶದಂಥ ರಾಜ್ಯದ ಕಟ್ಟುನಿಟ್ಟಿನ ಕಾನೂನುಗಳು ಮತಾಂಧತೆಯನ್ನು ಇನ್ನೂ ತಡೆಯಲು ಸಾಧ್ಯವಾಗಿಲ್ಲವೆಂದರೆ ಅದಕ್ಕೇನನ್ನಬೇಕೋ ತಿಳಿಯುತ್ತಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೊಂದಿದೆ. ಭಯೋತ್ಪಾದನೆಗೆ ತೆರಳಲು ಬಡತನ ಅಥವಾ ಇನ್ನಾವುದೋ ಕಾರಣ ಅಲ್ಲ. ಉತ್ತರ ಪ್ರದೇಶದ ಕಾನೂನು ಸುವ್ಯವಸ್ಥೆ ಅದನ್ನು ಅರಿತಿರಬಹುದು. ಆದರೆ ಬುದ್ಧಿಜೀವಿ ವರ್ಗ ಮತ್ತು ಕೆಲ ಕಾನೂನು ಪರಿಣತರು ಉಗ್ರರಿಗೆ ಬೆಂಬಲವಾಗಿಯೇ ಇದ್ದಾರೆ. ಸಮರ್ಥಕರ ಯಾವ ಕಟ್ಟಡಗಳಿನ್ನೂ ಉರುಳಿಲ್ಲ. ಆ ಕಾರ್ಯ ಆರಂಭಗೊಂಡರೆ ಇದು ಹದ್ದುಬಸ್ತಿಗೆ ಬರಬಹುದೇನೋ! ಹಾಗೆಯೇ ಭ್ರಷ್ಟಾಚಾರಿಗಳ ವಿರುದ್ಧ ಭಾರತದ ಎಲ್ಲೂ ಕಠಿಣ ಕಾನೂನು ಇಲ್ಲ. ಅಕ್ರಮ ಸಂಪತ್ತಿನ ಮೇಲಿನ ದಾಳಿಗಳು ರೋಚಕವಾಗಿ ಸುದ್ದಿಯಾಗುವಷ್ಟು ಅದರ ಫಲಶ್ರುತಿ ಸುದ್ದಿಯಾಗುವುದಿಲ್ಲ. ದೇಶದ ಉದ್ದಗಲಕ್ಕೆ ಹರಡಿರುವ ಈ ಜಾಲ ವಿಶಾಲವಾಗಿದೆ. ಕಾನೂನಿನ ಕಣ್ಣಿನಿಂದ ಸುಲಭವಾಗಿ ನುಸುಳಬಲ್ಲ ಮಾರ್ಗಗಳು ಅವುಗಳಿಗೆ ತಿಳಿದಿವೆ.

ಇವೆರಡನ್ನು ಹತ್ತಿಕ್ಕದವರೆಗೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಎರಡನ್ನು ಹತ್ತಿಕ್ಕಲು ಈಗಿರುವ ಮಾರ್ಗಗಳಿಗೆ ಆಗಿಲ್ಲ. ಮತಾಂಧತೆಯಿಂದ ತನ್ನ ಜೀವವನ್ನೇ ಪಣಕ್ಕಿಡಬಲ್ಲ ದುರುಳರು ಇನ್ನು ಕಾನೂನು ಮತ್ತು ತನ್ನ ಮನೆಯನ್ನು ಲೆಕ್ಕಿಸಿ ಬದುಕುತ್ತಾನೆ ಎನ್ನುವಂತಿಲ್ಲ. ಕಾನೂನು ತಯಾರಕರು ಮತ್ತು ನೀತಿನಿರೂಪಕರು ಇವೆರಡರ ಬಗ್ಗೆ ಸೂಕ್ತವಾದ ಕಾನೂನುಗಳನ್ನು ತರುವುದೊಂದೇ ಇಂಥ ಘಟನೆಗಳು ಮರುಕಳಿಸದಿರುವಂತೆ ಮಾಡಲು ಸಾಧ್ಯ.

ಮನುಷ್ಯನನ್ನು ಮೃತ್ಯು ಕೊಲ್ಲುವುದಿಲ್ಲ

ಅತಿಮಾನೋಕ್ರತಿ ವಾದಶ್ಚ ತಥಾಧಾತ್ಯಾಗೋ ನರಾಧಿಪ ।
ಕ್ರೋಧಶ್ಚಾತ್ಮವಿಧಿತ್ಸಾ ಚ ಮಿತ್ರದ್ರೋಹಶ್ಚ ತಾನಿ ಷಟ್।
ಏತ ಮಿವಾಸಯಸ್ತೀಕ್ಷ್ಣಾಃ ಕೃಂತಂತ್ಯಾಯೂಂಷಿ ದೇಹಿನಾಮ್।
ಏತಾನಿ ಮಾನವಾನ್ ಘ್ನಂತಿ ನ ಮೃತ್ಯುಃ ಭದ್ರಮಸ್ತು ತೇ ॥ –ಮಹಾಭಾರತ

ಮನುಷ್ಯನ ಆಯುಸ್ಸನ್ನು ಅವನ ಅತಿಮಾನ,ಅತಿವಾದ, ಅತ್ಯಾಗ, ಕ್ರೋಧ, ಆತ್ಮವಿಧಿತ, ಮಿತ್ರದ್ರೋಹ– ಈ ಆರು ತೀಕ್ಷ್ಣವಾದ ಚೂರಿಗಳು ಕತ್ತರಿಸುತ್ತವೆ. ಇವೇ ಮನುಷ್ಯನನ್ನು ಕೊಲ್ಲುವುವು. ಮೃತ್ಯು ಅಲ್ಲ – ಎಂಬುದು ಶ್ಲೋಕಾರ್ಥ.

ಮನುಷ್ಯರ ಪ್ರಾಣವನ್ನು ಮೃತ್ಯುಬಂದು ಕೊಂಡೊಯ್ಯುತ್ತದೆ ಎಂಬುದು ಲೋಕದ ತಿಳುವಳಿಕೆ. ಶಾಸ್ತ್ರಾದಿಗಳೂ ಇದನ್ನೇ ಹೇಳು ತ್ತವೆ. ಆಯುಷ್ಯ ತೀರಿದ ಮೇಲೆ ಮುಂದಿನ ಕೆಲಸ ಮೃತ್ಯುವಿನದು ಎಂಬ ನಂಬಿಕೆ. ಆದರೆ ಪ್ರಕೃತ ಶ್ಲೋಕ ಇದಕ್ಕೆ ವಿರುದ್ಧವಾದ ವಾದವನ್ನು ಮುಂದಿಡುತ್ತದೆ.



ಮನುಷ್ಯನ ಆಯುಷ್ಯವನ್ನು ಕತ್ತರಿಸುವ ಹರಿತಾದ ಆರು ಚೂರಿಗಳಿವೆ. ಇವೇ ಮನುಷ್ಯನ ಅಂತ್ಯಕ್ಕೆ ಕಾರಣ ಎನ್ನುವ ಈ ಸುಭಾಷಿತ ಅದಾವುದೆಂದೂ ಹೇಳುತ್ತದೆ.

ಅತಿಮಾನ ಮನುಷ್ಯನ ಆಯುಸ್ಸನ್ನು ಕೊಲ್ಲುವ ಮೊದಲ ಚೂರಿ. ಈ ಚೂರಿ ಬಾಹ್ಯ ನೋಟಕ್ಕೆ ಕಾಣದಿರಬಹುದು. ಆದರೆ ಗೊತ್ತಿಲ್ಲದಂತೆ ಇರಿಯುತ್ತದೆ. ಅಂದರೆ ಅತಿಯಾದ ದುರಹಂಕಾರ. 'ಅಹಂ' ಸಾವಿಗೆ ಕಾರಣವಾಗುತ್ತವೆ. ಅಹಂಕಾರ, ದುರಭಿಮಾನಗಳು ಹೆಚ್ಚಾದಾಗ ಸಮಾಜವೇ ಅಂಥವರನ್ನು ದೂರವಿರಿಸುತ್ತದೆ. ಎಲ್ಲವನ್ನೂ ಎಲ್ಲರನ್ನೂ ಕಳೆದುಕೊಂಡ ಮೇಲೆ ಇದ್ದೂ ಸತ್ತಂತೆ. ತನ್ನ ನಡೆಯೇ ತನಗೆ ಸಾವಾಗಿ ಪರಿಣಮಿಸುತ್ತದೆ.

ಅತಿವಾದ ಎರಡನೆಯ ಚೂರಿ. ಎಲ್ಲವೂ ಒಂದು ಹಂತದಲ್ಲಿದ್ದರೆ ಚಂದ. ಪರಿಧಿಯಿಂದ ಮೀರಿ ಹೊರನಡೆದರೆ ಅಲ್ಲಿಗೆ ಮುಗಿಯಿತು. ಮಾತಿಗೊಂದು ಮಿತಿಯಿರಬೇಕು. ಸಂಸ್ಕಾರವಿರಬೇಕು. ಎಲ್ಲರನ್ನೂ ಆಕರ್ಷಿಸುವಂತೆ ಮಧುರವಾಗಿರಬೇಕು ನಮ್ಮ ಮಾತು. ಮಾತಿನ ಮಿತಿಯನ್ನು ಮೀರಿ ಅತಿಯಾಗಿ ಮಾತನಾಡಲು ಪ್ರಾರಂಭಿಸಿದರೆ ನಮ್ಮ ಮಾತು ಅಸ್ತಿತ್ವಕ್ಕೇ ಧಕ್ಕೆ ತರಬಹುದು. ಅತ್ಯಾಗ ಎಂದರೆ ದಾನ ಮಾಡದಿರುವುದು. ಎಲ್ಲರೂ ಗಳಿಕೆಯ ಒಂದು ಭಾಗವನ್ನು ಫಲಾಪೇಕ್ಷೆಯಿಲ್ಲದೆ ದಾನ ಮಾಡಬೇಕು. ಪ್ರೀತಿಯಿಂದ ಸರಿಯಾದ ಕ್ರಮದಲ್ಲಿ, ಸರಿಯಾದ ವ್ಯಕ್ತಿಗೆ ನೀಡಬೇಕು. ಈ ಬಗೆಯ ತ್ಯಾಗವೇ ಆಯುಷ್ಯ ವೃದ್ಧಿಗೆ ಕಾರಣವಾಗುತ್ತದೆ. ಅತ್ಯಾಗ ಆಯುಃ ಕ್ಷೀಣತೆಗೆ ಕಾರಣವಾಗುತ್ತದೆ.

ಕ್ರೋಧ ಮನುಷ್ಯನ ಮೊದಲ ವೈರಿ. ಸೋಲಿಗೂ, ಸಾವಿಗೂ ಕಾರಣವಾಗಬಲ್ಲ ಗುಣ ಇದಕ್ಕಿರುವುದರಿಂದ ಚೂರಿಯಾಗಿಯೂ ಪರಿಣಮಿಸಬಹುದು. ಕ್ರೋಧ ಕಟ್ಟಿಕೊಂಡು ದೀರ್ಘಕಾಲ ಬದುಕಲು ಸಾಧ್ಯವಿಲ್ಲ. ಅಕ್ರೋಧವೇ ಜೀವನಕ್ಕೆ ಬಂಧನವನ್ನು ಒದಗಿಸಬಲ್ಲದು. ಕ್ರೋಧ ನಮ್ಮನ್ನೇ ಕೊಲ್ಲಬಲ್ಲ ಆರು ವೈರಿಗಳಲ್ಲೊಂದು.

ಮಿತ್ರದ್ರೋಹದಂತಹ ಪಾಪ ಮತ್ತೊಂದಿಲ್ಲ. ನಮ್ಮ ಒಳಿತಿಗಾಗಿ ತಮ್ಮನ್ನು ಸಮರ್ಪಿಸಿಕೊಂಡು, ಸುಖ–ದುಃಖಗಳಲ್ಲಿ ಭಾಗಿಗಳಾಗಿ ಸದಾ ನಮ್ಮೊಂದಿಗಿರುವವರು ಸನ್ಮಿತ್ರರು ಮಾತ್ರ. ಇವರನ್ನು ನಮ್ಮಂತೆಯೇ ಪ್ರೀತಿಸಬೇಕೆ ವಿನಾ ದ್ರೋಹವೆಸಗಬಾರದು. ಮಿತ್ರದ್ರೋಹ ಬೇರೆಯಲ್ಲ, ಸಾವು ಬೇರೆಯಲ್ಲ. ಆತ್ಮವಿಧಿತ್ಸಾ ಎಂದರೆ ತನ್ನನ್ನು ತಾನು ತಿಳಿದುಕೊಳ್ಳದೇ, ತನ್ನ ಕರ್ತವ್ಯವನ್ನು ಅನುಷ್ಠಾನಿಸದೆ ತನ್ನ ಬಗ್ಗೆ ಕೀಳರಿಮೆ, ತಾತ್ಸಾರ ಹೊಂದಿರುವುದು. ಯಾವಾಗಲೂ ತನ್ನನ್ನು ತಾನೇ ಹಳಿದುಕೊಳ್ಳುವುದು.ಇದಿದ್ದರೆ ಇದ್ದೂ ಸತ್ತಂತೆ.ನಮ್ಮ ಉನ್ನತಿಗೆ ಮಾರಕವಾದ ಈ ಆರನ್ನೂ ಪ್ರತಿಯೊಬ್ಬರೂ ತ್ಯಜಿಸಬೇಕು. ಆಗ ಮಾತ್ರ ಬದುಕು ಆಪ್ಯಾಯಮಾನವಾಗುತ್ತದೆ. ಬದುಕಿಗೆ ಬೆಲೆ ಬರುತ್ತದೆ. ಆದಿಲ್ಲದಿದ್ದರೆ ಕೊಲ್ಲುವುದಕ್ಕೆ ಮೃತ್ಯುಬೇಕಾಗಿಲ್ಲ. ನಾವೇ ನಮ್ಮನ್ನು ಕೊಂದುಕೊಳ್ಳುತ್ತೇವೆ.

ಕಿರುಕುಳ ಆರೆಸ್ಸೆಸ್‌ಗೆ ಹೊಸದೇನಲ್ಲ...

ರಾಜ್ಯದ ಸಚಿವರು ಮತ್ತು ಕಾಂಗ್ರೆಸಿನ ರಾಜ್ಯಾಧ್ಯಕ್ಷರು ಆರೆಸ್ಸೆಸ್ ವಿರುದ್ಧ ನಿರಂತರ ಹೇಳಿಕೆಗಳನ್ನು ನೀಡುತ್ತಿರುವುದನ್ನು ನೋಡಿದರೆ ಅವರು, ಆರೆಸ್ಸೆಸ್‌ಗೆ ಎಲ್ಲ ರೀತಿಯಲ್ಲೂ ಕಿರುಕುಳ ನೀಡಲು ಮುಂದಾಗಿದ್ದಾರೆ ಎಂಬುದು ವ್ಯಕ್ತವಾಗುತ್ತದೆ. ಸರಕಾರಗಳಿಂದ ವಿರೋಧಿಗಳಿಂದ ನಿರಂತರ ನಿಂದಾಸತ್ರ, ದ್ವೇಷ, ಸುಳ್ಳು ಪ್ರಚಾರಗಳನ್ನು, ಕಿರುಕುಳಗಳನ್ನು ಎದುರಿಸುತ್ತಲೇ ಬಂದ ಆರೆಸ್ಸೆಸ್‌ಗೆ ಇದು ಹೊಸದೇನಲ್ಲ. ದೇಶ ಮತ್ತು ಜನತೆಯ ನಿರಂತರ ನಿಸ್ವಾರ್ಥ ಸೇವೆಯಲ್ಲಿ

ಪತ್ರ ಮಿತ್ರ

ಸಮರ್ಪಣಾ ಭಾವದಿಂದ ತೊಡಗಿರುವ ಆರೆಸ್ಸೆಸ್ ಮತ್ತು ಸಂಘದ ಸ್ವಯಂಸೇವಕರು ನಿತ್ಯದ ಪ್ರಾರ್ಥನೆಯಲ್ಲಿ ತಾಯಿ ಭಾರತಿಯನ್ನು ಪರಮವೈಭವಕ್ಕೇರಿಸುವಲ್ಲಿ ನಿರಂತರ ಸವಾಲುಗಳನ್ನು ಎದುರಿಸುತ್ತಲೇ ಬಂದಿದ್ದಾರೆ. ಆದಾಗ್ಯೂ ಸತ್ಯದ ಹಾದಿಯಲ್ಲಿ, ಧರ್ಮದ ಹಾದಿಯಲ್ಲಿ ಸಂಘ ಮುನ್ನಡೆಯಲಿದೆ ಎಂಬುದರಲ್ಲಿ ಸಂಶಯವಿಲ್ಲ.

ದೇಶ–ಸಮಾಜಕ್ಕೆ ಆಪತ್ತು, ವಿಪತ್ತು ಬಂದಾಗಲೆಲ್ಲ ಜಾತಿ, ಮತ, ಧರ್ಮ ನೋಡದೆ ನೊಂದವರ ಕಣ್ಣೀರೊರೆಸುವುದೊಂದನ್ನೇ ಗುರಿಯಾಗಿರಿಸಿ ಸಂಘ–ಸಂಘಸ್ವಯಂಸೇವಕರು ಕಾರ್ಯಾಚರಿಸುತ್ತಿರುವುದನ್ನು ದೇಶ ನೋಡುತ್ತಲೇ ಬಂದಿದೆ. ಕೇವಲ ರಾಜಕೀಯ ಕಾರಣಕ್ಕಾಗಿ ಸಂಘದ ಮೇಲೆ ದ್ವೇಷ ಸಾಧಿಸುವ ಯತ್ನಗಳಿಗೆ ಯಶಸ್ಸು ಸಿಗದು. ಹಾಗೆಯೇ ಯಾವುದೇ ಜಾತಿಭೇದ ಕಾಣದ ಒಂದೇ ಒಂದು ಸ್ಥಳ ಇದ್ದರೆ ಅದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಾಖೆ ಎಂಬ ಅಂಶವನ್ನೂ ಪ್ರಜ್ಞಾವಂತರು ಗುರುತಿಸಲಾರಂಭಿಸಿರುವುದು ಗಮನಾರ್ಹ.

–ಕಿರಣ್, ಮಂಗಳೂರು

ಪೆರಿಯಾರ್ ನಾಸ್ತಿಕ್ಯಕ್ಕೂ ತಮಿಳುನಾಡು ವಿಶಿಲ್!

ಉಘೇ ವೀರಭೂಮಿಗೆ

• ಸಂತೋಷ್ ತಮ್ಮಯ್ಯ
santoshthammaiah@gmail.com



ಬೆಂಜಮಿನ್ ಡಿಸ್ರೇಲಿ. ಹಲವರಿಗೆ ಹೆಸರನ್ನೆಲ್ಲೋ ಕೇಳಿರುವಂತಿದೆಯಲ್ಲಾ ಎಂದೆನಿಸಬಹುದು. ಆದರೆ ವಿಕಿಪೀಡಿಯಾ ಕೂಡ ಆತನನ್ನು ಯು.ಕೆಯ ರಾಜಕಾರಣಿ, ಕವಿ ಮತ್ತು ಸಾಹಿತಿ ಎಂದಷ್ಟೇ ಪರಿಚಯಿಸುತ್ತದೆ. ಕೇವಲ ಯುನೈಟೆಡ್ ಕಿಂಗ್ಡಮಿನ ಸಾಹಿತಿ ಎಂಬ ಒಂದೇ ಕಾರಣಕ್ಕೆ ಬೆಂಜಮಿನ್ ಡಿಸ್ರೇಲಿ ಖ್ಯಾತನಲ್ಲ. ಆತ ಎರಡೆರಡು ಬಾರಿ ಯುಕೆಯ ಪ್ರಧಾನಮಂತ್ರಿ ಕೂಡ ಆಗಿದ್ದ! ಸಕ್ರೀಯ ರಾಜಕಾರಣಿಯಾಗಿ, ಹೋರಾಟನಾಗಿ ಇಂದಿಗೂ ಆತ ಜಗತ್ತಿನ ನೆನಪಿನಲ್ಲಿದ್ದಾನೆ. ಆತ ಹುಟ್ಟಿದ್ದು 1804ರಲ್ಲಿ. ಅಜ್ಜ ಇಟಲಿ ಮೂಲದವನು, ಅಜ್ಜಿ ಯಹೂದಿ. ಮಕ್ಕಳೆಲ್ಲಾ ಯಹೂದಿಗಳಾಗಿ ಬೆಳೆದರು. ಹೊಟ್ಟೆಪಾಡಿಗೆ ಇಂಗ್ಲೆಂಡಿಗೆ ವಲಸೆ ಬಂದ ಅಜ್ಜ ಬುದ್ಧಿವಂತಿಕೆ ಉಪಯೋಗಿಸಿ ತನ್ನನ್ನು ಮತ್ತು ತನ್ನ ಕುಟುಂಬವನ್ನು ಕ್ರೈಸ್ತಮತಕ್ಕೆ ಒಪ್ಪಿಸಿಕೊಂಡ. ಅಂದರೆ ಹದಿನೈದನೇ ಶತಮಾನದಿಂದಲೂ ಉದಾರವಾದಿ ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದ ಯುಕೆಯಲ್ಲಿ ಯಹೂದಿಯೊಬ್ಬ ಬದುಕಲು ಕ್ರೈಸ್ತನಾಗಿ ಮತಾಂತರವಾಗಬೇಕಿತ್ತು!

ಬೆಂಜಮಿನ್ 17 ವರ್ಷದವನಿದ್ದಾಗ ಬ್ಲೂಮ್ಸ್‌ಬರಿಯಲ್ಲಿ ವಕೀಲರೊಬ್ಬರ ಬಳಿ ಕೆಲಸಕ್ಕೆ ಸೇರಿಕೊಂಡ. ವಕೀಲರ ಬಳಿ ಬರುತ್ತಿದ್ದ ವ್ಯಾಜ್ಯಗಳಿಂದ ಆತನಿಗೆ ಲೋಕದಲ್ಲಿ ಹೀಗೆಲ್ಲಾ ನಡೆಯುತ್ತವೆಯೇ ಎನಿಸತೊಡಗಿತು. ಆತನ ಲೋಕಜ್ಞಾನ ಬೆಳೆಯಿತು. ಆದರೆ ಯಾಕೋ ಆ ಕೆಲಸ ಆತನಿಗೆ ಬೇಗನೆ ಸಾಕೆನಿಸಿತು. ಮುಂದೆ ಗೆಳೆಯರೊಂದಿಗೆ ವ್ಯಾಪಾರಕ್ಕೆ ಕೈ ಹಾಕಿದ, ಆದರೆ ಕೈ ಸುಟ್ಟುಕೊಂಡು ಸಾಲಗಾರನಾದ. ಆದರೆ ಧೈರ್ಯಗೆಡಲಿಲ್ಲ. ತನ್ನ ಗೆಳೆಯ ಜಾನ್ ಮರ್ರೆ ಎಂಬಾತನೊಂದಿಗೆ ಪತ್ರಿಕೆ ಆರಂಭಿಸಲು ಹೊರಟ. ಆದರೆ ಪಾಲುದಾರನಾಗಿದ್ದ ಬೆಂಜಮಿನ್‌ಗೆ ಬಂಡವಾಳ ಸಿಗಲಿಲ್ಲ. ಅದರಿಂದ ಮರ್ರೆ ಮುನಿಸಿಕೊಂಡ. ಇಬ್ಬರು ಕಿತ್ತಾಡಿಕೊಂಡರು. ನಿನ್ನ ಮಾತು ಕೇಳಿ ನಾನು ಹಾಳಾದೆ ಎಂದು ಮರ್ರೆ ಬೆಂಜಮಿನ್‌ನಿಗೆ ಬದ್ಧ ವೈರಿಯೇ ಆದ. ಕೆಲ ದಿನಗಳವರೆಗೆ ಸುದ್ದಿ ಇಲ್ಲದಿದ್ದ ಬೆಂಜಮಿನ್ 'ವಿವಿಯನ್ ಗ್ರೇ' ಎಂಬ ಕಾದಂಬರಿಯೊಂದನ್ನು ಬರೆದ. ಅದರಲ್ಲಿ ಭರಪೂರ ಬಯ್ಗುಳಗಳಿದ್ದವು. ತನಗಾಗದವರನ್ನು, ತನ್ನೊಡನೆ ಜಗಳವಾಡಿದವರನ್ನು ಅದರಲ್ಲಿ ಮನಸೋ ಇಚ್ಛೆ ಬೆಂಜಮಿನ್ ಬಯ್ದಿದ್ದ. ಆ ಕಾರಣಕ್ಕೆ ಪುಸ್ತಕದಲ್ಲಿ ಬರೆದವನ ಹೆಸರಿರಲಿಲ್ಲ! ಆದರೆ 'ವಿವಿಯನ್ ಗ್ರೇ'ಯಲ್ಲಿ ಜಾನ್ ಮರ್ರೆಯನ್ನು ಬೆಂಜಮಿನ್ ಸಾಕಷ್ಟು ಹುರಿದು ಉಪ್ಪುಖಾರ ಸೇರಿಸಿದ್ದರಿಂದ ಆತ ಬೆಂಜಮಿನ್ ಡಿಸ್ರೇಲಿಯೇ ಆಗಿರಬೇಕೆಂದು ಜನ ಮಾತಾಡಿಕೊಂಡರು. ಕಾದಂಬರಿಯಲ್ಲಿ ಸತ್ತ್ವವೇನೂ ಇಲ್ಲದಿದ್ದರೂ ಮೊನಚು ಭಾಷೆ, ವ್ಯಂಗ್ಯ, ವಿಡಂಬನೆ ಮತ್ತು ಸೃಜನಶೀಲ ಬಯ್ಗುಳಗಳಿಗಾಗಿ ಅದು ಸಾಕಷ್ಟು ಚರ್ಚೆಗೊಳಗಾಯಿತು. ಮುಂದೆ ಕೆಲ ಕಾಲ ಮತ್ತೆ ಬೆಂಜಮಿನ್ ಭೂಗತನಾದ. ಒಂದಿನ ಏಕಾಏಕಿ ಮೂರು ಸಂಪುಟಗಳ 'ದಿ ಯಂಗ್ ಡ್ಯೂಕ್' ಎಂಬ ಕಾದಂಬರಿಯನ್ನು ಪ್ರಕಟಿಸಿ ಮತ್ತೆ ಸುದ್ದಿಯಾದ. ಈ ಪುಸ್ತಕದಲ್ಲೂ ಎಂದಿನಂತೆ ಮೊನಚಿತ್ತು, ಬಯ್ಗುಳಗಳಿದ್ದವು. ವ್ಯವಸ್ಥೆಯನ್ನು, ದ್ವಂದ್ವ ವ್ಯಕ್ತಿತ್ವದವರನ್ನು, ಕಪಟಿಗಳನ್ನು ಅದರಲ್ಲಿ ಸಾಕಷ್ಟು ಟೀಕಿಸಿದ್ದ. ವಿನೂತನ ಭಾಷಾಶೈಲಿ ಮತ್ತು ನೇರವಂತಿಕೆಗಳಿಂದ ಈ ಎರಡು ಕಾದಂಬರಿಗಳು ಆತನಿಗೊಂದು ಐಡೆಂಟಿಟಿಯನ್ನು ತಂದುಕೊಟ್ಟವು. ಅದುವರೆಗೆ ಬೆಂಜಮಿನ್‌ನಂತೆ ಕಾದಂಬರಿಯಲ್ಲಿ ಬಯ್ಗುಳವನ್ನು ತುಂಬಿದವರಿರಲಿಲ್ಲ. ಲೋಕದ ಡೊಂಕನ್ನು ನೇರವಾಗಿ ಹೇಳಿದ ಶೈಲಿ ಆ ದಿನಗಳಲ್ಲಿ ಹೊಸದಾಗಿತ್ತು. ಕಾದಂಬರಿಯಲ್ಲಿದ್ದ ಮಹತ್ವಾಕಾಂಕ್ಷೆ, ಹಠಮಾರಿತನ ಮತ್ತು ಸೇಡಿನ ಧೋರಣೆಗಳು ಯುವ ಓದುಗರನ್ನು ಸಹಜವಾಗಿ ಸೆಳೆದಿತ್ತು. ಈ ಗುಣಗಳಿಂದಲೇ ಮುಂದೆ ಬೆಂಜಮಿನನ ಬದುಕು ಆತನನ್ನು ಎಲ್ಲೆಲ್ಲೋ ಎಳೆದುಕೊಂಡುಹೋಯಿತು. ಆತ ರಾಜಕೀಯ ಪ್ರವೇಶಿಸಿದ. ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಿ ಮೂರು ಬಾರಿ ಸೋತ. ನಂತರ ಕನ್ಸರ್ವೇಟಿವ್ ಪಕ್ಷ ಸೇರಿ ಅದರಲ್ಲಿ ಗೆದ್ದು ಹೌಸ್ ಆಫ್ ಕಾಮನ್ಸ್ ಪ್ರವೇಶಿಸಿದ. ಪತ್ರಿಕೆಗಳಲ್ಲಿ ಸತತವಾಗಿ ಬರೆಯತೊಡಗಿದ ಬೆಂಜಮಿನ್ ದೇಶಾದ್ಯಂತ ಜನಪ್ರೀಯ ರಾಜಕಾರಣಿಯಾದ. ರಾಜಕೀಯ ನಾಯಕರ ಧೋರಣೆಗಳನ್ನು ಟೀಕಿಸಿ ಮೂರು ಕಾದಂಬರಿಗಳನ್ನು ಬರೆದ. ಹಣೆಬರಹ ಚೆನ್ನಾಗಿದ್ದ ಡಿಸ್ರೇಲಿ ರಾಜಕೀಯದ ಸ್ಥಿತ್ಯಂತರದ ಕಾಲದಲ್ಲಿ (1868) ಇಂಗ್ಲೆಂಡಿನ ಪ್ರಧಾನಿಯೂ ಆದ. 1874ರಲ್ಲಿ ಎರಡನೆ ಬಾರಿಯೂ ಪ್ರಧಾನಿಯಾದ. ಇಂಗ್ಲೆಂಡಿನ ಸುಧಾರಣೆ ಮತ್ತು ಹಲವು ಜಾಗತಿಕ ವಿದ್ಯಮಾನಗಳಲ್ಲಿ ಹೆಸರು ಮಾಡಿದ ಬೆಂಜಮಿನ್ ಡಿಸ್ರೇಲಿ ಬದುಕಿನುದ್ದಕ್ಕೂ ನಿರಂತರವಾಗಿ ಕಾದಂಬರಿಗಳನ್ನು ಬರೆದ. ವಿಶ್ವದ ನಾನಾ ಭಾಗಗಳಲ್ಲಿ ಆತನ ಕಾದಂಬರಿಗಳಿಂದ ಪ್ರೇರಿತರಾದವರಿದ್ದರು. ಬಿಡುವಿಲ್ಲದ ರಾಜಕಾರಣಿಯಾಗಿದ್ದರೂ ಆತನ ಕಾದಂಬರಿ ಪ್ರೇಮ, ಜೀವಂತಿಕೆ, ನೇರವಂತಿಕೆಗಳಿಂದ ಆತನಿಗೆ ಜಗತ್ತಿನಾದ್ಯಂತ ಅಭಿಮಾನಿಗಳಿದ್ದರು.

ಭಾರತದಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆದು ಭಾರತದ ಅಧಿಕಾರ ಈಸ್ಟ್ ಇಂಡಿಯಾ ಕಂಪನಿ ಕೈಯಿಂದ ಇಂಗ್ಲೆಂಡ್ ಸಂಸತ್ತಿಗೆ ಹಸ್ತಾಂತರವಾದ ಕೆಲವೇ ವರ್ಷಗಳಲ್ಲಿ, ಅಂದರೆ 1868ರಲ್ಲಿ ಬೆಂಜಮಿನ್ ಮೊದಲ ಬಾರಿ ಇಂಗ್ಲೆಂಡಿನ ಪ್ರಧಾನಿಯಾಗಿದ್ದನೆಂಬುದು ವಿಶೇಷ. ಈ ಎಲ್ಲಾ ವಿವರಗಳಿಲ್ಲಿ ಅಪ್ರಸ್ತುತ. ಆದರೆ ಬೆಂಜಮಿನನಿಗೆ ಸಿಕ್ಕ ಸ್ಟಾರ್‌ಡಂ ಯಾವ ಪರಿಯ ಅಧ್ವಾನವನ್ನು ಸೃಷ್ಟಿಸಿತೆಂಬುದಕ್ಕೆ ಇತರ ವಿವರಗಳ ಅವಲೋಕನವೂ ಅಗತ್ಯ. ಆತನ ಪ್ರೇರಣೆಯಿಂದ ಕೇವಲ ಬಯ್ಯುವ ಪದಗಳಿಂದಲೇ ಯುವಕರು ಕಾವ್ಯ ರಚನೆಗೆ ಮುಂದಾದರು. ಲೋಕದ ಡೊಂಕನ್ನು ತಿದ್ದುವುದರ ಹೊರತಾಗಿ ಸಾಹಿತ್ಯಕ್ಕೆ ಬೇರೆ ಉದ್ದೇಶವಿಲ್ಲವೆಂಬ ಧೋರಣೆ ಹರಡತೊಡಗಿತು. ಸಾಹಿತ್ಯ ವಿಮರ್ಶೆಗಳೆಲ್ಲವನ್ನೂ ಟೀಕೆಗಳೆಂದು ಪರಿಭಾವಿಸುವ ವರ್ಗ ಸೃಷ್ಟಿಯಾಯಿತು. ಮತ್ತೊಬ್ಬರಿಗೆ ನೋವು ನೀಡದ ವಾಕ್ಯಗಳಿಂದೇನುಪಯೋಗ ಎನ್ನುವ ವಿಚಿತ್ರ ಮಾನಸಿಕತೆಯೂ ಬೆಳೆಯಲಾರಂಭಿಸಿತು. ಬೆಂಜಮಿನ್ ಡಿಸ್ರೇಲಿ ಬರೆಯುತ್ತಿದ್ದಾಗಲೇ ಬ್ರಿಟನ್‌ನಲ್ಲಿ ಬದಲಾವಣೆಗೆ ತಹತಹಿಸುತ್ತಿದ್ದ ಮತ್ತು ಸಾಹಿತ್ಯಕ್ಕೆ ತಕ್ಕ ಭಾವುಕತೆಯ ಮಿಶ್ರಣವನ್ನು ಹದವಾಗಿ ಮಾಡುತ್ತಿದ್ದ ಸಾಹಿತ್ಯ ಚಳವಳಿಯ ಕಾಲಘಟ್ಟವಾಗಿತ್ತು. ಬ್ರಿಟಿಷ್ ಸಾಮ್ರಾಜ್ಯದ ಹೆಮ್ಮೆಯ ಜೊತೆಜೊತೆಗೆ ವಾಸ್ತವವಾದ, ಸಾಮಾಜಿಕ ವಿಮರ್ಶೆ, ನೈತಿಕತೆ, ವಿಜ್ಞಾನ–ಧರ್ಮ ಸಂಘರ್ಷಗಳೂ ಅತಿಯಾಗಿ ಕಾಣಿಸುತ್ತಿದ್ದ ವಿಕ್ಟೋರಿಯನ್ ಯುಗದ ಉಚ್ಛ್ರಾಯ ಕಾಲಮಾನವೂ ಅದಾಗಿತ್ತು. ಡಿಕನ್ಸ್ ಮತ್ತು ಈಲಿಯಟ್ ನಂಥವರು ಬರೆಯುತ್ತಿದ್ದ ಅದೇ ಕಾಲದಲ್ಲಿ ಬೆಂಜಮಿನ್‌ನ ಸಾಹಿತ್ಯಗಳು ಅತಿಯಾದ ಜನಪ್ರೀಯತೆ ಗಳಿಸಿದ್ದರ ಜೊತೆಗೆ ಬ್ರಿಟಿಷ್ ವಿರೋಧಾಭಾಸದ ಮಾನಸಿಕತೆಯ ಅನಾವರಣವನ್ನೂ ಮಾಡಿತು. ಏಕೆಂದರೆ ತನ್ನ ರಂಜಕ ಪುಸ್ತಕಗಳಿಂದ ಬೆಂಜಮಿನ್ ಎಲ್ಲರಿಗಿಂತ ಖ್ಯಾತನಾಗಿದ್ದ. ಆ ಖ್ಯಾತಿ ಮತ್ತು ರಾಜಕಾರಣಿಯ ಪೋಷಾಕಿನಿಂದ ಆತನಿಗೆ ಆದಾಗಲೇ ಸುಧಾರಕನೆಂಬ ವ್ಯಕ್ತಿತ್ವವೂ ಹೇರಿಕೆಯಾಗಿಬಿಟ್ಟಿದ್ದವು. ಮುಖ್ಯವಾಗಿ ಅಂದಿನ ಕನ್ಸರ್ವೇಟಿವ್ ಪಕ್ಷದ ರಾಷ್ಟ್ರೀಯವಾದಿ ವಿಚಾರಗಳಿಗೆ ಆತನೇ ಹೀರೋ ಆಗಿಬಿಟ್ಟ. ಕನ್ಸರ್ವೇಟಿವ್ ಪಕ್ಷದ ಜನಪ್ರೀಯ one-nation ಥಿಯರಿಯನ್ನು ಬೆಂಜಮಿನ್ ಡಿಸ್ರೇಲಿಯೇ ಕಂಡುಹಿಡಿದ ಎಂದು ಜನ ನಂಬತೊಡಗಿದರು. ಬೆಂಜಮಿನ್‌ನ ರಾಷ್ಟ್ರೀಯವಾದಿ ಚಿಂತನೆಗಳಲ್ಲಿ ಜಳ್ಳೇ ತುಂಬಿರುತ್ತಿದ್ದರೂ ಆತ ಇನ್ಯಾರಿಗೋ ಬಯ್ಯುತ್ತಿದ್ದ ಮಾತುಗಳು ಜನರಿಗೆ ಆಕರ್ಷಕ ರಾಷ್ಟ್ರೀಯವಿಚಾರಗಳಾಗಿ ಕೇಳಿಸುತ್ತಿದ್ದವು. ಆತನ ಪ್ರತಿಮೆ ಸ್ಥಾಪನೆಯಾಯಿತು. ಆತ ಜೀವಂತವಿದ್ದಾಗಲೇ ಆತ ದೇಶದ ಸ್ಮೃತಿ ಚಿಹ್ನೆಯ ಭಾಗವಾದ. ಪ್ರಮುಖ ಪ್ರಧಾನಿಯಾಗಿ ದಾಖಲಾದ. ಎಲ್ಲಕ್ಕಿಂತ ಹೆಚ್ಚಾಗಿ ಕನ್ಸರ್ವೇಟಿವ್ ಪಕ್ಷ ಬೆಂಜಮಿನ್ ಡಿಸ್ರೇಲಿಯನ್ನು ಪ್ರಮುಖ ಪೂರ್ವಜ ಎಂದೇ ಭಾವಿಸುತ್ತದೆ. ಬೆಂಜಮಿನ್ ಆ ದೇಶದ ಮರೆಯಲಾಗದ ವ್ಯಕ್ತಿಯೇನಾಗದಿದ್ದರೂ ಆತನ ರಾಜಕೀಯ ಜೀವನ ಮತ್ತು ಮರಣಾನಂತರದ ಕೆಲವು ವರ್ಷಗಳವರೆಗಾದರೂ ಬೃಹದಾಕಾರಕ್ಕೆ ಬೆಳೆದ ಪ್ರಮುಖ ರಾಜಕಾರಣಿಯಂತೂ ಆಗಿದ್ದ. ಆದರೆ ಇಂಗ್ಲಿಷರು ಪಕ್ಕಾ ವ್ಯವಹಾರಸ್ಥ ವರ್ಗ. ನೀರು ನುಂಗಿದಾಗ ತನ್ನ ಮರಿಗಳನ್ನೇ ಕೆಳಗಿಟ್ಟು, ತಾನು ಮೇಲೆ ನಿಂತು ಬದುಕುವ ಜಾಯಮಾನದ ಅವರಿಗೆ ಬೆಂಜಮಿನ್ ಡಿಸ್ರೇಲಿ ಮುಂದಿನ ಕೆಲವೇ ವರ್ಷಗಳಲ್ಲಿ ಮಹಾತ್ಮನಾಗಿರಲಿಲ್ಲ. ಜೊತೆಗೆ ಬೆಂಜಮಿನನ ಗಟ್ಟಿತನವರದ ವಿಚಾರಧಾರೆಗಳು ಆತನ ಹೆಸರಿಗೆ ಗೆದ್ದಲು ಹಿಡಿಸಿದವು. ಒಂದು ದಿನ ಆತ ಜನರ ಮನದಿಂದ ಮರೆಯಾದ. ಇಂದಿನ ಯು.ಕೆಗೆ ಆತನ ಬಗ್ಗೆ ಗೌರವಗಳಿವೆಯಾದರೂ ಆತನನ್ನೇನೂ ಐತಿಹಾಸಿಕ ವ್ಯಕ್ತಿಯಾಗಿ ನೋಡುತ್ತಿಲ್ಲ. ಬ್ರಿಟಿಷ್ ರಾಜಕೀಯ ಇತಿಹಾಸದ ಆತ ಅಲ್ಲಲ್ಲಿ ಕಂಡುಬರುತ್ತಾನಾದರೂ ಅದು ಕೇವಲ ಸಾರ್ವಜನಿಕ ಸ್ಮರಣೆಯ ಭಾಗವಾಗಿ ಮಾತ್ರ ಇದೆ. ಅಂದರೆ ಇಂದಿನ ಯುಗದಲ್ಲಿ ರಾಜಕೀಯ ಪಿತಾಮಹನ ಸ್ಥಾನಮಾನವನ್ನೇನೂ ನೀಡುವ ಸ್ಥಿತಿ ಇಂದಿನ ಕನ್ಸರ್ವೇಟಿವ್ ಪಕ್ಷದೊಳಗೂ ಇಲ್ಲ. ಇಂದಿನ ಯಾವ ರೀತಿನೀತಿಗಳಿಗೂ ಅವನು ಮಾದರಿಯಾಗಿ ಉಳಿದಿಲ್ಲ.

ಬರಗಾಲದ ಹೊತ್ತಲ್ಲಿ ಈ ಆಂಗ್ಲನ ನೆನಪಾಗಲೊಂದು ಕಾರಣವಿದೆ! ಈ ಸಿದ್ಧಾಂತಗಳು, ಚಳವಳಿಗಳ ಹಿಂದಿನ ತತ್ತ್ವಗಳೆಲ್ಲವೂ ಯುಗಯುಗಗಳಿಗೂ ಇರಲೇಬೇಕಾದ ಗ್ಯಾರಂಟಿ ವಸ್ತುಗಳೇನಲ್ಲ. ಒಂದು ಕಾಲದಲ್ಲಿ ರಾಮನ ಆಡಳಿತವಿತ್ತು. ಆದರೆ ನಮ್ಮ ಪೀಳಿಗೆ ಸಿದ್ಧರಾಮಯ್ಯ ಆಡಳಿತವನ್ನೂ ನೋಡಿದೆವು. ಮುಂದೊಂದು ದಿನ ಈ ಆಡಳಿತವೂ ಬದಲಾಗಲಿದೆ. ಸೃಷ್ಟಿ ಬದಲಾಗಲಿದೆ ಎಂಬುದನ್ನು ಒಪ್ಪಿಕೊಳ್ಳುವವರೆಲ್ಲರೂ ಸಮಾಜ ಬದಲಾಗುವುದೇ ಶತಸಿದ್ಧ ಎಂಬುದನ್ನೂ ಒಪ್ಪಿಕೊಳ್ಳಬೇಕು. ನಿರ್ಮಿಸಿಕೊಂಡ ಕೆಲವು ಸಿದ್ಧಸೂತ್ರಗಳು ಕಣ್ಣಮುಂದೆಯೇ ಮುರಿದುಬೀಳುವುದನ್ನೂ ನಾವು ನೋಡಿದ್ದೇವೆ. ಯಾವುದೋ ದೇಶದಲ್ಲಿ ಆಕಸ್ಮಿಕವಾಗಿ ಹುಟ್ಟಿದ ಕಮ್ಯುನಿಸಂ ಎಂಬ ಆಕ್ರೋಶ ಎಷ್ಟೆಲ್ಲಾ ಆರ್ಭಟಿಸಿರಲಿಲ್ಲ. ಆದರೆ ಇಂದು? ದೇಶವನ್ನು ಕಿತ್ತುತಿನ್ನುತ್ತಿದ್ದ ನಕ್ಸಲಿಸಂ ನಾಶವಾಗಿದೆ. ಈಗಿನ ಪರಿಸ್ಥಿತಿಗೆ ತಕ್ಕಂತೆ ಜಗತ್ತು ಓಡುತ್ತಿದೆ. ಸದ್ಯಕ್ಕೆ ಜಗತ್ತು ಅದರಲ್ಲೆ ಒಗ್ಗಿದೆ.

ಇಷ್ಟೆಲ್ಲಾ ಹೇಳಲು ಕಾರಣ ತಮಿಳುನಾಡಿನಲ್ಲಿ ಕೊನೆಗೂ ದ್ರಾವಿಡ ಪಕ್ಷಗಳು ಮೈ ತೊಳೆದುಕೊಂಡಿವೆ ಎಂಬುದಕ್ಕಾಗಿ. ಅಲ್ಲಿ ಹುಟ್ಟಿದ ಬಹುತೇಕ ಪಕ್ಷಗಳಿಗೆ ದ್ರಾವಿಡ ಬೇರುಗಳನ್ನು ಸಂಪೂರ್ಣವಾಗಿ ಕಳಚಿಕೊಳ್ಳಲಿನ್ನೂ ಸಾಧ್ಯವಾಗಿಲ್ಲ. ಆದರೆ ದ್ರಾವಿಡ ಚಿಂತನೆಯನ್ನೇ ಪ್ರತಿಪಾದಿಸುವ ಜೋಸೆಫ್ ವಿಜಯ್ ಅವರ ಟಿವಿಕೆ ಕೊನೆಗೂ, "ನಾವು ಪೆರಿಯಾರ್ ಹೇಳಿದ ಸಾಮಾಜಿಕ ಹೊಣೆಗಾರಿಕೆಯನ್ನು ಪಾಲಿಸುವವರೇ ಹೊರತು ನಾಸ್ತಿಕ್ಯವನ್ನು ಪಾಲಿಸುವವರಲ್ಲ" ಎಂಬ ಹೇಳಿಕೆಯೇ ಕಾಲನ ನಡೆಯಲ್ಲಿ ಪೆರಿಯಾರನೂ ಶಾಶ್ವತನಲ್ಲ ಎಂಬುದಕ್ಕೆ ಸಾಕ್ಷಿ. ಕೆಲವು ವರ್ಷಗಳ ಹಿಂದೆ ತಮಿಳುನಾಡಿನ ಯಾವ ರಾಜಕಾರಣಿಯ ಬಾಯಿಂದಲೂ ಇಂಥ ಮಾತುಗಳು ಬರುತ್ತದೆಂದು ಊಹಿಸಲಾಗುತ್ತಿರಲಿಲ್ಲ. ವಿಚಿತ್ರವೆಂದರೆ ತಮಿಳುಜನರ ಕಣ್ಣಲ್ಲಿ ನಾಸ್ತಿಕ್ಯವನ್ನೂ ಕಾಣಲಾಗುತ್ತಿರಲಿಲ್ಲ! ಆದರೆ ಪೆರಿಯಾರನ ಹೆಸರಿನಲ್ಲಿ ಹುಟ್ಟಾಟಗಳು ನಡೆಯುತ್ತಲೇ ಇದ್ದವು. ಪೆರಿಯಾರನ ಶವಪೆಟ್ಟಿಗೆಗೆ ಮೊಳೆ ಹೊಡೆಯುವ ಪ್ರಕ್ರಿಯೆ ವಿಧ್ಯುಕ್ತವಾಗಿ ಚಾಲನೆಗೊಂಡಾಗ ಯಾಕೋ ಒಂದು ಕಾಲದಲ್ಲಿ ಮರೆದ ಬೆಂಜಮಿನ್ ಡಿಸ್ರೇಲಿ ನೆನಪಾದ.

ಶಿಕ್ಷಣ ತಜ್ಞರ ವಿಶ್ವರೂಪ ದರ್ಶನ ಮಾಡಿಸಿದ ಕೃಷ್ಣ

▸ ರಾಜೀವ ಹೆಗಡೆ



ಅ ಆ ಇ ಈ ಹೇಳೋಣ ಕನ್ನಡಕ್ಕೆ ಜೈ ಎನ್ನೋಣ
ಉ ಊ ಋ ಹೇಳೋಣ ಕನ್ನಡದ ಋಣ ನೆನೆಯೋಣ.....

ಇದು ಎನ್‌ಸಿಇಆರ್‌ಟಿಯ ಆರನೇ ತರಗತಿ ಪುಸ್ತಕದ ಮೊದಲ ಅಧ್ಯಾಯದ ಆರಂಭಿಕ ಸಾಲು. ಕನ್ನಡಕ್ಕೆ ಜೈ ಎಂದು ಭಾಷೆಯ ಋಣವನ್ನು ಮಕ್ಕಳಿಗೆ ನೆನಪಿಸುತ್ತಾ, ನಮ್ಮ ಕನ್ನಡ ಭಾಷೆಯನ್ನು ಕಲಿಸುವ ಪಠ್ಯವನ್ನು ನೀಡಲಾಗಿದೆ. ಆದರೆ ಈ ಪಠ್ಯದ ಹೆಸರನ್ನು ಅರ್ಥೈಸಿಕೊಳ್ಳದೇ ಸಹಿಸಿಕೊಳ್ಳಲಾಗದ ಒಂದಿಷ್ಟು ಎಡಪಂತೀಯ ಬುದ್ಧಿಜೀವಿಗಳಿಗೆ ಸಸ್ಯಾಹಾರ–ಮಾಂಸಾಹಾರ, ಬಸವಣ್ಣ, ಕುವೆಂಪು, ಕರಾವಳಿ, ಮಲೆನಾಡು, ಉತ್ತರ ಕರ್ನಾಟಕವೆಲ್ಲ ಕಣ್ಣಿಗೆ ರಾಚಲು ಆರಂಭಿಸಿದೆ. ಆದರೆ ಇವೆಲ್ಲ ಹುಳುಕಿಗೆ ಕಾರಣವಾಗಿದ್ದು, ಕೇವಲ ಕೃಷ್ಣ ಎನ್ನುವ ಪುಸ್ತಕದ ಹೆಸರು.

ಈ ಬಗ್ಗೆ ಎನ್‌ಸಿಇಆರ್‌ಟಿ ಕೂಡ ಸ್ಪಷ್ಟನೆ ನೀಡಿದೆ. ಆದಾಗ್ಯೂ ಪಠ್ಯದ ಬಗ್ಗೆ ಎತ್ತಿರುವ ವಿರೋಧಕ್ಕೆ ಸಂಬಂಧಿಸಿದ ನಾಲ್ಕು ಆಯಾಮಗಳನ್ನು ಪರಿಶೀಲಿಸೋಣ. ಕೃಷ್ಣ ಎನ್ನುವ ಹೆಸರು, ಸಸ್ಯಾಹಾರ–ಮಾಂಸಾಹಾರ ಹಾಗೂ ಕರ್ನಾಟಕದ ಅಸ್ಮಿತೆಗಳಾದ ಪಂಪ, ಕುವೆಂಪು, ಬಸವಣ್ಣರನ್ನು ಕಡೆಗಣಿಸಲಾಗಿದೆ. ಇದರೊಟ್ಟಿಗೆ ಕರ್ನಾಟಕದ ಸಾಮಾಜಿಕ ಹಾಗೂ ಪ್ರಾದೇಶಿಕ ವೈವಿಧ್ಯತೆ ಬಗ್ಗೆ ವಿವರ ನೀಡಿಲ್ಲ ಎನ್ನುವುದು ಒಂದಿಷ್ಟು ಜನರ ಕೊಂಕು ಮಾತಾಗಿದೆ.

ಕೃಷ್ಣಎಂಬ ಹೆಸರು

ಎಂದಿಗೂ ನಮ್ಮ ಗ್ರಹಿಕೆಯು ನೇರವಾಗಿ ಆಲೋಚನೆಯನ್ನೇ ಅವಲಂಬಿಸಿರುತ್ತದೆ. ನರೇಂದ್ರ ಮೋದಿ ಸರ್ಕಾರದ ಎಲ್ಲ ಕೆಲಸವನ್ನು ಒಂದೇ ಕನ್ನಡಕದಿಂದ ನೋಡಿದಾಗ ಆಗುವ ಎಡವಟ್ಟುಗಳೇ ಇಲ್ಲಿಯೂ ಆಗಿವೆ. ಕೃಷ್ಣ ಎನ್ನುವ ಹೆಸರನ್ನು ದೇವರು–ಧರ್ಮದ ನಂಟಿನೊಂದಿಗೆ ನೋಡಿ ಒಂದಿಷ್ಟು ಜನರು ಅಸಲಿ ಗುಣವನ್ನು ಪ್ರದರ್ಶನ ಮಾಡಿದ್ದಾರೆ. ಟೀಕಾಕಾರರು ಹಾಗೂ ದೇವರನ್ನೇ ನಂಬದವರಿಗೆ ಕೃಷ್ಣ ಎನ್ನುವುದು ದೇವರಾಗಿ ಕಾಣಿಸಿಕೊಂಡಿದ್ದರೆ, ಪಠ್ಯ ರಚನೆಕಾರರಿಗೆ ಅದು ನಮ್ಮ ರಾಜ್ಯದ ಕೋಟ್ಯಂತರ ಜನರ ಹಸಿವು ನೀಗಿಸುವ ನದಿಯಾಗಿ ಗೋಚರಿಸಿದೆ. ಮಾಡಿರುವ ಪ್ರಮಾದವನ್ನು ಮುಚ್ಚಿಕೊಳ್ಳಲು ಈ ರೀತಿ ಸ್ಪಷ್ಟನೆಗಳು ಬಂದಿಲ್ಲ. ಇಂತಹ ಟೀಕೆಗಳು ಮುನ್ನೆಲೆಗೆ ಬರುವ ಮೊದಲೇ, ಹಿಂದಿ, ಇಂಗ್ಲಿಷ್ ಹಾಗೂ ಉರ್ದು ಪುಸ್ತಕಗಳಿಗೆ ಕ್ರಮವಾಗಿ ಗಂಗಾ, ಕಾವೇರಿ, ಯಮುನಾ ಎಂದು ಹೆಸರಿಡಲಾಗಿದೆ. ಇವೆಲ್ಲವೂ ದೇಶದ ಹಲವು ರಾಜ್ಯಗಳ ಜನರಿಗೆ ಹಸಿರು, ಉಸಿರು ಹಾಗೂ ಹೊಟ್ಟೆಯನ್ನು ತುಂಬಿಕೊಡುವ ಜೀವನದಿಗಳಾಗಿವೆ. ಈ ದೇಶದ ಅನಕ್ಷರಸ್ಥ ವ್ಯಕ್ತಿ ಕೂಡ ಈ ಗಂಗಾ, ಕಾವೇರಿ, ಯಮುನಾ, ಕೃಷ್ಣಾ ನದಿಯನ್ನು ಧರ್ಮ, ಜಾತಿ ಹಾಗೂ ದೇವರೊಂದಿಗೆ ಅಂಟಿಸಿಕೊಂಡು ನೋಡುವುದಿಲ್ಲ. ಈ ನದಿಯನ್ನು ಕಂಡಾಗ ದೇಶದ ಪ್ರತಿಯೊಬ್ಬ ಪ್ರಜ್ಞಾವಂತರು ಗೊತ್ತಿಲ್ಲದೇ ನಮಿಸುತ್ತಾರೆ. ವಿಶೇಷವೆಂದರೆ ಈ ದೇಶದ ಅನಕ್ಷರಸ್ಥರು ಕೂಡ ಶಿಕ್ಷಣ ತಜ್ಞರಿಗಿಂತ ಹೆಚ್ಚು ಪ್ರಾಜ್ಞರಾಗಿರುತ್ತಾರೆ. ಕೃಷ್ಣಾ ನದಿಯು ಕರ್ನಾಟಕದ 5 ಜಿಲ್ಲೆ ಒಂದು ಕೋಟಿಗೂ ಹೆಚ್ಚು ಜನಕ್ಕೆ ಜೀವನ ನೀಡಿದೆ. ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ತೆಲಂಗಾಣದಲ್ಲೂ ಇದರ ಪಾತ್ರ ದೊಡ್ಡದು. ಹಾಗೆಯೇ ಈ ಕೃಷ್ಣ ಎನ್ನುವ ಶಬ್ದವನ್ನು ಮೇಲ್ಜಾತಿಗೆ ಸೇರಿಸಿ, ಅಹಿಂದ ವರ್ಗಕ್ಕೆ ಅನ್ಯಾಯವಾಗಿದೆ ಎಂಬ ಬುದ್ಧಿವಂತರ ಮಾತನ್ನೂ ಕೇಳಿದೆ. ಆದರೆ ನಾವೆಲ್ಲ ಕೃಷ್ಣನನ್ನು ಗೊಲ್ಲ ಎಂದು ಪೂಜಿಸಿದ್ದನ್ನು ರಾಜಕೀಯ ಅರಿಯದ ಜನಸಾಮಾನ್ಯರು ಮರೆಯುವುದಿಲ್ಲ.

ಇದರ ಇನ್ನೊಂದು ಆಯಾಮವನ್ನು ನೋಡೋಣ. ಜನರಿಗೆ ದಿಕ್ಕು ತಪ್ಪಿಸುವ ಸಲುವಾಗಿಯೇ ಇಂತಹ ಕುಚೋದ್ಯ ಮಾಡಲಾಗಿದೆ ಎಂದು ಕೆಲ ಶಿಕ್ಷಣ ತಜ್ಞರು ವಾದಿಸಬಹುದು. ಆದರೆ ಅಂತಹ ವಾದಕ್ಕೂ ಯಾವುದೇ ಜಾಗವಿಲ್ಲದಷ್ಟು ಅಚ್ಚುಕಟ್ಟಾಗಿ ಮುಖಪುಟ ರಚಿಸಲಾಗಿದೆ. ಹರಿಯುವ ನದಿಯ ಜೊತೆಗೆ ಮೈಸೂರು ಅರಮನೆ ಹಾಗೂ ಹಂಪಿಯ ಕಲ್ಲಿನ ರಥವನ್ನು ತೋರಿಸಲಾಗಿದೆ. ಅದರೊಟ್ಟಿಗೆ ಒಂದಿಷ್ಟು ಮಕ್ಕಳು ಪಾಠದೊಂದಿಗೆ ಆಟವಾಡುತ್ತಿರುವುದನ್ನು ಕಾಣಬಹುದು. ಎಲ್ಲಿಯೂ ಧರ್ಮ ಅಥವಾ ಜಾತಿಯ ಸೂಚಕಗಳನ್ನು ಬಳಸಲಾಗಿಲ್ಲ. ದೇವಾಲಯ ಅಥವಾ ದೇವರು ಕೃಷ್ಣನನ್ನು ಹೋಲುವ ಚಿತ್ರದ ಬಳಕೆಯಾಗಿಲ್ಲ. ಇಷ್ಟಾದ ಮೇಲೂ ಪಠ್ಯದಲ್ಲಿ ಕೊಂಕು ಕಾಣಿಸಿದವರಿಗೆ, ಆ ಕೃಷ್ಣನೇ ಬಂದು ಬುದ್ಧಿ ಹೇಳಿದರೂ ಅರ್ಥವಾಗುವುದಿಲ್ಲ.

ಸಸ್ಯಾಹಾರ–ಮಾಂಸಾಹಾರದ ವಿವಾದ

ಪಠ್ಯದ ಆರನೇ ಅಧ್ಯಾಯ ಅಥವಾ ಘಟಕದಲ್ಲಿ ಆರೋಗ್ಯವೇ ಭಾಗ್ಯ


'ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ' ಎಂಬಂತೆ ಪ್ರತಿದಿನ ನಾವು ನೀವು ಉತ್ತಮ ಆಹಾರವನ್ನು ಸೇವಿಸಬೇಕು. ಪ್ರತಿದಿನ ಯೋಗಾಸನವನ್ನು ಮಾಡುವುದರಿಂದ ನಮ್ಮ ಮನಸ್ಸಿಗೆ ಶಾಂತಿ ಮತ್ತು ದೇಹಕ್ಕೆ ಶಕ್ತಿಯು ದೊರೆಯುತ್ತದೆ.

ಸಮತೋಲನ ಆಹಾರ

ನಮ್ಮ ದೇಹಕ್ಕೆ ಶಕ್ತಿ ದೊರಕಲು ಸಮತೋಲನ ಆಹಾರಗಳಾದ ಹಾಲು, ಸೊಪ್ಪು, ತರಕಾರಿ, ಹಣ್ಣು ಹಂಪಲುಗಳು ಅಗತ್ಯ. ಇವು ನಮ್ಮ ದಿನ ನಿತ್ಯದ ಆಹಾರದ ಭಾಗವಾಗಬೇಕು.

ಭಾರತವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿದೆ. ಪ್ರತಿ ರಾಜ್ಯದಲ್ಲೂ ಕೂಡ ಆರೋಗ್ಯಕರವಾದಂತಹ ಅನೇಕ ಆಹಾರ ಪದಾರ್ಥಗಳನ್ನು ನೋಡುತ್ತೇವೆ. ಉದಾಹರಣೆಗೆ ಕರ್ನಾಟಕದ ರಾಗಿಮುದ್ದೆ ದೇಹಕ್ಕೆ ಶಕ್ತಿ ಮತ್ತು ತಂಪು ನೀಡಿದರೆ, ತಮಿಳುನಾಡಿನ ಮೃದುವಾದ ಇಡ್ಲಿ ಸವಿಯೊಂದಿಗೆ ಜೀರ್ಣಶಕ್ತಿಗೂ ಸಹ ಒಳ್ಳೆಯದು. ಕೇರಳದ ಪುಟ್ಟು ರುಚಿಯೊಂದಿಗೆ ನಾರಿನಾಂಶವನ್ನು ನೀಡಿದರೆ, ಗುಜರಾತಿನ ಕಿಚಡಿ ಮಾಡಲು ಸರಳ ಮತ್ತು ಸವಿಯಲು ರುಚಿ.

ರಾಗಿ ತಿಂದವ ನಿರೋಗಿ - ಪುರಂದರದಾಸರು

ಎನ್ನುವ ವಿಚಾರವಿದೆ. ಸಮತೋಲನ ಆಹಾರ ಸೇವನೆ ಎನ್ನುವ ವಿಚಾರವನ್ನು ಪ್ರಸ್ತಾಪಿಸುತ್ತಾ, ಯೋಗದ ಚಿತ್ರದ ಜೊತೆಗೆ ಒಂದು ತಟ್ಟೆಯಲ್ಲಿ ಕೆಲ ಆಹಾರಗಳನ್ನು ತೋರಿಸಲಾಗಿದೆ. ಅದರಲ್ಲಿ ಹಾಲು, ಹಣ್ಣು, ಹಂಪಲು ಹಾಗೂ ರೊಟ್ಟಿಯ ಚಿತ್ರಗಳಿವೆ. ಹಾಗೆಯೇ ಮುಂದುವರಿದು ನಮ್ಮ ದೇಹಕ್ಕೆ ಶಕ್ತಿ ದೊರಕಲು ಸಮತೋಲನ ಆಹಾರಗಳಾದ ಹಾಲು, ಸೊಪ್ಪು, ತರಕಾರಿ, ಹಣ್ಣು, ಹಂಪಲುಗಳು ಅಗತ್ಯ. ಇವು ನಮ್ಮ ದಿನ ನಿತ್ಯದ ಆಹಾರದ ಭಾಗವಾಗಬೇಕು ಎಂದು ಪ್ರಕಟಿಸಲಾಗಿದೆ. ಇಲ್ಲಿ ಪ್ರಕಟವಾಗಿರುವ ಪ್ರತ್ಯೇಕ ಚಿತ್ರದಲ್ಲಿ ಮೊಟ್ಟೆಯೂ ಇದೆ. ಹಾಗೆಯೇ ಅಧ್ಯಾಯದ ಕೊನೆಯಲ್ಲಿ ಮನೆಯ ಆಹಾರ ಆರೋಗ್ಯಕರ ಎಂದು ಸಾಮಾನ್ಯ ಊಟದ ಚಿತ್ರವನ್ನು ತೋರಿಸಲಾಗಿದೆ. ಅದರೊಟ್ಟಿಗೆ ಅನಾರೋಗ್ಯಕರ ಆಹಾರವನ್ನು ಕಡಿಮೆ ಸೇವಿಸಬೇಕು ಎಂದು ಇನ್ನೊಂದು ಸಾಲು ಸೇರಿಸಲಾಗಿದೆ. ಇಲ್ಲೇನಾದರೂ ಮಾಂಸಾಹಾರವನ್ನು ತೋರಿಸಲಾಗಿದೆಯೇ ಎಂದು ಕನ್ನಡಕ ಹಾಕಿಕೊಂಡು ಹತ್ತಾರು ಬಾರಿ ಹುಡುಕಿದೆ. ಆದರೆ ಅಲ್ಲಿರುವುದು ಬರ್ಗರ್, ಫಿಂಗರ್ ಚಿಪ್ಸ್ ಹಾಗೂ ಕೋಕ್ ರೀತಿಯ ಪಾನೀಯ. ಇದ್ಯಾವುದೂ ಮಾಂಸಾಹಾರಕ್ಕೆ ಸೇರುವುದಿಲ್ಲ. ಒಂದೊಮ್ಮೆ ಬರ್ಗರ್‌ನಲ್ಲಿ ಮಾಂಸವಿದ್ದರೂ, ಅದನ್ನು ಆರೋಗ್ಯಕರ ತಿಂಡಿ ಎಂದೂ ಈ ದೇಶದಲ್ಲಿನ ಯಾವೊಬ್ಬ ಆರೋಗ್ಯ ತಜ್ಞ ಕೂಡ ಹೇಳಲು ಸಾಧ್ಯವಿಲ್ಲ. ನಾನು ದೇಶ ಪ್ರೇಮಿ ಎಂದು ಹೇಳಿಕೊಂಡಾಕ್ಷಣ, ಉಳಿದವರೆಲ್ಲ ದೇಶದ್ರೋಹಿಗಳಾಗುವುದಿಲ್ಲ. ಹಾಗೆಯೇ ಸಮತೋಲನ ಆಹಾರದಲ್ಲಿ ಕೇವಲ ಸಸ್ಯಾಹಾರದ ಉಲ್ಲೇಖವಿದ್ದಾಕ್ಷಣ, ಮಾಂಸಾಹಾರ ಹಾಗೂ ಅದನ್ನು ಸೇವಿಸುವವರು ಕೆಟ್ಟವರು ಎಂದಾಗುವುದಿಲ್ಲ. ಅಂದ್ಹಾಗೆ ನಾನು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ, ಆಹಾರದ ಉಲ್ಲೇಖಗಳಲ್ಲಿ ಎಲ್ಲಿಯೂ ಆರೋಗ್ಯಕರ ಆಹಾರದ ಪಟ್ಟಿಯಲ್ಲಿ ಯಾವುದೇ ಮಾಂಸಾಹಾರಗಳಿರಲಿಲ್ಲ. ಹಾಗಿದ್ದರೆ ಆಗಿದ್ದ ಕಾಂಗ್ರೆಸ್ ನೇತೃತ್ವದ ಸರ್ಕಾರ ಕೂಡ ಮಾಂಸಾಹಾರದ ವಿರೋಧಿಯಾಗಿತ್ತು ಎಂದು ವಾದಿಸಲು ಸಾಧ್ಯವೇ? ಅದರೊಟ್ಟಿಗೆ ಆಧುನಿಕ ಜಗತ್ತಿನಲ್ಲಿ ಯಾವುದೊಂದು ಜಾತಿ, ಧರ್ಮವು ನಿರ್ದಿಷ್ಟ ಆಹಾರ ಪದ್ಧತಿಗೆ ಸೀಮಿತವಾಗಿಲ್ಲ. ಎಲ್ಲೆಡೆಯೂ ಎಲ್ಲ ರೀತಿಯ ಆಹಾರ ಸೇವಿಸುವವರು ಸಿಗುತ್ತಾರೆ. ಒಂದೇ ಮನೆಯಲ್ಲಿ ಇಂತಹ ವೈರುಧ್ಯಗಳು ಸಿಗುತ್ತವೆ.ಹಾಗೆಯೇ ಪ್ರತಿದಿನ ಮಾಂಸಾಹಾರವನ್ನು ಸೇವಿಸುವ ಜನರು ಕೂಡ ಸಣ್ಣ ಮಕ್ಕಳಿಗೆ, ವಾರಪೂರ್ತಿ ಅದನ್ನೇ ತಿನ್ನಿಸುವುದಿಲ್ಲ. ಆದರೆ ಆಹಾರವನ್ನು ಜಾತಿಯ ಕನ್ನಡಕದಲ್ಲಿ ನೋಡಿದಾಗ ಇಂತಹ ಸಮಸ್ಯೆ ಶುರುವಾಗುತ್ತದೆ. ಮಾಂಸಾಹಾರವನ್ನು ಸಮತೋಲನದ ಆಹಾರಕ್ಕೆ ಸೇರಿಸದಿರಲು, ಜಾತಿಯ ಬದಲಿಗೆ ಕೊಬ್ಬಿನ ಅಂಶ ಕಾರಣವಾಗಿರುತ್ತದೆ. ಅಷ್ಟಕ್ಕೂ ಇಡೀ ಪುಸ್ತಕದಲ್ಲಿ ಎಲ್ಲಿಯೂ ಮಾಂಸಾಹಾರ ಸೇವಿಸಬೇಡಿ, ಅಪಾಯಕಾರಿ ಎಂದು ಎಲ್ಲಿಯೂ ಹೇಳಿಲ್ಲ. ಅಂದ್ಹಾಗೆ ಜೀವ ಉಳಿಸಿಕೊಳ್ಳಲು ಉಸಿರಾಡಬೇಕು ಎನ್ನುವುದನ್ನು ಕೂಡ ಉಲ್ಲೇಖಿಸಿಲ್ಲ. ಇದನ್ನು ನೋಡಿ, ಕೆಲವರು ಉಸಿರಾಟ ನಿಲ್ಲಿಸದಿದ್ದರೆ ಸಾಕಿತ್ತು.

ಧಾರ್ಮಿಕ ಅಪನಂಬಿಕೆಗೆ ಕನ್ನಡ ಅಸ್ಮಿತೆ ಸೇರಿಸುವ ಸಂಚು

ಪಠ್ಯ ಓದದೇ ಸುಳ್ಳಿನ ಕಥೆ ಕಟ್ಟುವ ಎಡವಟ್ಟು

ಕನ್ನಡ ಅಸ್ಮಿತೆಯ ಗಣ್ಯರು

ಸಿಬಿಎಸ್‌ಇ ಪಠ್ಯಕ್ರಮದ ಮೂರನೇ ಭಾಷೆಯ ಆರನೇ ತರಗತಿ ಪಠ್ಯವೆಂದರೆ, ಅವರಿಗೆ ಕನ್ನಡ ಕಲಿಕೆಯ ಆರಂಭದ ದಿನಗಳಿರಬಹುದು. ಮೊದಲ ವರ್ಷವೇ ಎಲ್ಲವನ್ನೂ ಪಠ್ಯದಲ್ಲಿ ಸೇರಿಸಬೇಕು ಎಂದು ಶಿಕ್ಷಣ ತಜ್ಞರೆನಿಸಿಕೊಂಡವರು ವಾದ ಮಾಡಿದರೆ, ಬಾಲಿಶ ಎನಿಸುತ್ತದೆ. ಒಂದು ತರಗತಿಗೆ ಕನ್ನಡ ಮುಗಿದು ಹೋಗುವುದಿಲ್ಲ. ಇನ್ನೂ ನಾಲ್ಕೈದು ತರಗತಿಗೆ ಕನ್ನಡದ ಪಠ್ಯ ಬರುವುದು ಬಾಕಿಯಿದೆ. ಅಲ್ಲಿಯವರೆಗೆ ಕಾದು ನೋಡಿದರೆ ಔಚಿತ್ಯವೆನಿಸುತ್ತದೆ. ಒಂದೊಮ್ಮೆ ಆಗಲೂ ಕನ್ನಡದ ಶ್ರೇಷ್ಠರನ್ನು ಕಡೆಗಣಿಸಿದರೆ, ಆಗ ಧ್ವನಿ ಎತ್ತುವುದರಲ್ಲಿ ಅರ್ಥವಿದೆ. ಹಾಗೆಯೇ ಶ್ರೇಷ್ಠ ಕನ್ನಡಿಗರನ್ನು ನಿರ್ಲಕ್ಷಿಸಿ, ಇನ್ನ್ಯಾವುದೋ ಭಾಷೆ, ರಾಜ್ಯ, ದೇಶದ ವ್ಯಕ್ತಿಗಳಿಗೆ ಪಠ್ಯದ ಯಾವುದೇ ಅಧ್ಯಾಯದಲ್ಲಿ ಮಣೆಯನ್ನು ಹಾಕಲಾಗಿಲ್ಲ ಎನ್ನುವುದನ್ನು ಕೂಡ ಅರ್ಥೈಸಿಕೊಳ್ಳಬೇಕು.

ಪ್ರಾದೇಶಿಕ ವೈವಿಧ್ಯತೆ

ಪಠ್ಯದಲ್ಲಿ ಕರಾವಳಿ, ಉತ್ತರ ಕರ್ನಾಟಕ, ಮಲೆನಾಡು, ಹಳೆಯ ಮೈಸೂರು ಭಾಗದ ಜಾನಪದ, ಸಾಹಿತ್ಯ ಬದುಕು ಕಾಣೆಯಾಗಿದೆ ಎನ್ನುವ ವಾದವನ್ನು ಕೆಲವರು ಇರಿಸಿದ್ದಾರೆ. ಯಾರೋ ಕಿಡಿಗೇಡಿಗಳು ಕಳುಹಿಸಿದ ಸ್ಕ್ರೀನ್‌ಶಾಟನ್ನು ನೋಡಿಕೊಂಡು ಇಂತಹ ಆರೋಪ ಮಾಡಬಹುದು. ಏಕೆಂದರೆ ನಾನು ಖುದ್ದಾಗಿ ಪುಸ್ತಕವನ್ನು ಎನ್‌ಸಿಇಆರ್‌ಟಿ ವೆಬ್‌ಸೈಟ್‌ನಲ್ಲಿ ನೋಡಿದ್ದೇನೆ. ಪಠ್ಯದಲ್ಲಿ ಅಕ್ಷರ ಮಾಲೆ, ನನ್ನ ಕುಟುಂಬ ಮತ್ತು ನಮ್ಮ ದಿನಚರಿ, ಸಮುದಾಯ ಸಹಾಯಕರು, ನಮ್ಮ ಹವ್ಯಾಸ–ನಮ್ಮ ಅಭಿರುಚಿ, ಕರುನಾಡ ಕಾಶ್ಮೀರ, ಆರೋಗ್ಯವೇ ಭಾಗ್ಯ, ಶೆಟ್ಟರ ದಿನಸಿ ಅಂಗಡಿ, ಚನ್ನಪಟ್ಟಣದ ಗೊಂಬೆಗಳು, ಅಚ್ಚರಿಯ ಹಂಪಿ, ತಾಯಿ ಋಣ, ಜನಪದ ಸೊಬಗು ಎನ್ನುವ ಅಧ್ಯಾಯಗಳಿವೆ. ಕೊಡಗಿನ ಬಗೆಗೆ ಕರುನಾಡ ಕಾಶ್ಮೀರ, ಹಳೇ ಮೈಸೂರು ಭಾಗದ ಚನ್ನಪಟ್ಟಣದ ಗೊಂಬೆಗಳು, ಉತ್ತರ ಕರ್ನಾಟಕದ ಅಚ್ಚರಿಯ ಹಂಪಿ ಹಾಗೂ ಕರಾವಳಿ ಮಲೆನಾಡು ಭಾಗದ ಜನಪದ ಸೊಬಗು ಎನ್ನುವ ಅಧ್ಯಾಯಗಳಿವೆ. ಜನಪದ ಸೊಬಗು ಅಧ್ಯಾಯದಲ್ಲಿ ವಿಶೇಷವಾಗಿ ಕಂಬಳ ಹಾಗೂ ಯಕ್ಷಗಾನದ ಉಲ್ಲೇಖಗಳಿವೆ. ಹಾಗೆ ನೋಡಿದರೆ ಕರ್ನಾಟಕದ ನಾಲ್ಕೂ ದಿಕ್ಕಿನಿಂದ ಒಂದಿಷ್ಟು ಅಂಶಗಳನ್ನು ಎತ್ತಿಕೊಳ್ಳಲಾಗಿದೆ. ಆದರೆ ಕೀಟಲೆಯನ್ನೇ ಉದ್ದೇಶವಾಗಿಸಿಕೊಂಡವರ ಪ್ರಕಾರ ಕರ್ನಾಟಕದ ಎಲ್ಲ ವೈವಿಧ್ಯತೆಯನ್ನು ಒಂದೇ ತರಗತಿಯ ಪಠ್ಯದಲ್ಲಿ ಕೊಡಬೇಕು ಎನ್ನುವುದು ನಗೆಪಾಟಲಿನ ವಿಚಾರವಾಗುತ್ತದೆ. ಏಕೆಂದರೆ ಕರುನಾಡು ಅಷ್ಟೊಂದು ವೈವಿಧ್ಯತೆಯನ್ನು ಹೊಂದಿದ ಭೂಮಿಯಾಗಿದೆ. ಅಂದ್ಹಾಗೆ ನೀವು ಕೂಡ www.ncert.nic.in/textbook.php ವೆಬ್‌ಸೈಟ್‌ನಲ್ಲಿ ಈ ಪುಸ್ತಕವನ್ನು ಪರಿಶೀಲಿಸಬಹುದು.

ಕೇಸರೀಕರಣ ಎಲ್ಲಿದೆ?

ನರೇಂದ್ರ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದ ಶಿಕ್ಷಣ ಎಂದಾಕ್ಷಣ ಕೇಸರೀಕರಣ ಎನ್ನುವುದು ಕೆಲವರಿಗೆ ಶೋಕಿಯಾಗಿದೆ. ಕರ್ನಾಟಕದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ವಿರೋಧಿಸುವಾಗಲೂ ಇದೇ ಹೊಲಸು ರಾಜಕೀಯ ನಡೆಯಿತು. ಈಗ ಎನ್‌ಸಿಆರ್‌ಟಿಯ ಹೊಸ ಪಠ್ಯದ ವಿಚಾರದಲ್ಲೂ ಇಂತಹದ್ದೇ ರಾಜಕೀಯ ಶುರುವಾಗಿದೆ. ಮೇಲೆ ಉಲ್ಲೇಖಿಸಿದಂತೆ ಅಕ್ಷರ ಮಾಲೆ, ನನ್ನ ಕುಟುಂಬ ಮತ್ತು ನಮ್ಮ ದಿನಚರಿ, ಸಮುದಾಯ ಸಹಾಯಕರು, ನಮ್ಮ ಹವ್ಯಾಸ–ನಮ್ಮ ಅಭಿರುಚಿ, ಕರುನಾಡ ಕಾಶ್ಮೀರ, ಆರೋಗ್ಯವೇ ಭಾಗ್ಯ, ಶೆಟ್ಟರ ದಿನಸಿ ಅಂಗಡಿ, ಚನ್ನಪಟ್ಟಣದ ಗೊಂಬೆಗಳು, ಅಚ್ಚರಿಯ ಹಂಪಿ, ತಾಯಿ ಋಣ, ಜನಪದ ಸೊಬಗು ಎನ್ನುವ ಈ ಹನ್ನೊಂದು ಅಧ್ಯಾಯಗಳಲ್ಲಿ ಒಂದೇ ಒಂದು ಧರ್ಮ, ಜಾತಿ, ದೇವರು ಅಥವಾ ಸೈದ್ಧಾಂತಿಕ ವಿಚಾರಗಳ ಪ್ರಸ್ತಾಪವೇ ಆಗಿಲ್ಲ. ಕುಟುಂಬ, ಕರುನಾಡಿನ ಕಾಶ್ಮೀರ, ದಿನಸಿ ಅಂಗಡಿ, ಗೊಂಬೆ, ಹಂಪಿ, ತಾಯಿ, ಜನಪದದಲ್ಲಿ ಕೇಸರೀಕರಣವು ಕಾಣಿಸಿದರೆ, ಕೂಡಲೇ ನಿಮ್ಮ ಕನ್ನಡಕವನ್ನು ಬದಲಿಸಿಕೊಂಡು ಸಮಾಜವನ್ನು ನೋಡಲು ಆರಂಭಿಸಿ.


ಜನಪದ ಸೊಬಗು

ಪ್ರವೇಶ: ಜಾನಪದ ಕಲೆಗಳು ನಮ್ಮ ಸಂಸ್ಕೃತಿಯ ತಾಯಿ ಬೇರುಗಳು. ಗ್ರಾಮೀಣ ಜನರ ಜೀವನ ವಿಧಾನ ಮತ್ತು ಆಚರಣೆಗಳನ್ನು ಪ್ರತಿಬಿಂಬಿಸುವ ಕನ್ನಡಿಯಾಗಿವೆ. ಕರ್ನಾಟಕದಲ್ಲಿ ವಿವಿಧ ಪ್ರಕಾರದ ಜಾನಪದ ಕಲೆಗಳು ಮತ್ತು ಜಾನಪದ ಕ್ರೀಡಾ ಪ್ರಕಾರಗಳಿವೆ. ಅವುಗಳಲ್ಲಿ ಇಂದು ನಾವು ಅತಿ ಮುಖ್ಯವಾಗಿ ಕರಾವಳಿಯ ಜನಪ್ರಿಯ ಕ್ರೀಡೆಯಾದ ಕಂಬಳ ಮತ್ತು ಯಕ್ಷಗಾನದ ಬಗ್ಗೆ ತಿಳಿಯೋಣ!!!

ಬಿಜೆಪಿ ಮಂಗಳೂರು ವಿಭಾಗ ಸಹ ಪ್ರಭಾರಿ ಜಯಂತ್ ಕೋಟ್ಯಾನ್

ಎಸ್‌ಐಆರ್ ಅಭಿಯಾನ ಯಶಸ್ವಿಗೊಳಿಸಲು ಸನ್ನದ್ಧರಾಗಿ

ಉಡುಪಿ: ಇಪ್ಪತ್ತೈದು ವರ್ಷಗಳಿಗೊಮ್ಮೆ ನಡೆಯುವ ಮತದಾರ ಪಟ್ಟಿಯ ವಿಶೇಷ ಪರಿಷ್ಕರಣೆ ಈ ಬಾರಿ ಜೂ.30ರಿಂದ ನಡೆಯಲಿದೆ. ಬಿಎಲ್‌ಒಗಳು 2025ರ ಮತದಾರ ಪಟ್ಟಿಯಲ್ಲಿರುವ ಎಲ್ಲ ಮತದಾರರಿಗೆ ನೀಡುವ ನಿಗದಿತ ಮುದ್ರಿತ ನಮೂನೆಯನ್ನು ಅರ್ಹ ಮತದಾರರು ಪರಿಶೀಲಿಸಿ, ಸಹಿ ಮಾಡಿ, ಇತ್ತೀಚೆಗಿನ ಭಾವಚಿತ್ರ ಸಹಿತ ಅಗತ್ಯವಿರುವ ಸೂಕ್ತ ದಾಖಲೆಯೊಂದಿಗೆ ಕಡ್ಡಾಯವಾಗಿ ಬಿಎಲ್ ಒಗಳಿಗೆ ಸಲ್ಲಿಸಬೇಕಾಗಿದೆ. ಈ ಪ್ರಕ್ರಿಯೆಯಲ್ಲಿ ಪಕ್ಷದಿಂದ ನೇಮಕಗೊಂಡಿರುವ ಬಿಎಲ್‌ಎ2ಗಳು ಸಕ್ರಿಯವಾಗಿ ಪಾಲ್ಗೊಂಡು ಎಸ್.ಐ.ಆರ್. ಅಭಿಯಾನವನ್ನು ಯಶಸ್ವಿಗೊಳಿಸಬೇಕು ಎಂದು ಬಿಜೆಪಿ ಮಂಗಳೂರು ವಿಭಾಗ ಸಹ ಪ್ರಭಾರಿ ಜಯಂತ್ ಕೋಟ್ಯಾನ್ ತಿಳಿಸಿದರು.

ಅವರು ಬಿಜೆಪಿ ಉಡುಪಿ ಜಿಲ್ಲಾ ಉಪಾಧ್ಯಕ್ಷ ಕಿರಣ್ ಕುಮಾರ್ ಬೈಲೂರು ಅವರ ಅಧ್ಯಕ್ಷತೆಯಲ್ಲಿ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ನಡೆದ ಜಿಲ್ಲಾ ಕಾರ್ಯ ತಂಡದ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನಾಯಕ್ ಜಿಲ್ಲೆಯ ಎಲ್ಲಾ ಮಂಡಲಗಳಲ್ಲಿ ಶಕ್ತಿ ಕೇಂದ್ರಗಳ ಸಭೆ ಆಯೋಜನೆ, ಮಹಾಶಕ್ತಿ ಕೇಂದ್ರಗಳ ಪುನರ್ ರಚನೆ ಹಾಗೂ ಪಕ್ಷದ ಸಂಘಟನಾತ್ಮಕ ವಿಚಾರಗಳ ಕುರಿತು ವಿಸ್ತೃತ ಮಾಹಿತಿ ನೀಡಿದರು.



ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನಕರ ಶೆಟ್ಟಿ ಹೆರ್ಗ ಮಾತನಾಡಿ, 'ಮನ್ ಕೀ ಬಾತ್' ವೀಕ್ಷಣೆಯಲ್ಲಿ ಉಡುಪಿ ಜಿಲ್ಲೆ ಬಿಜೆಪಿ ಜಿಲ್ಲಾಧ್ಯಕ್ಷರ ನೇತೃತ್ವದಲ್ಲಿ ಸತತವಾಗಿ 100% ಸಾಧನೆಯನ್ನು ದಾಖಲಿಸಿ ರಾಜ್ಯದಲ್ಲಿ ಮುಂಚೂಣಿ ಸ್ಥಾನವನ್ನು ಪಡೆದಿದ್ದು, ಜೂ.28ರ ಸಹಿತ ಮುಂದಿನ ಎಲ್ಲಾ ತಿಂಗಳ ಚಮನ್ ಕೀ ಬಾತ್‌ಚ ವೀಕ್ಷಣೆ ಮತ್ತು ವರದಿ, ಫೋಟೋ ಅಪ್ಲೋಡ್ ಪ್ರಕ್ರಿಯೆಯಲ್ಲಿ ಜಿಲ್ಲೆಯ ಎಲ್ಲಾ ಮಂಡಲಗಳು ನಿರಂತರ 100% ಸಾಧನೆ ಕಾಯ್ದುಕೊಳ್ಳುವ ಜೊತೆಗೆ ಎಲ್ಲಾ ಬೂತ್ ಗಳು 'ಮನ್ ಕೀ ಬಾತ್' ವೀಕ್ಷಣೆಯೊಂದಿಗೆ ಬೂತ್ ಸಭೆಯನ್ನು ಆಯೋಜಿಸುವಂತೆ ಕರೆ ನೀಡಿದರು.

ಮಂಡಲಾಧ್ಯಕ್ಷರು ಮಂಡಲವಾರು ಚಟುವಟಿಕೆಗಳ ವರದಿ ಮಂಡಿಸಿದರು.

ಇತ್ತೀಚೆಗೆ ನಡೆದ ಜಿಲ್ಲಾ ಮಟ್ಟದ ಪಂಡಿತ್ ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ವರ್ಗದ ಅವಲೋಕನ ನಡೆಯಿತು. ಪ್ರಶಿಕ್ಷಣಾರ್ಥಿಗಳು ವರ್ಗದ ಮಾದರಿ ಆಯೋಜನೆ ಕುರಿತು ಅನಿಸಿಕೆ ಹಂಚಿಕೊಂಡರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಲಾಲಾಜಿ ಆರ್. ಮೆಂಡನ್, ಮಾಜಿ ಜಿಲ್ಲಾಧ್ಯಕ್ಷ ತಿಂಗಳೆ ವಿಕ್ರಮರ್ಜುನ ಹೆಗ್ಡೆ ಸಹಿತ ಪಕ್ಷದ ಪ್ರಮುಖರು, ಬಿಜೆಪಿ ಜಿಲ್ಲಾ ಪದಾಧಿಕಾರಿಗಳು, ಜಿಲ್ಲಾ ಮೋರ್ಚಾ ಹಾಗೂ ಮಂಡಲಗಳ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳು, ಜಿಲ್ಲಾ ಪ್ರಕೋ?ಗಳ ಸಂಯೋಜಕರು, ಜಿಲ್ಲಾ ವಿವಿಧ ಪ್ರಕೋಷ್ಠಗಳ ಸಂಚಾಲಕರು, ಸಹ ಸಂಚಾಲಕರು ಉಪಸ್ಥಿತರಿದ್ದರು.

ಜಿಲ್ಲಾ ಕಾರ್ಯದರ್ಶಿ ಪ್ರಿಯದರ್ಶಿನಿ ದೇವಾಡಿಗ ಗೀತೆ ಹಾಡಿದರು. ಜಿಲ್ಲಾ ಉಪಾಧ್ಯಕ್ಷೆ ನಳಿನಿ ಪ್ರದೀಪ್ ರಾವ್ ಸ್ವಾಗತಿಸಿ, ಜಿಲ್ಲಾ ಕಾರ್ಯದರ್ಶಿ ಅನಿತಾ ಶ್ರೀಧರ್ ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ಪ್ರಕೋಷ್ಠಗಳ ಸಂಯೋಜಕ ವಿಜಯ ಕೊಡವೂರು ವಂದಿಸಿದರು.

> **ಸಂಘಟನೆಗೆ ಒತ್ತು**
> ಅರ್ಹ ಮತದಾರರ ಹೆಸರು ಮತದಾರ ಪಟ್ಟಿಯಲ್ಲಿ ಬಿಟ್ಟು ಹೋಗದಂತೆ ಹಾಗೂ ಅನರ್ಹರ ಹೆಸರು ಸೇರ್ಪಡೆಗೊಳ್ಳದಂತೆ ಜಿಲ್ಲೆಯಾದ್ಯಂತ ಪಕ್ಷದ ಕಾರ್ಯಕರ್ತರು ಬೂತ್ ಮಟ್ಟದಲ್ಲಿ ನಿಗಾ ವಹಿಸುವ ಜೊತೆಗೆ ಕೇಂದ್ರ ಸರಕಾರದ ಜನಪರ ಯೋಜನೆಗಳನ್ನು ಮನೆ ಮನೆಗೆ ತಲುಪಿಸಿ ಸದೃಢ ಪಕ್ಷ ಸಂಘಟನೆಗೆ ಒತ್ತು ನೀಡಬೇಕು
> ■ ಜಯಂತ್ ಕೋಟ್ಯಾನ್

ಆಗುಂಬೆ ಘಾಟಿ : ಭಾರಿ ವಾಹನಗಳ ಸಂಚಾರ ನಿಷೇಧ

ಉಡುಪಿ: ರಾಷ್ಟ್ರೀಯ ಹೆದ್ದಾರಿ 169ಎ ರ ತೀರ್ಥಹಳ್ಳಿ – ಮಲ್ಪೆ ರಸ್ತೆಯ ಆಗುಂಬೆ ಘಾಟಿಯಲ್ಲಿ ಭಾರಿ ಮಳೆಯಿಂದಾಗಿ ಮತ್ತು ಭಾರಿ ವಾಹನಗಳ ಸಂಚಾರದಿಂದ ಅಲ್ಲಲ್ಲಿ ರಸ್ತೆ ಬದಿಯಲ್ಲಿ ಭೂಕುಸಿತ ಆಗುವ ಸಂಭವವಿರುವ ಹಿನ್ನೆಲೆ, ಸಾರ್ವಜನಿಕ ಹಿತದೃಷ್ಟಿಯಿಂದ ರಾಷ್ಟ್ರೀಯ ಹೆದ್ದಾರಿ 169 ಎ ಆಗುಂಬೆ ಘಾಟಿಯ ಮೂಲಕ ಸೆಪ್ಟೆಂಬರ್ 30 ರವರೆಗೆ ಲಘು ವಾಹನ ಸಂಚಾರಕ್ಕೆ ಮಾತ್ರ ಅನುವು ಮಾಡಿ, ಭಾರಿ ವಾಹನಗಳ ಸಂಚಾರವನ್ನು ನಿರ್ಬಂಧಿಸಿ ಉಡುಪಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಆದೇಶಿಸಿದ್ದಾರೆ.

ತೀರ್ಥಹಳ್ಳಿಯಿಂದ ಉಡುಪಿ ಕಡೆಗೆ ಸಂಚರಿಸುವ ಭಾರಿ ವಾಹನಗಳು ತೀರ್ಥಹಳ್ಳಿ–ನಗರ–ಕುಂದಾಪುರ ಹಾಗೂ ಉಡುಪಿ ಮಾರ್ಗವಾಗಿ ಮತ್ತು ಚಿಕ್ಕಮಗಳೂರಿನಿಂದ ಉಡುಪಿ ಕಡೆಗೆ ಬರುವ ಭಾರಿ ವಾಹನಗಳು ಬಾಳೆಹೊನ್ನೂರು–ಮಾಗುಂಡಿ–ಕಳಸ– ಕುದುರೆಮುಖ–ಎಸ್.ಕೆ. ಬಾರ್ಡರ್ ಮಾರ್ಗವಾಗಿ ಸಂಚರಿಸಬೇಕು. ನರಸಿಂಹರಾಜಪುರದಿಂದ ಉಡುಪಿ ಕಡೆಗೆ ಬರುವ ವಾಹನಗಳು ಕೊಪ್ಪ– ಜಯಪುರ– ಬಾಳೆಹೊಳೆ– ಕಳಸ–ಕುದುರೆಮುಖ–ಎಸ್.ಕೆ ಬಾರ್ಡರ್ ಮಾರ್ಗವಾಗಿ ಸಂಚರಿಸುವಂತೆ ಉಡುಪಿ ಜಿಲ್ಲಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಟ್ರೆಕ್ಕಿಂಗ್ ಗೈಡ್ ನೋಂದಣಿಗೆ ಆಹ್ವಾನ

ಸುಬ್ರಹ್ಮಣ್ಯ: ಸೋಮವಾರಪೇಟೆ ತಾಲೂಕು ಕುಮಾರಳ್ಳಿ ಗ್ರಾಮದಲ್ಲಿರುವ ಪುಷ್ಪಗಿರಿ ವನ್ಯಜೀವಿ ವಲಯ ವ್ಯಾಪ್ತಿಗೆ ಒಳಪಡುವ ಕುಮಾರಪರ್ವತ ಚಾರಣಕ್ಕೆ ಆಗಮಿಸುವ ಪ್ರವಾಸಿಗರಿಗೆ ಸೂಕ್ತ ಮಾರ್ಗದರ್ಶನ ನೀಡಲು ಟ್ರೆಕ್ಕಿಂಗ್ ಗೈಡ್‌ಗಳನ್ನು ನೇಮಿಸಲು ಅರಣ್ಯ ಇಲಾಖೆ ಯೋಜನೆ ರೂಪಿಸಿದೆ. ಕುಮಾರಪರ್ವತ ಚಾರಣಿಗರಿಗೆ ಸುರಕ್ಷಿತ, ಶಿಸ್ತುಬದ್ಧ ಹಾಗೂ ಗುಣಮಟ್ಟದ ಟ್ರೆಕ್ಕಿಂಗ್ ಅನುಭವ ಒದಗಿಸುವ ಉದ್ದೇಶದಿಂದ ಟ್ರೆಕ್ಕಿಂಗ್ ಗೈಡ್‌ಗಳ ಅವಶ್ಯಕತೆ ಮನಗಂಡು ಟ್ರೆಕ್ಕಿಂಗ್ ಗೈಡ್‌ಗಳಾಗಿ ಕರ್ತವ್ಯ ನಿರ್ವಹಿಸಲು ಆಸಕ್ತಿಯುಳ್ಳ ಅಭ್ಯರ್ಥಿಗಳಿಗೆ ನೊಂದಣಿ ಮಾಡಿಕೊಳ್ಳಲು ಈ ಮೂಲಕ ಇಲಾಖೆ ಆಹ್ವಾನ ನೀಡಿದೆ.

Closing balance		0.00	0.00	0.00	0.00	0.00
Floating Provisions						
Opening Balance						
Add: Additional provisions made during the year						
Less: Amount drawn down19 during the year						
Closing balance						
Technical write-offs and the recoveries made thereon						
Opening balance of Technical / Prudential written-off accounts						
Add: Technical / Prudential write-offs during the year						
Less: Recoveries made from previously technical / prudential written-off accounts during the year						
Closing balance						

Ratios[16] (in per cent)	Current Year	Previous Year
Gross NPA to Gross Advances	0.90%	4.91%
Net NPA to Net Advances	0.00%	0.97%
Provision coverage ratio	381.94%	81.15%

b) Sector-wise Advances and Gross NPAs (Amount in ₹ crores)

SL No	Sector*	Current Year: Outstanding Total Advances	Current Year: Gross NPAs	Current Year: Percentage of Gross NPAs to Total Advances in that sector	Previous Year: Outstanding Total Advances	Previous Year: Gross NPAs	Previous Year: Percentage of Gross NPAs to Total Advances in that sector
i)	**Priority Sector**						
a)	Agriculture and allied activities	3.98	0.00		2.70	0.00	
b)	Advances to industries sector eligible as priority sector lending						
c)	Services	45.07	0.35	0.78%	39.21	1.96	4.99%
d)	Personal loans						
	Subtotal (i)	49.05	0.35	0.78%	41.91	1.96	4.68%
ii)	Non-priority Sector						
a)	Agriculture and allied activities						
b)	Industry						
c)	Services	12.00	0.20	1.67%	5.70	0.56	9.82%
d)	Personal loans						
	Sub-total (ii)	12.00	0.20	1.67%	5.70	0.56	9.82%
	Total (I + ii)	61.05	0.55	0.90%	51.39	2.52	4.91%

e) Factoring exposures: NIL f) Unhedged foreign currency exposure: NIL

g) Loans against gold and silver collateral : Details of loans extended against eligible gold and silver collateral

Particulars	Loan outstanding: crore	Loan outstanding: As % of Total Loans	Average ticket size (₹ crore)	Average LTV ratio	Gross NPA (%)
1. Opening balance of the FY [(a)+(b)]	26.65	51.85%	0.055	63.81%	
(a) Consumption loans	26.26	51.10%	0.054	63.81%	
of which bullet repayment loans	26.26	51.10%	0.054	63.81%	
(b) Income generating loans	0.39	0.76%	0.780	63.81%	
2. New loans sanctioned and disbursed during the FY [(c)+(d)]	56.53		0.075		NA
(c) Consumption loans	55.53		0.074		NA
of which bullet repayment loans	55.53		0.074		NA
(d) Income generating loans	1.00		0.527		NA
3. Renewals sanctioned and disbursed during the FY					NA
4. Top-up loans sanctioned and disbursed during the FY					NA
5. Loans repaid during the FY [(e)+(f)]	47.40		0.059	NA	NA
(e) Consumption loans	46.62		0.058	NA	NA
of which bullet repayment loans	46.62		0.058	NA	NA
(f) Income generating loans	0.78		0.487	NA	NA
6. Non-Performing Loans recovered during the FY [(g) + (h)]	-	-	-	NA	NA
(g) Consumption loans	-	-	-	NA	NA
of which bullet repayment loans	-	-	-	NA	NA
(h) Income generating loans	-	-	-	NA	NA
7. Loans written off during the FY [(i) + (j)]	-	-	-	NA	NA
(i) Consumption loans	-	-	-	NA	NA
of which bullet repayment loans	-	-	-	NA	NA
(j) Income generating loans	-	-	-	NA	NA
8. Closing balance at the end of FY [(k) + (l)]	35.78	58.61%	0.081	55.33%	-
(k) Consumption loans	35.17	58.61%	0.080	55.33%	-
of which bullet repayment loans	35.17	58.61%	0.080	55.33%	-
(l) Income generating loans	0.61	0.99%	0.550	55.33%	-

k) Transfers to Depositor Education and Awareness Fund (DEA Fund)) (Amount in ₹ Crores)

Sr. No.	Particulars	Current Year 2025-26	Previous Year 2024-25
i)	Opening balance of amounts transferred to DEA Fund	0.07	0.02
ii)	Add: Amounts transferred to DEA Fund during the year	-	0.05
iii)	Less: Amounts reimbursed by DEA Fund towards claims	-	
iv)	Closing balance of amounts transferred to DEA Fund	0.07	0.07

7. Disclosure of complaints

a. Summary information on complaints received by the bank from customers and from the Offices of Banking Ombudsman (OBOs) Current Year- Nil Previous Year- Nil

b) Top five grounds of complaints received by the bank from customers- Not Applicable

m) Penalty imposed by RBI for any violation: No

Other Disclosures n) Business Ratios

	Particulars	2025-26	2024-25
i)	Interest Income as a percentage to Working Funds[28]	8.94%	8.66%
ii)	Non-interest income as a percentage to Working Funds[28]	0.58%	0.68%
iii)	Cost of Deposits	6.25%	6.02%
iv)	Net Interest Margin[29]	3.73%	3.49%
v)	Operating Profit as a percentage to Working Funds[28]	1.99%	1.09%
vi)	Return on Assets[30]	1.78%	1.05%
vii)	Business (deposits plus advances) per employee[31] (in ₹ crore)	1.49	1.20%
viii)	Profit per employee (in ₹ crore)	0.13	0.10

5. Exposures a) Exposure to real estate sector (Amount in ₹ crores)

i)Direct exposure	Current year	Previous Year
a) Residential Mortgages– Lending fully secured by mortgages on residential property that is or will be occupied by the borrower or that is rented. Individual housing loans eligible for inclusion in priority sector advances shall be shown separately. Exposure would also include non-fund based (NFB) limits.	20.57	40.44
b) Commercial Real Estate– Lending secured by mortgages on commercial real estate (office buildings, retail space, multipurpose commercial premises, multifamily residential buildings, multi tenanted commercial premises, industrial or warehouse space, hotels, land acquisition, development and construction, etc.). Exposure would also include non-fund based (NFB) limits;	0.84	0.78
c) Investments in Mortgage-Backed Securities (MBS) and other securitized exposures– i. Residential ii. Commercial Real Estate		-
Category	**Current year**	**Previous Year**
ii)Indirect Exposure Fund based and non-fund-based exposures on National Housing Bank and Housing Finance Companies.		
Total Exposure to Real Estate Sector	21.41	41.22

b) Unsecured Advances (Amount in ₹ Crores)

Particulars	Current Year	Previous Year
Total unsecured advances of the bank (IL, Apex Gold, Professional, Rent, PMSVA)	1.69	0.04
Out of the above, number of advances for which intangible securities such as charge over the rights, licenses, authority, etc. have been taken	-	-
Estimated value of such intangible securities	-	-

h. Concentration of deposits, advances and NPAs

a) Concentration of deposits (Amount in ₹ Crores)

Particulars	Current Year	Previous Year
Total deposits of the twenty largest depositors	19.04	12.64
Percentage of deposits of twenty largest depositors to total deposits of the bank	21.56%	16.88%

b) Concentration of advances*

Particulars	Current Year	Previous Year
Total advances to the twenty largest borrowers	7.23	7.15
Percentage of advances to twenty largest borrowers to total advances of the bank	11.84%	13.91%

c) Concentration of NPAs

Particulars	Current Year	Previous Year
Total Exposure to the top twenty NPA accounts	0.44	1.56
Percentage of exposures to the twenty largest NPA exposure to total Gross NPAs.	80.17%	61.90%

o) Bancassurance business : The details of fees / brokerage earned in respect of insurance broking, agency and bancassurance business undertaken by them shall be disclosed for both the current year and previous year.

p) Disclosures regarding Priority Sector Lending Certificates (PSLCs) : The amount of PSLCs (category-wise) sold and purchased during the year shall be disclosed

d) Provisions and Contingencies

Provision debited to Profit and Loss Account	Current Year	Previous Year
i. Provisions for NPI		
ii. Provision towards NPA	0.00	0.00
iii.Provision made towards Income tax	0.71	0.49
iv. Other Provisions and Contingencies (with details)		
1. Staff Gratuity	0.00	0.00
2. Auditors Fee	0.03	0.03
3. Contengent Liabilities-DAEF	0.07	0.07

e) Payment of DICGC Insurance Premium (Amount in ₹ Crores)

Sr. No.	Particulars	Current Year	Previous Year
i)	Payment of DICGC Insurance Premium	0.10	0.11
ii)	Arrears in payment of DICGC premium	-	-

s) Disclosure of facilities granted to directors and their relatives : UCBs shall disclose any fund or non-fund (guarantees, letters of credit, etc.) facilities extended to directors, their relatives, companies or firms in which they are interested.

ಕಿರುಸುದ್ದಿ

ರೋಟರಿ ಮಿಸ್ಟಿ ಹಿಲ್ ಸಂಸ್ಥೆಗೆ ಡೈಮಂಡ್ ಪ್ಲಸ್ ಪ್ರಶಸ್ತಿ

ಮಡಿಕೇರಿ: ಅತ್ಯುತ್ತಮ ಸಾಮಾಜಿಕ ಸೇವಾ ಕಾರ್ಯಗಳಿಗಾಗಿ ರೋಟರಿ ಮಿಸ್ಟಿ ಹಿಲ್ಸ್ ಸಂಸ್ಥೆಯುವ ರೋಟರಿ ಜಿಲ್ಲಾ ಮಟ್ಟದ ಡೈಮಂಡ್ ಪ್ಲಸ್ ಪ್ರಶಸ್ತಿಯನ್ನು ಪಡೆದುಕೊಂಡಿದೆ. ಮೈಸೂರಿನ ಮೈಸೂರು ಯೂನಿಯನ್ ಸಭಾಂಗಣದಲ್ಲಿ ರೋಟರಿ ಜಿಲ್ಲೆ 3181 ನ ವಾರ್ಷಿಕ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ರೋಟರಿಯ ವಿವಿಧ ಜಿಲ್ಲಾ ಯೋಜನೆಗಳ ಅತ್ಯುತ್ತಮ ಕಾರ್ಯನಿರ್ವಹಣೆಗಾಗಿ ಮಡಿಕೇರಿಯ ಮಿಸ್ಟಿ ಹಿಲ್ಸ್ ಸಂಸ್ಥೆಗೆ ಡೈಮಂಡ್ ಪ್ಲಸ್ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು. ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ರತ್ನಾಕರ್ ರೈ, ಕಾರ್ಯದರ್ಶಿ ಬಿ.ಕೆ. ಕಾರ್ಯಪ್ಪ ಪ್ರಶಸ್ತಿಯನ್ನು ರೋಟರಿ ಜಿಲ್ಲಾ ರಾಜ್ಯಪಾಲ ಪಿ.ಕೆ. ರಾಮಕೃಷ್ಣ ಅವರಿಂದ ಪಡೆದುಕೊಂಡರು. ರೋಟರಿಯ ಮುಂದಿನ ಸಾಲಿನ ಗವರ್ನರ್ ಸತೀಶ್ ಬೋಳಾರ್, ನಿಯೋಜಿತ ಗವರ್ನರ್ ಯಶಸ್ವಿನಿ ಸೋಮಶೇಖರ್, ಪ್ರಶಸ್ತಿ ಸಮಿತಿ ಪ್ರಮುಖರಾದ ವಿಕ್ರಂದತ್ತ, ಅರವಿಂದ್ ಭಟ್, ರಿತೇಶ್ ಭಾಳಿಗ, ಉಮೇಶ್ ಹಾಜರಿದ್ದರು. ರೋಟರಿ ಮಿಸ್ಟಿ ಹಿಲ್ಸ್ ನ ನಿರ್ದೇಶಕರು ಪ್ರಶಸ್ತಿ ಸ್ವೀಕಾರ ಸಂದರ್ಭ ಇದ್ದರು.

ಉಡುಪಿ ಬಸ್ ನಿಲ್ದಾಣದಲ್ಲಿ ಅಸ್ವಸ್ಥಗೊಂಡಿದ್ದ ವ್ಯಕ್ತಿ ಆಸ್ಪತ್ರೆಯಲ್ಲಿ ಸಾವು

ಉಡುಪಿ: ನಗರದ ಸರ್ವಿಸ್ ಬಸ್ ನಿಲ್ದಾಣದಲ್ಲಿ ತೀವ್ರವಾಗಿ ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಬ್ಯಾಪ್ಟಿಸ್ ಮಾರ್ಟಿಸ್ (60) ಎಂಬವರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಜೂನ್ 23ರಂದು ಸಂಜೆ 6.50ರ ಸುಮಾರಿಗೆ ಸರ್ವಿಸ್ ಬಸ್ ನಿಲ್ದಾಣದಲ್ಲಿ ಬ್ಯಾಪ್ಟಿಸ್ ಮಾರ್ಟಿಸ್ ಅವರು ಅಸ್ವಸ್ಥಗೊಂಡು ಬಿದ್ದಿರುವುದನ್ನು ಗಮನಿಸಿದ ಸಾಮಾಜಿಕ ಕಾರ್ಯಕರ್ತ ನಿತ್ಯಾನಂದ ಒಳಕಾಡು ಅವರು ತಕ್ಷಣ ಅವರನ್ನು ಉಡುಪಿ ಅಜ್ಜರಕಾಡು ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ, ಅಂದೇ ರಾತ್ರಿ 10 ಗಂಟೆಗೆ ಅವರು ಚಿಕಿತ್ಸೆಗೆ ಸ್ಪಂದಿಸದೆ ಕೊನೆಯುಸಿರೆಳೆದಿದ್ದಾರೆ. ಮೃತರ ಪತ್ನಿ ಫ್ರಾನ್ಸಿಸ್ ಕುಮಾರಿ ಮಾರ್ಟಿಸ್ ನೀಡಿದ ದೂರಿನಂತೆ ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ ಸುದ್ದಿ

ವಿಶ್ವನಾಥ ಶೆಟ್ಟಿ



ಉಪ್ಪಳ: ಮಂಗಲ್ಪಾಡಿ ಪ್ರತಾಪನಗರ ನಿವಾಸಿ, ಹೊಟೇಲ್ ಮಾಲಕ ವಿಶ್ವನಾಥ ಶೆಟ್ಟಿ (61) ಹೃದಯಾಘಾತದಿಂದ ನಿಧನ ಹೊಂದಿದರು. ಮಂಗಳೂರಿನ ಕಂಕನಾಡಿಯ ಗರಡಿ ಎಂಬಲ್ಲಿ ಕಾರ್ಯಾಚರಿಸುತ್ತಿರುವ ಐಸಿರಿ ಹೊಟೇಲ್‌ನ ಮಾಲಕರಾಗಿದ್ದಾರೆ. ಅವರು ಬುಧವಾರ ರಾತ್ರಿ 8 ಗಂಟೆಯ ವೇಳೆ ಹೊಟೇಲ್‌ನಲ್ಲಿ ಕುಸಿದು ಬಿದಿದ್ದು, ಕೂಡಲೇ ಸ್ಥಳೀಯ ಆಸ್ಪತ್ರೆಗೆ ಸಾಗಿಸುವ ಮಧ್ಯೆ ನಿಧನರಾಗಿದ್ದಾರೆ. ಅವರು ಪ್ರತಾಪನಗರ ಶಿವ ಶಕ್ತಿ ಫ್ರೆಂಡ್ಸ್ ಕ್ಲಬ್‌ನ ಹಿರಿಯ ಸದಸ್ಯರಾಗಿದ್ದರು. ಮೃತರು ಪತ್ನಿ ನಳಿನಿ, ಮಕ್ಕಳಾದ ನವೀನ್ ಶೆಟ್ಟಿ, ನಯನ ಅವರನ್ನು ಅಗಲಿದ್ದಾರೆ.

ಗಣೇಶ್ ಕಾಶಿಕಟ್ಟೆ



ಸುಬ್ರಹ್ಮಣ್ಯ: ಕಡಬ ತಾಲೂಕು ಸುಬ್ರಹ್ಮಣ್ಯ ಗ್ರಾಮದ ಸುಬ್ರಹ್ಮಣ್ಯ ನಿವಾಸಿ ಗಣೇಶ್ ಕಾಶಿಕಟ್ಟೆ ಅವರು ಅಲ್ಪ ಕಾಲದ ಅಸೌಖ್ಯದಿಂದ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಗುರುವಾರ ನಿಧನರಾದರು. ಇವರು ಪತ್ನಿ, ಈರ್ವರು ಪುತ್ರಿಯರು ಹಾಗೂ ಪುತ್ರನನ್ನು ಅಗಲಿದ್ದಾರೆ.

ತಿಮ್ಮಪ್ಪ ರೈ



ಮಂಜೇಶ್ವರ: ವಿಜಯಾ ಬ್ಯಾಂಕ್‌ನ ನಿವೃತ್ತ ಮೆನೇಜರ್, ಸೇನ್ಯ ಕಲ್ಲಾಡಿಗುತ್ತು ಎನ್.ತಿಮ್ಮಪ್ಪ ರೈ ನಾಣಿಲ್ತಡಿ (69) ಬುಧವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಆನೆಕಲ್ಲು ಛತ್ರ ಶ್ರೀ ಸಂತಾನ ಗೋಪಾಲಕೃಷ್ಣ ದೇವಸ್ಥಾನದ ಸೇವಾ ಸಮಿತಿ ಅಧ್ಯಕ್ಷರಾಗಿ, ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿಯಾಗಿ ಅವರು ಸೇವೆ ಸಲ್ಲಿಸಿದ್ದರು. ಮಂಜೇಶ್ವರ, ಕುಂಬಳೆ, ಉಪ್ಪಿನಂಗಡಿ ಸಹಿತ ವಿವಿಧ ವಿಜಯಾ ಬ್ಯಾಂಕ್ ಶಾಖೆಗಳಲ್ಲಿ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ ಕಲ್ಪನಾ, ಪುತ್ರಿ ಶರಣ್ಯ ಹಾಗೂ ಬಂಧುಮಿತ್ರರನ್ನು ಅಗಲಿದ್ದಾರೆ.

ಸುರೇಂದ್ರ

ಮುಳ್ಳೇರಿಯ: ಆದೂರು ಮಂಟಮೆ ನಿವಾಸಿ, ಹಿರಿಯ ಮೇಸ್ತ್ರಿ ಸುರೇಂದ್ರ (68) ನಿಧನ ಹೊಂದಿದರು. ಮೃತರು ಪತ್ನಿ ಶ್ಯಾಮಲಾ, ಮಕ್ಕಳಾದ ಸೌಮ್ಯಾ, ಸೌಜ, ಸುಜಿತ್ ಅವರನ್ನು ಅಗಲಿದ್ದಾರೆ.



ಘನಪಾಠಿ ವಿದ್ವಾನ್ ಬಿ.ಕೆ. ಲಕ್ಷ್ಮೀನಾರಾಯಣ ಭಟ್ ಶಿಷ್ಯರು ಮತ್ತು ವೇದಾಭಿಮಾನಿಗಳ ಪರಿಷತ್ ವತಿಯಿಂದ ಕೊಡಮಾಡುವ ವೇದಾರ್ಪಿತ ಜೀವನ ವಾರ್ಷಿಕ ವೈದಿಕ ಪುರಸ್ಕಾರ ಕಾರ್ಯಕ್ರಮ ಶೃಂಗೇರಿಯಲ್ಲಿ ನಡೆಯಿತು. ಜ್ಯೋತಿ ಶಾಸ್ತ್ರದಲ್ಲಿ ವಿಶೇಷ ರೀತಿಯಲ್ಲಿ ಸಾಧನೆ ಮಾಡಿರುವ ವಿದ್ವಾನ್ ವೇದ ಬ್ರಹ್ಮ ವೆಂಕಟರಮಣ ನಾವುಡ ಗುಂಡ್ಮಿ ಹಾಗೂ ವಿದ್ವಾನ್ ವೇದ ಬ್ರಹ್ಮ ಅಂಶುಮಾನ ಅಭ್ಯಂಕರ ದರ್ಬೆತಡ್ಕ ಅವರಿಗೆ ತಲಾ 1.25 ಲಕ್ಷ ರೂ. ನಗದು ನೀಡಿ ಗೌರವಿಸಲಾಯಿತು. ಘನಪಾಠಿ ಗಣಪತಿ ಭಟ್, ಮುರಳೀಧರ ಐತಾಳ್ ಮೊದಲಾದವರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಉಚಿತ ಯುಪಿಎಸ್‌ಸಿ ತರಬೇತಿ,ವಿದ್ಯಾರ್ಥಿವೇತನ ಅವಕಾಶ

ಮಂಗಳೂರು: ನಿರ್ಮಲ ಭಾರತ ಚಾರಿಟಬಲ್ ಟ್ರಸ್ಟ್ , ಮಂಗಳೂರು ಇವರು ಬೆಂಗಳೂರು ಮೂಲದ ಆರೋಹಿ ಫೌಂಡೇಶನ್ ಸಹಯೋಗದೊಂದಿಗೆ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ವಿದ್ಯಾರ್ಥಿಗಳಿಗಾಗಿ ಉಚಿತ ಯುಪಿಎಸ್‌ಸಿ ತರಬೇತಿ, ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮ ಹಾಗೂ ವಿದ್ಯಾರ್ಥಿವೇತನ ಅವಕಾಶಗಳ ಕುರಿತು ಮಾಹಿತಿ ನೀಡಲು ಮುಂದಾಗಿದೆ. ಆರೋಹಿ ಫೌಂಡೇಶನ್ ಸಂಸ್ಥೆಯ ವತಿಯಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ವಿಶೇಷ ತರಬೇತಿ ಹಮ್ಮಿ ಕೊಳ್ಳಲಾಗಿದೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಶೇ.100 ವಿದ್ಯಾರ್ಥಿವೇತನ, ವಸತಿ ಸೌಲಭ್ಯ, ವ್ಯಕ್ತಿತ್ವ ವಿಕಸನ, ನಾಯಕತ್ವ ತರಬೇತಿ ಹಾಗೂ ಯುಪಿಎಸ್‌ಸಿ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಸಮಗ್ರ ಮಾರ್ಗದರ್ಶನವನ್ನು ಒದಗಿಸಲಾಗುವುದು.

ಈ ಪೈಕಿ ,ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗಾಗಿ ನಾಲ್ಕು ವರ್ಷದ ಸಮಗ್ರ ಪದವಿ ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ನೀಡಲಾಗುವುದು.ಹಾಗೆಯೇ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳು ಮತ್ತು ಪದವೀಧರರಿಗಾಗಿ ಒಂದು ವರ್ಷದ ವಸತಿ ಸಹಿತ ಯುಪಿಎಸ್‌ಸಿ ತರಬೇತಿ ನೀಡಲಾಗುವುದು. ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗಾಗಿ ವಾರಾಂತ್ಯ ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮ ನಡೆಯಲಿದೆ.

ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳು ಹಾಗೂ ಪದವೀಧರರಿಗಾಗಿ ಜುಲೈ 5ರಂದು ಪ್ರವೇಶ ಪರೀಕ್ಷೆ ನಡೆಯಲಿದೆ. ನಂತರ ಗುಂಪು ಚರ್ಚೆ ಹಾಗೂ ಯುಪಿಎಸ್‌ಸಿ ಸಂದರ್ಶನ ಮಾದರಿಯ ಸಂದರ್ಶನ ನಡೆಸಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬೆಂಗಳೂರಿನ ಆರೋಹಿ ಫೌಂಡೇಶನ್ ಸಂಸ್ಥೆಯ ವತಿಯಿಂದ ಉಚಿತ ವಸತಿ ಸಹಿತ ತರಬೇತಿ ನೀಡಲಾಗುವುದು. ಆಸಕ್ತ ವಿದ್ಯಾರ್ಥಿಗಳು ಹಾಗೂ ಪೋಷಕರು ಹೆಚ್ಚಿನ ಮಾಹಿತಿಗಾಗಿ ನಿರ್ಮಲ ಭಾರತ ಚಾರಿಟೇಬಲ್ ಟ್ರಸ್ಟ್ ಅನ್ನು ಸಂಪರ್ಕಿಸಬಹುದು. ಸಂಪರ್ಕಕ್ಕಾಗಿ ಮೊಬೈಲ್: 9741932183, ಇ-ಮೇಲ್: nirmalabharath2003@gmail.com

ದ.ಕ. ಜಿಪಂ, ಬೆಳ್ತಂಗಡಿ ತಾಪಂ, ಧರ್ಮಸ್ಥಳ ಯೋಜನೆ, ವಿವಿಧ ಸಂಘಟನೆಗಳು ಭಾಗಿ

'ನೇತ್ರಾವತಿ' ಬೃಹತ್ ಸ್ವಚ್ಛತಾ ಅಭಿಯಾನ

ಬೆಳ್ತಂಗಡಿ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಮಂಗಳೂರು, ತಾಲೂಕು ಪಂಚಾಯತ್ ಬೆಳ್ತಂಗಡಿ, ಧರ್ಮಸ್ಥಳ ಗ್ರಾಮ ಪಂಚಾಯತ್, ಸ್ವಚ್ಛ ಭಾರತ ಮಿಷನ್ (ಗ್ರಾ) ದ.ಕ., ಶ್ರೀ ಕ್ಷೇತ್ರ ಧರ್ಮಸ್ಥಳ, ರೋಟರಿ ಕ್ಲಬ್ ಬೆಳ್ತಂಗಡಿ, ಲಯನ್ಸ್ ಕ್ಲಬ್ ಬೆಳ್ತಂಗಡಿ, ಶೌರ್ಯ ವಿಪತ್ತು ನಿರ್ವಹಣಾ ಘಟಕ ಧರ್ಮಸ್ಥಳ, ಮಾನ್ವಿಶ್ರೀ ಸಂಜೀವಿನಿ ಮಹಿಳಾ ಒಕ್ಕೂಟ, ಕನ್ಯಾಕುಮಾರಿ ಯುವತಿ ಮಂಡಲ, ಶ್ರೀ ಶಕ್ತಿ ಗುಂಪುಗಳು, ಸ್ವ ಸಹಾಯ ಸಂಘಗಳು, ಇವುಗಳ ಆಶ್ರಯದಲ್ಲಿ ನೇತ್ರಾವತಿ ಸ್ನಾನಘಟ್ಟ ನದಿಕಿನಾರೆಯಲ್ಲಿ ಸ್ವಚ್ಛ ನೇತ್ರಾವತಿ ವಿಶೇಷ ಬೃಹತ್ ಸ್ವಚ್ಛತಾ ಅಭಿಯಾನವನ್ನು ಗುರುವಾರ ನಡೆಯಿತು.

ಸ್ವಚ್ಛ ನೇತ್ರಾವತಿ ಸ್ನಾನಘಟ್ಟದ ಪಾವಿತ್ರ್ಯತೆ ಸ್ವಚ್ಛತಾ ಸೂಚನಾ ಫಲಕವನ್ನು ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಆಪ್ತ ಕಾರ್ಯದರ್ಶಿ ವೀರು ಶೆಟ್ಟಿ ಅನಾವರಣಗೊಳಿಸಿ ಮಾತನಾಡಿ, ಸರಕಾರದ ಸಂಸ್ಥೆಗಳ ವತಿಯಿಂದ ನೇತ್ರಾವತಿ ನದಿ ಸ್ವಚ್ಛತೆ ಕಾರ್ಯಕ್ರಮ ಹಮ್ಮಿಕೊಂಡಿರುವುದು ತುಂಬಾ ಶ್ಲಾಘನೀಯವಾದ ವಿಚಾರ,ಸಂಘಸಂಸ್ಥೆಗಳೊಂದಿಗೆ ಸ್ವಚ್ಛತೆ ಮಾಡುವ ಮೂಲಕ ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದಂತಾಗಿದೆ, ಭಾಗವಹಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು. ಪಂಚಾಯತ್ ಅಭಿವೃದ್ಧಿ ಅಧಿಕಾರಿ ಗಾಯತ್ರಿಯವರು ಸ್ವಾಗತಿಸಿ ಮಾತನಾಡಿ ಸ್ವಚ್ಛತೆಯಲ್ಲಿ ಸರಕಾರ ಕೈಗೊಳ್ಳುತ್ತಿರುವ



ಸ್ವಚ್ಛ ನೇತ್ರಾವತಿ ವಿಶೇಷ ಬೃಹತ್ ಸ್ವಚ್ಛತಾ ಅಭಿಯಾನ

ಕಾರ್ಯಕ್ರಮಗಳು, ಮುಂಜಾಗ್ರತಾ ಕ್ರಮಗಳ ಬಗ್ಗೆ ತಿಳಿಸಿದರು. ಅನೇಕ ದೇಶ ವಿದೇಶಗಳಿಂದ ಲಕ್ಷಾಂತರ ಭಕ್ತಾದಿಗಳ ಬರುವಂತಹ ಪ್ರದೇಶವಾಗಿದ್ದು ಸದರಿ ಪ್ರದೇಶದಲ್ಲಿ ಸ್ವಚ್ಛತೆಯನ್ನು ಮಾಡುವುದು, ಹಾಗೂ ಸ್ವಚ್ಛತೆಯ ನಿರಂತರತೆಯ ಸುಸ್ಥಿರತೆಯನ್ನು ಕಾಪಾಡುವುದು ಸಾರ್ವಜನಿಕರಾದ ನಮ್ಮೆಲ್ಲರ ಜವಾಬ್ದಾರಿಯಾಗಿದೆ, ಎಲ್ಲಾ ಸಾರ್ವಜನಿಕರು ಸಹಕರಿಸುವಂತೆ ತಿಳಿಸಲಾಯಿತು. ಬೆಳ್ತಂಗಡಿ ರೋಟರಿ ಕ್ಲಬ್ ಅಧ್ಯಕ್ಷ ಶ್ರೀಧರ ಮಾತನಾಡಿ ಇಂತಹ ಕಾರ್ಯಕ್ರಮಗಳಿಂದ ಜನಜಾಗೃತಿಯನ್ನು ಮೂಡಿಸಿ, ನಿರಂತರವಾಗಿ ಸಾರ್ವಜನಿಕ ಸ್ಥಳದಲ್ಲಿ ಸ್ವಚ್ಛತೆಯನ್ನು ಕಾಪಾಡಬಹುದು ಎಂದರು.

ಬೆಳ್ತಂಗಡಿ ತಾಲೂಕು ಪಂಚಾಯತ್ ವ್ಯವಸ್ಥಾಪಕರಾದ ನಿಶಾ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ವ್ಯವಸ್ಥಾಪಕ ಪಾರ್ಶ್ವನಾಥ ಜೈನ್ ಕಸಗುಡಿಸುವ ಮೂಲಕ ಸ್ವಚ್ಛ ನೇತ್ರಾವತಿಗೆ ಚಾಲನೆ ನೀಡಿದರು.

ನದಿಯ ಸಂರಕ್ಷಣೆ ಪವಿತ್ರ ನೇತ್ರಾವತಿ ನದಿಯ ಸ್ನಾನಘಟ್ಟ ಹಾಗೂ ನದಿ ಕಿನಾರೆಯನ್ನು ಕಸಮುಕ್ತ ಹಾಗೂ ಪ್ಲಾಸ್ಟಿಕ್ ಮುಕ್ತ ಮಾಡುವುದು ಈ ಅಭಿಯಾನದ ಮುಖ್ಯ ಉದ್ದೇಶವಾಗಿತ್ತು.

ಸಾರ್ವಜನಿಕ ಜಾಗೃತಿ 'ಸ್ವಚ್ಛ ಮೇವ ಜಯತೇ' ಹಾಗೂ 'ಸ್ವಚ್ಛ ಭಾರತ – ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ' ಎಂಬ ಧ್ಯೇಯವಾಕ್ಯದೊಂದಿಗೆ ಸಾರ್ವಜನಿಕರಲ್ಲಿ ನದಿ ಮೂಲಗಳ ಸ್ವಚ್ಛತೆ ಬಗ್ಗೆ ಜಾಗೃತಿ ಮೂಡಿಸಲಾಯಿತು.

ನೂರಾರು ಸ್ವಯಂಸೇವಕರು, ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಮತ್ತು ಸ್ಥಳೀಯರು ಸಕ್ರಿಯವಾಗಿ ಪಾಲ್ಗೊಂಡು ನದಿ ದಂಡೆಯಲ್ಲಿದ್ದ ಪ್ಲಾಸ್ಟಿಕ್, ತ್ಯಾಜ್ಯಗಳನ್ನು ಸಂಗ್ರಹಿಸಿ ಯೋಗ್ಯ ವಿಲೇವಾರಿಗೆ ಕ್ರಮ ಕೈಗೊಂಡರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯತ್ ವಿಷಯ ನಿರ್ವಾಹ ಮಂಜು, ಪ್ರಿಯಾ ಹೆಗ್ಡೆ, ಸುಕನ್ಯಾ, ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷೆ ವಿಮಲಾ, ಶೌರ್ಯ ವಿಪತ್ತು ನಿರ್ವಹಣಾ ತಂಡದ ಯೋಜನಾಧಿಕಾರಿ ಜೈವಂತ್, ಧರ್ಮಸ್ಥಳ ಗ್ರಾಮ್ ಪಂಚಾಯತ್ ಕಾರ್ಯದರ್ಶಿ, ಪ್ರಮೀಳಾ, ಮಾಹಿತಿ ಕಚೇರಿ ವ್ಯವಸ್ಥಾಪಕ ನಿತಿನ್, ಸಂಜೀವಿನಿ ಮಹಿಳಾ ಒಕ್ಕೂಟದ ಸದಸ್ಯರು, ಅಂಗನವಾಡಿ ಕಾರ್ಯಕರ್ತೆಯರು, ಆಶಾಕಾರ್ಯಕರ್ತೆಯರು, ಗ್ರಾಮ ಪಂಚಾಯತ್ ಸಿಬ್ಬಂದಿ ವರ್ಗ, ವಾಹನ ಚಾಲಕ ಮಾಲಕರು, ಗ್ರಾಮ ಪಂಚಾಯತ್ ಸ್ವಚ್ಛತಾ ಸಿಬ್ಬಂದಿಗಳು, ಕನ್ಯಾಕುಮಾರಿ ಯುವತಿ ಮಂಡಲದ ಸದಸ್ಯರು, ಸ್ತ್ರೀ ಶಕ್ತಿ ಹಾಗೂ ಸ್ವಸಹಾಯ ಸಂಘದ ಸದಸ್ಯರುಗಳು, ಧರ್ಮಸ್ಥಳ ಹಾಗೂ ಉಜಿರೆಯ ಶೌರ್ಯ ವಿಪತ್ತು ನಿರ್ವಹಣೆ ತಂಡದ ಸದಸ್ಯರುಗಳು, ಗ್ರಾಮಸ್ಥರು, ಶ್ರೀ ಕ್ಷೇತ್ರ ಧರ್ಮಸ್ಥಳ ಸಿಬ್ಬಂದಿ ವರ್ಗ, ವ್ಯಾಪಾರಸ್ಥರು, ಗ್ರಾಮಸ್ಥರು ಉಪಸ್ಥಿತರಿದ್ದರು. ದೇವಿಪ್ರಸಾದ್ ಬೊಲ್ಮ ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯದರ್ಶಿ ಪ್ರಮೀಳಾ ಧನ್ಯವಾದ ನೀಡಿದರು.

ಅತ್ಯಂತ ಯಶಸ್ವಿ

ಧರ್ಮಸ್ಥಳಕ್ಕೆ ಬರುವ ಭಕ್ತಾದಿಗಳಿಗೆ ಮತ್ತು ಸ್ಥಳೀಯರಿಗೆ ಪರಿಸರ ಪ್ರಜ್ಞೆ ಮೂಡಿಸುವಲ್ಲಿ ಹಾಗೂ ನೇತ್ರಾವತಿ ನದಿಯ ಪಾವಿತ್ರ್ಯತೆಯನ್ನು ಕಾಯ್ದುಕೊಳ್ಳುವಲ್ಲಿ ಈ 'ಸ್ವಚ್ಛ ನೇತ್ರಾವತಿ' ಬೃಹತ್ ಅಭಿಯಾನವು ಅತ್ಯಂತ ಯಶಸ್ವಿಯಾಗಿ ನಡೆಸಲಾಯಿತು.

ಜೂ.28: ಇಂಟರ್ ನ್ಯಾಷನಲ್ ಬಂಟ್ಸ್ ವೆಲ್‌ಫೇರ್ ಟ್ರಸ್ಟ್‌ನಿಂದ ಮನೆ ಹಸ್ತಾಂತರ



ಮಂಗಳೂರು: ಇಂಟರ್ ನ್ಯಾಷನಲ್ ಬಂಟ್ಸ್ ವೆಲ್‌ಫೇರ್ ಟ್ರಸ್ಟ್ ವತಿಯಿಂದ ಸುಮಾರು 9 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿದ ಮನೆಯನ್ನು ಮಂಜನಾಡಿಯ ಉಮ್ಮನೆ ಸದಾಶಿವ ಶೆಟ್ಟಿ ಅವರಿಗೆ ಜೂ.28 ರಂದು ಬೆಳಿಗ್ಗೆ 10ಕ್ಕೆ ಹಸ್ತಾಂತರಿಸಲಾಗುವುದು.

ಈ ಕಾರ್ಯಕ್ರಮದ ಪೂರ್ವಭಾವಿ ಸಭೆ ಹೋಟೆಲ್ ಕುಡ್ಲ ಪೆವಿಲಿಯನ್ ಸಭಾಂಗಣದಲ್ಲಿ ಕಾರ್ಯಾಧ್ಯಕ್ಷ ದೇವಿಚರಣ್ ಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆಯಿತು.

ಇಂಟರ್ ನ್ಯಾಷನಲ್ ಬಂಟ್ಸ್ ವೆಲ್ ಫೇರ್ ಟ್ರಸ್ಟ್‌ನ ಸ್ಥಾಪಕ ಅಧ್ಯಕ್ಷ ಡಾ. ಆತ್ಯೂರು ಸದಾನಂದ ಶೆಟ್ಟಿ ಮನೆಯ ಕೀಲಿಕೈ ಹಸ್ತಾಂತರಿಸಲಿದ್ದಾರೆ. ಅಧ್ಯಕ್ಷ ಗುರ್ಮೆ ಸುರೇಶ್ ಶೆಟ್ಟಿ ಸಹಿತ ಅನೇಕ ಗಣ್ಯರು ಅತಿಥಿಗಳು, ಬಂಟ ಬಾಂಧವರು ಭಾಗವಹಿಸುವರು.

ಪೂರ್ವಭಾವಿ ಸಭೆಯಲ್ಲಿ ಕಾರ್ಯಾಧ್ಯಕ್ಷ ದೇವಿಚರಣ್ ಶೆಟ್ಟಿ ಮಾತನಾಡಿ, ಡಾ. ಸದಾನಂದ ಶೆಟ್ಟಿ ಅವರ ಸ್ಥಾಪಕ ಅಧ್ಯಕ್ಷತೆಯಲ್ಲಿ ಸ್ಥಾಪನೆಗೊಂಡ ಟ್ರಸ್ಟ್ ಹಲವಾರು ವರ್ಷಗಳಿಂದ ಸಾಮಾಜಿಕ, ಧಾರ್ಮಿಕ, ಕ್ರೀಡಾ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಜಾತ್ಯಾತೀತವಾಗಿ ಸಮಾಜಮುಖಿ ಕೆಲಸಗಳಿಂದ ಜನಪ್ರೀತಿ ಪಡೆದಿದೆ ಎಂದರು.

ಸಂಘಟನಾ ಕಾರ್ಯದರ್ಶಿ ರಾಜಗೋಪಾಲ ರೈ ಮಾತನಾಡಿ, ಟ್ರಸ್ಟ್‌ನ ವತಿಯಿಂದ ಬಡಕುಟುಂಬಗಳಿಗೆ ನೀಡುವ ನಾಲ್ಕನೇ ಮನೆ ಇದಾಗಿದೆ ಎಂದರು.

ಟ್ರಸ್ಟ್‌ನ ಪ್ರಮುಖರಾದ ಪ್ರಸಾದ್ ರೈ ಕಲ್ಲಿಮಾರ್, ವಿಜಯಲಕ್ಷ್ಮಿ ಬಿ. ಶೆಟ್ಟಿ, ಗೋಪಿನಾಥ್ ಶೆಟ್ಟಿ, ಗೀತಾ ಶೆಟ್ಟಿ, ಚಿತ್ರಲೇಖಾ ಶೆಟ್ಟಿ, ಸತ್ಯಪ್ರಸಾದ್, ಆರತಿ ಆಳ್ವ, ರಾಮಚಂದ್ರ ಆಳ್ವ, ವತ್ಸಲಾಕ್ಷಿ, ದೇವಿಪ್ರಸಾದ್ ಅಜಿಲ, ಹಂಸ ಶೆಟ್ಟಿ, ಮಾಧ್ಯಮ ವಕ್ತಾರ ಮುಲ್ಕಿ ಕರುಣಾಕರ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಕಾಡಬೆಟ್ಟಿನ ಐತಿಹಾಸಿಕ ಶ್ರೀ ಶನೈಶ್ಚರ ದೇವಳದ ಜೀರ್ಣೋದ್ಧಾರಕ್ಕೆ ಸಂಕಲ್ಪ

ಉಡುಪಿ: ಎರಡು ಶತಮಾನಗಳಿಗೂ ಮಿಕ್ಕಿದ ಇತಿಹಾಸವಿರುವ ಕಾಡಬೆಟ್ಟು ಶ್ರೀ ಅಬ್ಬಗದಾರಗ ವೀರಭದ್ರ ಸಪರಿವಾರ ಶನೈಶ್ಚರ ದೇವಳದ ಪುನರುತ್ಥಾನಕ್ಕೆ ಕ್ಷಣಗಣನೆ ಆರಂಭವಾಗಿದೆ. ಕ್ಷೇತ್ರದ ಸಮಗ್ರ ಜೀರ್ಣೋದ್ಧಾರ ಹಾಗೂ ಬ್ರಹ್ಮಕಲಶೋತ್ಸವದ ಧಾರ್ಮಿಕ ಪೂರಕ ಪ್ರಕ್ರಿಯೆಗಳಿಗೆ ಜೂನ್ 27ರಂದು ಅದ್ದೂರಿ ಚಾಲನೆ ದೊರೆಯಲಿದೆ ಎಂದು ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಕೆ. ಉದಯಕುಮಾರ್ ಶೆಟ್ಟಿ ತಿಳಿಸಿದ್ದಾರೆ.

ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಮಾಧ್ಯಮ ಗೋಷ್ಠಿಯಲ್ಲಿ ವಿವರ ನೀಡಿದ ಅವರು, ಪರ್ಯಾಯ ಶೀರೂರು ಮಠದ ಶ್ರೀ ವೇದವರ್ಧನತೀರ್ಥ ಶ್ರೀಪಾದರ ಸಾಮ್ರಾಟ್ ಗೌರವಾಧ್ಯಕ್ಷತೆಯಲ್ಲಿ ಜೀರ್ಣೋದ್ಧಾರ ಸಮಿತಿ ರಚನೆಯಾಗಿದ್ದು, ಸರ್ವರ ಭಕ್ತಿ-ಸೇವೆಗಳೊಂದಿಗೆ ಈ ಮಹಾಕಾರ್ಯ ಸಂಪನ್ನಗೊಳ್ಳಲಿದೆ ಎಂದರು.

ಕ್ಷೇತ್ರ ತಂತ್ರಿಗಳಾದ ಕೊರಂಗ್ರಪಾಡಿ ಕುಮಾರಗುರು ತಂತ್ರಿ ಮಾತನಾಡಿ,



ಇಲ್ಲಿನ ಶನೈಶ್ಚರ ದೇವರನ್ನು ಹೊರತುಪಡಿಸಿ, ವಿಘ್ನೇಶ್ವರ ಸೇರಿ ದಂತೆ ದೇವಸ್ಥಾನದ ಉಳಿದೆಲ್ಲ ವಿಗ್ರಹ ಗಳು ಅಪರೂಪದ ಮರದಿಂದ ಕೆತ್ತಲ್ಪಟ್ಟ 'ದಾರುಶಿಲ್ಪ'ಗಳಾಗಿವೆ ಎಂಬುದು ಕ್ಷೇತ್ರದ ಹೆಮ್ಮೆ. ಈ ಬಾರಿ ಮೂಲಬಿಂಬ ಗಳನ್ನು ಅಲುಗಾಡಿಸದೆ, ಕೇವಲ ಜೀರ್ಣಾವಸ್ಥೆಯಲ್ಲಿರುವ ಮರದ ಕೆತ್ತನೆಗಳನ್ನು ಹಾಗೂ ಗರ್ಭಗುಡಿಯ ಭಾಗಗಳನ್ನು ಶಾಸ್ತ್ರೋಕ್ತವಾಗಿ ನವೀಕರಿಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

ಜೂನ್ 27ರ ಶನಿತ್ರಯೋದಶಿಯ ಶುಭ ಮುಹೂರ್ತದಲ್ಲಿ ಸಾಮೂಹಿಕ ಶನಿಶಾಂತಿ ಯಾಗ ಹಾಗೂ ವಿಶೇಷ ಮಹಾಪೂಜೆಗಳು ನೆರವೇರಲಿವೆ. ಅಂದು ಬೆಳಿಗ್ಗೆ 11 ಗಂಟೆಯ ಸಭಾ ಕಾರ್ಯಕ್ರಮದಲ್ಲಿ ಕೃಷ್ಣಾಪುರ ಮಠಾಧೀಶರಾದ ಶ್ರೀ ವಿದ್ಯಾಸಾಗರತೀರ್ಥ ಶ್ರೀಪಾದರು ಆಗಮಿಸಿ, ಬ್ರಹ್ಮಕಲಶೋತ್ಸವದ ನಿಖರ ದಿನಾಂಕಗಳನ್ನು ಉದ್ಘೋಷಿಸುವ ಮೂಲಕ ಇಡೀ ಧಾರ್ಮಿಕ ಉತ್ಸವಕ್ಕೆ ಅಧಿಕೃತ ಚಾಲನೆ ನೀಡಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಪ್ರಮುಖರಾದ ಬೈಕಾಡಿ ಸುಪ್ರಸಾದ ಶೆಟ್ಟಿ, ಮೋಹನ ಶೆಟ್ಟಿ, ರವಿ ಶೆಟ್ಟಿ, ರಾಜಗೋಪಾಲ ರೈ, ಸುರೇಂದ್ರ ಶೇಖ, ಸಚಿನ್ ರಾಜ್ ರೈ ಹಾಗೂ ಮಧುಕರ ಮುದ್ರಾಡಿ ಉಪಸ್ಥಿತರಿದ್ದರು.

ಸವಣೂರು: ಜನಸಂಪರ್ಕ ಅಭಿಯಾನ, ಕಾರ್ಯಕರ್ತರ ಭೇಟಿ, ತಾಯಿಯ ಹೆಸರಲ್ಲಿ ಗಿಡ ನೆಡುವ ಕಾರ್ಯಕ್ರಮ

ಅಡಿಕೆ ಬೆಳೆಗಾರರ ಸಮಸ್ಯೆ ನಿವಾರಣೆಗೆ ಶೀಘ್ರ ವೈಜ್ಞಾನಿಕ ಪರಿಹಾರ

ಸವಣೂರು: ಅಡಿಕೆಬೆಳೆಗಾರರುಎದುರಿಸುತ್ತಿರುವ ಗಂಭೀರ ಸಮಸ್ಯೆಗಳ ಕುರಿತು ವೈಜ್ಞಾನಿಕ ಹಾಗೂ ತಾಂತ್ರಿಕ ಪರಿಹಾರ ಕಂಡುಕೊಳ್ಳಲು ಸತಕಾರದ ಮಟ್ಟದಲ್ಲಿ ಪ್ರಯತ್ನಗಳು ನಡೆಯುತ್ತಿದ್ದು, ಎಲೆ ಚುಕ್ಕಿ, ಹಳದಿ ರೋಗಗಳನ್ನು ಹತೋಟಿಯಲ್ಲಿಡಲು ಸ್ಯಾಂಪಲ್ ಸರ್ವೆಯನ್ನು ಸಿಪಿಸಿಆರ್‌ಐ ಜತೆಗೆ ಮಾಡಲಾಗಿದೆ. ವಿಜ್ಞಾನಿಗಳ ಸಂಶೋಧನೆಯ ಮೂಲಕ ಪರಿಹಾರ ಕಂಡುಕೊಳ್ಳಲು ಮುಂದಡಿ ಇಡಲಾಗಿದೆ ಎಂದು ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದ್ದಾರೆ.

ಪ್ರಧಾನಮಂತ್ರಿ ನರೇಂದ್ರ ಮೋದಿಯವರ 12 ವರ್ಷಗಳ ಯಶಸ್ವಿ ಜನಪರ ಆಡಳಿತದ ಪ್ರಯುಕ್ತ ಸೇವಾ ಸಂಕಲ್ಪದ ಅಂಗವಾಗಿ ಸವಣೂರು ಕನಡಕುಮೇರು ದೇವಪ್ಪ ಗೌಡ ಅವರ ಮನೆಯಲ್ಲಿ ಏರ್ಪಡಿಸಲಾಗಿದ್ದ ಜನಸಂಪರ್ಕ ಅಭಿಯಾನ, ಕಾರ್ಯಕರ್ತರ ಭೇಟಿ, ಹಿರಿಯ ಕಾರ್ಯಕರ್ತರ ಗೌರವಾರ್ಪಣೆ, ತಾಯಿಯ ಹೆಸರಲ್ಲಿ ಗಿಡ ನೆಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜತೆಗೆ ರೈತರು ಅಡಿಕೆಯ ಜತೆಗೆ ಇತರ ಆದಾಯೋತ್ಪನ್ನಗಳನ್ನು ಬೆಳೆಯಲು ತೊಡಗಿಸಿಕೊಳ್ಳಬೇಕು. ಈ ಕುರಿತಾಗಿ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು, ರೈತ ಉತ್ಪಾದಕ ಕಂಪೆನಿಗಳು ಕೂಡ ರೈತರಿಗೆ ಸಲಹೆ ಸಹಕಾರ ನೀಡುವ ಕೆಲಸ ಮಾಡಬೇಕು ಎಂದು ಅವರು ತಿಳಿಸಿದರು.

ಕೃತಜ್ಞತೆ ಸಲ್ಲಿಸಿದ ಸಂಸದ

ಮೋದಿ ಸೂಚನೆಯಂತೆ ಹಿರಿಯ ಕಾರ್ಯಕರ್ತರಿಗೆ ಗೌರವಾರ್ಪಣೆ ಮಾಡುವ ಕೆಲಸ ಆಗುತ್ತಿದೆ ಎಂದು ಹೇಳಿ ಸಭೆಯಲ್ಲಿದ್ದ ಬಿಜೆಪಿಯ ಹಿರಿಯ ಕಾರ್ಯಕರ್ತರಿಗೆ ಕೈ ಮುಗಿದು ಕೃತಜ್ಞತೆ ಸಲ್ಲಿಸಿದರು. ನೆಲದ ಸಂಸ್ಕೃತಿಯನ್ನು ಉಳಿಸಲು, ರಾಷ್ಟ್ರೀಯತೆಯನ್ನು ಬೆಳೆಸುವ ಕಾರಣಕ್ಕಾಗಿ ಬಿಜೆಪಿಯನ್ನು ಜನತೆ ಬೆಂಬಲಿಸುತ್ತಿದ್ದಾರೆ.

ಅಂಬೇಡ್ಕರ್ ಅವರನ್ನು ಸೋಲಿಸಿದ ಪಕ್ಷ ಈಗ ಸಂವಿಧಾನವನ್ನು ಹಿಡಿದುಕೊಂಡು ಹೋಗುತ್ತಿದ್ದಾರೆ. ಸತ್ಯ, ಧರ್ಮ, ನ್ಯಾಯ ಬಿಟ್ಟು ಒಂದು ಹೆಜ್ಜೆಯನ್ನು ಇಡುವುದಿಲ್ಲ. ಮನೆ, ಸೇನೆ, ಸಂಘದ ಶಿಸ್ತನ್ನು ಮೀರುವುದಿಲ್ಲ. ಜಿಲ್ಲೆಯ ಅಭಿವೃದ್ಧಿಯ ನಿಟ್ಟಿನಲ್ಲಿ ಈಗಾಗಲೇ ಆರಂಭವಾಗಿರುವ ಕಾಮಗಾರಿ ಮುಗಿಸಲು ಆದ್ಯತೆ ನೀಡಲಾಗಿದೆ ಎಂದು ಅವರು ತಿಳಿಸಿದರು.

ಸ್ಥಗಿತಗೊಂಡಿದ್ದ ಸುಬ್ರಹ್ಮಣ್ಯ-ಮಂಗಳೂರು ರೈಲು ಪ್ರಾರಂಭಿಸಿ, ಯಶಸ್ವಿಯಾಗಿ



ಮುಂದುವರಿಯುತ್ತಿದ್ದು, 25 ರೂ.ಗೆ ಪ್ರಯಾಣ ಮಾಡುವಂತಾಗಿದೆ. ಮಂಗಳೂರು-ಬೆಂಗಳೂರು ರೈಲ್ವೇ ಹಳಿಯಲ್ಲಿ ವಿದ್ಯುತ್ ಲೈನ್ ಕಾಮಗಾರಿಯನ್ನು 8 ತಿಂಗಳಲ್ಲಿ ಮಾಡಲಾಗಿದೆ. ವಂದೇ ಭಾರತ್ ರೈಲು ಓಡಾಟಕ್ಕೆ ಹಳಿ ಸಿದ್ಧವಾಗಿದ್ದು, ಈ ಮಾರ್ಗದಲ್ಲಿ ಈಗ ಇರುವ ಒಂದೇ ಹಳಿಯಲ್ಲಿ ಹೆಚ್ಚುವರಿ ರೈಲು ಓಡಿಸಲು ಅಸಾಧ್ಯ. ಈ ನಿಟ್ಟಿನಲ್ಲಿ ಈ ಮಾರ್ಗದಲ್ಲಿ 2 ಟ್ರಾಕ್ ಹಳಿಗಳು ಆಗಬೇಕು. ಈ ನಿಟ್ಟಿನಲ್ಲಿ ಜನಪ್ರತಿನಿಧಿಗಳ ಜತೆ ಸಾರ್ವಜನಿಕರೂ ಧ್ವನಿಯೆತ್ತಬೇಕು ಎಂದು ಕ್ಯಾ. ಬ್ರಿಜೇಶ್ ಚೌಟ ಹೇಳಿದರು.

ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ, ಸುಳ್ಯ ಮಂಡಲ ಬಿಜೆಪಿ ಅಧ್ಯಕ್ಷ ವೆಂಕಟ್ ವಳಲಂಬೆ ಶುಭ ಹಾರೈಸಿದರು.

ವೇದಿಕೆಯಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಪ್ರಸನ್ನ ಮಾರ್ತ, ಸುಳ್ಯ ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರದೀಪ್ ರೈ ಮನವಳಿಕೆ, ಕಾರ್ಯದರ್ಶಿಗಳಾದ ಗಣೇಶ ಉದನಡ್ಕ, ಶಿವಪ್ರಸಾದ್, ಕುಟ್ರುಪ್ಪಾಡಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಸುರೇಶ್ ದೇಂತಾರು, ಕಾರ್ಯದರ್ಶಿ ಜಯಪ್ರಕಾಶ್, ಹಿರಿಯ ಕಾರ್ಯಕರ್ತ ದೇವಪ್ಪ ಗೌಡ ಕನಡಕುಮೇರು, ಜಿಲ್ಲಾ ಬಿಜೆಪಿ ಸದಸ್ಯ ದಿನೇಶ್ ಮೆದು, ಸುಳ್ಯ ಮಂಡಲ ಎಸ್.ಟಿ. ಮೋರ್ಚಾ ಅಧ್ಯಕ್ಷ ಗಂಗಾಧರ ಪೆರಿಯಡ್ಕ, ಸವಣೂರು ಶಕ್ತಿ ಕೇಂದ್ರ ಪ್ರಮುಖ್ ಚೇತನ್ ಕುಮಾರ್ ಕೋಡಿಬೈಲು, ಪುಣ್ಚಪ್ಪಾಡಿ ಶಕ್ತಿ ಕೇಂದ್ರ ಪ್ರಮುಖ್ ಮಹೇಶ್ ಕೆ. ಸವಣೂರು, ಪಾಲ್ತಾಡಿ ಶಕ್ತಿ ಕೇಂದ್ರ ಪ್ರಮುಖ್ ಅನ್ನಪೂರ್ಣಪ್ರಸಾದ್ ರೈ ಬೈಲಾಡಿ ಮತ್ತಿತರರಿದ್ದರು.

ಅಖಿಲಾ ನೆಕ್ರಾಜೆ ಪ್ರಾರ್ಥಿಸಿದರು. ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ರಾಕೇಶ್ ರೈ ಕೆಡೆಂಜಿ ಸ್ವಾಗತಿಸಿ, ಸವಣೂರು ಪ್ರಾ.ಕೃ.ಪ.ಸ. ಸಂಘದ ಅಧ್ಯಕ್ಷ ತಾರಾನಾಥ ಕಾಯರ್ಗ ವಂದಿಸಿದರು. ಸುಳ್ಯ ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷೆ ಇಂದಿರಾ ಬಿ.ಕೆ. ಕಾರ್ಯಕ್ರಮ ನಿರ್ವಹಿಸಿದರು.

3 ತಿಂಗಳಿಗೊಮ್ಮೆ ಭೇಟಿ

ಮೂರು ತಿಂಗಳಿಗೊಮ್ಮೆ ಪ್ರತೀ ವಿಧಾನಸಭಾ ಕ್ಷೇತ್ರಕ್ಕೂ ಭೇಟಿ ನೀಡಿ ಜನತೆಯ ಅಹವಾಲು ಸ್ವೀಕರಿಸಲಾಗುವುದು. ನಾನು ಯಾವತ್ತೂ ಬೂತ್ ಕಾರ್ಯಕರ್ತನ ಪರವಾಗಿ ಸದಾ ನಿಲ್ಲುತ್ತೇನೆ ಎಂದು ಸಂಸದ ಕ್ಯಾ. ಬ್ರಿಜೇಶ್ ಚೌಟ ತಿಳಿಸಿದರು.

ಹಿರಿಯರಿಗೆ ಸನ್ಮಾನ

ಈ ಸಂದರ್ಭ ಹಿರಿಯ ಕಾರ್ಯಕರ್ತ ದೇವಪ್ಪ ಗೌಡ ಕನಡಕುಮೇರು-ಚಂದ್ರಾವತಿ ದಂಪತಿ ಹಾಗೂ ಮನೆಯವರನ್ನು, ವೆಂಕಪ್ಪ ಶೆಟ್ಟಿ ಸವಣೂರುಗುತ್ತು ಮತ್ತು ದೇವಪ್ಪ ಗೌಡ ಕನಡಕುಮೇರು ಅವರು ಸಂಸದರು ಸನ್ಮಾನಿಸಿ ಗೌರವಿಸಿದರು.

ಶುಕ್ರವಾರದ ಪಂದ್ಯಗಳು

ಟರ್ಕಿ-ಅಮೆರಿಕ (ಬೆಳಗ್ಗೆ 7:30)
ಪರಾಗ್ವೆ-ಆಸ್ಟ್ರೇಲಿಯಾ (ಬೆಳಗ್ಗೆ 7:30)
ನಾರ್ವೆ-ಫ್ರಾನ್ಸ್ (ಮಧ್ಯರಾತ್ರಿ 12:30)
ಸೆನೆಗಲ್-ಇರಾಕ್ (12:30)

ಕಿರುಸುದ್ದಿ

ಜೂ. ಶೂಟಿಂಗ್: ಬೆಳ್ಳಿಗೆ ಐಶ್ವರ್ಯ ಶೂಟ್

ಹುಬ್ಬಳ್ಳಿ: ಜರ್ಮನಿಯ ಶೂಲ್‌ನಲ್ಲಿ ನಡೆಯುತ್ತಿರುವ ವಿಶ್ವ ಜೂನಿಯರ್ ಶೂಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಹುಬ್ಬಳ್ಳಿಯ ಹುಡುಗಿ ಐಶ್ವರ್ಯ ಬಾಲೆಹೊಸೂರ 50 ಎಂ ಫ್ರೀ ಪಿಸ್ತೂಲ್ ವಿಭಾಗದಲ್ಲಿ ಗುರುವಾರ ಬೆಳ್ಳಿ ಪದಕಕ್ಕೆ ಗುರಿಯಿಟ್ಟರು. 18 ವರ್ಷ ವಯಸ್ಸಿನ ಐಶ್ವರ್ಯ ಬಾಲೆಹೊಸೂರ(540.11)ಅಂಕ ಸಂಪಾಸಿದ್ದು, 540.12 ಅಂಕಗಳಿಸಿದ ರಷ್ಯಾದ ಸೋಫಿಯಾ ಅವರು ಚಿನ್ನ ಪದಕ ಹಾಗೂ ಮಂಗೋಲಿಯಾದ ಅರಿವುರುಯ (533.4) ಅಂಕ ಪಡೆದು ಕಂಚು ಪದಕ ಪಡೆದಿದ್ದಾರೆ. ಹುಬ್ಬಳ್ಳಿಯ ಶೂಟಿಂಗ್ ಅಕಾಡೆಮಿಯಲ್ಲಿ ತರಬೇತಿ ಪಡೆದಿದ್ದಾರೆ. ತರಬೇತುದಾರ ಮಾಜಿ ಸೈನಿಕ ರವಿಚಂದ್ರ ಬಾಲೆಹೊಸೂರ ಅವರು ಐಶ್ವರ್ಯ ಅವರಿಗೆ ಮಾರ್ಗದರ್ಶನ ನೀಡಿದ್ದಾರೆ. ಈ ಕುರಿತಂತೆ ನನ್ನ ಮಗಳು ವಿಶ್ವ ಜೂನಿಯರ್ ಶೂಟಿಂಗ್‌ನಲ್ಲಿ ಬೆಳ್ಳಿ ಪದಕ ಪಡೆದಿದ್ದು, ತುಂಬ ಖುಷಿಯಾಗಿದೆ. ಮುಂದಿನ ಬಾರಿ ಚಿನ್ನ ಪಡೆಯುತ್ತಾಳೆ ಎಂಬ ವಿಶ್ವಾಸ ನನಗೆ ಇದೆ ಎಂದು ಐಶ್ವರ್ಯ ತಂದೆ ಹಾಗೂ ತರಬೇತುದಾರ ರವಿಚಂದ್ರ ಬಾಲೆಹೊಸೂರು ಅಭಿಪ್ರಾಯ ವ್ಯಕ್ತಪಡಿಸಿದರು.

ಉತ್ತಮ ಮೊತ್ತದತ್ತ ಭಾರತ ಎ

ಗಾಲೆ: ಸಾಯಿ ಸುದರ್ಶನ್ (132), ಧ್ರುವ್ ಜುರೇಲ್(58★) ಮತ್ತು ಶೇಕ್ ರಶೀದ್(53★) ಅವರ ಬ್ಯಾಟಿಂಗ್‌ನೊಂದಿಗೆ ಭಾರತ ಎ ತಂಡವು ಶ್ರೀಲಂಕಾ ವಿರುದ್ಧ ನಡೆಯುತ್ತಿರುವ ಅನಧಿಕೃತ ಟೆಸ್ಟ್ ಪಂದ್ಯದಲ್ಲಿ ಉತ್ತಮ ಮೊತ್ತದತ್ತ ಸಾಗಿದೆ. ಮೊದಲ ದಿನ 86 ಓವರ್‌ಗಳಿಗೆ ಬ್ಯಾಟಿಂಗ್ ಮಾಡಿರುವ ಭಾರತ ಎ 4 ವಿಕೆಟ್ ನಷ್ಟಕ್ಕೆ 333 ರನ್ ಗಳಿಸಿ ಬ್ಯಾಟಿಂಗ್ ಉಳಿಸಿಕೊಂಡಿದೆ. ಧ್ರುವ್ ಮತ್ತು ರಶೀದ್ ಕ್ರೀಜ್‌ನಲ್ಲಿದ್ದಾರೆ. ಸಾಯಿ ಸುದರ್ಶನ್ ಮೊದಲಿನಿಂದಲೂ ಉತ್ತಮ ಬ್ಯಾಟಿಂಗ್ ಮಾಡಿ ಶತಕ ಬಾರಿಸಿದರು. ಆಯುಷ್ 25 ರನ್ ಗಳಿಸಿದರು. ಪಡಿಕ್ಕಲ್ 12 ರನ್‌ಗೆ ಔಟಾದರೆ, ಗಾಯಕ್ವಾಡ್ 22 ರನ್ ಮಾತ್ರ ಗಳಿಸಿದರು. ಶ್ರೀಲಂಕಾ ಎ ಪರ ದಿಲ್ಲುಮ್ 2, ರವೀಂದು ಮತ್ತು ಚಮಿಕಾ ತಲಾ 1 ವಿಕೆಟ್ ಕಿತ್ತರು.

ಸೆಮಿಗೆ ಇಂಗ್ಲೆಂಡ್

ಲಂಡನ್: ವ್ಯಾಟ್ ಹಾಡ್ಜ್ ಅವರ ಸ್ಫೋಟಕ ಬ್ಯಾಟಿಂಗ್ ಮತ್ತು ಸಾಂಘಿಕ ಬೌಲಿಂಗ್ ದಾಳಿ ಸಂಘಟಿಸಿರುವ ಇಂಗ್ಲೆಂಡ್ ಮಹಿಳೆಯರ ತಂಡವು ಪ್ರತಿಷ್ಠಿತ ಮಹಿಳೆಯರ ಟಿ20 ವಿಶ್ವಕಪ್ ಸೆಮಿಫೈನಲ್‌ಗೇರಿತು. ಬುಧವಾರ ನಡೆದ ಲೀಗ್ ಪಂದ್ಯದಲ್ಲಿ 38 ರನ್‌ಗಳ ದೊಡ್ಡ ಗೆಲುವು ಸಾಧಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ಆರಂಭಿಕ ವಿಕೆಟ್ ಕಳೆದುಕೊಂಡರೂ, ಹಾಡ್ಜ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಕ್ರೀಜ್‌ಗೆ ಅಂಟಿಕೊಂಡರು. ಮಧ್ಯಮ ಕ್ರಮಾಂಕದಲ್ಲಿ ಹೀದರ್ 43 ರನ್‌ಗಳ ಕೊಡುಗೆ ನೀಡಿದರು. ಹಾಡ್ಜ್ ಒಟ್ಟು 65 ರನ್ ಗಳಿಸಿದ ನಂತರ ಇಂಗ್ಲೆಂಡ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 186 ರನ್ ಗಳಿಸಿತು. ಗುರಿ ಬೆನ್ನತ್ತಿದ ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 148 ರನ್ ಮಾತ್ರ ಗಳಿಸಿತು. 5 ವಿಕೆಟ್ ಮಾತ್ರವೇ ಬಿದ್ದರೂ ನಿಧಾನ ಬ್ಯಾಟಿಂಗ್ ಮಾಡಿ ವಿಂಡೀಸ್ ಸೋತಿತು. ಆದರೂ ಚಿನ್ನಲ್ ಹೆನ್ರಿ 30 ಬಾಲ್‌ಗಳಲ್ಲಿ 51 ರನ್ ಗಳಿಸಿ ಹೋರಾಡಿದರು.

ದಾಖಲೆ ಮಾಡಿದ ಚಾರಣಿ

ಲಂಡನ್: ಬಾಂಗ್ಲಾ ವಿರುದ್ಧ ನಡೆದ ಪಂದ್ಯದಲ್ಲಿ ವಿಕೆಟ್ ಪಡೆದ ಭಾರತ ಸ್ಪಿನ್ನರ್ ಶ್ರೀ ಚಾರಣಿ ಒಂದೇ ಆವೃತ್ತಿಯಲ್ಲಿ ಭಾರತೀಯ ಆಟಗಾರ್ತಿಯೊಬ್ಬರು ಅತಿ ಹೆಚ್ಚು ವಿಕೆಟ್ ಪಡೆದ ದಾಖಲೆಯನ್ನು ಮುರಿದರು. 20ನೇ ಓವರ್‌ನಲ್ಲಿ ಬಾಂಗ್ಲಾದೇಶದ ಶೋರ್ನಾ ಅಕ್ತರ್ ಅವರನ್ನು ಔಟ್ ಮಾಡುವ ಮೂಲಕ ಅವರು ಆವೃತ್ತಿಯ 11ನೇ ವಿಕೆಟ್ ಪಡೆದರು, 2020ರ ಆವೃತ್ತಿಯಲ್ಲಿ ಪೂನಮ್ ಯಾದವ್ ಅವರ 10 ವಿಕೆಟ್ ಸಾಧನೆಯನ್ನು ಹಿಂದಿಕ್ಕಿದರು. ಒಟ್ಟಾರೆ ದಾಖಲೆಯು ನ್ಯೂಜಿಲೆಂಡ್‌ನ ಅಮೆಲಿಯಾ ಕೆರ್ ಅವರ ಹೆಸರಿನಲ್ಲಿ 15 ವಿಕೆಟ್‌ಗಳನ್ನು ಪಡೆದಿದ್ದು, ಈ ದಾಖಲೆ ಮುರಿಯುವತ್ತ ಚಾರಣಿ ಸಾಗಿದ್ದಾರೆ.

ಅತಿ ಹೆಚ್ಚು ವಿಕೆಟ್

- ಶ್ರೀ ಚರಣಿ (2026): 12★
- ಪೂನಮ್ ಯಾದವ್ (2020): 10
- ಡಯೊನಾ ಡೇವಿಡ್ (2010): 9
- ಪೂನಮ್ ಯಾದವ್ (2014): 8
- ರಾಧಾ ಯಾದವ್ (2018): 8

ಪ್ಲೇಆಫ್‌ಗೆ ಮುನ್ನಡೆ | ನೇಮರ್ ಪುನರಾಗಮನ

ಬ್ರೆಜಿಲ್ ಆರ್ಭಟ



ಮಿಯಾಮಿ ಗಾರ್ಡನ್ಸ್: ಅಭಿಮಾನಿಗಳ ಫೇವರಿಟ್, ದಿಗ್ಗಜ ಫುಟ್‌ಬಾಲರ್ ನೇಮರ್ ವಿಶ್ವಕಪ್ ಪಂದ್ಯಾವಳಿಗೆ ಕಾಲಿಟ್ಟ ಪಂದ್ಯದಲ್ಲಿ ಬ್ರೆಜಿಲ್ ಸ್ಕಾಟ್ಲೆಂಡ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿದೆ. ಸತತ ಎರಡು ಪಂದ್ಯಗಳಿಂದ ದೂರ ಉಳಿದಿದ್ದ ನೇಮರ್ ಕೊನೆಗೂ ಕ್ರೀಡಾಂಗಣದಲ್ಲಿ ಕಾಣಿಸಿಕೊಂಡರು. ಕಾಲಿನ ಗಾಯದಿಂದಾಗಿ ದೂರ ಉಳಿದಿದ್ದ ಅವರು, ಫಿಟ್ನೆಸ್ ಪರೀಕ್ಷೆ ಪಾಸಾದ ನಂತರ ಪಂದ್ಯಾವಳಿಗೆ ಮರಳಿದ್ದಾರೆ. ಬುಧವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಬ್ರೆಜಿಲ್ ಸ್ಕಾಟ್ಲೆಂಡ್ ತಂಡವನ್ನು ಎದುರಿಸಿತ್ತು. ಸ್ಟಾರ್ ಫಾರ್ವರ್ಡ್ ವಿನಿಸಿಯಸ್ ಜೂನಿಯರ್ ಅವರ ದ್ವಿಗೋಲು ಸಾಧನೆಯ ನೆರವಿನಿಂದ ಐದು ಬಾರಿಯ ವಿಶ್ವ ಚಾಂಪಿಯನ್ ಬ್ರೆಜಿಲ್, ಸ್ಕಾಟ್ಲೆಂಡ್ ವಿರುದ್ಧ 3-0 ಅಂತರದ ಭರ್ಜರಿ ಜಯ ಸಾಧಿಸಿ ಫಿಫಾ ವಿಶ್ವಕಪ್‌ನ ನಾಕೌಟ್ ಹಂತಕ್ಕೆ ಪ್ರವೇಶಿಸಿದೆ. ಪಂದ್ಯ ಆರಂಭವಾದ ಏಳನೇ ನಿಮಿಷದಲ್ಲೇ ವಿನಿಸಿಯಸ್ ಗೋಲು ಬಾರಿಸಿ ಬ್ರೆಜಿಲ್‌ಗೆ ಮುನ್ನಡೆ ತಂದುಕೊಟ್ಟರು. ಮೊದಲಾರ್ಧದ ಅಂತಿಮ ಕ್ಷಣಗಳಲ್ಲಿ ಮತ್ತೊಮ್ಮೆ ಗೋಲು ದಾಖಲಿಸಿದ ಅವರು ಟೂರ್ನಿಯಲ್ಲಿ ತಮ್ಮ ಗೋಲುಗಳ ಸಂಖ್ಯೆಯನ್ನು ನಾಲ್ಕಕ್ಕೆ ಏರಿಸಿಕೊಂಡರು. ಈ ಮೂಲಕ ಫ್ರಾನ್ಸ್‌ನ ಕೈಲಿಯನ್ ಎಂಬಾಪ್ಪೆ ಅವರೊಂದಿಗೆ ಸಮಬಲ ಸಾಧಿಸಿದ ವಿನಿಸಿಯಸ್, ಐದು ಗೋಲುಗಳೊಂದಿಗೆ ಅಗ್ರಸ್ಥಾನದಲ್ಲಿರುವ ಲಿಯೋನೆಲ್ ಮೆಸ್ಸಿಗೆ ಒಂದು ಗೋಲು ಹಿಂದಿದ್ದಾರೆ. ಮ್ಯಾಥಿಯಸ್ ಕುನ್ಹಾ ಕೂಡ ಒಂದು ಗೋಲು ದಾಖಲಿಸಿ ಬ್ರೆಜಿಲ್‌ನ ಗೆಲುವನ್ನು ಮತ್ತಷ್ಟು ಭದ್ರಪಡಿಸಿದರು. ಸ್ಕಾಟ್ಲೆಂಡ್ ರಕ್ಷಣಾ ವಿಭಾಗ ಬ್ರೆಜಿಲ್‌ನ ವೇಗದ ದಾಳಿಯನ್ನು ತಡೆಯಲು ವಿಫಲವಾಯಿತು.

ನೇಮರ್ ಸಬ್‌ಸ್ಟಿಟ್ಯೂಟ್: ಪಂದ್ಯದ ಮತ್ತೊಂದು ವಿಶೇಷ ಆಕರ್ಷಣೆಯೆಂದರೆ ನೇಮರ್ ಅವರ ಮರಳುವಿಕೆ. ಬಲ ಕಾಲಿನ ಗಾಯದಿಂದ ಮೊದಲ ಎರಡು ಪಂದ್ಯಗಳಿಂದ ಹೊರಗುಳಿದಿದ್ದ ನೇಮರ್ 76ನೇ ನಿಮಿಷದಲ್ಲಿ ಬದಲಿ ಆಟಗಾರನಾಗಿ ಕಣಕ್ಕಿಳಿದರು. ಅವರು ವಾರ್ಮ್‌ಅಪ್ ಆರಂಭಿಸಿದ ಕ್ಷಣದಿಂದಲೇ ಅಭಿಮಾನಿಗಳು ಅವರ ಹೆಸರನ್ನು ಘೋಷಿಸುತ್ತಿದ್ದರು. ಮೈದಾನಕ್ಕೆ ಕಾಲಿಟ್ಟಾಗ ಸ್ಟೇಡಿಯಂ ಸಂಭ್ರಮದಿಂದ ಮೊಳಗಿತು.

ಪ್ರಮುಖ ಅಂಶಗಳು

- ವಿನಿಸಿಯಸ್ ಜೂನಿಯರ್ 2 ಗೋಲು
- ಮ್ಯಾಥಿಯಸ್ ಕುನ್ಹಾ 1 ಗೋಲು

32ರ ಸುತ್ತಿಗೆ ಮೊರಾಕ್ಕೊ



ಅಟ್ಲಾಂಟಾ: ಎರಡು ಬಾರಿ ಹಿನ್ನಡೆಯನ್ನು ಅನುಭವಿಸಿದರೂ ಅಸಾಧಾರಣ ಪುನರಾಗಮನ ಮಾಡಿದ ಮೊರಾಕ್ಕೊ, ಹೈಟಿಯನ್ನು 4-2 ಗೋಲುಗಳಿಂದ ಮಣಿಸಿ ಫಿಫಾ ವಿಶ್ವಕಪ್ ನಾಕೌಟ್ ಹಂತಕ್ಕೆ ಅರ್ಹತೆ ಪಡೆದುಕೊಂಡಿದೆ. ವಿಶ್ವಕಪ್‌ನಲ್ಲಿ 52 ವರ್ಷಗಳ ಬಳಿಕ ಆಡುತ್ತಿರುವ ಹೈಟಿ ಅಚ್ಚರಿಯ ಆರಂಭ ಮಾಡಿತು. 10ನೇ ನಿಮಿಷದಲ್ಲಿ ಲೆನ್ನಿ ಜೋಸೆಫ್ ಬಾರಿಸಿದ ಗೋಲು ಹೈಟಿಗೆ ಮುನ್ನಡೆ ನೀಡಿತು. ಇದು 1974ರ ಬಳಿಕ ವಿಶ್ವಕಪ್‌ನಲ್ಲಿ ಹೈಟಿ ದಾಖಲಿಸಿದ ಮೊದಲ ಗೋಲಾಗಿತ್ತು. ಮೊರಾಕ್ಕೊ ನಿರಂತರ ಒತ್ತಡದ ಫಲವಾಗಿ 39ನೇ ನಿಮಿಷದಲ್ಲಿ ಅಚ್ರಫ್ ಹಕಿಮಿ ಸಮಬಲ ಸಾಧಿಸಿದರು. ಆದರೆ ನಾಲ್ಕು ನಿಮಿಷಗಳಲ್ಲೇ ವಿಲ್ಸನ್ ಇಸಿಡೋರ್ ಅವರ ಅದ್ಭುತ ದೂರದ ಶಾಟ್ ಹೈಟಿಗೆ ಮತ್ತೆ 2-1 ಮುನ್ನಡೆ ತಂದುಕೊಟ್ಟಿತು. ಮೊದಲಾರ್ಧದ ಹೆಚ್ಚುವರಿ ಸಮಯದಲ್ಲಿ ಇಸ್ಮಾಯೆಲ್ ಸೈಬಾರಿ ಗೋಲು ಬಾರಿಸಿ ಮೊರಾಕ್ಕೊವನ್ನು 2-2 ಸಮಬಲಕ್ಕೆ ತಂದರು. ಟೂರ್ನಿಯಲ್ಲಿ ಇದು ಸೈಬಾರಿಯ ಮೂರನೇ ಗೋಲಾಗಿತ್ತು.ದ್ವಿತೀಯಾರ್ಧದಲ್ಲಿ ಪಂದ್ಯ ಇನ್ನಷ್ಟು ರೋಚಕವಾಯಿತು. ಬದಲಿ ಆಟಗಾರನಾಗಿ ಬಂದ ಸೊಫಿಯಾನ್ ರಹಿಮಿ 78ನೇ ನಿಮಿಷದಲ್ಲಿ ಗೋಲು ಬಾರಿಸಿ ಮೊರಾಕ್ಕೊಗೆ ಮೊದಲ ಬಾರಿಗೆ ಮುನ್ನಡೆ ತಂದುಕೊಟ್ಟರು. 89ನೇ ನಿಮಿಷದಲ್ಲಿ ಗೆಸ್ಸಿಮೆ ಯಾಸಿನ್ ಮತ್ತೊಂದು ಗೋಲು ದಾಖಲಿಸಿ ಹೈಟಿಯ ಅಚ್ಚರಿಯ ಕನಸಿಗೆ ತೆರೆ ಎಳೆದರು.

ಮೆಕ್ಸಿಕೊ ಮಿಂಚಿನಾಟ, ಜೆಕ್ ಹೊರಕ್ಕೆ

ಮೆಕ್ಸಿಕೊ ಸಿಟಿ: ಆತಿಥೇಯ ಮೆಕ್ಸಿಕೊ ವಿಶ್ವಕಪ್‌ನಲ್ಲಿ ತನ್ನ ಅದ್ಭುತ ಫಾರ್ಮ್ ಮುಂದುವರಿಸಿದ್ದು, ಜೆಕ್ ಗಣರಾಜ್ಯವನ್ನು 3-0 ಗೋಲುಗಳಿಂದ ಮಣಿಸಿ ಗುಂಪು ಹಂತದ ಎಲ್ಲಾ ಮೂರು ಪಂದ್ಯಗಳನ್ನು ಗೆದ್ದ ಮೊದಲ ಮೆಕ್ಸಿಕನ್ ತಂಡವಾಗಿ ಇತಿಹಾಸ ನಿರ್ಮಿಸಿದೆ. ಮೊದಲಾರ್ಧದಲ್ಲಿ ಗೋಲುರಹಿತವಾಗಿದ್ದ ಪಂದ್ಯದಲ್ಲಿ, ದ್ವಿತೀಯಾರ್ಧ ಆರಂಭವಾದ ಬಳಿಕ ಮೆಕ್ಸಿಕೊ ದಾಳಿಯ ಅಬ್ಬರ ಶುರುವಾಯಿತು. 55ನೇ ನಿಮಿಷದಲ್ಲಿ 22 ವರ್ಷದ ಯುವ ಆಟಗಾರ ಮಟಿಯೋ ಚಾವೆಜ್ ವಿಶ್ವಕಪ್‌ನಲ್ಲಿನ ತನ್ನ ಮೊದಲ ಗೋಲು ದಾಖಲಿಸಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಇದಾದ ಕೇವಲ ಆರು ನಿಮಿಷಗಳ ಬಳಿಕ, ಜುಲಿಯನ್ ಕ್ವಿನೋನ್ಸ್ ಗೋಲು ಬಾರಿಸಿ ಮೆಕ್ಸಿಕೊದ ಮುನ್ನಡೆಯನ್ನು 2-0ಕ್ಕೆ ಹೆಚ್ಚಿಸಿದರು. ಪಂದ್ಯದ ಹೆಚ್ಚುವರಿ ವೇಳೆಯಲ್ಲಿ ಅಲ್ವಾರೊ ಫಿಡಾಲ್ಗೊ ಮೂರನೇ ಗೋಲು ದಾಖಲಿಸಿದರು.

- ಎಲ್ಲಾ ಪಂದ್ಯಗಳಲ್ಲಿ ಗೆದ್ದ ಏಕೈಕ ತಂಡ ಮೆಕ್ಸಿಕೊ
- ವಿಶ್ವಕಪ್ ಲೀಗ್ ಪಂದ್ಯಗಳಲ್ಲಿ ಇತಿಹಾಸ

ನಾಕೌಟ್‌ಗೇರಿದ ದ.ಆಫ್ರಿಕಾ

ಗುಡಾಲುಪೆ (ಮೆಕ್ಸಿಕೋ): ಫಿಫಾ ವಿಶ್ವಕಪ್ ಇತಿಹಾಸದಲ್ಲಿ ಮೊದಲ ಬಾರಿಗೆ ದಕ್ಷಿಣ ಆಫ್ರಿಕಾ ನಾಕೌಟ್ ಹಂತಕ್ಕೆ ಪ್ರವೇಶಿಸಿದೆ. ಬುಧವಾರ ನಡೆದ ಗುಂಪು ಎ ಪಂದ್ಯದಲ್ಲಿ ದಕ್ಷಿಣ ಕೊರಿಯಾವನ್ನು 1-0 ಗೋಲುಗಳಿಂದ ಮಣಿಸಿದ ಆಫ್ರಿನ್ನರು, ಐತಿಹಾಸಿಕ ಸಾಧನೆ ಮಾಡಿದರು. ಪಂದ್ಯದ 63ನೇ ನಿಮಿಷದಲ್ಲಿ ಥಾಪೆಲೊ ಮಸೆಕೊ, ತ್ಸೆಪಾಂಗ್ ಮೊರೆಮಿ ನೀಡಿದ ನಿಖರ ಪಾಸ್ ಅನ್ನು ಗೋಲಾಗಿ ಪರಿವರ್ತಿಸಿ ತಂಡಕ್ಕೆ ಅಮೂಲ್ಯ ಜಯ ತಂದುಕೊಟ್ಟರು. ಈ ಗೆಲುವಿನೊಂದಿಗೆ ದಕ್ಷಿಣ ಆಫ್ರಿಕಾ ಗುಂಪಿನಲ್ಲಿ ಎರಡನೇ ಸ್ಥಾನ ಪಡೆದು ನಾಕೌಟ್ ಹಂತಕ್ಕೆ ಅರ್ಹತೆ ಗಳಿಸಿತು. ಗುಂಪಿನ ಅಗ್ರಸ್ಥಾನವನ್ನು ಮೆಕ್ಸಿಕೋ ತನ್ನದಾಗಿಸಿಕೊಂಡಿತು. 1998, 2002 ಹಾಗೂ 2010ರಲ್ಲಿ (ಆತಿಥೇಯರಾಗಿದ್ದಾಗಲೂ) ಗುಂಪು ಹಂತದಲ್ಲೇ ಹೊರಬಿದ್ದಿದ್ದ ದಕ್ಷಿಣ ಆಫ್ರಿಕಾ, ಈ ಬಾರಿ ಆ ಕಹಿ ನೆನಪುಗಳನ್ನು ಅಳಿಸಿ ಹೊಸ ಇತಿಹಾಸ ಬರೆದಿದೆ.

ವಿಶ್ವಕಪ್‌ನಲ್ಲಿ ದಕ್ಷಿಣ ಆಫ್ರಿಕಾದ ಐತಿಹಾಸಿಕ ಸಾಧನೆ: ಮೊದಲ ಬಾರಿಗೆ ನಾಕೌಟ್ ಹಂತಕ್ಕೆ

ಬೋಸ್ನಿಯಾ ಮತ್ತು ಹರ್ಜೆಗೋವಿನಾಗೆ ಗೆಲುವು, ಹೊರಬಿದ್ದ ಕತಾರ್: ಉತ್ತಮ ಪ್ರದರ್ಶನ ನೀಡಿರುವ ಬೋಸ್ನಿಯಾ-ಹರ್ಜೆಗೋವಿನಾ ಕತಾರ್ ತಂಡವನ್ನು ಮಣಿಸಿದೆ. ಹಿಂದಿನ ಪಂದ್ಯಗಳಲ್ಲಿ ಹಿನ್ನಡೆ ಅನುಭವಿಸಿದ್ದ ಬೋಸ್ನಿಯಾ, 3-1ರಿಂದ ಪಂದ್ಯ ಗೆದ್ದಿದೆ. ಕೇರಿಮ್ 29ನೇ ನಿಮಿಷದಲ್ಲಿ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು. ಐದು ನಿಮಿಷ ಬಳಿಕ 34ನೇ ನೇ ನಿಮಿಷಕ್ಕೆ ಮಹುಮದ್ ಅಬುನಂದಾ ಮತ್ತೊಂದು ಗೋಲು ಗಳಿಸಿ ಮುನ್ನಡೆ ವಿಸ್ತರಿಸಿದರು. ಕತಾರ್ ಪರ ಹಸನ್ 42ನೇ ನಿಮಿಷಕ್ಕೆ ಒಂದು ಗೋಲು ಗಳಿಸಿ ಅಂತರ ಕುಗ್ಗಿಸಿದರು. ಆದರೆ ಇಮ್ರಿನ್ 80ನೇ ನಿಮಿಷಕ್ಕೆ ಮತ್ತೊಂದು ಗೋಲು ಗಳಿಸಿ ಗೆಲುವಿನ ದಡ ಸೇರಿಸಿದರು.

ಸ್ವಿಟ್ಜರ್ಲೆಂಡ್ ಅಗ್ರಸ್ಥಾನ, ಕೆನಡಾಗೆ ಐತಿಹಾಸಿಕ ನಾಕೌಟ್ ಟಿಕೆಟ್



ವ್ಯಾಂಕೂವರ್: ರೂಬೆನ್ ವರ್ಗಾಸ್ ಹಾಗೂ ಜೋಹಾನ್ ಮಂಜಾಂಬಿ ಗಳಿಸಿದ ಗೋಲುಗಳ ನೆರವಿನಿಂದ ಸ್ವಿಟ್ಜರ್ಲೆಂಡ್ 2-1 ಅಂತರದಲ್ಲಿ ಕೆನಡಾವನ್ನು ಮಣಿಸಿ ಗುಂಪು ಬಿಯ ಅಗ್ರಸ್ಥಾನವನ್ನು ತನ್ನದಾಗಿಸಿಕೊಂಡಿತು. ಸೋಲು ಕಂಡರೂ ಕೆನಡಾ ವಿಶ್ವಕಪ್ ಇತಿಹಾಸದಲ್ಲೇ ಮೊದಲ ಬಾರಿಗೆ ನಾಕೌಟ್ ಹಂತಕ್ಕೆ ಅರ್ಹತೆ ಪಡೆಯುವ ಮೂಲಕ ಸಂಭ್ರಮಿಸಿತು. ಮೊದಲಾರ್ಧದಲ್ಲಿ ಎರಡೂ ತಂಡಗಳು ಗೋಲುರಹಿತ ಸಮಬಲ ಸಾಧಿಸಿದ್ದವು. ಆದರೆ ದ್ವಿತೀಯಾರ್ಧ ಆರಂಭವಾದ ಕೇವಲ 40 ಸೆಕೆಂಡುಗಳಲ್ಲೇ ರೂಬೆನ್ ವರ್ಗಾಸ್ ಗೋಲು ಬಾರಿಸಿ ಸ್ವಿಸ್ ಪಡೆಗೆ ಮುನ್ನಡೆ ಒದಗಿಸಿದರು. 57ನೇ ನಿಮಿಷದಲ್ಲಿ ಬ್ರಿಲ್ ಎಂಬೊಲೊ ನೀಡಿದ ಪಾಸ್ ಅನ್ನು ಜೋಹಾನ್ ಮಂಜಾಂಬಿ ಗೋಲಾಗಿ ಪರಿವರ್ತಿಸಿ ಮುನ್ನಡೆಯನ್ನು 2-0ಕ್ಕೆ ಹೆಚ್ಚಿಸಿದರು. 76ನೇ ನಿಮಿಷದಲ್ಲಿ ಬದಲಿ ಆಟಗಾರನಾಗಿ ಕಣಕ್ಕಿಳಿದ ಪ್ರಾಮಿಸ್ ಡೇವಿಡ್, ತನ್ನ ಮೊದಲ ಸ್ಪರ್ಶದಲ್ಲೇ ಚೆಂಡನ್ನು ಜಾಲಕ್ಕಟ್ಟಿ ಕೆನಡಾಗೆ ಸಮಾಧಾನದ ಗೋಲು ತಂದುಕೊಟ್ಟರು. ಆದರೆ ಅದಕ್ಕಿಂತ ಹೆಚ್ಚಿನ ಹೋರಾಟ ಸಾಧ್ಯವಾಗದೆ ಪಂದ್ಯ ಸ್ವಿಟ್ಜರ್ಲೆಂಡ್ ಪಾಲಾಯಿತು. ಈ ಗೆಲುವಿನೊಂದಿಗೆ ಸ್ವಿಟ್ಜರ್ಲೆಂಡ್ ಏಳು ಅಂಕಗಳೊಂದಿಗೆ ಗುಂಪಿನ ಅಗ್ರಸ್ಥಾನಿಯಾಗಿ ನಾಕೌಟ್ ಹಂತಕ್ಕೆ ಪ್ರವೇಶಿಸಿತು. ಆರು ಅಂಕಗಳೊಂದಿಗೆ ಕೆನಡಾ ಎರಡನೇ ಸ್ಥಾನ ಪಡೆದಿತು.

ಶ್ರೇಯಸ್‌ಗೆ ಮೊದಲ ಟಾಸ್ಕ್!

ಬೆಲ್‌ಫಾಸ್ಟ್(ಐರ್ಲೆಂಡ್): ನೂತನ ತಂಡ ಮತ್ತು ನೂತನ ನಾಯಕನೊಂದಿಗೆ ಮೈದಾನಕ್ಕಿಳಿಯಲು ಸಜ್ಜಾಗಿ ರುವ ಭಾರತ ಟಿ20 ತಂಡ ಶುಕ್ರವಾರದಂದು ಐರ್ಲೆಂಡ್ ತಂಡವನ್ನು ಎದುರಿಸಲಿದೆ.

ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗೆ ಕ್ರಿಕೆಟ್ ಸೇರಿಕೊಂಡಿರುವ ನಿಟ್ಟಿನಲ್ಲಿ ಭಾರತ ಸಿದ್ಧಗೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಶ್ರೇಯಸ್ ಅಯ್ಯರ್ ನೇತೃತ್ವದಲ್ಲಿ ಹೊಸ ತಂಡವನ್ನೇ ಘೋಷಿಸಿರುವ ಬಿಸಿಸಿಐ ಟಿ20ಯಲ್ಲಿ ಹೊಸ ಅಧ್ಯಾಯ ಬರೆಯುವುದಕ್ಕೆ ಸಿದ್ಧವಾಗಿದೆ. ಬೆಲ್‌ಫಾಸ್ಟ್‌ನಲ್ಲಿ ಈ ಪಂದ್ಯ ನಡೆಯಲಿದೆ.

ಇಂದಿನಿಂದ ಐರ್ಲೆಂಡ್ ಟಿ20 ಸರಣಿ

ಹೊಸ ತಂಡಕ್ಕೆ ಹತ್ತಾರು ಜವಾಬ್ದಾರಿ: ಪಂಜಾಬ್ ಕಿಂಗ್ಸ್ ತಂಡವನ್ನು ಮುನ್ನಡೆಸಿರುವ ರೀತಿ ಗಮನಿಸಿರುವ ಬಿಸಿಸಿಐ ಸೂರ್ಯಕುಮಾರ್ ಯಾದವ್ ಅವರಿಗೆ ಗೇಟ್ ಪಾಸ್ ನೀಡಿ, ಶ್ರೇಯಸ್ ಅಯ್ಯರ್‌ಗೆ ನಾಯಕತ್ವ ಪಟ್ಟ ಕಟ್ಟಿದೆ. ಆದಾಗ್ಯೂ ಸಾಬೀತು ಪಡಿಸಿಕೊಳ್ಳುವ ಸವಾಲನ್ನು ಹೊಂದಿರುವ ಭಾರತ ತಂಡ ಐರ್ಲೆಂಡ್ ಪರೀಕ್ಷೆ ಎದುರಿಸಬಹುದು. ಹೊಸ ಸಂಯೋಜನೆ ತಂಡದಲ್ಲಿದೆ. ವಿಶ್ವ ಚಾಂಪಿಯನ್ ಎಂಬ ಪಟ್ಟ ಕಟ್ಟಿಕೊಂಡಿರುವ ಭಾರತಕ್ಕೆ ಗೆಲ್ಲುವುದೊಂದೆ ಪ್ರಮುಖ ಗುರಿಯಾಗಿದೆ.

ಪಿಚ್ ರಿಪೋರ್ಟ್: ಬೆಲ್‌ಫಾಸ್ಟ್‌ನಲ್ಲಿ ಪಂದ್ಯ ನಡೆಯಲಿದೆ. ಸಾಮಾನ್ಯವಾಗಿ ಐರ್ಲೆಂಡ್‌ನ ದೇಶಿ ಕ್ರಿಕೆಟ್ ಪಂದ್ಯಗಳೇ ಇಲ್ಲಿ ಹೆಚ್ಚು ನಡೆಯುತ್ತವೆ. ಬ್ಯಾಟರ್‌ಗಳಿಗೆ ಅಲ್ಪ ಅನುವು ಮಾಡಿಕೊಡಬಹುದು. ಹೆಚ್ಚಿನ ಕ್ರ್ಯಾಕ್ ಇರುವುದು ಬೌಲರ್‌ಗಳಿಗೂ ಅಲ್ಪ ಬಲ ಸಿಗಬಹುದು ಮೊದಲು ಬೌಲಿಂಗ್ ಮಾಡುವ ತಂಡಕ್ಕೆ ಲಾಭ.

ಹೊಸಬರಿಗೆ ಅವಕಾಶ

ಶ್ರೇಯಸ್ ಅಯ್ಯರ್ ನಾಯಕತ್ವ ದಲ್ಲಿ ವೈಭವ್ ಸೂರ್ಯವಂಶಿ ಪದಾರ್ಪಣೆ ಮಾಡುವ ಸಾಧ್ಯತೆಗಳಿವೆ. ತಿಲಕ್ ವರ್ಮಾ ಉಪನಾಯಕರಾಗಲಿದ್ದು, ಸಂಜು ಸ್ಯಾಮ್ಸನ್, ಇಶಾನ್ ಕಿಶನ್, ಅಭಿಷೇಕ್ ಶರ್ಮ, ಶಿವಂ ದುಬೆ, ಅರ್ಷದೀಪ್ ಸಿಂಗ್ ಸೇರಿದಂತೆ ವಿವಿಧ ಯುವಕರು ಕಣಕ್ಕಿಳಿಯಬಹುದು. ಐಪಿಎಲ್‌ನಲ್ಲಿ ಮಿಂಚಿರುವ ಸೂರ್ಯಾಂಶ್ ಶೇಡ್ಗೆ, ಪ್ರಿನ್ಸ್ ಯಾದವ್ ಮತ್ತು ರವಿ ಬಿಷ್ಣೋಯ್ ಕೂಡ ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ಅಲ್ಲದೆ ಬಹು ದಿನಗಳ ನಂತರ ಹರ್ಷಿತ್ ರಾಣಾ ತಂಡದಲ್ಲಿ ಕಾಣಿಸಿಕೊಳ್ಳುವ ನಿರೀಕ್ಷೆಗಳೂ ಇವೆ.

ಶೆಫಾಲಿ ಅಬ್ಬರಕ್ಕೆ ಬಸವಳಿದ ಬಾಂಗ್ಲಾ

ಮ್ಯಾಂಚೆಸ್ಟರ್: ಬಾಂಗ್ಲಾ ತಂಡವನ್ನು ಮನಬಂದಂತೆ ದಂಡಿಸಿದ ಶೆಫಾಲಿ ವರ್ಮಾ ಭಾರತದ ಸೆಮಿಫೈನಲ್ ಕನಸನ್ನು ಇನ್ನಷ್ಟು ಭದ್ರವಾಗಿಸಿದರು. ದ.ಆಫ್ರಿಕಾ ತಂಡದೊಂದಿಗೆ ಸೋತು ಹಿನ್ನಡೆ ಅನುಭವಿಸಿದ್ದ ಭಾರತ ಮಹಿಳೆಯರ ತಂಡವು ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಪುನರಾಗಮನ ಮಾಡಿದೆ.

ಸಾಂಘಿಕ ಬೌಲಿಂಗ್ ದಾಳಿ, ಶೆಫಾಲಿ ವರ್ಮಾ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಕೌರ್ ಪಡೆಯು ಗುರುವಾರ ನಡೆದ ಪಂದ್ಯದಲ್ಲಿ ಬಾಂಗ್ಲಾವನ್ನು9 ವಿಕೆಟ್‌ಗಳಿಂದಭರ್ಜರಿ ಗೆಲುವು ದಾಖಲಿಸಿತು. ಇದರೊಂದಿಗೆತನ್ನಎರಡನೇಸ್ಥಾನ ಭದ್ರವಾಗಿಸಿದೆ. ಬ್ಯಾಟಿಂಗ್ ಆಯ್ದುಕೊಂಡ ಬಾಂಗ್ಲಾ ಸ್ಪಿನ್ ದಾಳಿಗೆ ಉರುಳಿತು. ಕಷ್ಟದ ಸಮಯದಲ್ಲಿ ಫೇರ್‌ಡೋಸ್ 33, ನಿಗಾರ್ ಸುಲ್ತಾನ್ 32 ರನ್‌ನೊಂದಿಗೆ ಆಸರೆಯಾದರು. ಪರಿಣಾಮ 20 ಓವರ್‌ಗಳಲ್ಲಿ ಪರದಾಡಿ 136 ರನ್ ಗಳಿಸಿತು. ರಾಧಾ 3, ಚಾರಣಿ 2, ನಂದಿನಿ ಮತ್ತು ರೇಣುಕಾ ಒಂದರಂತೆ ಭಾರತ 8 ವಿಕೆಟ್ ಪಡೆದುಕೊಂಡಿತು. ಗುರಿ ಬೆನ್ನತ್ತಿದ ಭಾರತ 16.5 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 139 ರನ್ ಗಳಿಸಿ ಗೆದ್ದಿತು. ಮೊದಲಿನಿಂದಲೂ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದ ಶೆಫಾಲಿ ವರ್ಮಾ ಕ್ಷಣ ಮಾತ್ರಕ್ಕೂ ನಿಲ್ಲದೆ ದಂಡಿಸಿದರು. ಅವರಿಗೆ ಯಸ್ತಿಕಾ(23) ಸಾಥ್ ಸಿಕ್ಕಿತು. ಶೆಫಾಲಿ ವರ್ಮಾ 34 ಬಾಲ್‌ಗಳಲ್ಲಿ 53 ರನ್ ಗಳಿಸಿ ಔಟಾದರು. ಮುಂದೆ ಬಂದ ಬ್ಯಾಟರ್‌ಗಳು ಕೈಕೊಟ್ಟರೂ ಜೆಮಿಮಾ ರಾಡ್ರಿಗ್ಸ್ 26 ರನ್ ಬಾರಿಸಿ ಪಂದ್ಯ ಗೆಲ್ಲಿಸಿದರು.

ಸಂಕ್ಷಿಪ್ತ ಸ್ಕೋರ್

ಬಾಂಗ್ಲಾ 20 ಓವರ್‌ಗಳಲ್ಲಿ 136/8: ಫೇರ್‌ಡೋಸ್ 33, ನಿಗಾರ್ 32; ರಾಧಾ 28/3, ಚಾರಣಿ 21/2
ಭಾರತ 16.5 ಓವರ್‌ಗಳಲ್ಲಿ 139/5: ಶೆಫಾಲಿ 53, ರಾಡ್ರಿಗ್ಸ್ 26; ರಿತು 29/2

ಭಾರತಕ್ಕೆ ಸುಲಭದ ತುತ್ತು

ಗುರಿ ಬೆನ್ನತ್ತುವಾಗ ಶೆಫಾಲಿ ವರ್ಮಾ ಯಾವುದೇ ಮುಲಾಜಿಲ್ಲದೆ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಸ್ಮೃತಿ ಮಂಧಾನ ಸೆಟ್ ಆಗುವತ್ತ ಸಾಗಿದರೆ, ಶೆಫಾಲಿ ಬೌಂಡರಿಗಳೊಂದಿಗೆ ಬಿರುಸಿನ ಬ್ಯಾಟಿಂಗ್ ಮಾಡಿದರು. ಪವರ್‌ಪ್ಲೇನಲ್ಲಿ ಭಾರತ 1 ವಿಕೆಟ್ ಮಾತ್ರಕ್ಕೆ 63 ರನ್ ಗಳಿಸಿತ್ತು. ಮಂಧಾನ 8 ರನ್‌ಗೆ ಔಟಾಗಿದ್ದರು. ಮೂರನೇ ಕ್ರಮಾಂಕದಲ್ಲಿ ಬಂದ ಯಸ್ತಿಕಾ ಕೂಡ ಬೌಂಡರಿಗಳೊಂದಿಗೆ ಮಿಂಚಿದರು. ಅರ್ಧಶತಕ ಬಾರಿಸುತ್ತಲೆ ಅವರು ವಿಕೆಟ್ ಒಪ್ಪಿಸಿದರು. ಭಾರತ ದಿಢೀರ್ ಕುಸಿತ ಕಂಡಿತ್ತು. ರಾಡ್ರಿಗ್ಸ್ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಪಂದ್ಯ ಭಾರತದ ಕೈಗಿಟ್ಟು ವಿಕೆಟ್ ಒಪ್ಪಿಸಿದರು. ಕೊನೆಯಲ್ಲಿ ದೀಪ್ತಿ ವಿನ್ನಿಂಗ್ ಶಾಟ್ ಬಾರಿಸಿ ಗೆಲ್ಲಿಸಿದರು.

ಯುಎಸ್ ಓಪನ್: ಕಿಡಂಬಿ, ತನ್ವಿ ಶುಭಾರಂಭ

ಹೊಸದಿಲ್ಲಿ: ಅನುಭವಿ ಕಿಡಂಬಿ ಶ್ರೀಕಾಂತ್, ಯುವ ಆಟಗಾರ ರೋಣಕ್ ಚೌಹಾಣ್, ತನ್ವಿ ಶರ್ಮ ಸೇರಿದಂತೆ ಭಾರತದ ಶಟ್ಲರ್‌ಗಳು ಯುಎಸ್ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಶುಭಾರಂಭ ಮಾಡಿದರು.

ಗುರುವಾರ ನಡೆದ ಪಂದ್ಯಗಳಲ್ಲಿ ಶ್ರೀಕಾಂತ್ ಸ್ವದೇಶದ ದಯಾನಂದ ವಿರದ್ಧ 21-14, 21-12ರಿಂದ ಗೆಲುವು ಸಾಧಿಸಿದರು. ರೌಣಕ್ ಚೌಹಾಣ್ ಕೂಡ ಸ್ವದೇಶದ ಸುಬ್ರಮಣಿ ಅವರೊಂದಿಗೆ 23-11, 21-16ರಿಂದ ಗೆಲುವು ಸಾಧಿಸಿದರು. ಮಹಿಳೆಯರ ವಿಭಾಗದಲ್ಲಿ ತನ್ವಿ ಶರ್ಮ ವೈ ಲಿ ಅವರೊಂದಿಗೆ 21-19, 21-11ರಿಂದ ಭರ್ಜರಿ ಗೆಲುವು ಸಾಧಿಸಿದರು. ರಕ್ಷಿತಾ ರಾಮ್‌ರಾಜ್ ಸ್ವಾಬಿಕೋವಾ ವಿರುದ್ಧ 21-15, 21-18ರಿಂದ ಗೆಲುವು ಸಾಧಿಸಿದರು. ಡಿ. ಸಿಹಾಗ್ ಕಾಸ್ಟಿಲ್ಲೊ ಅವರೊಂದಿಗೆ 21-14, 21-14ರಿಂದ ಗೆಲುವು ಸಾಧಿಸಿದರು.

ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ ಅನರ್ಹ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಕಾರ್ಯದರ್ಶಿ ಸಂತೋಷ್ ಮೆನನ್ ಅವರು ಹುದ್ದೆಯಲ್ಲಿ ಮುಂದುವರಿಯಲು ಅರ್ಹರಲ್ಲ ಎಂದು ಬಿಸಿಸಿಐ ಒಂಬುಡ್ಸ್‌ಮನ್ ತೀರ್ಪು ನೀಡಿದ್ದು, ಹುದ್ದೆ ಖಾಲಿಯಿದೆ ಎಂದು ಘೋಷಿಸಿದ್ದಾರೆ.

ಕೆಎಸ್‌ಸಿಎ ಸಾಂಸ್ಥಿಕ ಸದಸ್ಯ ಡಾಲ್ಫಿನ್ ಕ್ರಿಕೆಟರ್ಸ್ ಸಲ್ಲಿಸಿದ ದೂರಿನ ಮೇರೆಗೆ ಬಿಸಿಸಿಐ ಒಂಬುಡ್ಸ್‌ಮನ್ ನ್ಯಾಯಮೂರ್ತಿ ಅರುಣ್ ಮಿಶ್ರಾ (ನಿವೃತ್ತ) ಈ ನಿರ್ಧಾರ ತೆಗೆದುಕೊಂಡಿದ್ದಾರೆ. ನಿಯಮಗಳ ಅಡಿಯಲ್ಲಿ ಮೆನನ್ ಗರಿಷ್ಠ ಅನುಮತಿಸುವ ಒಂಬತ್ತು ವರ್ಷಗಳ ಅಧಿಕಾರಾವಧಿಯನ್ನು ಪೂರ್ಣಗೊಳಿಸಿದ್ದಾರೆ. ಕೆಎಸ್‌ಸಿಎ ವ್ಯವಸ್ಥಾಪಕ ಸಮಿತಿ ಸದಸ್ಯರಾಗಿ (ಡಿಸೆಂಬರ್ 2013 ರಿಂದ ಡಿಸೆಂಬರ್ 2019) ಮತ್ತು ಕೆಎಸ್‌ಸಿಎ ಕಾರ್ಯದರ್ಶಿಯಾಗಿ (ಡಿಸೆಂಬರ್ 2019 ರಿಂದ ನವೆಂಬರ್ 2022) ಮೆನನ್ ಅವರ ಅಧಿಕಾರಾವಧಿಯನ್ನು ಗಣನೆಗೆ ತೆಗೆದುಕೊಂಡಾಗ ಅವರ ಅಧಿಕಾರಾವಧಿ ಒಂಬತ್ತು ವರ್ಷಗಳನ್ನು ಮೀರಿದೆ ಎಂದು ದೂರುದಾರರು ವಾದಿಸಿದ್ದಾರೆ. ಈ ಬಗ್ಗೆ ಕೆಎಸ್‌ಸಿಎ ಹೇಳಿಕೆ ನೀಡಿದ್ದು, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ)ಒಂಬುಡ್ಸ್‌ಮನ್ ನೀಡಿರುವ ಆದೇಶವನ್ನು ನಾವು ಗಮನಿಸಿದ್ದು, ನಾವು ಕಾನೂನನ್ನು ಎತ್ತಿಹಿಡಿಯಲು ಬದ್ಧರಾಗಿದ್ದು , ಸಂಘದ ಹಿತಾಸಕ್ತಿಯನ್ನು ಕಾಪಾಡುವ ಕಾನೂನು ಚೌಕಟ್ಟಿನ ಸಂಪೂರ್ಣ ಅನುಸರಣೆಯನ್ನು ಖಚಿತಪಡಿಸುತ್ತೇವೆ ಎಂದಿದೆ.=

ಕರಾವಳಿ ಕಿಂಗ್ಸ್‌ಗೆ ಭರ್ಜರಿ ಜಯ



ಮೈಸೂರು: ಅನುಭವಿ ಆಟಗಾರರಾದ ಕರುಣ್ ನಾಯರ್ ಹಾಗೂ ಶ್ರೇಯಸ್ ಗೋಪಾಲ್ ಅವರ ಅದ್ಭುತ ಬ್ಯಾಟಿಂಗ್ ನೆರವಿನಿಂದ ಕರಾವಳಿ ಕಿಂಗ್ಸ್ ಮಂಗಳೂರು ತಂಡ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿಯಲ್ಲಿ ಮೈಸೂರು ವಾರಿಯರ್ಸ್ ವಿರುದ್ಧ ಆರು ವಿಕೆಟ್‌ಗಳ ಭರ್ಜರಿ ಜಯ ದಾಖಲಿಸಿತು.


192 ರನ್‌ಗಳ ಕಠಿಣ ಗುರಿ ಬೆನ್ನಟ್ಟಿದ ಕರಾವಳಿ ಕಿಂಗ್ಸ್ ಆರಂಭದಲ್ಲೇ 42 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಆದರೆ ನಾಲ್ಕನೇ ವಿಕೆಟ್‌ಗೆ ಕರುಣ್ ನಾಯರ್ ಮತ್ತು ಶ್ರೇಯಸ್ ಗೋಪಾಲ್ ಕೇವಲ 60 ಎಸೆತಗಳಲ್ಲಿ 123 ರನ್‌ಗಳ ಅಮೋಘ ಜೊತೆಯಾಟ ನಿರ್ಮಿಸಿ ಪಂದ್ಯದಲ್ಲಿ ಜೀವ ತುಂಬಿದರು. ಕರುಣ್ ನಾಯರ್ 32 ಎಸೆತಗಳಲ್ಲಿ 61 ರನ್ ಗಳಿಸಿದರು. ಅವರ ಬ್ಯಾಟಿಂಗ್‌ನಲ್ಲಿ 6 ಬೌಂಡರಿ ಹಾಗೂ 3 ಸಿಕ್ಸರ್‌ಗಳು ಸೇರಿದ್ದವು. ಇನ್ನೊಂದೆಡೆ ಶ್ರೇಯಸ್ ಗೋಪಾಲ್ ಕೊನೆಯವರೆಗೂ ಅಜೇಯರಾಗಿ ಉಳಿದು 43 ಎಸೆತಗಳಲ್ಲಿ 84 ರನ್‌ಗಳ ಪಂದ್ಯಶ್ರೇಷ್ಠ ಇನ್ನಿಂಗ್ಸ್ ಕಟ್ಟಿದರು. 9 ಬೌಂಡರಿ ಮತ್ತು 3 ಸಿಕ್ಸರ್‌ಗಳೊಂದಿಗೆ ಮಿಂಚಿದ ಅವರು ಬೌಲಿಂಗ್‌ನಲ್ಲೂ 2 ವಿಕೆಟ್ ಪಡೆದು ಆಲ್‌ರೌಂಡ್ ಪ್ರದರ್ಶನ ನೀಡಿದರು. ಇದಕ್ಕೂ ಮೊದಲು ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮೈಸೂರು ವಾರಿಯರ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 191 ರನ್ ಗಳಿಸಿತು. ಕಳೆದ ಪಂದ್ಯದಲ್ಲಿ ಶತಕ ಸಿಡಿಸಿದ್ದ ಚೇತನ್ ಎಲ್.ಆರ್. ಮತ್ತೊಮ್ಮೆ ಮಿಂಚಿ 35 ಎಸೆತಗಳಲ್ಲಿ 67 ರನ್ ಗಳಿಸಿದರು. ಯುವರಾಜ್ ಅರೋರಾ 22 ಎಸೆತಗಳಲ್ಲಿ 37 ರನ್‌ಗಳ ಕಾಣಿಕೆ ನೀಡಿದರು. ಕರಾವಳಿ ಕಿಂಗ್ಸ್ ಪರ ವಾಸುಕಿ ಕೌಶಿಕ್ 3 ವಿಕೆಟ್ ಪಡೆದು ಯಶಸ್ವಿ ಬೌಲರ್ ಎನಿಸಿದರು.

ಶಿವಮೊಗ್ಗಕ್ಕೆ ಗೆಲುವು

ಬುಧವಾರ ರಾತ್ರಿ ನಡೆದ ಪಂದ್ಯದಲ್ಲಿ ಶಿವಮೊಗ್ಗ ಯೋಧಾಸ್ ತಂಡವು ಹುಬ್ಬಳ್ಳಿಯನ್ನು 42 ರನ್‌ಗಳಿಂದ ಮಣಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಶಿವಮೊಗ್ಗ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 220 ರನ್ ಗಳಿಸಿತು. ನವೀನ್ 75, ಲವನೀತ್ 57 ರನ್ ಗಳಿಸಿದರು. ಸ್ಮರಣ್ 37 ರನ್‌ಗಳಿಸಿ ಸ್ಕೋರ್ ಹಿಗ್ಗಿಸಿದರು. ಗುರಿ ಬೆನ್ನತ್ತಿದ ಹುಬ್ಬಳ್ಳಿ 19.3 ಓವರ್‌ಗಳಲ್ಲಿ 178 ರನ್‌ಗಳಿಸಿ ಆಲೌಟ್ ಆಯಿತು. ತಾಹಾ 44, ಹಾರ್ದಿಕ್ 43 ರನ್ ಗಳಿಸಿದರು. ಶಿವಮೊಗ್ಗ ಪರ ಅಭಿಲಾಷ್ ಶೆಟ್ಟಿ 4 ವಿಕೆಟ್ ಕಿತ್ತರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6026

ಎಡದಿಂದ ಬಲಕ್ಕೆ

1.ವಿದ್ಯೆ-ಕಲೆ-ಬುದ್ಧಿವಂತಿಕೆಯ ದೇವತೆ (4)
3.ನೆಮ್ಮದಿಯಿಂದ ಕೂಡಿದ ರಾಜ್ಯ (4)
5.ಕೊನೆಯಾಯ್ತು-ಮುಗಿಯಿತು ಎಂಬರ್ಥದ ಶಬ್ದ (3)
6.ಆ ವಯಸ್ಕ ವ್ಯಕ್ತಿಯ ದೇಹದ ಅಂಗ (4)
8.ಪಟಾಕಿ-ಬೆಂಕಿಪೊಟ್ಟಣ ತಯಾರಿಕೆಗೆ ಬೇಕಾದ ರಸಾಯನಿಕ (3)
10.ಗೌರವ ಪೂರ್ವಕವಾಗಿ ಸಲ್ಲಿಸುವ ನಮಸ್ಕಾರ (3)
12.ಸಮಸ್ಯೆಗೆ ಉತ್ತರ ಸಿಕ್ಕು ವಿವಾದ ಕೊನೆಗೊಳ್ಳುವುದು (4)
14.ಆಸೆಗಳನ್ನು ತೊರೆದ ಸೂಫಿ ಸಾಧಕ (3)
15.ಮಂದಿಯ ಒಕ್ಕೂಟಕ್ಕಿರುವ ಶಕ್ತಿ (4)
16.ಹರಿಗೆ ಈ ನಡುವೆ ಕಂಡ ಮೊಂಡುವ್ಯಕ್ತಿ (4)

ಮೇಲಿನಿಂದ ಕೆಳಕ್ಕೆ

1.ಕನಿಕರದಿಂದ ಕೂಡಿದ ಕಳವಳ ತಲೆಕೆಳಗಾಗಿದೆ (3)
2.ಉಲ್ಟಾ ಕಾಣುತ್ತಿರುವ ತಂಗಲು ಇರುವ ಸೌಲಭ್ಯ (3)
3.ಮಲಗಿದಂತಿರುವ ಒಳಗಿನ ಶಕ್ತಿ (5)
4.ಅರಸನು ಇರುವ ನಿವಾಸ (5)
7.ಸ್ಥೂಲಕಾಯದ ವ್ಯಕ್ತಿ ತಲೆಕೆಳಗಾಗಿದ್ದಾನೆ (3)
8.ಕೇಳುಗರನ್ನು ಮೈಮರೆಸುವ ದಿವ್ಯ ಗಾಯನ (5)
9.ಬಾಳೆಹಣ್ಣಿನ ಸಂಸ್ಕೃತನಾಮ (5)
11.ಬೆಣ್ಣೆ ತೆಗೆದ ಮೇಲೆ ಉಳಿವ ದ್ರವ (3)
12.ಕನ್ನಡ ಟೈಪಿನಲು ಬಳಸುವ ಪ್ರಸಿದ್ಧ ತಂತ್ರಾಂಶ (3)
13.ಕೆಟ್ಟ ಯಂತ್ರ ಸರಿಪಡಿಸುವ ಕ್ರಿಯೆ (3)

6025 ಉತ್ತರ

ಎಡದಿಂದ ಬಲಕ್ಕೆ:
1.ಪನ್ನಗ 4.ಸುಕೃತಕರ್ಮಿ
6.ನೀರಜ 7.ಸಮಯ
9.ನರಕುಲ 10.ಭಾನುಮತಿ
12.ಗರತಿ 14.ಕೋವಿದ
15.ಅಂತರಪಟ 17.ಕೆದರು

ಮೇಲಿನಿಂದ ಕೆಳಕ್ಕೆ:
1.ಪರಿಹಾಸ
2.ಗಣನೀಯ 3.ಶೀತ
4.ಸುಜನ 5.ಕಡಲತೀರ
8.ಮಹಾಭಾರತ
11.ತಿಕೋಟ 12.ಗದರಿಕೆ
13.ತಿಳಿಸಾರು 16.ರಘು

ಕಿರುಸುದ್ದಿ

ಮೂಲ್ಕಿ : ಗಾಂಜಾ ಸಾಗಾಟ ಮಾಡುತ್ತಿದ್ದ ವ್ಯಕ್ತಿಯ ಬಂಧನ

ಮುಲ್ಕಿ: ಪೊಲೀಸ್ ಠಾಣಾ ವ್ಯಾಪ್ತಿಯ ರೈಲ್ವೇ ನಿಲ್ದಾಣ ರಸ್ತೆಯಲ್ಲಿ ಗಾಂಜಾ ಸಾಗಾಟ ಮಾಡುತ್ತಿದ್ದ ಆರೋಪಿಯನ್ನು ಮುಲ್ಕಿ ಪೊಲೀಸರು ಬಂಧಿಸಿ ಆತನಿಂದ ಸುಮಾರು 2 ಲಕ್ಷ ಮೌಲ್ಯದ 4 ಕೆ.ಜಿ. ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಯನ್ನು ಉಳ್ಳಾಲ ತಾಲೂಕಿನ ಕೋಟೆಕಾರ್ ಗ್ರಾಮದ ಹಿದಾಯತ್ ನಗರ ಮುಳ್ಳುಗುಡ್ಡೆಯ ಹಿದಾಯತ ಮಸೀದಿ ಸಮೀಪದ ನಿವಾಸಿ ಅಬ್ಬಾಸ್ (50) ಎಂದು ಗುರುತಿಸಲಾಗಿದೆ.



ಗುರುವಾರದಂದು ಮುಲ್ಕಿ ರೈಲ್ವೇ ನಿಲ್ದಾಣ ರಸ್ತೆಯಲ್ಲಿ ಆರೋಪಿ ಗಾಂಜಾವನ್ನು ಸಾಗಾಟ ಮಾಡುತ್ತಿದ್ದ ವೇಳೆ ಮಾಹಿತಿ ಪಡೆದ ಮುಲ್ಕಿ ಪೊಲೀಸರು ಕಾರ್ಯ ಪ್ರವೃತ್ತರಾಗಿ ಆತನನ್ನು ವಶಕ್ಕೆ ಪಡೆದು ತಪಾಸಣೆ ನಡೆಸಿದ ವೇಳೆ ಆತನ ಬಳಿಯಿದ್ದ 4 ಕೆ.ಜಿ. ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ. ಮುಲ್ಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ಮಾದಕ ದ್ರವ್ಯ ಮಾರಾಟ ಪ್ರಕರಣ: ಆರೋಪಿಗಳ ಸೆರೆ

ಮಂಗಳೂರು: ಮಂಗಳೂರು ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ದಾಖಲಾದ ಎಂಡಿಎಂಎ ಮಾರಾಟ ಮಾಡಿದ ಪ್ರತ್ಯೇಕ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಬೆಂಗಳೂರು ಹಲಸೂರು ನಿವಾಸಿ ಮೊಹಮ್ಮದ್ ನದೀಂ (27), ಉಚ್ಚಿಲ ಸೋಮೇಶ್ವರ ನಿವಾಸಿ ಉಮರುಲ್ ಫಾರೂಕ್ (30), ಕೆ.ಸಿ. ರೋಡ್ ಕಿನ್ಯಾ ನಿವಾಸಿ ಇಮ್ತಿಯಾಜ್ ಇಸ್ಮಾಯಿಲ್ (41), ಕುಂಪಲ ಸುಭಾಷ್ ನಗರ ನಿವಾಸಿ ಧನುಷ್ (29) ಬಂಧಿತರು. ಬೆಂದೂರುನಲ್ಲಿರುವ ಲಾಡ್ಜ್‌ನಲ್ಲಿ ಆರೋಪಿಗಳಾದ ಮೊಹಮ್ಮದ್ ನದೀಂ, ಉಮರುಲ್ ಫಾರೂಕ್, ಇಮ್ತಿಯಾಜ್ ಇಸ್ಮಾಯಿಲ್ ನಿಷೇಧಿತ ಮಾದಕ ವಸ್ತುವಾದ ಎಂಡಿಎಂಎಯನ್ನು ಸಾರ್ವಜನಿಕರಿಗೆ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಪಡೆದ ಸಿಸಿಬಿ ಘಟಕದ ಅಧಿಕಾರಿ, ಸಿಬ್ಬಂದಿ ಮಾಹಿತಿ ಸಂಗ್ರಹಿಸಿ ದಾಳಿ ಮಾಡಿದ್ದಾರೆ. ಈ ಸಂದರ್ಭ ಸುಮಾರು 35.53 ಗ್ರಾಂ ಎಂಡಿಎಂಎಯನ್ನು, 7030 ರೂ. ನಗದು ಸೇರಿದಂತೆ ಇತರ ವಸ್ತುಗಳನ್ನು ಸ್ವಾಧೀನಪಡಿಸಲಾಗಿದೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯ ನ್ಯಾಯಾಂಗ ಬಂಧನ ವಿಧಿಸಿದೆ. ಎರಡನೇ ಪ್ರಕರಣ ಬೋಳಾರದಲ್ಲಿ ನಡೆದಿದೆ. ನಗರದ ಬೋಳಾರ ಮುಳಿಹಿತ್ಲು ಬಳಿಯಲ್ಲಿ ಆರೋಪಿ ಧನುಷ್ ನಿಷೇಧಿತ ಮಾದಕ ವಸ್ತುವಾದ ಎಂಡಿಎಂಎ ಸಾರ್ವಜನಿಕರಿಗೆ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದ. ಈ ಬಗ್ಗೆ ಪಾಂಡೇಶ್ವರ ಪೊಲೀಸರು ದಾಳಿ ನಡೆಸಿ 2.32ಗ್ರಾಂ ಎಂಡಿಎಂಎ ಸೊತ್ತುಗಳನ್ನು ಸ್ವಾಧೀನಪಡಿಸಿದ್ದಾರೆ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

ಗ್ರಾಹಕ ನ್ಯಾಯಾಲಯದ ಆದೇಶ ಉಲ್ಲಂಘನೆ: ಉದ್ಯಮಿಗೆ 3 ವರ್ಷ ಜೈಲು

ಉಡುಪಿ: ಜಿಲ್ಲಾ ಗ್ರಾಹಕರ ವಿವಾದಗಳ ಪರಿಹಾರ ಆಯೋಗದ ಆದೇಶವನ್ನು ಪಾಲಿಸದ ಹಿನ್ನೆಲೆಯಲ್ಲಿ ಉಡುಪಿಯ ಉದ್ಯಮಿ ಅಮೃತ್ ಶೆಣೈ ಅವರಿಗೆ 3 ವರ್ಷಗಳ ಸಾದಾ ಶಿಕ್ಷೆ ಹಾಗೂ 1 ಲಕ್ಷ ರೂಪಾಯಿ ದಂಡ ವಿಧಿಸಲಾಗಿದೆ. ಅಮೃತ್ ಶೆಣೈ ಅವರು ದೂರುದಾರ ಸಂತೋಷ್ ಪೈ ಅವರಿಗೆ ಅಪಾರ್ಟ್‌ಮೆಂಟ್ ಮನೆ ರಿಜಿಸ್ಟ್ರೇಷನ್ ಮಾಡಿಕೊಡದ ಅಥವಾ ರೂ. 27,20,000 ಹಣವನ್ನು ಶೇ. 9ರ ಬಡ್ಡಿಯೊಂದಿಗೆ ನೀಡಬೇಕೆಂಬ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿದ್ದರು. ಈ ಹಿನ್ನೆಲೆಯಲ್ಲಿ ಗ್ರಾಹಕ ಸಂರಕ್ಷಣಾ ಕಾಯ್ದೆಯಡಿ ಅಪರಾಧ ಪರಿಗಣಿಸಿ ಆಯೋಗವು ಜೂನ್ 24ರಂದು ಶಿಕ್ಷೆ ಪ್ರಕಟಿಸಿ, ವಾರಂಟ್ ಹೊರಡಿಸಿತ್ತು. ಅದರಂತೆ ಜೂನ್ 25ರಂದು ಆರೋಪಿ ಅಮೃತ್ ಶೆಣೈ ಅವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಸದ್ಯ ಹಿರಿಯಡ್ಕ ಕಾರಾಗೃಹಕ್ಕೆ ಒಪ್ಪಿಸಲಾಗಿದೆ.

ಮಾದಕ ವಸ್ತು ಮಾರಾಟ: ಎಂಡಿಎಂಎ ಸಹಿತ ಇಬ್ಬರ ಸೆರೆ

ಕುಂಬಳೆ: ಮಾದಕ ವಸ್ತುಗಳ ವಿರುದ್ಧ ಕಾಸರಗೋಡು ಜಿಲ್ಲಾ ಪೊಲೀಸರು ಆರಂಭಿಸಿರುವ ಆಪರೇಶನ್ ತೂಫಾನ್ ಕಾರ್ಯಾಚರಣೆ ತೀವ್ರಗೊಳಿಸಿದ್ದು, ಅದರಂತೆ ಮತ್ತಿಬ್ಬರನ್ನು ಕುಂಬಳೆ ಪೊಲೀಸರು ಬಂಧಿಸಿದ್ದಾರೆ. ಬಂಬ್ರಾಣ ಕಲ್ಲೆಟ್ಟಿ ಹೌಸ್‌ನ ಹಂಸ (40), ಕುಂಟಂಗೇರಡ್ಕ ಶಾಲೆ ಬಳಿಯ ನಿವಾಸಿ ಅಬ್ದುಲ್ ನಿಸಾರ್ (32) ಎಂಬವರನ್ನು ಕುಂಬಳೆ ಎಸ್‌ಐ ಗಣೇಶನ್ ನೇತೃತ್ವದಲ್ಲಿ ಬಂಧಿಸಲಾಗಿದೆ.ಅಬ್ದುಲ್ ನಿಸಾರ್‌ನನ್ನು ತಪಾಸಣೆ ನಡೆಸಿದಾಗ ಆತನ ಕೈಯಿಂದ 0.9 ಗ್ರಾಂ ಎಂಡಿಎಂಎ ವಶಪಡಿಸಲಾಗಿದೆ.

ಡೆಂಗ್ಯೂ ಹರಡುವಿಕೆ ತಡೆಗಟ್ಟಲು ಜಿಲ್ಲೆಯಾದ್ಯಂತ ಲಾರ್ವಾ ಸಮೀಕ್ಷೆ: ಡಾ.ಎಚ್. ಆರ್. ತಿಮ್ಮಯ್ಯ

ಸರ್ಕಾರಿ ವೈದ್ಯರ ಹುದ್ದೆ ನೇಮಕಾತಿ ಶೀಘ್ರ

ಮಂಗಳೂರು: ಆರೋಗ್ಯ ಸಚಿವರ ಸೂಚನೆಯಂತೆ ದಕ್ಷಿಣ ಕನ್ನಡ ಜಿಲ್ಲೆಯ ಸರಕಾರಿ ಆಸ್ಪತ್ರೆಗಳ ಖಾಲಿ ಹುದ್ದೆಗಳಿಗೆ ವೈದ್ಯರ ನೇಮಕಾತಿಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಚ್. ಆರ್. ತಿಮ್ಮಯ್ಯ ತಿಳಿಸಿದರು.

ಜಿಲ್ಲೆಯ ಸರಕಾರಿ ಆಸ್ಪತ್ರೆಗಳಲ್ಲಿ ಖಾಲಿಯಿರುವ 10 ಎಂಬಿಬಿಎಸ್ ವೈದ್ಯರ ಹುದ್ದೆಗಳ ನೇಮಕಾತಿಗಾಗಿ ಸಂದರ್ಶನ ನಡೆಸಿದ್ದು, 5 ಮಂದಿಗೆ ನೇಮಕಾತಿ ಆದೇಶ ನೀಡಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ನಮ್ಮ ಆದ್ಯತೆಯಾಗಿದ್ದು, 11 ವೈದ್ಯರ ಹುದ್ದೆ ಖಾಲಿ ಇದೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

ಜಿಲ್ಲೆಯಲ್ಲಿ ಬಿರುಸಿನ ಮಳೆಯಾಗದೇ, ಬಿಸಿಲಿನ ನಡುವೆ ಬಿಟ್ಟು ಬಿಟ್ಟು ಮಳೆಯಾಗುತ್ತಿರುವ ಕಾರಣ ಡೆಂಗ್ಯೂ ಹರಡುವ ಸಾಧ್ಯತೆ ಹೆಚ್ಚಿದೆ. ಡೆಂಗ್ಯೂ ಹರಡುವಿಕೆಯನ್ನು ತಡೆಗಟ್ಟಲು ಜಿಲ್ಲೆಯಾದ್ಯಂತ ಲಾರ್ವಾ ಸಮೀಕ್ಷೆಯನ್ನು ನಡೆಸಲಾಗುತ್ತಿದೆ ಎಂದು ಹೇಳಿದರು.

ಜಿಲ್ಲಾ ಸರಕಾರಿ ವೆನ್ಲಾಕ್ ಆಸ್ಪತ್ರೆಯಲ್ಲಿ ಐಸಿಯು ಹಾಸಿಗೆಗಳು ಸಿಗುತ್ತಿಲ್ಲ ಎಂದು ದೂರಿನ ಕುರಿತು ಪ್ರತಿಕ್ರಿಯಿಸಿದ ಅವರು, ಸುಮಾರು 15 ಜಿಲ್ಲೆಗಳ ರೋಗಿಗಳು ಚಿಕಿತ್ಸೆಗೆಂದು ವೆನ್ಲಾಕ್ ಆಸ್ಪತ್ರೆಗೆ ಬರುತ್ತಾರೆ. ವೆನ್ಲಾಕ್‌ನಲ್ಲಿ ಐಸಿಯು ಹಾಸಿಗೆಗಳ ಲಭ್ಯತೆ ಇದೆಯೇ ಎಂದು ಪರಿಶೀಲನೆ ಮಾಡದೆ ವಿವಿಧ ಜಿಲ್ಲೆಗಳಿಂದ ರೋಗಿಗಳನ್ನು ಕಳುಹಿಸಲಾಗುತ್ತಿದೆ. ಈ ಸಮಸ್ಯೆಯನ್ನು ಪರಿಹರಿಸಲು ಶೀಘ್ರದಲ್ಲೇ ಆರೋಗ್ಯ ಸಚಿವರ ನೇತೃತ್ವದಲ್ಲಿ ವಿವಿಧ ಜಿಲ್ಲೆಗಳ ಆರೋಗ್ಯ ಅಧಿಕಾರಿಗಳೊಂದಿಗೆ ಸಭೆ ಕರೆಯಲಾಗುವುದು ಎಂದರು.

ಹಂದಿ ಜ್ವರ ಪ್ರಕರಣಗಳಿಗೆ ಸಂಬಂಧಿಸಿದಂತೆ, ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಇನ್ಲುಯೆನ್ಸದಂತಹ ಕಾಯಿಲೆಗಳ ಕುರಿತು ನೋಂದಣಿ ಮಾಡಲು ನಿರ್ದೇಶನ ನೀಡಲಾಗಿದೆ ಎಂದರು.



» ಸರಕಾರಿ ಆಸ್ಪತ್ರೆಗಳಲ್ಲಿ ಖಾಲಿಯಿರುವ 10 ಎಂಬಿಬಿಎಸ್ ವೈದ್ಯರ ಹುದ್ದೆಗಳ ನೇಮಕಾತಿಗಾಗಿ ಸಂದರ್ಶನ ನಡೆಸಿದ್ದು, 5 ಮಂದಿಗೆ ನೇಮಕಾತಿ ಆದೇಶ

ಜೂ.28: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಲ್ಸ್ ಪೋಲಿಯೋ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜೂ.28ರಂದು ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ ಒಂದೇ ಸುತ್ತಿನಲ್ಲಿ ನಡೆಯಲಿದೆ. ಜಿಲ್ಲೆಯ 0-5 ವರ್ಷದೊಳಗಿನ ಎಲ್ಲ ಮಕ್ಕಳಿಗೂ ತಪ್ಪದೇ ಪೋಲಿಯೋ ಲಸಿಕೆ ಹಾಕಿಸಬೇಕು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಎಚ್.ಆರ್. ತಿಮ್ಮಯ್ಯ ತಿಳಿಸಿದರು.

ಭಾನುವಾರ ಬೆಳಗ್ಗೆ 8ರಿಂದ ಸಂಜೆ 5ರವರೆಗೆ ಪಲ್ಸ್ ಪೋಲಿಯೋ ಕಾರ್ಯಕ್ರಮ ಜಿಲ್ಲೆಯಾದ್ಯಂತ ನಡೆಯಲಿದೆ. ಆರೋಗ್ಯ ಸಚಿವ ಯು.ಟಿ. ಖಾದರ್ ಅವರು ಬೆಂಗಳೂರಿನಲ್ಲಿ ನಡೆಯುವ ಪ್ರಧಾನ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಗರದ ಲೇಡಿಗೋಶನ್ ಆಸ್ಪತ್ರೆಯಲ್ಲಿ ಅಂದು ಬೆಳಗ್ಗೆ 8ಕ್ಕೆ ಸಂಸದರು, ಶಾಸಕರ ಉಪಸ್ಥಿತಿಯಲ್ಲಿ ಉದ್ಘಾಟನೆ ನಡೆಯಲಿದೆ. ಪ್ರತಿ ಮಗುವಿಗೂ ಎರಡು ಜೀವರಕ್ಷಕ ಪೋಲಿಯೋ ಹನಿ ಹಾಕಿಸಬೇಕು. ಜಿಲ್ಲೆಯಲ್ಲಿ 0-5 ವರ್ಷದೊಳಗಿನ 140677 ಮಕ್ಕಳಿಗೆ ಪೋಲಿಯೋ ಹನಿ ಹಾಕಿಸುವ ಗುರಿ ಹೊಂದಲಾಗಿದ್ದು, ಇದಕ್ಕಾಗಿ ಒಟ್ಟು 756 ಬೂತ್‌ಗಳನ್ನು ತೆರೆಯಲಾಗುವುದು. ಈ ಪೈಕಿ 26 ಟ್ರಾನ್ಸಿಟ್ ತಂಡ, ಮಂಗಳೂರು ನಗರದಲ್ಲಿ ಮೂರು ಮೊಬೈಲ್ ತಂಡ ಇರಲಿದೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

26 ಟ್ರಾನ್ಸಿಟ್ ತಂಡಗಳು ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ವಿಮಾನ ನಿಲ್ದಾಣ, ಸುಬ್ರಹ್ಮಣ್ಯ, ಧರ್ಮಸ್ಥಳ, ಕಟೀಲು ಸಹಿತ ದೇವಸ್ಥಾನಗಳಲ್ಲಿ ಕಾರ್ಯನಿರ್ವಹಿಸಲಿವೆ. ಜಿಲ್ಲೆಯಲ್ಲಿ 506 ಮಂದಿ ವಲಸೆ ಮಕ್ಕಳಿದ್ದು, ಅವರಿಗೂ ಪೋಲಿಯೋ ಹನಿ ಹಾಕಿಸಲು ಕ್ರಮ ಕೈಗೊಳ್ಳಲಾಗುವುದು. ಜನತೆ ಯಾವುದೇ ಗೊಂದಲ, ಅನುಮಾನವಿಲ್ಲದೆ ಪೋಲೀಯೋ ಹನಿ ಹಾಕಿಸಿಕೊಳ್ಳುವಂತೆ ಅವರು ವಿನಂತಿಸಿದರು.

ದೇಶದಲ್ಲಿ 2011ರ ಜನವರಿ 13ರಂದು ಕೊನೆಯ ಪೋಲಿಯೋ ಪ್ರಕರಣ ಪತ್ತೆಯಾಗಿತ್ತು. ರಾಜ್ಯದಲ್ಲಿ 2007ರಲ್ಲಿ ಕೊನೆಯ ಪೋಲಿಯೋ ಪ್ರಕರಣ ಕಂಡುಬಂದಿದೆ. 2014ರ ಮಾರ್ಚ್ 27ಕ್ಕೆ ನಮ್ಮ ದೇಶವನ್ನು ಪೋಲಿಯೋ ಸಾಂಕ್ರಾಮಿಕ ದೇಶಗಳ ಪಟ್ಟಿಯಿಂದ ಹೊರಗಿಡಲಾಗಿದೆ. ಕಳೆದ 14 ವರ್ಷಗಳಿಂದ ನಮ್ಮ ದೇಶ ಪೋಲಿಯೋ ಮುಕ್ತವಾಗಿದೆ. ಆದರೆ, ನೆರೆಯ ರಾಷ್ಟ್ರಗಳಲ್ಲಿ ಪೋಲಿಯೋ ಪ್ರಕರಣಗಳು ಕಂಡುಬಂದಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ಪೋಲಿಯೋ ಲಸಿಕೆ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು.

ಆರೋಗ್ಯ ಇಲಾಖೆ ಅಧಿಕಾರಿಗಳಾದ ಡಾ. ರಾಜೇಶ್ ಬಿ.ವಿ., ಡಾ. ಸುದರ್ಶನ್, ಆರೋಗ್ಯ ಶಿಕ್ಷಣಾಧಿಕಾರಿ ಜ್ಯೋತಿ ಉಳೇಪಾಡಿ ಉಪಸ್ಥಿತರಿದ್ದರು.



ಪ್ರಧಾನಮಂತ್ರಿ ಸೂರ್ಯಘರ್ ಮುಫ್ತ್ ಬಿಜ್ಲಿ ಯೋಜನೆ

ಮಾದರಿ ಸೋಲಾರ್ ಗ್ರಾಮವಾಗಿ ದ.ಕ. ಜಿಲ್ಲೆಯ ಪುತ್ತಿಗೆ, ಉಡುಪಿಯ ಕೋಟತಟ್ಟು



ಮಂಗಳೂರು: ಪ್ರಧಾನಮಂತ್ರಿ ಸೂರ್ಯಘರ್ ಮುಫ್ತ್ ಬಿಜ್ಲಿ ಯೋಜನೆಯಡಿಯಲ್ಲಿ ಮಾದರಿ ಸೋಲಾರ್ ಗ್ರಾಮವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆ ತಾಲೂಕಿನ ಪುತ್ತಿಗೆ ಹಾಗೂ ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲೂಕಿನ ಕೋಟತಟ್ಟು ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತಿಗೆ ಗ್ರಾಮ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಪ್ರಧಾನಮಂತ್ರಿ ಸೂರ್ಯಘರ್ ಯೋಜನೆಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾದರಿ ಸೋಲಾರ್ ಗ್ರಾಮವನ್ನು ಆಯ್ಕೆಮಾಡುವ ಸಲುವಾಗಿ ಜಿಲ್ಲಾ ಮಟ್ಟದ ಸಮಿತಿಯಿಂದ ನಡೆದ ಸಭೆಯಲ್ಲಿ 13 ಗ್ರಾಮಗಳನ್ನು ಆಯ್ಕೆ ಮಾಡಲಾಗಿದ್ದು, ಈ ಗ್ರಾಮಗಳಲ್ಲಿ ಮೂಡಬಿದ್ರೆ ತಾಲೂಕಿನ ಪುತ್ತಿಗೆ ಗ್ರಾಮದಲ್ಲಿ 31.12.2025 ರ ವರೆಗೆ ಅಳವಡಿಸಿದ ಸೋಲಾರ್ ಘಟಕಗಳ ಸಾಮರ್ಥ್ಯವು ಅಧಿಕವಾಗಿದೆ. ಈ ಗ್ರಾಮವನ್ನು ಫೆ. 19ರಂದು ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾದರಿ ಸೋಲಾರ್ ಗ್ರಾಮವಾಗಿ ಆಯ್ಕೆ ಮಾಡಲಾಗಿದೆ.

ಮಾದರಿ ಸೋಲಾರ್ ಗ್ರಾಮ ಅಭಿವೃದ್ಧಿಗಾಗಿ ಈ ಗ್ರಾಮಕ್ಕೆ ನವ ಮತ್ತು ನವೀಕರಿಸಬಹುದಾದ ಇಂಧನ ಇಲಾಖೆಯು ರೂ.1 ಕೋಟಿಯ ಸಹಾಯಧನವನ್ನು ಅನುಷ್ಠಾನಗೊಳಿಸುವ ಸಂಸ್ಥೆಗೆ ನೀಡುತ್ತದೆ, ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

» ಜಿಲ್ಲಾ ಮಟ್ಟದ ಸಮಿತಿಯಿಂದ ನಡೆದ ಸಭೆಯಲ್ಲಿ 13 ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ.

ಉಡುಪಿ ಜಿಲ್ಲೆಯ ಕೋಟತಟ್ಟು ಗ್ರಾಮ ಆಯ್ಕೆ

ಪ್ರಧಾನಮಂತ್ರಿ ಸೂರ್ಯಘರ್ ಮುಫ್ತ್ ಬಿಜ್ಲಿ ಯೋಜನೆಯಡಿಯಲ್ಲಿ ಮಾದರಿ ಸೋಲಾರ್ ಗ್ರಾಮವಾಗಿ ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲೂಕಿನ ಕೋಟತಟ್ಟು ಗ್ರಾಮ ಆಯ್ಕೆ ಮಾಡಲಾಗಿದೆ. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಪ್ರಧಾನಮಂತ್ರಿ ಸೂರ್ಯಘರ್ ಯೋಜನೆಯ ಉಡುಪಿ ಜಿಲ್ಲೆಯಲ್ಲಿ ಮಾದರಿ ಸೋಲಾರ್ ಗ್ರಾಮವನ್ನು ಆಯ್ಕೆ ಮಾಡುವ ಸಲುವಾಗಿ ಜಿಲ್ಲಾ ಮಟ್ಟದ ಸಮಿತಿಯಿಂದ ನಡೆದ ಸಭೆಯಲ್ಲಿ 5 ಗ್ರಾಮವನ್ನು ಆಯ್ಕೆ ಮಾಡಲಾಗಿತ್ತು. ಈ ಗ್ರಾಮಗಳಲ್ಲಿ ಬ್ರಹ್ಮಾವರ ತಾಲೂಕಿನ ಕೋಟತಟ್ಟು ಗ್ರಾಮವು 31.12.2025 ರ ವರೆಗೆ ಅಳವಡಿಸಿದ ಸೋಲಾರ್ ಘಟಕಗಳ ಸಾಮರ್ಥ್ಯವು ಅಧಿಕವಾಗಿದ್ದು, ಈ ಗ್ರಾಮವನ್ನು ಮಾದರಿ ಸೋಲಾರ್ ಗ್ರಾಮವಾಗಿ ಆಯ್ಕೆ ಮಾಡಲಾಗಿದೆ. ಮಾದರಿ ಸೋಲಾರ್ ಗ್ರಾಮ ಅಭಿವೃದ್ಧಿಗಾಗಿ ಈ ಗ್ರಾಮಕ್ಕೆ ನವ ಮತ್ತು ನವೀಕರಿಸ ಬಹುದಾದ ಇಂಧನ ಇಲಾಖೆಯು ರೂ.1 ಕೋಟಿಯ ಸಹಾಯಧನವನ್ನು ಅನುಷ್ಠಾನಗೊಳಿಸುವ ಸಂಸ್ಥೆಗೆ ನೀಡುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಕಾಸರಗೋಡು: ಖಾಸಗಿ ಬಸ್ ಸೇವೆ ಸ್ಥಗಿತಕ್ಕೆ ನಿರ್ಧಾರ



ಕಾಸರಗೋಡು: ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗಾಗಿ ಪ್ರಿಯದರ್ಶಿನಿ ಉಚಿತ ಪ್ರಯಾಣ ಆರಂಭ ಹಾಗೂ ಡೀಸೆಲ್ ಬೆಲೆ ಹೆಚ್ಚಳ ಕಾರಣದಿಂದ ಕಾಸರಗೋಡು ಜಿಲ್ಲೆಯಲ್ಲಿ ಖಾಸಗಿ ಬಸ್‌ಗಳು ಸೇವೆಯನ್ನು ಸ್ಥಗಿತಗೊಳಿಸಲು ಮುಂದಾಗಿವೆ.

ಕಾಸರಗೋಡು ಹಾಗೂ ಹೊಸದುರ್ಗ ತಾಲೂಕುಗಳಲ್ಲಿ ಈಗಾಗಲೇ 15ರಷ್ಟು ಬಸ್‌ಗಳು ಸೇವೆ ನಿಲ್ಲಿಸಲು ಆರ್‌ಟಿಒ ಕಚೇರಿಯಲ್ಲಿ ಜಿ-ಫಾರ್ಮ್ (ರಸ್ತೆ ತೆರಿಗೆ ವಿನಾಯಿತಿ ಪಡೆಯಲು ಸಾರಿಗೆ ಇಲಾಖೆಗೆ ಸಲ್ಲಿಸುವ ಅರ್ಜಿ) ನೀಡಿವೆ. ಜೂನ್ ಅಂತ್ಯಕ್ಕೆ ಇನ್ನಷ್ಟು ಬಸ್‌ಗಳು ಜಿ-ಫಾರ್ಮ್ ನೀಡಲಿದ್ದು, ಪರಿಣಾಮ ಜುಲೈ 1ರಿಂದ ಜಿಲ್ಲೆಯ 200ರಷ್ಟು ಖಾಸಗಿ ಬಸ್‌ಗಳ ಸಂಚಾರಗಳು ಸ್ಥಗಿತಗೊಳ್ಳಲಿದೆ. ಜಿ-ಫಾರ್ಮ್‌ನ್ನು ಭರ್ತಿಗೊಳಿಸಿ ಆರ್‌ಟಿಓಗೆ ನೀಡಿದರೆ ಬಸ್ ಸಂಚಾರ ನಡೆಸದ ದಿನಗಳಿಗೆ ತೆರಿಗೆ ಪಾವತಿಸಬೇಕಾಗಿಲ್ಲ. ಪಾವತಿಸಿದ ತ್ರೈಮಾಸಿಕ ತೆರಿಗೆಯ ಕಾಲಾವಧಿಯು ಜೂ.30ರಂದು ಕೊನೆಗೊಳ್ಳಲಿದೆ. ಇದರಿಂದ ಜುಲೈ 1ರ ಬಳಿಕ ಸರ್ವೀಸ್ ನಿಲ್ಲಿಸಲು ಈ ಬಸ್ ಮಾಲಕರು ತೀರ್ಮಾನಿಸಿದ್ದಾರೆ.

ಮೋಟಾರ್ ವಾಹನ ಇಲಾಖೆಯ ನಿಯಮ ಪ್ರಕಾರ ರಸ್ತೆ ತೆರಿಗೆಯಿಂದ ವಿನಾಯಿತಿ ಲಭಿಸಲು ಖಾಸಗಿ ಬಸ್‌ಗಳು ಜಿ-ಫಾರ್ಮ್ ಸಲ್ಲಿಸಿವೆ. ಆರ್ಥಿಕ ನಷ್ಟ ಹಾಗೂ ಇತರ ಕಾರಣಗಳಿಂದಾಗಿ ನಿರ್ದಿಷ್ಟ ಕಾಲಾವಧಿಗೆ ಸರ್ವೀಸ್‌ನ್ನು ನಿಲ್ಲಿಸುವಂತಾಗಲಿದ್ದು, ಬೇರೆ ದಾರಿ ತೋಚದೆ ಬಸ್ ಮಾಲೀಕರು ಈ ದಾರಿಯನ್ನು ಆಯ್ಕೆ ಮಾಡಿದ್ದಾರೆ. ಮೊದಲೇ ನಷ್ಟದಲ್ಲಿದ್ದ ಖಾಸಗಿ ಬಸ್‌ಗಳು, ಪ್ರಿಯದರ್ಶಿನಿ ಉಚಿತ ಪ್ರಯಾಣ ಆರಂಭ, ಡೀಸೆಲ್ ಬೆಲೆ ಏರಿಕೆ ಬಳಿಕ ಇನ್ನಷ್ಟು ನಷ್ಟದತ್ತ ಸಾಗುತ್ತಿರುವುದಾಗಿ ಕೇರಳ ರಾಜ್ಯ ಖಾಸಗಿ ಬಸ್ ಆಪರೇಟರ್‌ಗಳ ಫೆಡರೇಶನ್ ಜಿಲ್ಲಾ ಅಧ್ಯಕ್ಷರು ತಿಳಿಸಿದ್ದಾರೆ.

ಅಂತಾರಾಜ್ಯ ಸರ್ವೀಸ್‌ಗಳಲ್ಲೂ ಉಚಿತ ಪ್ರಯಾಣ ಮಂಜೂರುಗೊಳಿಸುವುದು ಖಾಸಗಿ ವಲಯವನ್ನು ಗಂಭೀರವಾಗಿ ಬಾಧಿಸಿದೆ. ಇದರಿಂದ ಜಿ-ಫಾರ್ಮ್ ನೀಡಿ ಸರ್ವೀಸ್ ನೀಡಲು ತೀರ್ಮಾನಿಸಲಾಗಿದೆ.

ಜಿ-ಫಾರ್ಮ್‌ಗೆ ಸಿದ್ಧತೆ

ಕಾಸರಗೋಡು ಜಿಲ್ಲೆಯಲ್ಲಿ 480 ಖಾಸಗಿ ಬಸ್‌ಗಳಿವೆ. ಮುಂದಿನ ತ್ರೈಮಾಸಿಕ ತೆರಿಗೆ ಪಾವತಿಸಬೇಕಾದ ಅಂತಿಮ ದಿನವಾದ ಜೂನ್ 30ರ ವರೆಗೆ ಜಿ- ಫಾರ್ಮ್ ನೀಡಲು ಸಮಯವಕಾಶ ಇದೆ. ಇದರಿಂದ ಮುಂದಿನ ದಿನಗಳಲ್ಲಿ 200ರಷ್ಟು ಬಸ್‌ಗಳು ಜಿ-ಫಾರ್ಮ್ ನೀಡಲು ಸಿದ್ಧತೆ ನಡೆಸುತ್ತಿವೆ.

» ಪಾವತಿಸಿದ ತ್ರೈಮಾಸಿಕ ತೆರಿಗೆಯ ಕಾಲಾವಧಿಯು ಜೂ.30ರಂದು ಕೊನೆಗೊಳ್ಳಲಿದೆ.

» ಜುಲೈ 1ರ ಬಳಿಕ ಸರ್ವೀಸ್ ನಿಲ್ಲಿಸಲು ಈ ಬಸ್ ಮಾಲಕರು ತೀರ್ಮಾನಿಸಿದ್ದಾರೆ.

» ಈ ಹಿಂದೆ ದಿನವೊಂದಕ್ಕೆ 4 ಸಾವಿರ ರೂ.ನಷ್ಟು ಲಾಭವಿದ್ದ ಸರ್ವೀಸ್‌ಗಳಿಗೆ ಈಗ 100 ರೂ.ನಿಂದ 150ರೂ.ನಷ್ಟು ನಷ್ಟವಾಗುತ್ತದೆ.

ಕಣ್ಣೂರು - ಕಾಸರಗೋಡು ರೂಟ್‌ನಲ್ಲಿ ಸರ್ವೀಸ್ ನಡೆಸುವ ಬಸ್‌ಗಳು ಈಗ ಬೆಳಗ್ಗೆ ಬಂದು ಸಂಜೆ ಹಿಂತಿರುಗುತ್ತವೆ. ನಷ್ಟದ ಕಾರಣ ಕೆಲವೊಂದು ಸರ್ವೀಸ್‌ಗಳನ್ನು ನಿಲ್ಲಿಸಲಾಗಿದೆ. ಈ ಹಿಂದೆ ದಿನವೊಂದಕ್ಕೆ 4 ಸಾವಿರ ರೂ.ನಷ್ಟು ಲಾಭವಿದ್ದ ಸರ್ವೀಸ್‌ಗಳಿಗೆ ಈಗ 100 ರೂ.ನಿಂದ 150ರೂ.ನಷ್ಟು ನಷ್ಟವಾಗುತ್ತದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಕುಸಿದರೂ ಇಲ್ಲಿ ಇಂಧನ ಬೆಲೆ ಕಡಿಮೆ ಮಾಡಿಲ್ಲ. ರಾಜ್ಯದಲ್ಲಿ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಮಂಜೂರುಗೊಳಿಸುವ ವಿಷಯದಲ್ಲಿ ವಿರೋಧವಿಲ್ಲ. ಆದರೆ ಖಾಸಗಿ ಬಸ್ ಉದ್ಯಮವನ್ನು ಸಂರಕ್ಷಿಸಬೇಕು ಎಂದು ಬಸ್ ಮಾಲೀಕರು ಆಗ್ರಹಿಸಿದ್ದಾರೆ.

ಒಂಟಿ ಸಲಗ ದಾಳಿ: ಪ್ರಾಣಾಪಾಯದಿಂದ ಮಹಿಳೆ ಪಾರು

ಮಡಿಕೇರಿ: ಕಾಫಿ ತೋಟದ ಕೆಲಸಕ್ಕೆ ತೆರಳಿದ್ದ ಕಾರ್ಮಿಕರ ಮೇಲೆ ಒಂಟಿ ಸಲವೊಂದು ಏಕಾಏಕಿ ದಾಳಿಗೆ ಮುಂದಾದ ಘಟನೆ ಸಿದ್ದಾಪುರ ಸಮೀಪದ ವಳ್ಳಕೆರೆ ವ್ಯಾಪ್ತಿಯಲ್ಲಿ ನಡೆದಿದ್ದು, ಮಹಿಳೆಯೊಬ್ಬರು ಓಡುವ ಸಂದರ್ಭ ಬಿದ್ದು ಗಾಯಗೊಂಡಿದ್ದಾರೆ. ಕೂದಲೆಳೆ ಅಂತರದಲ್ಲಿ ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವಳ್ಳಕೆರೆಯ ನಿವಾಸಿ ನಾಗರಾಜು ಎಂಬವರ ಪತ್ನಿ ಸೌಮ್ಯ ಎಂಬವರೇ ಗಾಯಗೊಂಡಿರುವ ಮಹಿಳೆ. ಗುರುವಾರ ಪೂರ್ವಾಹ್ನ ಎಂದಿನಂತೆ ಕಾರ್ಮಿಕರು ತೋಟಕ್ಕೆ ಕೆಲಸಕ್ಕೆ ತೆರಳಿದ್ದಾರೆ. ಈ ಸಂದರ್ಭ ಪ್ರತ್ಯಕ್ಷವಾದ ಆನೆಯೊಂದು ಕಾರ್ಮಿಕರನ್ನು ಅಟ್ಟಾಡಿಸಿದೆ. ಆನೆ ದಾಳಿಯಿಂದ ತಪ್ಪಿಸಿಕೊಳ್ಳಲು ಕಾರ್ಮಿಕರು ಎದ್ದುಬಿದ್ದು ಓಡಿದ್ದು, ಗಿಡಗಳ ನಡುವೆ ಓಡುವ ಸಂದರ್ಭ ಸೌಮ್ಯ ಅವರು ನಿಯಂತ್ರಣ ತಪ್ಪಿ ಕೆಳಗೆ ಬಿದ್ದಿದ್ದಾರೆ. ಘಟನೆಯಲ್ಲಿ ತಲೆ ಹಾಗೂ ಕಾಲಿನ ಭಾಗಕ್ಕೆ ಗಂಭೀರ ಗಾಯಗಳಾಗಿರುವ ಅವರನ್ನು ಸಿದ್ದಾಪುರ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ.



ಘಟನೆಯಿಂದ ಸುತ್ತಮುತ್ತಲ ಪ್ರದೇಶದ ಕಾರ್ಮಿಕರಲ್ಲಿ ಭೀತಿ ಹೆಚ್ಚಾಗಿದ್ದು, ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ವ್ಯಾಪ್ತಿಯಲ್ಲಿ ಕಾಡಾನೆ ಹಾವಳಿ ದಿನೇ ದಿನೇ ಹೆಚ್ಚಾಗುತ್ತಿದೆ. ಗುರುವಾರವೂ ಕಾವೇರಿ ನದಿ ದಾಟಿ 20 ಕ್ಕೂ ಅಧಿಕ ಆನೆಗಳು ವಳ್ಳಕೆರೆ ವ್ಯಾಪ್ತಿಗೆ ಬಂದಿವೆ. ಆನೆಗಳು ಬಂದಾಗ ಕಾರ್ಯಾಚರಣೆ ಮಾಡುತ್ತೇವೆ ಎಂದು ಬರುವ ಅರಣ್ಯ ಇಲಾಖೆ ಸಿಬ್ಬಂದಿಗಳು ಆನೆಗಳನ್ನು ಅರಣ್ಯಕ್ಕೆ ಅಟ್ಟದೆ ಬೇರೊಂದು ಕಾಡಿಗೆ (ತೋಟಕ್ಕೆ) ತಾತ್ಕಾಲಿಕವಾಗಿ ಅಟ್ಟುವ ಮೂಲಕ ಕಾರ್ಯಾಚರಣೆ ಯಶಸ್ವಿಯಾಗಿದೆ ಎಂದು ಹೇಳಿ ತೆರಳುತ್ತಾರೆ. ಈ ಸಮಸ್ಯೆಯನ್ನು ಅರಣ್ಯ ಇಲಾಖೆಯ ಅಧಿಕಾರಿಗಳು, ಸಂಬಂಧಪಟ್ಟ ಸಚಿವರು, ಸ್ಥಳೀಯ ಶಾಸಕರು ಗಂಭೀರವಾಗಿ ಪರಿಗಣಿಸಿ, ಮತ್ತೊಂದು ಪ್ರಾಣಹಾನಿ ಸಂಭವಿಸುವ ಮೊದಲು ಕಾಡಾನೆ ಹಾವಳಿ ನಿಯಂತ್ರಣಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕೆಂದು ಆಗ್ರಹಿಸಿದ್ದಾರೆ.

ಸ್ಟಾರ್ ನಾಯಕನ ನೋಡಲು ಮುಗಿಬಿದ್ದ ಸಿನಿಪ್ರಿಯರು । ರೋಹನ್ ಕಾರ್ಪೊರೇಶನ್‌ನಿಂದ ಕಾರ್ಯಕ್ರಮ ಆಯೋಜನೆ

ಬಂದರು ನಗರಿ ಮಂಗಳೂರಿನಲ್ಲಿ ಬಾಲಿವುಡ್ ಬಾದ್‌ಶಾ ಕಿಂಗ್ ಖಾನ್ ಹವಾ

ಮಂಗಳೂರು: ಕಡಲ ನಗರಿ ಮಂಗಳೂರಿನಲ್ಲಿ ಗುರುವಾರ ಕಿಂಗ್ ಖಾನ್ ಹವಾ!. ಇದೇ ಮೊದಲ ಬಾರಿಗೆ ಕರಾವಳಿಗೆ ಆಗಮಿಸಿದ ಬಾಲಿವುಡ್‌ನ ಖ್ಯಾತ ನಟ ಹಾಗೂ ಜಾಗತಿಕ ಮಟ್ಟದಲ್ಲಿ ಅಪಾರ ಅಭಿಮಾನಿಗಳನ್ನು ಹೊಂದಿರುವ ಶಾರುಖ್ ಖಾನ್‌ಗೆ ಮಂಗಳೂರಿನಲ್ಲಿ ಅದ್ದೂರಿಯ ಸ್ವಾಗತ ದೊರೆಯಿತು.

ಶಾರುಖ್ ಖಾನ್ ಮಂಗಳೂರಿಗೆ ಆಗಮಿಸಲಿದ್ದಾರೆ ಎಂಬ ಸುದ್ದಿ ವಾರದ ಹಿಂದೆಯೇ ಹಬ್ಬಿದ್ದರಿಂದ. ಸ್ಟಾರ್ ನಾಯಕನನ್ನು ಹತ್ತಿರದಿಂದ ಕಾಣಲು ಅಭಿಮಾನಿಗಳ ದಂಡು ನೆರೆದಿತ್ತು. ವಿಶೇಷ ವಿಮಾನದ ಮೂಲಕ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಶಾರುಕ್ ಖಾನ್ ಅವರನ್ನು ಕರಾವಳಿಯ ಪ್ರತಿಷ್ಠಿತ ರಿಯಲ್ ಎಸ್ಟೇಟ್ ಸಂಸ್ಥೆಯಾದ ರೋಹನ್ ಕಾರ್ಪೊರೇಶನ್‌ನ ವ್ಯವಸ್ಥಾಪಕ ನಿರ್ದೇಶಕ ಡಾ.ರೋಹನ್ ಮೊಂತೇರೊ ಆತ್ಮೀಯವಾಗಿ ಸ್ವಾಗತಿಸಿದರು.

ಪೊಲೀಸ್ ಭಿಗಿ ಭದ್ರತೆಯಲ್ಲಿ ಆಗಮಿಸಿದ ಶಾರುಖ್ ಅವರನ್ನು ಕಂಡೊಡನೆ ಅಭಿಮಾನಿ ಬಳಗ ಜಯಕಾರ ಹಾಕುವ ಮೂಲಕ ಹರ್ಷ ವ್ಯಕ್ತಪಡಿಸಿತು. ಮುಗುಳ್ನಗೆಯೊಂದಿಗೆ ಅಭಿಮಾನಿಗಳತ್ತ ಕೈ ಬೀಸಿದ ಶಾರುಕ್ ಖಾನ್ ತನ್ನ ಪ್ರೀತಿಯನ್ನು ತೋರ್ಪಡಿಸಿದರು. ಬಳಿಕ ಬಿಗಿ ಭದ್ರತೆಯೊಂದಿಗೆ ನಗರದ ಅಡ್ಯಾರ್ ಗಾರ್ಡನ್‌ಗೆ ತೆರಳಿದರು. ರೋಹನ್ ಕಾರ್ಪೊರೇಶನ್ ವತಿಯಿಂದ ಆಯೋಜಿಸಿದ್ದ 'ಆನ್ ಈವಿನಿಂಗ್ ವಿತ್ ಶಾರುಖ್ ಖಾನ್' ವಿಶೇಷ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಸಂಭ್ರಮ ಸಡಗರ

ಶಾರುಖ್ ಖಾನ್ ಕಾರ್ಯಕ್ರಮ ಒಂದು ರೀತಿಯ ಹಬ್ಬದ ವಾತಾವರಣವನ್ನು ಸೃಷ್ಟಿಸಿತು. ಖ್ಯಾತ ಸಿನೆಮಾ ತಾರೆಯನ್ನು ಹತ್ತಿರದಿಂದ ಕಂಡ ಕರಾವಳಿಯ ಜನ ಸಂಭ್ರಮಿಸಿದರು. ಅಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಿತ್ತು.

ಮಂಗಳೂರಿಗೆ ಹೊಸ ಆಯಾಮ

ರೋಹನ್ ಕಾರ್ಪೊರೇಶನ್ ಆಯೋಜಿಸಿದ್ದ 'ಆನ್ ಈವಿನಿಂಗ್ ವಿತ್ ಶಾರುಖ್ ಖಾನ್' ಕಾರ್ಯಕ್ರಮವು ಬಾಲಿವುಡ್‌ನ ಜಾಗತಿಕ ಐಕಾನ್ ಶಾರುಖ್ ಖಾನ್ ಅವರ ಉಪಸ್ಥಿತಿಯಿಂದ ಹೊಸ ಆಯಾಮ ಪಡೆದು, ನಗರದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಕಾರ್ಪೊರೇಟ್ ಇತಿಹಾಸದಲ್ಲಿ ವಿಶೇಷ ಸ್ಥಾನವನ್ನು ಪಡೆದುಕೊಂಡಿತು.

ಅಡ್ಯಾರ್ ಗಾರ್ಡನ್‌ನಲ್ಲಿ ನಡೆದ ಈ ಕಾರ್ಯಕ್ರಮವು ಉದ್ಯಮ ವಲಯದ ಗಣ್ಯರು, ವಿವಿಧ ಕ್ಷೇತ್ರಗಳ ಪ್ರಮುಖ ವ್ಯಕ್ತಿಗಳು, ಸಮಾಜದ ಪ್ರತಿನಿಧಿಗಳು, ವಿಶೇಷ ಆಹ್ವಾನಿತರು, ರೋಹನ್ ಕಾರ್ಪೊರೇಶನ್‌ನ ಹಿತೈಷಿಗಳು ಹಾಗೂ ಅಧಿಕೃತ ಪಾಸ್‌ಗಳ ಮೂಲಕ ಭಾಗವಹಿಸಿದ ಸಾವಿರಾರು ಅತಿಥಿಗಳನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಿತು.

ಮಂಗಳೂರಿನಲ್ಲಿ ಆಯೋಜಿಸಲಾದ ಅತ್ಯಂತ ಪ್ರತಿಷ್ಠಿತ ಖಾಸಗಿ ಕಾರ್ಪೊರೇಟ್ ಕಾರ್ಯಕ್ರಮಗಳಲ್ಲಿ ಒಂದಾಗಿ ಇದು ಗುರುತಿಸಲ್ಪಟ್ಟಿತು.



ಸಂಜೆ 5 ಗಂಟೆಯಿಂದ ಆರಂಭವಾದ ಕಾರ್ಯಕ್ರಮವು ರಾತ್ರಿ 9 ಗಂಟೆಯವರೆಗೆ ಉತ್ಸಾಹಭರಿತ ವಾತಾವರಣದಲ್ಲಿ ನಡೆಯಿತು. ಕರಾವಳಿಯ ಕಲಾತಂಡಗಳ ವೈವಿಧ್ಯಮಯ ಪ್ರದರ್ಶನಗಳು ಕಾರ್ಯಕ್ರಮಕ್ಕೆ ಸ್ಥಳೀಯ ಸಾಂಸ್ಕೃತಿಕ ಸೊಬಗನ್ನು ನೀಡಿದವು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ರೋಹನ್ ಕಾರ್ಪೊರೇಶನ್‌ನ ವ್ಯವಸ್ಥಾಪಕ ನಿರ್ದೇಶಕ ಡಾ.ರೋಹನ್ ಮೊಂತೇರೊ 'ಶಾರುಖ್ ಖಾನ್ ಅವರ ಜೀವನ ಪಯಣವು ಲಕ್ಷಾಂತರ ಜನರಿಗೆ ಪ್ರೇರಣೆಯ ಮೂಲವಾಗಿದೆ ಎಂದು ಹೇಳಿದರು. ಕನಸು ಕಾಣುವ ಧೈರ್ಯ, ನಿರಂತರ ಪರಿಶ್ರಮ ಮತ್ತು ಸಾಧನೆಯತ್ತ ಇರುವ ಬದ್ಧತೆಯೇ ಯಶಸ್ಸಿನ ನಿಜವಾದ ಮಾರ್ಗ' ಎಂಬ ಸಂದೇಶವನ್ನು ಅವರು ಹಂಚಿಕೊಂಡರು.

ರೋಹನ್ ಕಾರ್ಪೊರೇಷನ್ ಸಂಸ್ಥೆಯ ನಿರ್ದೇಶಕ ಡಿಯೋನ್ ಮೊಂತೇರೊ ಮಾತನಾಡಿ, ಮಂಗಳೂರಿನ ಜನತೆಗೆ ವಿಶ್ವಮಟ್ಟದ ಅನುಭವವನ್ನು ನೀಡುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ. ನಗರದ ಜನರಿಂದ ದೊರೆತ ಅಭೂತಪೂರ್ವ ಸ್ಪಂದನೆ ಕಾರ್ಯಕ್ರಮವನ್ನು ಸಂಸ್ಥೆಯ ಪಯಣದ ಅತ್ಯಂತ ಸ್ಮರಣೀಯ ಘಟ್ಟವನ್ನಾಗಿ ರೂಪಿಸಿದೆ ಎಂದರು.

ನಂತರ ನಡೆದ ವಿಶೇಷ ಸಂವಾದದಲ್ಲಿ ಶಾರುಖ್ ಖಾನ್, ಡಾ.ರೋಹನ್ ಮೊಂತೇರೊ ಹಾಗೂ ಡಿಯೋನ್ ಮೊಂತೇರೊ ಅವರು ಮಹತ್ವಾಕಾಂಕ್ಷೆ, ನಾಯಕತ್ವ ಉದ್ಯಮಶೀಲತೆ, ಪರಿಶ್ರಮ ಮತ್ತು ಯಶಸ್ಸಿನ ಪಯಣದ ಕುರಿತು ತಮ್ಮ ವಿಚಾರಗಳನ್ನು ಹಂಚಿಕೊಂಡರು.

ಮಂಗಳೂರಿನ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಶಾರುಖ್ ಖಾನ್, ನಗರದ ಆತಿಥ್ಯ, ಸಂಸ್ಕೃತಿ ಹಾಗೂ ವೇಗವಾಗಿ ಬೆಳೆಯುತ್ತಿರುವ ಅಭಿವೃದ್ಧಿಯನ್ನು ಶ್ಲಾಘಿಸಿದರು. ಯುವಜನತೆ ದೊಡ್ಡ ಕನಸು ಕಾಣಬೇಕು, ತಮ್ಮ ಸಾಮರ್ಥ್ಯದ ಮೇಲೆ ನಂಬಿಕೆ ಇಡಬೇಕು ಹಾಗೂ ಗುರಿ ಸಾಧನೆಗಾಗಿ ನಿರಂತರವಾಗಿ ಶ್ರಮಿಸಬೇಕು ಎಂಬ ಪ್ರೇರಣಾದಾಯಕ ಸಂದೇಶವನ್ನು ಅವರು ನೀಡಿದರು.

ವರ್ಷಗಳ ನಿರೀಕ್ಷೆಯ ಬಳಿಕ ತಮ್ಮ ಆರಾಧ್ಯ ನಟ ಶಾರುಖ್ ಖಾನ್ ಅವರನ್ನು ನೇರವಾಗಿ ಕಾಣುವ ಅವಕಾಶ ದೊರೆತಿದ್ದು, ಸಾವಿರಾರು ಅಭಿಮಾನಿಗಳಿಗೆ ಅದು ಅಪರೂಪದ ಮತ್ತು ಅವಿಸ್ಮರಣೀಯ ಅನುಭವವಾಗಿ ಉಳಿಯಿತು. ಸಾಹಿಲ್ ಜಹೀರ್ ಹಾಗೂ ಆರ್‌ಜೆ ಡೋನಾ ಅವರು ಕಾರ್ಯಕ್ರಮ ನಿರೂಪಿಸಿದರು.

'ರೋಹನ್ ಮರೀನಾ ಒನ್' ಮರು ಅನಾವರಣ

ಇಂಡಿಯನ್ ಐಡಲ್ ಖ್ಯಾತಿಯ ಗಾಯಕ ಸಲ್ಮಾನ್ ಅಲಿ ಅವರ ಗಾಯನ ಕಾರ್ಯಕ್ರಮದ ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸಿತು. ಈ ಸಂದರ್ಭದಲ್ಲಿ ರೋಹನ್ ಕಾರ್ಪೊರೇಶನ್ ತನ್ನ ಐಷಾರಾಮಿ ಸಮುದ್ರತೀರ ವಸತಿ ಯೋಜನೆಯಾದ 'ರೋಹನ್ ಮರೀನಾ ಒನ್' ಅನ್ನು ಮರು ಅನಾವರಣಗೊಳಿಸಿತು. ಕರಾವಳಿಯ ಜೀವನಶೈಲಿಗೆ ಆಧುನಿಕತೆಯ ಸ್ಪರ್ಶ ನೀಡುವ ಈ ಯೋಜನೆ ಸಂಸ್ಥೆಯ ಬೆಳವಣಿಗೆಯ ಪಯಣದಲ್ಲಿ ಮತ್ತೊಂದು ಮಹತ್ವದ ಮೈಲಿಗಲ್ಲಾಗಿ ಗುರುತಿಸಲ್ಪಟ್ಟಿತು.

ರೋಹನ್ ಕಾರ್ಪೊರೇಶನ್ ಹೆಗ್ಗುರುತು

ಇದೊಂದು ಐತಿಹಾಸಿಕ ಕಾರ್ಯಕ್ರಮ. ರೋಹನ್ ಕಾರ್ಪೊರೇಶನ್ ಕರಾವಳಿ ಕರ್ನಾಟಕದ ಪ್ರಮುಖ ರಿಯಲ್ ಎಸ್ಟೇಟ್ ಸಂಸ್ಥೆಗಳಲ್ಲಿ ಒಂದಾಗಿದ್ದು, ಗುಣಮಟ್ಟ, ವಿಶ್ವಾಸಾರ್ಹತೆಯಿಂದ ಗ್ರಾಹಕರ ಮನಗೆದ್ದ ಸಂಸ್ಥೆಯಾಗಿದೆ. ಸಂಸ್ಥೆಯು ಹಲವು ವಸತಿ ಹಾಗೂ ವಾಣಿಜ್ಯ ಯೋಜನೆಗಳ ಮೂಲಕ ತನ್ನದೇ ಆದ ಗುರುತನ್ನು ನಿರ್ಮಿಸಿಕೊಂಡಿದೆ ಎಂದು ಡಾ.ರೋಹನ್ ಮೊಂತೇರೊ ತಿಳಿಸಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ



ದಕ್ಷಿಣ ಕನ್ನಡ 29⁰ 25⁰ | ಉಡುಪಿ 29⁰ 26⁰

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶುಕ್ರವಾರ 26, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2

ಬಿ.ಸಿ.ರೋಡ್‌ನಲ್ಲಿ ರಿಕ್ಷಾ ಚಾಲಕರಿಂದ ಪ್ರತಿಭಟನೆ



ಪುಟ 6

ಜನಸಾಮಾನ್ಯರ ಸಮಸ್ಯೆ ಶೀಘ್ರ ಬಗೆಹರಿಸಲು ಪ್ರಯತ್ನ: ಕೊಡ್ಗಿ

ಮಂಗಳೂರು ನಗರದ ಸುರತ್ಕಲ್‌ನಲ್ಲಿ ಎತ್ತಿನ ಗಾಡಿ ಮಾರಾಟಕ್ಕಿಟ್ಟ ರೈತ!



ಕಾಲ ಬದಲಾಗಿದೆ.. ಜೀವನದ ಓಟ ವೇಗವಾಗಿದೆ.. ಆದರೆ ಕೆಲವೊಂದು ನೆನಪುಗಳು, ಸಂಪ್ರದಾಯಗಳು ಎಂದಿಗೂ ಹಳೆಯವಾಗುವುದಿಲ್ಲ, ಅದಕ್ಕೆ ಸಾಕ್ಷಿಯಂತೆಯೇ ನಗರೀಕರಣದ ನಡುವೆ, ಗ್ರಾಮೀಣ ಬದುಕಿನ ಸಂಕೇತವಾದ ಎತ್ತಿನ ಗಾಡಿಯೊಂದು ಇದೀಗ ಸುರತ್ಕಲ್ ನಗರದ ಬೀದಿಯಲ್ಲಿ ಮಾರಾಟಕ್ಕಿಟ್ಟಿರುವುದು ಜನರ ಗಮನ ಸೆಳೆಯುತ್ತಿದೆ. ಮನೆ, ಗಾರ್ಡನ್ ಸೌಂದರ್ಯಕ್ಕೆ ಇದು ಹೊಸ ಆಕರ್ಷಣೆಯಾಗಿದೆ.

ಸುಳ್ಯದ ಜೀವನದಿ ಪಯಸ್ವಿನಿಯಲ್ಲಿ ಮೊಸಳೆ ಪತ್ತೆ!



ಸುಳ್ಯ: ಸುಳ್ಯದ ಜೀವನದಿ ಪಯಸ್ವಿನಿಯಲ್ಲಿ ಗುರುವಾರ ಸಂಜೆ ಸುಮಾರು 3.30ರ ವೇಳೆಗೆ ಕಾಂತಮಂಗಲ ಸೇತುವೆ ಬಳಿಯಲ್ಲಿ ಮೊಸಳೆ ಗೋಚರಿಸಿದೆ. ಕಳೆದ ಒಂದು ವರ್ಷಗಳ ಹಿಂದೆ ಒಮ್ಮೆ ಮೊಸಳೆ ಪ್ರತ್ಯಕ್ಷವಾಗಿದ್ದು ಆ ಬಳಿಕ ಮಾಯವಾಗಿತ್ತು. ಆ ಬಳಿಕ ಈ ಬಾರಿ ಇದೇ ಮೊದಲ ಬಾರಿಗೆ ಕಾಣಿಸಿಕೊಂಡಿದೆ. ಬುಧವಾರ ಸುರಿದ ರಾತ್ರಿ ಹಾಗೂ ಗುರುವಾರ ಮುಂಜಾನೆ ಸುರಿದ ಮಳೆಯ ಪರಿಣಾಮವಾಗಿ ಮಣ್ಣು ಮಿಶ್ರಿತವಾದ ಕೆಂಪು ನೀರಿನಲ್ಲಿ ಗೋಚರವಾಗಿದ್ದು ವಾಹನ ಸವಾರರು ಸೇತುವೆ ಮೇಲೆ ಸಾಲುಗಟ್ಟಿ ನಿಂತು ಮೊಸಳೆಯ ಚಲನೆಯನ್ನು ವೀಕ್ಷಿಸಿದರು.

ಕರಾವಳಿಯಾದ್ಯಂತ ಬಿರುಸು ಪಡೆದ ಮಳೆ

ಕೃಷಿ ಕಾರ್ಯಕ್ಕೆ ವೇಗ

ಕೃಷಿಕರ ಮೊಗದಲ್ಲೀಗ ತುಸು ಮಂದಹಾಸ

ಮಂಗಳೂರು: ಅಂತೂ ಇಂತೂ ಕಳೆದ ಕೆಲವು ದಿನಗಳಿಂದ ಉತ್ತಮ ಮಳೆಯಾಗುತ್ತಿದ್ದು, ಕರಾವಳಿಯಾದ್ಯಂತ ಕೃಷಿ ಚಟುವಟಿಕೆಗಳು ಚುರುಕು ಪಡೆದಿವೆ.

ವಿರಾಮ ಬಳಿಕ ಮತ್ತೆ ಮಳೆ ಪ್ರತ್ಯಕ್ಷ

ಈ ಬಾರಿ ಆರಂಭದಲ್ಲಿಯೇ ಮುಂಗಾರು ಕೈಕೊಟ್ಟಿದ್ದರಿಂದ ಕೃಷಿಯನ್ನೇ ನಂಬಿದ್ದ ಮಂದಿ ತಲೆಯ ಮೇಲೆ ಕೈಹೊತ್ತು ಕುಳಿತುಕೊಳ್ಳುವಂತಾಗಿತ್ತು. ಜನತೆ ಕೂಡ ಮಳೆ ಕಡಿಮೆಯಾಗಿದ್ದರಿಂದ ಚಿಂತಿತರಾಗಿದ್ದರು. ಕೃಷಿಕರು ಸುರಿದ ಮೊದಲ ಮಳೆಯನ್ನು ನಂಬಿ ನೇಜಿ ನಾಟಿ ಮಾಡಿ ಉಳುಮೆಗೆ ಗದ್ದೆಯನ್ನು ಸಿದ್ಧಪಡಿಸಲಾರಂಭಿಸಿದ್ದರು. ಆದರೆ ಅಷ್ಟರಲ್ಲಾಗಲೇ ಮಳೆ ಕೈಕೊಟ್ಟಿತ್ತು. ಇದರಿಂದಾಗಿ ನೇಜಿ ಕೆಂಬಣ್ಣಕ್ಕೆ ತಿರುಗಿ ಆತಂಕಕ್ಕೆ ಕಾರಣವಾಗಿತ್ತು. ಇದೀಗ ವಿರಾಮದ ಬಳಿಕ ವರುಣ ಮತ್ತೆ ಪ್ರತ್ಯಕ್ಷಗೊಂಡಿದ್ದು, ಕಳೆದ ಕೆಲವು ದಿನಗಳಿಂದ ಕೃಷಿ ಚಟುವಟಿಕೆಗೆ ಪೂರಕವಾಗಿ ಪರಿಣಮಿಸಿದೆ.



10 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯುವ ಗುರಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಬಾರಿ ಕಳೆದ ಮೂರು ವರ್ಷಗಳಿಗಿಂತ ಅಧಿಕ ಭತ್ತ ಬೆಳೆಯುವ ಗುರಿಯನ್ನು ಕೃಷಿ ಇಲಾಖೆ ಹಾಕಿಕೊಂಡಿದೆ. ಒಟ್ಟು 10 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯುವ ಗುರಿ ಇರಿಸಲಾಗಿದೆ.

ಈ ಬಾರಿ ಗುರಿ ಹೆಚ್ಚು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಬಾರಿ ಒಟ್ಟು 10 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯುವ ಗುರಿ ಇರಿಸಲಾಗಿದ್ದು, ಈ ನಿಟ್ಟಿನಲ್ಲಿಪ್ರಯತ್ನಗಳುಸಾಗಿವೆ.ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಭತ್ತ ಬೆಳೆ ವಿಸ್ತೀರ್ಣ 2025ರಿಂದ 2026ಕ್ಕೆ 366 ಹೆಕ್ಟೇರ್ ಹೆಚ್ಚಳವಾಗಿದೆ. ಈ ಬಾರಿ ಒಟ್ಟು 10 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯುವ ಗುರಿ ಇದೆ ಎಂದು ಹೇಳುತ್ತಾರೆ ಕೃಷಿ ಇಲಾಖಾ ಅಧಿಕಾರಿಗಳು.

ಭತ್ತ ತಳಿಗಳ ದಾಸ್ತಾನು

ಜಿಲ್ಲೆಯಲ್ಲಿ ಕೃಷಿಕರಿಗೆ ಯಾವುದೇ ಸಮಸ್ಯೆಯಾಗದಂತೆ ಕೃಷಿ ಇಲಾಖೆ ಮುನ್ನೆಚ್ಚರಿಕೆ ವಹಿಸಿದೆ. ಭತ್ತದ ಬೀಜ, ರಸಗೊಬ್ಬರ, ರಾಸಾಯನಿಕಗಳನ್ನು ದಾಸ್ತಾನಿರಿಸಲಾಗಿದೆ. ಭತ್ತದ ತಳಿ ಗಳಾದ ಜಯ, ಜ್ಯೋತಿ, ಎಂಒಕೆ 4, ಸಹ್ಯಾದ್ರಿ ಬ್ರಹ್ಮ, ಸಹ್ಯಾದ್ರಿ ಕೆಂಪು ಮುಕ್ತಿ ತಳಿಗಳು ಸದ್ಯ ಲಭ್ಯ ಇವೆ. ಅಲ್ಲದೆ ಕೃಷಿಕರ ಬೇಡಿಕೆಗೆ ಅನುಸಾರ ಭತ್ತದ ಬೀಜಗಳನ್ನು ವಿತರಿಸಲಾಗುತ್ತಿದೆ. ಜಿಲ್ಲೆಯಲ್ಲಿ ಯೂರಿಯಾ ಡಿಎಪಿ, ಎಂಒಪಿ, ಎನ್‌ಪಿಕೆ, ಎಎಸ್‌ಪಿಯನ್ನು ಅಗತ್ಯ ಪ್ರಮಾಣದಲ್ಲಿ ಕೃಷಿ ಇಲಾಖೆ ದಾಸ್ತಾನಿರಿಸಿಕೊಂಡಿದೆ ಎಂದು ಹೇಳುತ್ತಾರೆ ಕೃಷಿ ಇಲಾಖಾ ಅಧಿಕಾರಿಗಳು.

ವಸತಿ ಸಮುಚ್ಚಯದಿಂದ ಸಂಕಷ್ಟ

ಜೀವ ನದಿಯ ಒಡಲು ಸೇರುತ್ತಿದೆ ತ್ಯಾಜ್ಯ ನೀರು

ನಾಗರಿಕ ಸಮಾಜ ತಲೆತಗ್ಗಿಸುವಂತ ಹೀನ ಕೃತ್ಯ

ಉಪ್ಪಿನಂಗಡಿ: ದಕ್ಷಿಣ ಕನ್ನಡ ಜಿಲ್ಲೆಯ ಜೀವನದಿ ನೇತ್ರಾವತಿ ನದಿಯಲ್ಲಿ ಈ ಬಾರಿ ಮುಂಗಾರು ಮಳೆಯ ನೀರು ಹರಿಯದಿದ್ದರೂ ವಸತಿ ಸಮುಚ್ಚಯಗಳ ಶೌಚಾಲಯದ ತ್ಯಾಜ್ಯವೂ ಸೇರಿದಂತೆ ಮಲಿನ ನೀರು ಹರಿಯುತ್ತಿದ್ದು ನಾಗರಿಕ ಸಮಾಜ ತಲೆತಗ್ಗಿಸುವಂತಾಗಿದೆ.

ವೀಡಿಯೋ ವೈರಲ್

ನೇತ್ರಾವತಿ ನದಿಯ ಒಡಲಿನಲ್ಲಿ ವಸತಿ ಸಮುಚ್ಚಯದಿಂದ ಹರಿದು ಬಂದು ಸಂಗ್ರಹವಾಗಿರುವ ಮಲಿನ ನೀರು ಹರಿಯುವ ನದಿಯನ್ನು ಸೇರುತ್ತಿರುವ ದೃಶ್ಯ ಸೆರೆ ಹಿಡಿದಿರುವ ಉಪ್ಪಿನಂಗಡಿ ನೆಲಜಲ ಸಂರಕ್ಷಣಾ ಸಮಿತಿ ಅಧ್ಯಕ್ಷ ಕೈಲಾರ್ ರಾಜಗೋಪಾಲ ಭಟ್ ಜಿಲ್ಲೆಯ ಜೀವ ನದಿಯನ್ನು ಈ ಪ್ರಮಾಣದಲ್ಲಿ ಕೆಡಿಸುತ್ತಿರುವುದು ನಾಗರಿಕ ಸಮಾಜಕ್ಕೆ ಶೋಭೆ ಎನಿಸುವುದೇ ಎಂದು ಪ್ರಶ್ನಿಸಿದ್ದಾರೆ.

ಈ ಬಗ್ಗೆ ವಸತಿ ಸಮುಚ್ಚಯದಲ್ಲಿನ ನಿವಾಸಿಯೋರ್ವರು ಪ್ರತಿಕ್ರಿಯಿಸಿ, ಶೌಚಾಲಯದ ತ್ಯಾಜ್ಯ ವಿಲೇವಾರಿಯನ್ನು ವೈಜ್ಞಾನಿಕವಾಗಿ ನಿರ್ವಹಿಸುವ ಅವಕಾಶವಿದ್ದರೂ, ಅದನ್ನು ಮಾಡದೆ ರಾತ್ರಿ ಹೊತ್ತು ನೇರ ನದಿಗೆ ಬಿಡುವುದರಿಂದ ಪರಿಸರವಿಡೀ ದುರ್ನಾತ ಪ್ರಸಹರಿಸುತ್ತದೆ. ಮನೆಗೆ ಬಂದ ಆತಿಥಿಗಳು ದುರ್ನಾತ ಸಹಿಸಲಾಗದೆ ಮನೆಯಿಂದ ಹೊರಟ ಘಟನಾವಳಿಗಳು ನಡೆದು ಮುಜುಗರ ತರಿಸುತ್ತಿದೆ. ಆಡಳಿತ ವ್ಯವಸ್ಥೆ ಮೌನವಾಗಿದೆ. ಕನಿಷ್ಠ ಮಾಧ್ಯಮವಾದರೂ ನಮಗೆ ಧ್ವನಿಯಾಗಬಾರದೇ ಎಂದು ಅಳಲನ್ನು ತೋಡಿಕೊಂಡಿದ್ದಾರೆ.



ಆದೇಶ ಪಾಲನೆಯಾಗಿಲ್ಲ

ನದಿಗೆ ಶೌಚಾಲಯದ ತ್ಯಾಜ್ಯ ಬಿಡಲಾಗುತ್ತಿರುವ ಬಗ್ಗೆ ರಾತ್ರಿ ಹೊತ್ತು ನದಿ ಪಾತ್ರದುದ್ದಕ್ಕೂ ಸಹಿಸಲಸಾಧ್ಯವಾದ ದುರ್ವಾಸನೆ ಪ್ರಸರಿಸುತ್ತಿರುವ ಬಗ್ಗೆ ಶಾಸಕರಲ್ಲಿ ಸಾರ್ವಜನಿಕರು ದೂರಿಕೊಂಡಾಗ, ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ಜರಗಿಸಬೇಕೆಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರಾದರೂ, ಅದ್ಯಾವುದೂ ಪಾಲನೆಯಾಗುತ್ತಿಲ್ಲ ಎನ್ನುವುದಕ್ಕೆ ಈ ದೃಶ್ಯವೇ ಸಾಕ್ಷಿಯಾಗಿದೆ.

ಸುತ್ತಮುತ್ತ

ಕಟ್ಟೆಬಜಾರ್ ತಿರುವಿನಲ್ಲಿ ಬಾಯ್ತೆರೆದ ಚರಂಡಿ: ಚಾಲಕರಿಗೆ ಆತಂಕ

ಮಂಜೇಶ್ವರ: ಮಂಜೇಶ್ವರ ಪಂ. ವ್ಯಾಪ್ತಿಯ ಬಂಗ್ರಮಂಜೇಶ್ವರ ರಸ್ತೆಯ ಕಟ್ಟೆಬಜಾರ್ ತಿರುವು ವಾಹನ ಸವಾರರಲ್ಲಿ ಆತಂಕ ಉಂಟು ಮಾಡುತ್ತಿದೆ. ಈ ತಿರುವಿನ ಇಕ್ಕೆಡೆಗಳಲ್ಲಿ ರಸ್ತೆಗೆ ತಾಗಿಕೊಂಡು ತೆರೆದ ಸ್ಥಿತಿಯಲ್ಲಿರುವ ಚರಂಡಿಯು ವಾಹನ ಚಾಲಕರಿಗೆ, ಪಾದಚಾರಿಗಳಿಗೆ ಭೀತಿ ಸೃಷ್ಟಿಸುತ್ತಿದೆ. ಮಂಜೇಶ್ವರ ಭಾಗದಿಂದ ಹೊಸಂಗಡಿ ಕಡೆಗೆ ಸಂಚರಿಸುವಾಗ ಈ ತಿರುವಿನಲ್ಲಿ ಎದುರಿನಿಂದ ಬರುವ ವಾಹನಕ್ಕೆ ಸೈಡ್ ನೀಡುವ ವೇಳೆ ಚರಂಡಿಗೆ ಬಿದ್ದು ಅಪಘಾತಕ್ಕೆ ಕಾರಣವಾಗುತ್ತಿದೆ. ಈ ಪರಿಸರದಲ್ಲಿ ಚರಂಡಿಯಲ್ಲಿ ಗಿಡ, ಪೊದೆಗಳು ತುಂಬಿಕೊಂಡಿರುವುದರಿಂದ ವಾಹನ ಚಾಲಕರ ಗಮನಕ್ಕೆ ಬಾರದೆ ಅಪಾಯಕ್ಕೆ ಕಾರಣವಾಗುತ್ತಿರುವುದಾಗಿ ಸಾರ್ವಜನಿಕರು ದೂರಿದ್ದಾರೆ.

ಜು.9ರಂದು ಆಟೋ ರಿಕ್ಷಾ ದರ ಪರಿಷ್ಕರಣೆ ಸಭೆ

ಮಂಗಳೂರು: ಆಟೋರಿಕ್ಷಾ ದರ ಪರಿಷ್ಕರಣೆಗೆ ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಸಭೆಯನ್ನು ಜು.9 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ನ್ಯಾಯಾಲಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ.


ಕುಶಾಲನಗರದಲ್ಲಿ 'ಕಾವೇರಿ ರೋಟರಿ ಪಾರ್ಕ್'ಗಾಗಿ ಮರುಜನ್ಮ ಪಡೆದ ಬ್ರಿಡ್ಜ್

ಉದ್ಯಾನವಾಗಿ ರೂಪುಗೊಂಡ ಪಾಳು ಬಿದ್ದ ಸೇತುವೆ

ಮಡಿಕೇರಿ: ಕೊಡಗಿನ ಹೆಬ್ಬಾಗಿಲು ಕುಶಾಲನಗರದಲ್ಲಿರುವ, 167 ವರ್ಷಗಳ ಸುದೀರ್ಘ ಇತಿಹಾಸವಿರುವ ಸೇತುವೆ ಇದೀಗ ಸುಂದರ ಉದ್ಯಾನವಾಗಿರೂಪುಗೊಂಡಿದೆ. ಇಚ್ಛಾಶಕ್ತಿಯಿದ್ದರೆ ಯಾವುದನ್ನೂಸಾಧಿಸಬಹುದೆಂಬುದಕ್ಕೆಕುಶಾಲನಗರ ರೋಟರಿ ಕ್ಲಬ್ ಸಾಕ್ಷಿಯಾಗಿದೆ.

ಕೊಡಗು ಹಾಗೂ ಮೈಸೂರು ಜಿಲ್ಲೆಯನ್ನು ಸಂಪರ್ಕಿಸುವ ಕುಶಾಲನಗರದಲ್ಲಿ ಬ್ರಿಟೀಷರ ಕಾಲದಲ್ಲಿ ಅಂದರೆ 1848ರಲ್ಲಿ ಮೈಸೂರು ಕಮಿಷನರ್ ಮೇಜರ್ ಜನರಲ್ ಮಾರ್ಕ್ ಕಬ್ಬನ್ ಅವಧಿಯಲ್ಲಿ ನಿರ್ಮಾಣವಾಗಿದ್ದ ಐತಿಹಾಸಿಕ ಸೇತುವೆ ಕಳೆದ ಕೆಲವು ವರ್ಷಗಳಿಂದ ಪಾಳು ಬಿದ್ದಿತ್ತು. ಆ ಸೇತುವೆ ಇದೀಗ ರೋಟರಿ ಕ್ಲಬ್ ಆಫ್ ಕುಶಾಲನಗರದ ದೃಢ ಸಂಕಲ್ಪದಿಂದ ಸುಂದರ 'ಕಾವೇರಿ ರೋಟರಿ ಪಾರ್ಕ್' ಆಗಿ ಮರುಜನ್ಮ ಪಡೆದು ಲೋಕಾರ್ಪಣೆಗೊಂಡಿದೆ. ಸಂಸ್ಥೆ 50 ವರ್ಷಗಳ ಪೂರೈಸಿದ ನೆನಪಿಗೆ ಕುಶಾಲನಗರ ರೋಟರಿ ಸಾರ್ವಜನಿಕರಿಗೆ ಈ ಉಡುಗೊರೆ ನೀಡಿದೆ.

»ಪುಟ 6



ಆಧುನಿಕ ಸ್ಪರ್ಶ

ಪ್ರಸ್ತುತ ಸುಮಾರು 8000 ಚದರ ಅಡಿ ಪ್ರದೇಶದಲ್ಲಿ ಅತ್ಯಾಧುನಿಕ ಟೈಲ್ಸ್, 800 ಅಡಿ ಉದ್ದದ ಸುರಕ್ಷತಾ ಗ್ರಿಲ್, ಹಸಿರು ಬಳ್ಳಿಗಳ 8 ಸುಂದರ ಕಮಾನು, 150ಕ್ಕೂ ಹೆಚ್ಚು ಅಲಂಕಾರಿಕ ಸಸ್ಯಗಳು, 20ಕ್ಕೂ ಹೆಚ್ಚು ಸೋಲಾರ್ ದೀಪಗಳು, ಸುರಕ್ಷತೆಗಾಗಿ ಇಡೀ ಪಾರ್ಕ್‌ಗೆ ಸಿಸಿ ಕ್ಯಾಮರಾ ಅಳವಡಿಸಲಾಗಿದೆ.

ರೋಟರಿ ಸದಸ್ಯರ ಶ್ರಮ

ಒಂದು ಕಾಲದಲ್ಲಿ ಕಸದ ರಾಶಿ, ಅನೈತಿಕ ಚಟುವಟಿಕೆಗಳು ಹಾಗೂ ಕುಡುಕರ ಅಡ್ಡೆಯಾಗಿ ಸಾರ್ವಜನಿಕರ ಓಡಾಟಕ್ಕೆ ಅಯೋಗ್ಯವಾಗಿದ್ದ ಈ ತಾಣವನ್ನು ಪುನಶ್ಚೇತನಗೊಳಿಸಲು ರೋಟರಿ ಕ್ಲಬ್ ಅಧ್ಯಕ್ಷ ಮಾಳೆಯಂಡ ಮನು ಪೆಮ್ಮಯ್ಯ ಅವರ ನೇತೃತ್ವದಲ್ಲಿ ಎಲ್ಲಾ ರೋಟರಿ ಸದಸ್ಯರುಗಳು ಕಳೆದ ಆರು ತಿಂಗಳ ಕಾಲ ಹಗಲಿರುಳು ಶ್ರಮಿಸಿದ್ದರು.

ಕೆಸರು ಗದ್ದೆಯಾಗಿದೆ ಕುಳಾಯಿ



ಮಂಗಳೂರು ನಗರದ ಕುಳಾಯಿ ಕೆನರಾ ಬ್ಯಾಂಕ್, ನಮ್ಮ ಟಿವಿ ಕಚೇರಿಯ ಮುಂಭಾಗ ತೋಡು, ಒಳಚರಂಡಿ ವ್ಯವಸ್ಥೆ ಇಲ್ಲದೆ ರಸ್ತೆ ಬದಿ ಸದಾ ನೀರು ನಿಲ್ಲುತ್ತಿದ್ದು, ಈ ಭಾಗದಲ್ಲಿ ಕಳೆದ ವಾರ ಸುರಿದ ಮಣ್ಣು ಮಳೆಯ ಬಳಿಕ ಕೆಸರಾಗಿ ಪಾದಚಾರಿಗಳು, ವಾಹನ ಸವಾರರು ಹೋಗಲಾಗದೆ ವಾಹನ ಸವಾರರ ಅಪಘಾತಕ್ಕೆ ಕಾರಣವಾಗಿದೆ.

ಪುತ್ತೂರು ನಗರದ ಕಾರ್ಜಾಲು-ಗಣೇಶನಗರ ಸಂಪರ್ಕ ರಸ್ತೆಯ ದುಃಸ್ಥಿತಿ | ಜನರ ಮನವಿಗೂ ಸಿಕ್ಕಿಲ್ಲ ಇಲ್ಲಿ ಸ್ಪಂದನೆ

ಕೆಸರುಮಯ ರಸ್ತೆಯಲ್ಲಿ ಸಾರ್ವಜನಿಕರ ಪರದಾಟ, ಶೀಘ್ರ ದುರಸ್ತಿಗೆ ಆಗ್ರಹ

ಪುತ್ತೂರು: ನಗರದ ಮಂಜಲ್ಪಡ್ಪು ಭಾಗದಿಂದ ಕಾರ್ಜಾಲು ಗಣೇಶನಗರ ಸಂಪರ್ಕ ರಸ್ತೆಯ ಸ್ಥಿತಿ ಕುಗ್ರಾಮದ ರಸ್ತೆಗಿಂತಲೂ ಕಡೆಯಾಗಿದೆ. ಮಳೆ ಬಂದರೆ ಸಾಕು ರಸ್ತೆ ಸಂಪೂರ್ಣ ಕೆಸರುಮಯಗೊಂಡು ನಡೆದುಕೊಂಡು ಹೋಗುವುದಕ್ಕೂ ಅಸಾಧ್ಯವಾದ ಸ್ಥಿತಿ ನಿರ್ಮಾಣವಾಗುತ್ತದೆ.

ಕೆಸರುಮಯ

ರಸ್ತೆಯ ಶಾಶ್ವತ ದುರಸ್ತಿಗಾಗಿ ಸ್ಥಳೀಯರು ಪ್ರಯತ್ನವನ್ನೆಲ್ಲಾ ಮಾಡಿದರೂ ಸ್ಪಂದನೆ ಶೂನ್ಯ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಮಂಜಲ್ಪಡ್ಪುನಲ್ಲಿ ಹೆದ್ದಾರಿಯಿಂದ ಅರ್ಧ ಕಿ.ಮೀ. ದೂರದಲ್ಲಿರುವ ಈ ಪ್ರದೇಶವು ಪುತ್ತೂರು ನಗರಸಭಾ ವ್ಯಾಪ್ತಿಯಲ್ಲಿದೆ. ಇಲ್ಲಿನ ಎರಡೂ ಭಾಗದಲ್ಲೂ ಕಾಂಕ್ರೀಟ್ ರಸ್ತೆ ಇದೆ. ಆದರೆ ಮಧ್ಯದ 75 ಮೀಟರ್‌ನಷ್ಟು ಉದ್ದಕ್ಕೆ ಕಾಂಕ್ರೀಟ್ ಹಾಕದೆ ಹಾಗೇ ಬಿಡಲಾಗಿದೆ. ಬೇಸಿಗೆಯಲ್ಲಿ ಹೇಗಾದರೂ ಹೋಗುವ ಸ್ಥಳೀಯರು ಮಳೆಗಾಲದಲ್ಲಿ ಕೆಸರಿನಿಂದ ಹೋಗಲಾಗದೆ ಸಂಕಷ್ಟ ಪಡುತ್ತಾರೆ. ಈ ಭಾಗದಲ್ಲಿ ಹತ್ತಾರು ಮನೆಗಳಿವೆ. ಆದರೆ ರಸ್ತೆಯನ್ನು ಶಾಶ್ವತವಾಗಿ ಅಭಿವೃದ್ಧಿಪಡಿಸುವುದಕ್ಕೆ ಜನಪ್ರತಿನಿಧಿಗಳಾಗಲಿ, ಅಧಿಕಾರಿಗಳಾಗಲಿ ಮನಸ್ಸು ಮಾಡಿಲ್ಲ, ರಸ್ತೆ ಬದಿ ಮಳೆ ನೀರು ಹರಿಯುವುದಕ್ಕೆ ಚರಂಡಿ ವ್ಯವಸ್ಥೆ ಇಲ್ಲದೆ ನೀರು ರಸ್ತೆಯಲ್ಲೇ ನಿಂತು ಸಂಪೂರ್ಣ ಕೆಸರುಮಯಗೊಂಡಿದೆ. ಮಳೆಗಾಲ ಪೂರ್ತಿ ಅದೇ ಕೆಸರಿನಲ್ಲಿ ಓಡಾಡಬೇಕಿದೆ ಎಂಬುದು ಸ್ಥಳೀಯರ ಆರೋಪವಾಗಿದೆ.



ಡಿಸಿ ನಿರ್ದೇಶನಕ್ಕೂ ಇಲ್ಲ ಬೆಲೆ

ಸ್ಥಳೀಯವಾಗಿ ಮನವಿ ಮಾಡಿ ರಸ್ತೆ ಅಭಿವೃದ್ಧಿಯಾಗದೇ ಇರುವುದನ್ನು ಕಂಡು ಸ್ಥಳೀಯರು ದ.ಕ. ಜಿಲ್ಲಾಧಿಕಾರಿಗೂ ದೂರು ನೀಡಿದ್ದರು. ಈ ಕುರಿತು ಪರಿಶೀಲನೆ ಮಾಡಿ ಅಗತ್ಯ ಕ್ರಮಕೈಗೊಳ್ಳುವಂತೆ ಪುತ್ತೂರು ನಗರಸಭೆಗೆ ನಿರ್ದೇಶನ ನೀಡಿದರೂ, ಸ್ಥಳೀಯ ಅಧಿಕಾರಿಗಳು ಅದಕ್ಕೆ ಯಾವುದೇ ಸ್ಪಂದನೆಯನ್ನೂ ನೀಡಿಲ್ಲ.

ನಡೆದಾಡಲೂ ಕಷ್ಟ

"ನಮ್ಮ ಭಾಗದ ರಸ್ತೆಗೆ ಕಾಂಕ್ರೀಟ್ ಹಾಕಿಸುವಂತೆ ಸಂಬಂಧಪಟ್ಟವರಿಗೆ ಮನವಿ ನೀಡಿದರೂ ಪ್ರಯೋಜನವಾಗಿಲ್ಲ, ಕಳೆದ ವಾರ ನಾನೇ ನಗರಸಭೆಗೆ ತೆರಳಿ ಅಧಿಕಾರಿಗಳ ಬಳಿ ವಿನಂತಿ ಮಾಡಿದ್ದೇನೆ. ರಸ್ತೆಯಲ್ಲಿ ಕೆಸರು ತುಂಬಿರುವುದರಿಂದ ನಡೆದಾಡುವುದಕ್ಕೂ ಕಷ್ಟವಾಗುತ್ತಿದೆ.

● ಜೋಸೆಫಿನ್ ಗೊನ್ಸಾಲ್ವಿಸ್, ನಿವೃತ್ತ ಶಿಕ್ಷಕಿ

84ರ ವೃದ್ಧೆಯಿಂದ ಹೋರಾಟ!

ಈ ಭಾಗದ ಹೆಚ್ಚಿನ ಮನೆಗಳಲ್ಲಿ ಹಿರಿಯ ನಾಗರಿಕರೇ ಹೆಚ್ಚಿದ್ದು, ಅವರ ಮನವಿಗೂ ಸ್ಥಳೀಯಾಡಳಿತ ಬೆಲೆ ನೀಡಿಲ್ಲ, ನಗರಸಭೆಯಲ್ಲಿ ಜನಪ್ರತಿನಿಧಿಗಳ ಆಡಳಿತ ಇರುವ ಸಂದರ್ಭ ರಸ್ತೆಯ ಬಾಕಿ ಉಳಿದಿರುವ ಭಾಗಕ್ಕೆ ಕಾಂಕ್ರೀಟ್ ಹಾಕಲು ಒತ್ತಾಯಿಸಿದರೂ ಯಾವುದೇ ಸ್ಪಂದನೆ ಸಿಕ್ಕಿಲ್ಲ, ನಮ್ಮ ಭಾಗದ ರಸ್ತೆ ದುರಸ್ತಿ ಮಾಡಿ ಶಾಶ್ವತ ಪರಿಹಾರ ಕಲ್ಪಿಸುವಂತೆ ಸ್ಥಳೀಯ ನಿವಾಸಿ 84ರ ಹರೆಯದ ನಿವೃತ್ತ ಶಿಕ್ಷಕಿ ಜೋಸೆಫಿನ್ ಗೊನ್ಸಾಲ್ವಿಸ್ ಅವರು ಪುತ್ತೂರು ನಗರಸಭೆಗೆ ತೆರಳಿ ಅಲ್ಲಿನ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ. ಮನೆಯಿಂದ ಹೊರಬಂದು ವಾಕಿಂಗ್ ಮಾಡುವುದಕ್ಕೂ ಕೆಸರು ತುಂಬಿದ ರಸ್ತೆಯಲ್ಲಿ ಸಾಧ್ಯವಾಗುತ್ತಿಲ್ಲ ಎಂದು ಅವರು ತಮ್ಮ ನೋವು ತೋಡಿಕೊಳ್ಳುತ್ತಿದ್ದಾರೆ.

ಸುತ್ತಮುತ್ತ

ಇಂದು ರಕ್ತದಾನಿಗಳಿಗೆ ರೆಡ್‌ಕ್ರಾಸ್‌ನಿಂದ ಸನ್ಮಾನ

ಮಂಗಳೂರು: ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ವತಿಯಿಂದ ವಿಶ್ವ ರಕ್ತದಾನಿಗಳ ದಿನಾಚರಣೆ ಹಾಗೂ ರಕ್ತದಾನಿಗಳಿಗೆ ಸನ್ಮಾನ ಕಾರ್ಯಕ್ರಮ ಜೂ.27ರಂದು ಬೆಳಗ್ಗೆ 10.30ಕ್ಕೆ ರೆಡ್‌ಕ್ರಾಸ್ ಶತಮಾನೋತ್ಸವ ಭವನದ ಪ್ರೇರಣಾ ಸಭಾಂಗಣದಲ್ಲಿ ನಡೆಯಲಿದೆ. ಶಾಸಕ ವೇದವ್ಯಾಸ ಕಾಮತ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ . ರೆಡ್‌ಕ್ರಾಸ್ ಸೊಸೈಟಿಯ ದ.ಕ. ಜಿಲ್ಲಾ ಘಟಕದ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ವೆನ್ಲಾಕ್ ಆಸ್ಪತ್ರೆಯ ಜಿಲ್ಲಾ ಸರ್ಜನ್ ಡಾ.ಶಿವಪ್ರಕಾಶ್ ಡಿ.ಎಸ್. ಮತ್ತು ಲೇಡಿಗೋಶನ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ದುರ್ಗಾಪ್ರಸಾದ್ ಎಂ.ಆರ್. ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಜಿಲ್ಲಾ ರೆಡ್‌ಕ್ರಾಸ್ ಸೊಸೈಟಿಯ ರಕ್ತದಾನ ಉಪ ಸಮಿತಿ ನಿರ್ದೇಶಕ ಪುಷ್ಪರಾಜ್ ಜೈನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ. 28: ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ

ಬೆಳ್ತಂಗಡಿ: ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾದ ಬೆಳ್ತಂಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗೌರವ ಸನ್ಮಾನ ಸಮಾರಂಭವನ್ನು ಜೂ.28ಂದು ಶಾಸಕ ಹರೀಶ್ ಪೂಂಜ ಅವರ ನೇತೃತ್ವದಲ್ಲಿ ಜರಗಲಿದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮಹಾಶಕ್ತಿ ಕೇಂದ್ರಗಳ ವ್ಯಾಪ್ತಿಯ ಗ್ರಾಮಗಳನ್ನು ಆಧರಿಸಿ ಬೆಳಿಗ್ಗೆ 9ಗಂಟೆಗೆ ಅಳದಂಗಡಿ ಮತ್ತು ನಾರಾವಿ ಜಿಪಂ ವ್ಯಾಪ್ತಿಯ ವಿದ್ಯಾರ್ಥಿಗಳಿಗೆ ಅಳದಂಗಡಿಯ ಸ್ವರಾಜ್ ಟವರ್ಸ್ ನಲ್ಲಿ, ಬೆಳಿಗ್ಗೆ 11 ಗಂಟೆಗೆ ಕಣಿಯೂರು, ಕುವೆಟ್ಟು ಜಿಪಂ ವ್ಯಾಪ್ತಿ ಹಾಗೂ ಬೆಳ್ತಂಗಡಿ ನಗರ ವ್ಯಾಪ್ತಿಯ ವಿದ್ಯಾರ್ಥಿಗಳಿಗೆ ಬೆಳ್ತಂಗಡಿಯ ಸಂಗಮ ಸಭಾಭವನದಲ್ಲಿ,ಮಧ್ಯಾಹ್ನ 2 ಗಂಟೆಗೆ ಧರ್ಮಸ್ಥಳ,ಲಾಯಿಲ, ಉಜಿರೆ ಜಿಪಂ ವ್ಯಾಪ್ತಿಯ ಮಕ್ಕಳಿಗೆ ಉಜಿರೆಯ ಅನುಗ್ರಹ ಸಭಾಭವನದಲ್ಲಿ ಸನ್ಮಾನ ನೆರವೇರಲಿದೆ ಎಂದು ಶಾಸಕ ಕಚೇರಿ ಪ್ರಕಟಣೆ ತಿಳಿಸಿದೆ.

ಜೂ. 30: ಮೆಸ್ಕಾಂ ಜನಸಂಪರ್ಕ ಸಭೆ

ಮಂಗಳೂರು: ಮೆಸ್ಕಾಂ ಕುಲಶೇಖರ ಉಪವಿಭಾಗ ಕಛೇರಿ ಮರೋಳಿಯಲ್ಲಿ ಜೂ.30ರಂದು ಸಮಯ ಬೆಳಿಗ್ಗೆ 11ರಿಂದ 12 ಗಂಟೆಯವರೆಗೆ ಜನ ಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸಲಾಗುವುದು. ದೂರವಾಣಿ ಸಂಖ್ಯೆ 0824-2231132ರ ಮುಖಾಂತರವೂ ಸಂಪರ್ಕಿಸಿ, ಅಹವಾಲುಗಳನ್ನು ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಜು. 1: ಪ್ರಿಯದರ್ಶಿನಿ ಸೊಸೈಟಿಯಿಂದ ತರಬೇತಿ, ಸಹಕಾರಿ ಸಪ್ತಾಹ

ಮುಲ್ಕಿ: ದಕ್ಷಿಣ ಕನ್ನಡ ಜಿಲ್ಲೆ ಸಹಕಾರ ಇಲಾಖೆಯ ನೇತೃತ್ವದಲ್ಲಿ ಹಳೆಯಂಗಡಿ ಪ್ರಿಯದರ್ಶಿನಿ ಕೋ-ಆಪರೇಟಿವ್ ಸೊಸೈಟಿಯ ಆಶ್ರಯದಲ್ಲಿ ಕೇಂದ್ರ ಸಹಕಾರ ಇಲಾಖೆ 5 ವರ್ಷ ಪೂರ್ಣಗೊಂಡ ಪ್ರಯುಕ್ತ 'ಸಹಕಾರ ಸಪ್ತಾಹ'ದ ಅಂಗವಾಗಿ ಮೂಲ್ಕಿ ತಾಲೂಕು ಮಟ್ಟದ ಸಹಕಾರ ಸಂಘಗಳ ನಿರ್ದೇಶಕರು ಮತ್ತು ಸಿಬ್ಬಂದಿಗೆ 'ಸಹಕಾರ ಸಂಘಗಳ ನಿರ್ವಹಣೆಯಲ್ಲಿ ನಮ್ಮ ಪಾತ್ರ'ದ ಬಗ್ಗೆ ತರಬೇತಿ ಕಾರ್ಯಗಾರವು ಜು. 1ರಂದು ಬೆಳಿಗ್ಗೆ 10:30ಕ್ಕೆ ಹಳೆಯಂಗಡಿಯ ಹರಿಓಂ ಸಭಾಂಗಣದಲ್ಲಿ ನಡೆಯಲಿದೆ. ದ.ಕ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹಾಗೂ ಬೆಂಗಳೂರು ಕರ್ನಾಟಕ ಹಾಲು ಉತ್ಪಾದಕರ ಒಕ್ಕೂಟದ ನಿರ್ದೇಶಕರಾದ ಡಾ. ಐಕಳಬಾವ ದೇವಿಪ್ರಸಾದ್ ಶೆಟ್ಟಿ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಹಳೆಯಂಗಡಿ ಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ವಸಂತ್ ಬೆರ್ನಾಡ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪಡುಬಿದ್ರಿ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ವೈ. ಸುಧೀರ್, ದ.ಕ. ಜಿಲ್ಲೆ ಸಹಕಾರ ಸಂಘಗಳ ಉಪ ನಿಬಂಧಕ ಎಚ್.ಎನ್. ರಮೇಶ್, ಮಂಗಳೂರು ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ತ್ರಿವೇಣಿ ರಾವ್ ಉಪಸ್ಥಿತರಿರುವರು.ಸಂಪನ್ಮೂಲ ವ್ಯಕ್ತಿಯಾಗಿ ಕುಂದಾಪುರ ಹಾಗೂ ಕರ್ನಾಟಕ ಸಹಕಾರ ಸಂಘಗಳ ತರಬೇತಿದಾರ, ವಕೀಲರಾದ ಶ್ರೀಧರ್ ಪಿ.ಎಸ್ ಮಾತನಾಡಲಿದ್ದಾರೆ ಎಂದು ದ.ಕ. ಜಿಲ್ಲಾ ಸಹಕಾರ ಇಲಾಖೆ ಹಾಗೂ ಹಳೆಯಂಗಡಿ ಪ್ರಿಯದರ್ಶಿನಿ ಕೋ-ಆಪರೇಟಿವ್ ಸೊಸೈಟಿಯ ಆಡಳಿತ ಮಂಡಲಿ ಮತ್ತು ಸಿಬ್ಬಂದಿ ವರ್ಗದ ಪ್ರಕಟಣೆ ತಿಳಿಸಿದೆ.

ಬಿ.ಸಿ.ರೋಡ್, ಸುಳ್ಯದಲ್ಲಿ ಮಾದಕ ವಸ್ತು ವಿರುದ್ಧ ಜನಜಾಗೃತಿ | ಯಶ್‌ಕುಮಾರ್ ಶರ್ಮಾ ಮನವಿ

ಡ್ರಗ್ಸ್ ಮುಕ್ತ ಸಮಾಜಕ್ಕಾಗಿ ಪೊಲೀಸ್ ಇಲಾಖೆ ಜೊತೆ ಸಹಕರಿಸಿ





ಬಂಟ್ವಾಳ/ಸುಳ್ಯ: ಬಿ.ಸಿ.ರೋಡ್ ಮತ್ತು ಸುಳ್ಯದಲ್ಲಿ 'ಮಾದಕ ವಸ್ತುಗಳ ದುರುಪಯೋಗ ಮತ್ತು ಅಕ್ರಮ ಸಾಗಾಣಿಕೆ ವಿರುದ್ಧ ಅಂತಾರಾಷ್ಟ್ರೀಯ ದಿನ - ಜನಜಾಗೃತಿ ಅಭಿಯಾನ ಗುರುವಾರ ನಡೆಯಿತು.

ಬಿ.ಸಿ.ರೋಡಿನಲ್ಲಿಲಯನ್ಸ್‌ಕ್ಲಬ್ ಸಭಾಭವನದಲ್ಲಿದ.ಕ. ಜಿಲ್ಲಾ ಪೊಲೀಸ್ ಬಂಟ್ವಾಳ ಉಪ ವಿಭಾಗ, ಬಂಟ್ವಾಳ ನಗರ ಪೊಲೀಸ್ ಠಾಣೆ, ಶಿಕ್ಷಣ ಇಲಾಖೆ, ತಾಲೂಕಿನ ವಿವಿಧ ಶಿಕ್ಷಣ ಸಂಸ್ಥೆ ಹಾಗೂ ಲಯನ್ಸ್, ರೋಟರಿ, ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ವೇಳೆ ಅಧ್ಯಕ್ಷತೆ ವಹಿಸಿದ್ದ ಬಂಟ್ವಾಳ ಉಪ ವಿಭಾಗದ ಸಹಾಯಕ ಪೊಲೀಸ್ ಅಧೀಕ್ಷಕ ಯಶ್ ಕುಮಾರ್ ಶರ್ಮಾ ಐ.ಪಿ.ಎಸ್ ಮಾತನಾಡಿ, ವಿದ್ಯಾರ್ಥಿಗಳು ಮಾದಕ ವಸ್ತುಗಳ ಕುರಿತಂತೆ ಸದಾ ಜಾಗೃತಿಯಲ್ಲಿದ್ದು, ಬಂಟ್ವಾಳವನ್ನು ಡ್ರಗ್ಸ್ ಮುಕ್ತಗೊಳಿಸುವಲ್ಲಿ ಯುವ ಸಮುದಾಯವು ಪೊಲೀಸ್ ಇಲಾಖೆಯೊಂದಿಗೆ ಸಹಕರಿಸುವಂತೆ ಕರೆ ನೀಡಿದ್ದಾರೆ. ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ಬಂಟ್ವಾಳ ತಾಲೂಕು ಆಸ್ಪತ್ರೆಯ ಆಪ್ತ ಸಮಾಲೋಚಕಿ ಅಕ್ಷತಾ ಹಾಗೂ ಮಂಗಳೂರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾನಸಿಕ ಆರೋಗ್ಯ ವಿಭಾಗದ ಆಪ್ತ ಸಮಾಲೋಚಕಿ ದಿವ್ಯಾ ಎನ್ ಮಂಗಳೂರು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಬಂಟ್ವಾಳ ನಗರ ಠಾಣೆಯ ಇನ್ಸ್‌ಪೆಕ್ಟರ್ ಅನಂತ ಪದ್ಮನಾಭ ಕೆ.ವಿ., ಬಂಟ್ವಾಳ ಲಯನ್ಸ್ ಕ್ಲಬ್ ಹಾಗೂ ರೋಟರಿ ಕ್ಲಬ್ ಇದ್ದರು. ತಾಲೂಕಿನ ವಿವಿಧ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು, ಬಂಟ್ವಾಳ ನಗರ ಹಾಗೂ ಬಂಟ್ವಾಳ ಸಂಚಾರ ಪೊಲೀಸ್ ಠಾಣೆಯ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ಸುಳ್ಯದಲ್ಲಿ ಬೃಹತ್ ಜಾಗೃತಿ ಜಾಥಾ

ದ.ಕ. ಜಿಲ್ಲಾ ಪೊಲೀಸ್, ಸುಳ್ಯದ ಪೊಲೀಸ್ ಠಾಣೆ, ಪ್ರೆಸ್ ಕ್ಲಬ್, ಸರಕಾರಿ ಪದವಿ ಪೂರ್ವ ಕಾಲೇಜ್, ಸಂಕೇಶ್ ಫೌಂಡೇಶನ್ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಮಾದಕ ವ್ಯಸನ ಮತ್ತು ಅಕ್ರಮ ಸಾಗಾಣಿಕೆ ವಿರೋಧಿ ದಿನಾಚರಣೆ ಅಂಗವಾಗಿ ಸುಳ್ಯ ಪಟ್ಟಣದಲ್ಲಿ ಬೃಹತ್ ಜಾಥಾ ನಡೆಯಿತು. ಜ್ಯೋತಿ ವೃತ್ತದಿಂದ ಆರಂಭಗೊಂಡ ಜಾಥಾಕ್ಕೆ ಪೊಲೀಸ್ ವೃತ್ತ ನಿರೀಕ್ಷಕ ತಿಮ್ಮಪ್ಪ ನಾಯ್ಕ, ವಕೀಲರ ಸಂಘದ ಅಧ್ಯಕ್ಷ ಸುಕುಮಾರ್ ಕೋಡ್ತುಗುಳಿ, ಸಂಕೇಶ್ ಫೌಂಡೇಶನ್ ಅಧ್ಯಕ್ಷ ಅಬ್ದುಲ್ ರಹಿಮಾನ್ ಸಂಕೇಶ್ ಚಾಲನೆ ನೀಡಿದರು. ಈ ಸಂದರ್ಭ ಸುಳ್ಯ ಆರಕ್ಷಕ ಉಪನಿರೀಕ್ಷಕ ಸಂತೋಷ್ ಕುಮಾರ್ ಬಿ.ಪಿ., ಪ್ರೊಬೇಷನರಿ ಎಸ್‌ಐ ಕೃಷ್ಣ, ಪ್ರೆಸ್ ಕ್ಲಬ್ ಅಧ್ಯಕ್ಷ ಶರೀಫ್ ಜಟ್ಟಿಪಳ್ಳ, ವರ್ತಕರ ಸಂಘದ ಗೌರವಾಧ್ಯಕ್ಷ ಸುಧಾಕರ ರೈ ಪಿ.ಬಿ., ಎಂಬಿ ಫೌಂಡೇಷನ್‌ನ ಅಧ್ಯಕ್ಷ ಎಂ.ಬಿ. ಸದಾಶಿವ, ರೋಟರಿ ಕ್ಲಬ್ ಅಧ್ಯಕ್ಷ ಡಾ. ರಾಮ್ ಮೋಹನ್, ನಿಯೋಜಿತ ಅಧ್ಯಕ್ಷೆ ಲತಾ ಮಧುಸೂದನ್, ಜೆಸಿಐ ಪಯಸ್ವಿನಿ ಅಧ್ಯಕ್ಷೆ ಲತಾಶ್ರೀ ಸುಪ್ರೀತ್ ಮೋಂಟಡ್ಕ, ಕಾರ್ಯದರ್ಶಿ ತಾರಾ ಮಾಧವ, ಜೆಸಿಐ ಸುಳ್ಯ ಸಿಟಿ ಅಧ್ಯಕ್ಷೆ ನಾಗವೇಣಿ, ಮನಮೋಹನ ಬಳ್ಳಡ್ಕ ವಕೀಲರ ಸಂಘದ ಭಾಸ್ಕರ ರಾವ್, ಚಂದ್ರಶೇಖರ ಉದ್ದಂತ್ತಡ್ಕ, ಹರೀಶ್ ಬೂಡುಪನ್ನೆ, ದೇವಿಪ್ರಸಾದ್, ಸ್ವರ್ಣ ಜುವೆಲ್ಲರ್ಸ್ ಸಿಬ್ಬಂದಿ ಪ್ರವೀಣ್, ಸಂಜೀವ, ಪ್ರಮುಖರಾದ ಮಧುಸೂದನ್ ಕುಂಭಕ್ಕೋಡು, ಇಬ್ರಾಹಿಂ ಸೀಫುಡ್, ಶಾರೀಖ್ ಡಿ.ಎಂ., ಸುಪ್ರಿತ್ ಮೋಂಟಡ್ಕ ಪ್ರಭಾಕರನ್ ನಾಯರ್ ಸಿ.ಎಚ್., ಸತ್ಯಶಾಂತಿ ತ್ಯಾಗಮೂರ್ತಿ ಇದ್ದರು. ಹರೀಶ್ ಬಂಟ್ವಾಳ್ ಸ್ವಾಗತಿಸಿದರು. ಗಿರೀಶ್ ಕುಂಠಿನಿ ಉದ್ಘೋಷಕರಾಗಿ ಭಾಗವಹಿಸಿದ್ದರು.

ಜಾಗೃತಿ ಜಾಥಾ

ವಿದ್ಯಾರ್ಥಿಗಳಿಂದ ಡ್ರಗ್ಸ್ ವಿರುದ್ಧ ವಿವಿಧ ಘೋಷಣೆಗಳನ್ನೊಳಗೊಂಡ ಪ್ಲೇ ಕಾರ್ಡ್‌ಗಳೊಂದಿಗೆ ಬಿ.ಸಿ ರೋಡ್ ನಲ್ಲಿ ಕಾಲ್ನಡಿಗೆ ಜಾಥಾ ನಡೆಸಲಾಯಿತು. ಜಾಥವು ಜ್ಯೋತಿ ವೃತ್ತದಿಂದ ಆರಂಭಗೊಂಡು ಗಾಂಧಿನಗರ ತೆರಳಿ ಅಲ್ಲಿಂದ ಹಿಂತಿರುಗಿ ಪೊಲೀಸ್ ಠಾಣಾ ಮುಂಭಾಗದಲ್ಲಿ ಸಮಾಪನಗೊಂಡಿತು.

ಜಂಬೋ ಸರ್ಕಸ್ ರಂಗಸ್ಥಳದಲ್ಲಿ ರಾರಾಜಿಸಿದ ಕನ್ನಡ | ಡ್ರಗ್ಸ್ ವಿರುದ್ಧ ಜಾಗೃತಿ

ಕಲಾವಿದರಿಗೆ ಕನ್ನಡ ಸಾಹಿತ್ಯ ಪರಿಷತ್ ಸನ್ಮಾನ



ಪುತ್ತೂರು: ಸಾಹಸ, ಶಿಸ್ತು, ಕಠಿಣ ಪರಿಶ್ರಮ ಮತ್ತು ಕಲಾ ನೈಪುಣ್ಯತೆಯ ಅಪೂರ್ವ ಸಂಗಮವಾಗಿರುವ ಸರ್ಕಸ್ ಕಲೆಯು ಕೇವಲ ಮನರಂಜನೆಯಲ್ಲ, ಅದು ಧೀರ ಕಲಾವಿದರ ಶ್ರಮದ ಸಾಕಾರವಾಗಿದೆ. ಜೀವದ ಹಂಗು ತೊರೆದು ಜನರನ್ನು ರಂಜಿಸುವ ಸರ್ಕಸ್ ಕಲಾವಿದರನ್ನು ಗೌರವಿಸುವ ಮತ್ತು ಪ್ರಸ್ತುತ ಸಮಾಜವನ್ನು ಕಾಡುತ್ತಿರುವ ಮಾದಕ ದ್ರವ್ಯಗಳ ಭೀಕರ ಪಿಡುಗಿನ ವಿರುದ್ಧ ಜನ ಜಾಗೃತಿ ಮೂಡಿಸುವ ಮಹತ್ತರ ಉದ್ದೇಶದೊಂದಿಗೆ ಪುತ್ತೂರಿನ ಐತಿಹಾಸಿಕ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಗದ್ದೆಯಲ್ಲಿ ವಿನೂತನ ಸಮಾರಂಭ ಜರುಗಿತು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ರೋಟರಿ ಕ್ಲಬ್ ಪುತ್ತೂರು ಯುವ ಸಂಸ್ಥೆಗಳ ಜಂಟಿ ಆಶ್ರಯದಲ್ಲಿ ಸದ್ಯ ಪುತ್ತೂರಿನಲ್ಲಿ ಕ್ಯಾಂಪ್ ಮಾಡಿರುವ ಪ್ರಸಿದ್ಧ ಜಂಬೋ ಸರ್ಕಸ್' ಆವರಣದಲ್ಲಿ ಈ ವಿಶೇಷ ಕಾರ್ಯಕ್ರಮ ಆಯೋಜನೆಗೊಂಡಿತ್ತು. ಜಂಬೋ ಸರ್ಕಸ್‌ನಲ್ಲಿ ಸಾರ್ವಜನಿಕರನ್ನು ಮಂತ್ರಮುಗ್ಧರನ್ನಾಗಿಸುತ್ತಿರುವ40 ಮಂದಿ ಕಲಾವಿದರು ಮತ್ತು ಶ್ರಮ ವಹಿಸುತ್ತಿರುವ 60 ಮಂದಿ ಸಿಬ್ಬಂದಿ ವರ್ಗದವರನ್ನು ಏಕಕಾಲದಲ್ಲಿ ವೇದಿಕೆಯಲ್ಲಿ ಗೌರವಿಸಿ, ಸನ್ಮಾನಿಸಲಾಯಿತು.

ಕಲಾವಿದರಿಗೆ 'ಕನ್ನಡ'ದ ಗೌರವ

ಜಂಬೋ ಸರ್ಕಸ್‌ನ ಪ್ರಬಂಧಕ ಸುರೇಶ್, ರಿಂಗ್ ಮಾಸ್ಟರ್ ಜನಾರ್ದನ್ ಹಾಗೂ ಕನ್ನಡದಲ್ಲೇ ಅತ್ಯಂತ ಸೊಗಸಾಗಿ ವೀಕ್ಷಕ ವಿವರಣೆ ನೀಡುವ ವೆಂಕಟೇಶ್‌ಮೂರ್ತಿ ಅವರೊಂದಿಗೆ ಆಫ್ರಿಕಾ, ನೇಪಾಳ, ಮಣಿಪುರ ಸಹಿತ ದೇಶ ವಿದೇಶಗಳ ವಿವಿಧ ರಾಜ್ಯಗಳ ನುರಿತ ಕಲಾವಿದರಿಗೆ ಕನ್ನಡ ಸಾಹಿತ್ಯ ಪರಿಷತ್ ಹಾಗೂ ರೋಟರಿ ಕ್ಲಬ್ ಪುತ್ತೂರು ಯುವ ವತಿಯಿಂದ ಸಾಂಪ್ರದಾಯಿಕ ವೈಭವದ 'ಕನ್ನಡ ಪೇಟ' ಧರಿಸಿ, ಕನ್ನಡದ ಶಾಲನ್ನು ಹೊದಿಸಿ ಸನ್ಮಾನಿಸಲಾಯಿತು. ಈ ಸಂದರ್ಭ ಪ್ರಸಿದ್ಧ ಚಿನ್ನದ ಮಳಿಗೆ ಮುಳಿಯ ಜ್ಯುವೆಲ್ಲರ್ಸ್ ಪರವಾಗಿ ಅಶ್ವಿನ್ ಕೃಷ್ಣ ಮುಳಿಯ ಕಲಾವಿದರಿಗೆ ವಿಶೇಷ ನೆನಪಿನ ಉಡುಗೊರೆ ವಿತರಿಸಿದರು.

ಪುತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪುತ್ತೂರು ಉಮೇಶ್ ನಾಯಕ್ ಕಲಾವಿದರನ್ನು ಶ್ಲಾಘಿಸಿ ಅಭಿನಂದಿಸಿದರು. ಮುಖ್ಯ ಅತಿಥಿಗಳಾಗಿದ್ದ ಪುತ್ತೂರು ಡಿವೈಎಸ್ಪಿ ಪ್ರಮೋದ್ ಕುಮಾರ್, ಕರ್ನಾಟಕ ಸಂಘದ ಅಧ್ಯಕ್ಷ ಬಿ. ಪುರಂದರ ಭಟ್ ಶುಭಾಶಂಸನೆಗೈದರು. ಸನ್ಮಾನ ಸ್ವೀಕರಿಸಿದ ಜಂಬೋ ಸರ್ಕಸ್‌ನ ಪ್ರಬಂಧಕ ಸುರೇಶ್, ಅಭೂತಪೂರ್ವ ಪ್ರೋತ್ಸಾಹಕ್ಕೆ ಕೃತಜ್ಞತೆ ಸಲ್ಲಿಸಿ, ಜಂಬೋ ಸರ್ಕಸ್‌ನ ಭವ್ಯ ಪ್ರದರ್ಶನಗಳು ಜೂ.29ರಂದು ಕೊನೆಗೊಳ್ಳಲಿವೆ ಎಂದರು.

ರೋಟರಿ ಕ್ಲಬ್ ನಿಯೋಜಿತ ಅಧ್ಯಕ್ಷೆ ವಚನ ಜಯರಾಮ್ ಪ್ರಾಸ್ತಾವಿಸಿದರು. ಕಸಾಪ ಸದಸ್ಯೆ ಶಂಕರಿ ಶರ್ಮಾ ಸ್ವಾಗತಿಸಿ, ರೋಟರಿ ಕ್ಲಬ್ ಪುತ್ತೂರು ಯುವ ಸಂಸ್ಥೆಯ ಅಧ್ಯಕ್ಷ ಕುಸುಮರಾಜ್ ವಂದಿಸಿದರು. ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪುತ್ತೂರು ಉಮೇಶ್ ನಾಯಕ್ ಕಾರ್ಯಕ್ರಮ ನಿರ್ವಹಿಸಿದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ | ಹರಿಪ್ರಸಾದ್ ಮಾಹಿತಿ

ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಎಸ್‌ಐಆರ್



ಪುತ್ತೂರು: ಚುನಾವಣಾ ಆಯೋಗದಿಂದ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ಬಗ್ಗೆ ಪುತ್ತೂರು ತಾಲೂಕು ಕಚೇರಿ ಅಧಿಕಾರಿ, ಸಿಬ್ಬಂದಿ, ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಹಾಗೂ ಮಾಧ್ಯಮದವರಿಗೆ ಮಾಹಿತಿ ಕಾರ್ಯಾಗಾರ ತಾಲೂಕು ಚುನಾವಣಾ ಶಾಖೆ ವತಿಯಿಂದ ತಾ.ಪಂ. ಸಭಾಂಗಣದಲ್ಲಿ ನಡೆಯಿತು.

ಎಸ್‌ಐಆರ್ ತರಬೇತುದಾರ ಹರಿಪ್ರಸಾದ್ ಮಾತನಾಡಿ, ಎಸ್‌ಐಆರ್ ಪ್ರಕ್ರಿಯೆ ಈ ಹಿಂದೆ ರಾಜ್ಯದಲ್ಲಿ 2002ರಲ್ಲಿ ನಡೆದಿತ್ತು. ಬಳಿಕ ಪ್ರತಿ ವರ್ಷ ಮತದಾರರ ಪಟ್ಟಿ ಪರಿಷ್ಕರಣೆ ಮಾತ್ರ ನಡೆಯುತ್ತಿತ್ತು. ಆದರೆ ಇದು ಸಮಗ್ರ ಪರಿಷ್ಕರಣೆ ಆಗುತ್ತಿರಲಿಲ್ಲ, ಇದರಲ್ಲಿ ಕೂಡ ಕೆಲವು ಅನಾನುಕೂಲತೆ, ನ್ಯೂನತೆಗಳು ಉಂಟಾಗುತ್ತಿತ್ತು. ಈ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಜಾರಿಗೆ ಬಂದಿದೆ ಎಂದರು.

ಎಸ್‌ಐಆರ್‌ನಲ್ಲಿ ಒಂದು ಹಂತವಾಗಿ ಮ್ಯಾಪಿಂಗ್ ಪ್ರಕ್ರಿಯೆ ನಡೆದಿದೆ. ಈಗಾಗಲೇ ಬೂತ್ ಲೆವೆಲ್ ಅಧಿಕಾರಿಗಳು ಮ್ಯಾಪಿಂಗ್ ಪ್ರಕ್ರಿಯೆ ಮಾಡಿದ್ದಾರೆ. ಪುತ್ತೂರು ತಾಲೂಕಿನಲ್ಲಿ ಶೇ. 94ರಷ್ಟು ಮ್ಯಾಪಿಂಗ್ ಪ್ರಕ್ರಿಯೆ ಪೂರ್ಣಗೊಂಡಿದೆ. ಉಳಿದ ಶೇ.6 ಮ್ಯಾಪಿಂಗ್ ಪ್ರಕ್ರಿಯೆಗಾಗಿ ಮುಂದೂಡಿಕೆ ಮಾಡಲಾಗಿದೆ. ಜೂ.30ರಿಂದ ಜು.29ರವರೆಗೆ ಮತಗಟ್ಟೆ ಮಟ್ಟದ ಅಧಿಕಾರಿಗಳಿಂದ ಮನೆ ಮನೆ ಭೇಟಿ ನಡೆಯಲಿದೆ. ಆ.5ಕ್ಕೆ ಕರಡು ಮತದಾರರ ಪಟ್ಟಿ ಪ್ರಕಟವಾಗಲಿದೆ. ಆ.5ರಿಂದ ಸೆ.4ರವರೆಗೆ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಅವಕಾಶವಿರುತ್ತದೆ. 2002ರ ಮತದಾರರ ಪಟ್ಟಿಗೆ ತಾಳೆ ಹೊಂದದ ಮತದಾರರಿಗೆ ನೊಟೀಸ್ ನೀಡಲಾಗುತ್ತದೆ. ನೋಟಿಸ್‌ಗೆ ಉತ್ತರ ನೀಡಿ ಸಂಬಂಧಿತ ದಾಖಲೆಯನ್ನು ನೀಡಬಹುದು. ಇದಕ್ಕೆ ಆ.3ರವರೆಗೆ ಅವಕಾಶವಿದೆ. ಬಳಿಕ ಆ.7ರಂದು ಅಂತಿಮ ಮತದಾರರ ಪಟ್ಟಿ ಪ್ರಕಟವಾಗಲಿದೆ. ಇದು ಎಸ್‌ಐಆರ್‌ನ ಒಟ್ಟು ಹಂತವಾಗಿದೆ ಎಂದರು.

ದಾಖಲೆಗಳನ್ನು ನೀಡುವ ಸಂದರ್ಭದಲ್ಲಿ ಮೂರು ವಿಂಗಡಣೆ ಮಾಡಲಾಗಿದೆ. 1987ರ ಮೊದಲು ಜನಿಸಿದವರು ಅವರಿಗೆ ಸಂಬಂಧಿಸಿದ ದಾಖಲೆ ನೀಡಬೇಕು. 1987ರಿಂದ 2004ರ ಒಳಗಡೆ ಜನಿಸಿದವರು ಅವರಿಗೆ ಸಂಬಂಧಿಸಿದ ಮತ್ತು ಅವರ ತಂದೆಗೆ ಸಂಬಂಧಿಸಿದ ದಾಖಲೆ ಕೊಡಬೇಕು. 2004ರ ನಂತರ ಜನಿಸಿದ ವ್ಯಕ್ತಿಗಳು ಅವರಿಗೆ ಸಂಬಂಧಿಸಿದ ಹಾಗೂ ಅವರ ತಂದೆ, ತಾಯಿಗೆ ಸಂಬಂಧಿಸಿದ ದಾಖಲೆ ಕೊಡಬೇಕು ಎಂದರು.

ತರಬೇತುದಾರ ಪ್ರಶಾಂತ್ ನಾಯಕ್ ಮಾತನಾಡಿ, ಬಿಎಲ್‌ಒಗಳ ಮನೆ ಭೇಟಿ ಹಾಗೂ 2002ರ ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದಾಗ ಮತದಾರರು ನೀಡಬೇಕಾದ 11 ದಾಖಲೆ ಪತ್ರಗಳ ಮಾಹಿತಿ ನೀಡಿದರು. ಭಾರತದ ನೈಜ ಮತದಾರ ಪಟ್ಟಿಯಿಂದ ಹೊರಗುಳಿಯಲು ಸಾಧ್ಯವಿಲ್ಲ ಎಂದರು.

ರಾಮ ಕೆ. ವಿಪಿಟಿ ಕಾರ್ಯಾಗಾರ ನಡೆಸಿಕೊಟ್ಟರು. ತಾಲೂಕು ಕಚೇರಿ ಪ್ರಮುಖ ಅಧಿಕಾರಿಗಳು, ರಾಜಕೀಯ ಪಕ್ಷದ ಪ್ರತಿನಿಧಿಗಳು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಯುಪಿಎಸ್ಸಿ ಉಚಿತ ತರಬೇತಿ, ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮ

ಮಂಗಳೂರು: ನಿರ್ಮಲ ಭಾರತ ಚಾರಿಟಬಲ್ ಟ್ರಸ್ಟ್, ಬೆಂಗಳೂರು ಮೂಲದ ಆರೋಹಿ ಫೌಂಡೇಶನ್ ಸಹಯೋಗದೊಂದಿಗೆ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ವಿದ್ಯಾರ್ಥಿಗಳಿಗಾಗಿ ಉಚಿತ ಯುಪಿಎಸ್ಸಿ ತರಬೇತಿ, ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮ ಹಾಗೂ ವಿದ್ಯಾರ್ಥಿವೇತನ ಅವಕಾಶಗಳ ಕುರಿತು ಮಾಹಿತಿ ನೀಡಲಾಗುತ್ತದೆ. ಆರೋಹಿ ಫೌಂಡೇಶನ್ ಸಂಸ್ಥೆಯ ವತಿಯಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ವಿಶೇಷ ತರಬೇತಿ ಹಮ್ಮಿಕೊಳ್ಳಲಾಗಿದೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಶೇ.100 ವಿದ್ಯಾರ್ಥಿ ವೇತನ, ವಸತಿಸೌಲಭ್ಯ, ವ್ಯಕ್ತಿತ್ವ ವಿಕಸನ, ನಾಯಕತ್ವ ತರಬೇತಿ ಹಾಗೂ ಯುಪಿಎಸ್ಸಿ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಸಮಗ್ರ ಮಾರ್ಗದರ್ಶನವನ್ನು ಒದಗಿಸಲಾಗುವುದು.

ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗಾಗಿ ನಾಲ್ಕು ವರ್ಷದ ಸಮಗ್ರ ಪದವಿ, ಸ್ಪರ್ಧಾತ್ಮಕ ಪರೀಕ್ಷಾತರಬೇತಿ, ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳು ಮತ್ತು ಪದವೀಧರರಿಗಾಗಿ ಒಂದು ವರ್ಷದ ವಸತಿಸಹಿತ ಖಿಕಖಿಇ ತರಬೇತಿ, ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗಾಗಿ ವಾರಾಂತ್ಯ ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮ ನಡೆಯಲಿದೆ.

ಜು. 5ರಂದು ಪ್ರವೇಶ ಪರೀಕ್ಷೆ

ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳು ಹಾಗೂ ಪದವೀಧರರಿಗಾಗಿ 2026ರ ಜು.5ರಂದು ಪ್ರವೇಶ ಪರೀಕ್ಷೆ ನಡೆಯಲಿದೆ. ನಂತರ ಗುಂಪು ಚರ್ಚೆ ಹಾಗೂ ಯುಪಿಎಸ್ಸಿ ಸಂದರ್ಶನ ಮಾದರಿಯ ಸಂದರ್ಶನ ನಡೆಸಿ ಅರ್ಹರನ್ನು ಆಯ್ಕೆ ಮಾಡಲಾಗುವುದು.

ಉಚಿತ ವಸತಿ ಸಹಿತ ತರಬೇತಿ

ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬೆಂಗಳೂರಿನ ಆರೋಹಿ ಫೌಂಡೇಶನ್ ಸಂಸ್ಥೆಯ ವತಿಯಿಂದ ಉಚಿತ ವಸತಿ ಸಹಿತ ತರಬೇತಿ ನೀಡಲಾಗುವುದು. ಆಸಕ್ತ ವಿದ್ಯಾರ್ಥಿಗಳು ಹಾಗೂ ಪೋಷಕರು ಹೆಚ್ಚಿನ ಮಾಹಿತಿಗಾಗಿ ನಿರ್ಮಲ ಭಾರತ ಚಾರಿಟೇಬಲ್ ಟ್ರಸ್ಟ್ ಅನ್ನುಸಂಪರ್ಕಿಸಬಹುದು. ಪ್ರವೇಶ ಪರೀಕ್ಷೆಯಲ್ಲಿ ದಕ್ಷಿಣಕನ್ನಡ ಉಡುಪಿ ಸಹಿತ ಕನಿಷ್ಠ 30 ಜನ ಪರೀಕ್ಷಾರ್ಥಿಗಳು ಭಾಗವಹಿಸುವುದಾದಲ್ಲಿ ಪರೀಕ್ಷಾ ಕೇಂದ್ರವನ್ನು ದ.ಕ. ಜಿಲ್ಲೆಯಲ್ಲಿಯೇ ಬಹುತೇಕ ಮಂಗಳೂರಿನಲ್ಲಿ ನಡೆಸುವ ವ್ಯವಸ್ಥೆ ಮಾಡಬಹುದಾಗಿದೆ. ಆದ್ದರಿಂದ ಜೂ.30ರ ಒಳಗಾಗಿ ಈ ಪರೀಕ್ಷೆಯಲ್ಲಿ ಭಾಗವಹಿಸುವ ಪರೀಕ್ಷಾರ್ಥಿಗಳ ನಿರ್ದಿಷ್ಟ ಸಂಖ್ಯೆಯನ್ನು ತಿಳಿಸಬೇಕೆಂದು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊಬೈಲ್: 9741932183 ಇ-ಮೇಲ್: nirmalabharath2003@gmail.comನ್ನು ಸಂಪರ್ಕಿಸಬಹುದು ಟ್ರಸ್ಟ್ ಅಧ್ಯಕ್ಷರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಯಪ್ರಜ್ಞೆ ಎನ್ನೆಸ್ಸೆಸ್ ಸ್ವಯಂಸೇವಕರ ಜೀವನ ಮೌಲ್ಯವಾಗಲಿ: ಕೀರ್ತನ್ ಕುಮಾರ್



ಮೂಡುಬಿದಿರೆ: ಸಮಯಪ್ರಜ್ಞೆ, ನಿಸ್ವಾರ್ಥ ಸೇವೆ ಹಾಗೂ ಪರೋಪಕಾರದಂತಹ ಮೌಲ್ಯಗಳನ್ನು ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಸ್ವಯಂಸೇವಕರು ತಮ್ಮ ಜೀವನದ ಆದರ್ಶಗಳನ್ನಾಗಿ ರೂಪಿಸಿಕೊಳ್ಳಬೇಕು ಎಂದು ಪಾರಾದೀಪ್ ಫಾಸ್ಫೇಟ್ಸ್ ಲಿಮಿಟೆಡ್‌ನ ಜಂಟಿ ಪ್ರಧಾನ ವ್ಯವಸ್ಥಾಪಕ (ಮಾರುಕಟ್ಟೆ ಅಭಿವೃದ್ಧಿ ವಿಭಾಗ) ಕೆ. ಬಿ. ಕೀರ್ತನ್ ಕುಮಾರ್ ಹೇಳಿದರು.

ಅವರು ಗುರುವಾರ ಆಳ್ವಾಸ್ ಪದವಿಪೂರ್ವ ಕಾಲೇಜಿನ ಶಿವರಾಮ ಕಾರಂತ ಸಭಾಂಗಣದಲ್ಲಿ ನಡೆದ 2026-27ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ಈ ವರ್ಷದ ಚಟುವಟಿಕೆಗಳಿಗೆ ಚಾಲನೆ ನೀಡಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಆಳ್ವಾಸ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರೊ. ಮೊಹಮ್ಮದ್ ಸದಾಕತ್ ಮಾತನಾಡಿ, ಶಿಕ್ಷಣವೆಂದರೆ ಕೇವಲ ಪಠ್ಯಪುಸ್ತಕದ ಜ್ಞಾನವಲ್ಲ; ಅದು ಮಾನವೀಯತೆ, ಸೇವಾ ಮನೋಭಾವ ಹಾಗೂ ಉತ್ತಮ ವ್ಯಕ್ತಿತ್ವವನ್ನು ರೂಪಿಸುವ ಪ್ರಕ್ರಿಯೆ. ಮಾದಕ ವ್ಯಸನವು ಇಂದಿನ ಯುವಜನಾಂಗದ ಭವಿಷ್ಯಕ್ಕೆ ದೊಡ್ಡ ಅಪಾಯವಾಗಿ ಪರಿಣಮಿಸಿದೆ. ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರವಿದ್ದು, ತಮ್ಮ ಅಮೂಲ್ಯ ಸಮಯವನ್ನು ವಿದ್ಯಾಭ್ಯಾಸ, ವ್ಯಕ್ತಿತ್ವ ವಿಕಸನ ಹಾಗೂ ಸಮಾಜಮುಖಿ ಚಟುವಟಿಕೆಗಳಿಗೆ ಮೀಸಲಿಡಬೇಕು ಎಂದರು.

ಸಂಸ್ಕೃತ ವಿಭಾಗದ ಮುಖ್ಯಸ್ಥ ಅಂಬರೀಶ್ ಚಿಪ್ಳೂಣಕರ್ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜನಾಧಿಕಾರಿ ಮೇಘನಾ ಇದ್ದರು. ಸಂಖ್ಯಾಶಾಸ್ತ್ರ ವಿಭಾಗದ ಉಪನ್ಯಾಸಕಿ ಶಾಲೆಟ್ ನಿರೂಪಿಸಿದರು. ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಮೇಘನಾ ಸ್ವಾಗತಿಸಿ, ಹಿಂದಿ ವಿಭಾಗದ ಉಪನ್ಯಾಸಕಿ ಡಾ. ರೂಪ ಭಟ್ ವಂದಿಸಿದರು.


ಜೂ.29: ಶ್ರೀ ಸರಸ್ವತಿ ಕ್ರೆಡಿಟ್ 21ನೇ ಶಾಖೆ ನೆಹರೂನಗರದಲ್ಲಿ ಶುಭಾರಂಭ


ಪುತ್ತೂರು: ಪುತ್ತೂರಿನಲ್ಲಿ ಕೇಂದ್ರ ಕಚೇರಿಯನ್ನು ಹೊಂದಿ ರಾಜ್ಯಾದ್ಯಂತ 20 ಶಾಖೆಗಳೊಂದಿಗೆ ಯಶಸ್ವಿಯಾಗಿ ಕಾರ್ಯಾಚರಿಸುತ್ತಿರುವ ಶ್ರೀಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ 21ನೇ ಶಾಖೆಯು ಜೂ.29ರಂದು ನೆಹರೂನಗರ ಕಲ್ಲೇಗದ ಅಶ್ವಿನಿ ಕಾಂಪ್ಲೆಕ್ಸ್ ಪ್ರಥಮ ಮಹಡಿಯಲ್ಲಿ ಶುಭಾರಂಭಗೊಳ್ಳಲಿದೆ.

ನೂತನ ಶಾಖೆಯನ್ನು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ ಭಟ್ ಕಲ್ಲಡ್ಕ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ, ವಿಧಾನ ಪರಿಷತ್‌ನ ಶಾಸಕ ಕಿಶೋರ್ ಕುಮಾರ್ ಬೊಟ್ಯಾಡಿ, ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್, ಮಾಜಿ ಶಾಸಕ ಸಂಜೀವ ಮಠಂದೂರು, ಶ್ರೀ ಕಲ್ಲೇಗ ಕಲ್ಕುಡ ದೈವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಅಜಿತ್ ಕುಮಾರ್ ಜೈನ್, ಕಲ್ಲೇಗ ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್‌ನ ಅಧ್ಯಕ್ಷ ಸಂಜೀವ ನಾಯಕ್ ಕಲ್ಲೇಗ, ಪುತ್ತೂರು ನಗರಸಭೆಯ ಮಾಜಿ ಅಧ್ಯಕ್ಷ ಜೀವಂಧರ್ ಜೈನ್, ಅಶ್ವಿನಿ ಕಾಂಪ್ಲೆಕ್ಸ್ ಮಾಲಕ ಕೆ. ರಾಜಾರಾಮ್ ಪ್ರಭು ಪಾಲ್ಗೊಳ್ಳುವರು. ಸಹಕಾರಿಯ ಅಧ್ಯಕ್ಷ ಸಹಕಾರ ರತ್ನ ಎಸ್.ಆರ್. ಸತೀಶ್ಚಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ.

2001ರಲ್ಲಿ ಕಾರ್ಯಾರಂಭಗೊಂಡ ಸಹಕಾರಿಯು ಪ್ರಸಕ್ತ ರಜತ ಮಹೋತ್ಸವ ವರ್ಷಾಚರಣೆ ಮಾಡುತ್ತಿದೆ. ಸಹಕಾರಿಯು ಆಕರ್ಷಕ ಬಡ್ಡಿದರದಲ್ಲಿ ಠೇವಣಿ ಸ್ವೀಕಾರ, ವಿವಿಧ ಉದ್ದೇಶದ ಸಾಲಗಳು, ಜೀವವಿಮೆ ಹಾಗೂ ಸಾಮಾನ್ಯ ವಿಮೆಗಳು, ಪಾನ್ ಕಾರ್ಡ್, ಸೇಫ್ ಲಾಕರ್ ಸೌಲಭ್ಯವನ್ನು ಸದಸ್ಯರಿಗೆ ನೀಡುತ್ತಿದೆ. ಸಹಕಾರಿಯು ಆರಂಭದಿಂದಲೂ ಪ್ರಗತಿಯ ಪಥದಲ್ಲಿ ಮುನ್ನಡೆಯುತ್ತಿದ್ದು ಜೂ.15ರಂತೆ 52,913 ಸದಸ್ಯರನ್ನು ಹೊಂದಿದೆ. ರೂ.422 ಕೋಟಿ ಠೇವಣಾತಿಯನ್ನು ಸಂಗ್ರಹಿಸಿ ರೂ.400 ಕೋಟಿ ಸಾಲ ವಿತರಿಸಿ ರೂ. 822 ಕೋಟಿ ವ್ಯವಹಾರವನ್ನು ದಾಖಲಿಸಿದೆ. 2026 ಮಾರ್ಚ್ ವರ್ಷಾಂತ್ಯಕ್ಕೆ ರೂ.7.27 ಕೋಟಿ ನಿವ್ವಳ ಲಾಭ ಗಳಿಸಿದೆ. 2025-26ನೇ ಸಾಲಿನಲ್ಲಿ ಶೇ.13 ಡಿವಿಡೆಂಟ್ ವಿತರಿಸಲಾಗಿದೆ. ಈವರೆಗೆ ಸುಮಾರು 2 ಕೋಟಿಗೂ ಮಿಕ್ಕಿ ವೆಚ್ಚದ ಸೇವಾ ಕಾರ್ಯಗಳನ್ನು ನಡೆಸಿರುತ್ತದೆ. ಸಹಕಾರಿ ಇನ್ನೆರಡು ಶಾಖೆ ಉಳ್ಳಾಲ, ಬಂಟ್ವಾಳ ತಾಲೂಕಿನ ಸಿದ್ಧಕಟ್ಟೆಯಲ್ಲಿ ಶೀಘ್ರದಲ್ಲಿ ಆರಂಭಗೊಳ್ಳಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಆಟೋ ರಿಕ್ಷಾ ನಿಲುಗಡೆಗೆ ಅವಕಾಶ ಕಲ್ಪಿಸುವಂತೆ ಆಗ್ರಹಿಸಿ ಬಿ.ಸಿ.ರೋಡಿನಲ್ಲಿ ಚಾಲಕರ ಪ್ರತಿಭಟನೆ





ಬಂಟ್ವಾಳ: ರಾ.ಹೆ.ಯ ಬಿ.ಸಿ.ರೋಡಿನ ಖಾಸಗಿ ಬಸ್ ನಿಲ್ದಾಣ ಬಳಿ ಇತ್ತೀಚೆಗೆ ಪುರಸಭೆ ತೆರವುಗೊಳಿಸಿದ್ದ ಬಸ್ ಶಲ್ಟರ್ ಸ್ಥಳದಲ್ಲಿ ಸಂಚಾರಿ ಪೊಲೀಸರು ಆಟೋ ರಿಕ್ಷಾ ನಿಲುಗಡೆಗೆ ಅವಕಾಶ ಕೊಡದ ಹಿನ್ನೆಲೆಯಲ್ಲಿ ರಿಕ್ಷಾ ಚಾಲಕರು ಗುರುವಾರ ಹಠಾತ್ ಪ್ರತಿಭಟನೆ ನಡೆಸಿದ್ದು,ಈ ಸಂದರ್ಭ ಚಾಲಕರು ಹಾಗೂ ಸಂಚಾರಿ ಪೊಲೀಸರ ನಡುವೆ ವಾಗ್ವಾದವು ನಡೆಯಿತು.

ಬಸ್ ನಿಲ್ದಾಣದ ಪಕ್ಕದ ವಾಣಿಜ್ಯ ಸಂಕೀರ್ಣವೊಂದರ ಮುಂಭಾಗವಿದ್ದ ಬಸ್ ಶೆಲ್ಟರನ್ನು ಪುರಸಭೆ ಇತ್ತೀಚೆಗೆ ತೆರವುಗೊಳಿಸಿದ್ದು,ಈ ಮೊದಲು ರಸ್ತೆಯಲ್ಲಿ ನಿಲುಗಡೆಯಾಗುತ್ತಿದ್ದ ಆಟೋರಿಕ್ಷಾ ಇದೀಗ ಶಲ್ಟರ್ ತೆರವಾದ ಸ್ಥಳದಲ್ಲಿ ನಿಲುಗಡೆಯಾಗುತ್ತಿದೆ.

ಬಂಟ್ವಾಳ ಮತ್ತು ಪಾಣೆಮಂಗಳೂರು ಕಡೆಗೆ ಜನರನ್ನು ಸಾಗಿಸುವ ತಲಾ ಎರಡು ಸರ್ವಿಸ್ ರಿಕ್ಷಾಗಳು ಈ ಪ್ರದೇಶದಲ್ಲಿ ನಿಲುಗಡೆಯಾಗುತ್ತಿದ್ದು, ತೆರವಾದ ಬಸ್ ಶೆಲ್ಟರ್ ಸ್ಥಳದಲ್ಲಿ ಈ ಮೊದಲಿನಂತೆ ರಿಕ್ಷಾಗಳ ನಿಲುಗಡೆಗೆ ಆವಕಾಶ ಕಲ್ಪಿಸಬೇಕೆಂದು ಆಗ್ರಹಿಸಿ ರಿಕ್ಷಾ ಚಾಲಕರು ಬಿ.ಸಿ.ರೋಡಿನ ಫ್ಲೈ ಓವರ್ ತಳಭಾಗದಲ್ಲಿ ಪ್ರತಿಭಟನೆ ನಡೆಸಿದರು.

ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಪಾಣೆಮಂಗಳೂರು ಹಾಗೂ ಬಂಟ್ವಾಳಕ್ಕೆ ಓರ್ವ ಪ್ರಯಾಣಿಕನಿಗೆ 15 ರೂ. ಸರ್ವಿಸ್ ಕೊಡುತ್ತಿದ್ದೇವೆ. ಈಗ ಬಸ್ ಶೆಲ್ಟರ್ ತೆರವುಗೊಳಿಸಿದ ಸ್ಥಳದಲ್ಲಿ ಇದೀಗ ಸಂಚಾರಿ ಪೊಲೀಸರು ರಿಕ್ಷಾ ನಿಲುಗಡೆಗೆ ಅವಕಾಶ ನೀಡದಿರುವುದು ಸರಿಯಲ್ಲ ಎಂದು ಪೊಲೀಸರ ವರ್ತನೆಗೆ ರಿಕ್ಷಾ ಚಾಲಕ-ಮಾಲಕ ಸಂಘದ ಅಧ್ಯಕ್ಷ ವಿಶ್ವನಾಥ ಚಂಡ್ತಿಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ನಗರ ಠಾಣೆಯ ಇನ್ಸ್‌ಪೆಕ್ಟರ್‌ಗೂ ಮನವಿ ಸಲ್ಲಿಸಿದ್ದು,ಇದಕ್ಕೆ ಸ್ಪಂದಿಸಿದ ಇನ್ಸ್‌ಪೆಕ್ಟರ್ ಆಟೋರಿಕ್ಷಾ ನಿಲುಗಡೆಗೆ ಸಂಚಾರಿ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಅವರಿಗೆ ಸೂಚನೆ ನೀಡಿದ್ದರು ಎಂದು ವಿಶ್ವನಾಥ್ ಚಂಡ್ತಿಮಾರ್ ಮಾಧ್ಯಮಗಳಿಗೆ ತಿಳಿಸಿದ್ದಾರೆ

ಕಾರು, ರಸ್ತೆಯಲ್ಲೇ ನಿಂತು ಪ್ರಯಾಣಿಕರನ್ನು ಹತ್ತಿಸುವ ಬಸ್‌ಗಳ ವಿರುದ್ಧ ಕ್ರಮ ಕೈಗೊಳ್ಳದ ಸಂಚಾರಿ ಪೊಲೀಸರು ಬಡಪಾಯಿ ರಿಕ್ಷಾ ಚಾಲಕರ ಮೇಲೆಯೇ ಕೇಸ್‌ಗಳನ್ನು ಹಾಕಿದ್ದಾರೆ. ಇದನ್ನು ಪ್ರಶ್ನಿಸಿದರೆ ಸಂಚಾರಿ ಪೊಲೀಸರು ಉಡಾಫೆಯ ಉತ್ತರ ನೀಡುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪ್ರತಿಭಟನೆ ವೇಳೆ ಸ್ಥಳಕ್ಕಾಗಮಿಸಿದ ಸಂಚಾರಿ ಪೊಲೀಸರು, ರಿಕ್ಷಾ ಚಾಲಕರ ನಡುವೆ ವಾಗ್ವಾದವು ನಡೆಯಿತು. ಇಲ್ಲಿ ರಿಕ್ಷಾ ನಿಲುಗಡೆ ಅವಕಾಶ ಇಲ್ಲ ಅಂದರೆ ಬಸ್ ನಿಲ್ದಾಣದ ಇನ್ನೊಂದೆಡೆ ಖಾಸಗಿ, ಕೆಎಸ್ ಆರ್‌ಟಿಸಿ ಬಸ್‌ಗಳು ಇತರೆ ವಾಹನಗಳು ಹೆದ್ದಾರಿಯಲ್ಲೇ ನಿಂತು ಸುಗಮ ವಾಹನ ಸಂಚಾರಕ್ಕೆ ತೊಂದರೆ ಮಾಡುತ್ತಿದ್ದರೂ ಯಾವುದೇ ಕ್ರಮಕೈಗೊಳ್ಳದ ಬಗ್ಗೆ ರಿಕ್ಷಾ ಚಾಲಕರು ಸಂಚಾರಿ ಪೊಲೀಸರನ್ನು ತರಾಟೆಗೂ ತೆಗೆದುಕೊಂಡರು. ಅದೇರೀತಿ ಫರಂಗಿಪೇಟೆ, ಕೈಕಂಬ, ಮೆಲ್ಕಾರ್ ಹೀಗೆ ವಿವಿಧ ಆಯಕಟ್ಟಿನ ಜಾಗದಲ್ಲಿ ಹೆದ್ದಾರಿಯಲ್ಲೇ ಬಸ್‌ಗಳು ನಿಲುಗಡೆ ಆಗುತ್ತದೆ. ಅದರ ವಿರುದ್ಧ ಏನು ಕ್ರಮ ಕೈಗೊಂಡಿದ್ದಿರಿ ಜಾಗದರೆ ನಾವು ರಿಕ್ಷಾ ರಿಕ್ಷಾ ನಿಲ್ಲಿಸುವುದಾದರು ಎಲ್ಲಿ? ಎಂದು ಪ್ರಶ್ನಿಸಿದರು. ಹಲವು ಸಮಯದಿಂದ ಆ ಸ್ಥಳದಲ್ಲಿ ರಿಕ್ಷಾ ನಿಲುಗಡೆ ಗೊಳಿಸಲಾಗುತ್ತಿದ್ದು, ಇಲ್ಲಿ ರಿಕ್ಷ ನಿಲುಗಡೆಗೆ ಅವಕಾಶ ಕಲ್ಪಿಸಬೇಕೆಂದು ಚಾಲಕರು ಆಗ್ರಹಿಸಿದರು.

ಸಂಚಾರ ನಿಯಮ ಉಲ್ಲಂಘನೆ, ದಂಡ

ಇದೇ ವೇಳೆ ಸಂಚಾರಿ ಠಾಣೆಯ ಎಸ್. ಐ.ಆದರ್ಶ್ ನೇತೃತ್ವದಲ್ಲಿ ಸಂಚಾರಿ ನಿಯಮ ಉಲ್ಲಂಘಿಸಿದ ವಾಹನ ಸವಾರರಿಗೆ ದಂಡ ವಿಧಿಸಿದ್ದಲ್ಲದೆ, ಟ್ರಾಫಿಕ್ ಕಿರಿಕಿರಿಯನ್ನು ಉಂಟು ಮಾಡುತ್ತಿದ್ದ ಬಸ್ ಹಾಗೂ ರಿಕ್ಷಾ ಚಾಲಕರಿಗೂ ಕ್ಲಾಸ್ ತೆಗೆದುಕೊಂಡರು. ಬಿ.ಸಿ.ರೋಡಿನ ಬಸ್ ನಿಲ್ದಾಣದ ಬಳಿ ಗ್ರಾಮೀಣ ಭಾಗಕ್ಕೆ ತೆರಳುವ ಖಾಸಗಿ ಬಸ್ ಹಾಗೂ ಗ್ರಾಮೀಣ ಪರ್ಮಿಟ್ ಹೊಂದಿರುವ ರಿಕ್ಷಾ ಚಾಲಕರು ರಿಕ್ಷಾಗಳು ಸಂಚಾರಕ್ಕೆ ಅಡಚಣೆ ಉಂಟು ಮಾಡುತ್ತಿರುವ ಆರೋಪದ ಹಿನ್ನೆಲೆಯಲ್ಲಿ ಖುದ್ದು ಟ್ರಾಫಿಕ್ ಎಸ್‌ಐ ಪ್ರತಿ ವಾಹನಗಳ ದಾಖಲೆಗಳನ್ನು ಪರಿಶೀಲಿಸಿ ನಿಯಮ ಪಾಲನೆಯ ಬಿಸಿ ಮುಟ್ಟಿಸಿದರು. ನಿಯಮ ಉಲ್ಲಂಘಿಸಿದ ಆರೋಪದಲ್ಲಿ ವಿವಿಧ ವಾಹನಗಳಿಗೆ ನಾನಾ ಕಾರಣಗಳಿಗಾಗಿ ಒಟ್ಟು 25 ಪ್ರಕರಣಗಳನ್ನುದಾಖಲು ಮಾಡಿದ್ದಾರೆ. ಈ ಪೈಕಿ 13 ಪ್ರಕರಣಗಳು ಕರ್ಕಶ ಹಾರ್ನ್‌ಗಳನ್ನು ಅಳವಡಿಸಿರುವುದು ಉಳಿದಂತೆ ನಂಬರ್ ಪ್ಲೇಟ್ ಇಲ್ಲದ ವಾಹನಗಳು ಹಾಗೂ ಕರ್ಕಶ ಶಬ್ದ ಮಾಡುವ ವಾಹನಗಳ ಸೈಲೆನ್ಸ್ ರ್ ಗಳನ್ನು ಹೊಂದಿರುವ ವಾಹನಗಳ ಮೇಲೆ ಪ್ರಕರಣ ದಾಖಲು ಮಾಡಿದ್ದಾರೆ. ಇದೇ ಮಾದರಿಯಲ್ಲಿ ಬಿ.ಸಿ.ರೋಡಿನ ಕೈಕಂಬ ಭಾಗದಲ್ಲು ಕಾರ್ಯಾಚರಣೆ ಮಾಡುವ ಧೈರ್ಯ ತೋರಬೇಕು ಎಂಬ ಒತ್ತಾಯ ಸಾರ್ವಜನಿಕ ವಲಯದಿಂದ ಕೇಳಿ ಬಂದಿದೆ.

ವಿಟ್ಲ ಪಟ್ಟಣ ಪಂಚಾಯತ್ ಸಾಮಾನ್ಯ ಸಭೆ | ವಿವಿಧ ವಿಚಾರದ ಕುರಿತು ಮಹತ್ವದ ಚರ್ಚೆ

ಇನ್ನೂ ಸಿದ್ಧವಾಗದ ಮಹಾ ಯೋಜನೆ: ಸದಸ್ಯರ ಆಕ್ರೋಶ

ವಿಟ್ಲ: ನಗರ ಪ್ರದೇಶದಲ್ಲಿ ಮಹಾ ಯೋಜನೆ ಆಗುವ ತನಕ ಭೂಪರಿವರ್ತನೆ ಆಗುವುದಿಲ್ಲ. ಮಹಾ ಯೋಜನೆ ಸಿದ್ಧವಾಗಲು 8 ತಿಂಗಳು ಬೇಕಾದರೆ ಅಷ್ಟು ಸಮಯ ಜನರು ಯಾವುದನ್ನೂ ಮಾಡುವಂತೆ ಇಲ್ಲವಾ? ಇದರಿಂದ ಜನರಿಗೆ ತೊಂದರೆಯಾಗಲಿದೆ. ಮಹಾ ಯೋಜನೆಯ ಬಗ್ಗೆ ಈಗಲೇ ಎಚ್ಚರ ವಹಿಸಬೇಕು. ಇಲ್ಲದೇ ಹೋದರೆ, ಮಾರಕವಾಗಿ ಪರಿಣಮಿಸಬಹುದು. ವಿಟ್ಲದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ ಸ್ಥಾಪನೆಯಾಗದೇ ಎಲ್ಲಾ ಸಮಸ್ಯೆಗಳು ಎದುರಾಗುತ್ತದೆ ಎಂದು ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣ ಪಂಚಾಯತ್ ಸಭಾಂಗಣದಲ್ಲಿ ಗುರುವಾರ ನಡೆದ ಸಾಮಾನ್ಯ ಸಭೆಯಲ್ಲಿ ಸದಸ್ಯರು ವಿವಿಧ ವಿಚಾರದ ಬಗ್ಗೆ ಚರ್ಚೆ ನಡೆಸಿದರು.

ಪಂಪ್‌ಗಳ ಅಳವಡಿಕೆಗೆ ಆಗ್ರಹ

ಮಳೆಯ ಅಭಾವದಿಂದ ಕುಡಿಯುವ ನೀರಿನ ಸಮಸ್ಯೆ ಪಟ್ಟಣ ಭಾಗದಲ್ಲಿ ಹೆಚ್ಚಾಗಿದೆ. ಬೆರಳೆಣಿಕೆಯ ಕೊಳವೆ ಬಾವಿಯ ನೀರಿನಿಂದ ಪೇಟೆಯನ್ನು ನಿಭಾಯಿಸುವುದು ಕಷ್ಟಕರ. ಕೆಲವು ಕೊಳವೆ ಬಾವಿಯಲ್ಲಿ ಪಂಪ್ ಬದಲಾವಣೆಯ ಬಳಿಕ ನೀರು ಬರುತ್ತಿಲ್ಲ, ವಿಡಿಯೋ ತೋರಿಸಿ ಕೊಳವೆಬಾವಿಯಲ್ಲಿ ನೀರಿಲ್ಲ



ಎಂದು ತೋರಿಸಲಾಗುತ್ತಿದೆ. ಇದಕ್ಕೆ ಸರಿಯಾಗಿ ಸೂಕ್ತ ರೀತಿಯ ಪಂಪ್‌ಗಳನ್ನು ಕೊಳವೆ ಬಾವಿಗೆ ಅಳವಡಿಸುತ್ತಿಲ್ಲ, ಉತ್ತಮ ಪಂಪ್ ಸೂಕ್ತ ರೀತಿಯಲ್ಲಿ ಹಾಕಿ ನೋಡುವ ಕಾರ್ಯವಾಗಬೇಕು. ಸರಿಯಾದ ಐದು ಪಂಪ್ ಆದರೂ ಹೆಚ್ಚುವರಿಯಾಗಿ ಪಂಚಾಯತ್‌ನ ಇಡುವ ಕಾರ್ಯವಾಗಬೇಕು ಎಂದು ಸದಸ್ಯರು ಆಗ್ರಹಿಸಿದರು.

ವಿಟ್ಲ ಪ್ರಯೋಗ ಶಾಲೆ

ಸರ್ಕಾರಿ ಕಟ್ಟಡಗಳಿಗೆ ಸ್ವತ್ತು ತೆರಿಗೆಯ ಶೇ.25 ಸೇವಾ ಶುಲ್ಕ ಸರಿಯಲ್ಲ, ಎಲ್ಲದಕ್ಕೂ ವಿಟ್ಲ ಪ್ರಯೋಗ ಶಾಲೆಯಾಗಿದ್ದು ಇದರ ಬಗ್ಗೆ ಗಂಭೀರವಾಗಿ ಪರಿಗಣಿಸುವುದು ಬೇಡ. ಎಲ್ಲಾ ಕಡೆ ತೆರಿಗೆ ವಿಧಿಸಿದರೆ ಮಾತ್ರ ವಿಟ್ಲದಲ್ಲಿ ಅನುಷ್ಠಾನ ಮಾಡುವುದು ಉತ್ತಮ. ಶಾಲೆಗಳಲ್ಲಿ ಸಾಂಕ್ರಾಮಿಕ ರೋಗಗಳ ಬಗ್ಗೆ ಮಗ್ಗಳಿಗೆ ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಿ ಜಾಗೃತಿ ಮೂಡಿಸಬೇಕು. ಅಗಲೀಕರಣ ಮಾಡುವ ನಿಟ್ಟಿನಲ್ಲಿ ನಾಲ್ಕು ಅಂಗಡಿಗಳನ್ನು ಭೂಸ್ವಾಧೀನ ಮಾಡಿದ್ದು, ಈಗ ಒಂದು ಭಾಗದಲ್ಲಿ ಸಿಸಿ ಕ್ಯಾಮರಾ ಹಾಕಿ ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ. ಇದನ್ನು ತೆಗೆಸುವ ನಿಟ್ಟಿನಲ್ಲಿ ಸರಿಯಾದ ನಿರ್ಧಾರವಾಗಬೇಕು. ಸಂತೆ ಮಾರುಕಟ್ಟೆಯ ಏಲಂ ನಲ್ಲಿ ಸರಿಯಾದ ಷರತ್ತು ಹಾಕದೆ ನೀಡಿರುವುದು ಸರಿಯಲ್ಲ, ಆರು ತಿಂಗಳ ಕಾಲ ಏಲಂ ರದ್ದು ಮಾಡದೆ ಮುಂದುವರಿಸಿ ಬಳಿಕ ಕೈಬಿಡುವುದಕ್ಕೆ ಅಡ್ಡಿಯಿಲ್ಲ ಎಂದು ಸದಸ್ಯರು ಸಭೆಯಲ್ಲಿ ಹೇಳಿದರು.

ಆರೋಗ್ಯ ಇಲಾಖೆಯ ಕುಸುಮಾ, ಪಶುಸಂಗೋಪನಾ ಇಲಾಖೆಯ ಡಾ. ಅವಿನಾಶ್ ಮಾಹಿತಿ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಪಟ್ಟಣ ಪಂಚಾಯತ್ ಅಧ್ಯಕ್ಷ ಕರುಣಾಕರ ನಾಯ್ತೊಟ್ಟು ವಹಿಸಿದ್ದರು. ಸ್ಥಾಯಿ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ, ಉಪಾಧ್ಯಕ್ಷೆ ಸಂಗೀತ ಪಾಣೆಮಜಲು, ಮುಖ್ಯಾಧಿಕಾರಿ ಕರುಣಾಕರ ವಿ. ಉಪಸ್ಥಿತರಿದ್ದರು.

> **ಪಂ.ನಿಂದಲೇ ಸಂತೆ**
>
> ಸಂತೆ ಮಾರುಕಟ್ಟೆಯ ಏಲಂ ಪಡೆದವರನ್ನು ಕರೆಸಿ ಮಾತನಾಡಿದ್ದು, ರೂ.500 ಮಾತ್ರ ಹೆಚ್ಚುವರಿ ನೀಡಲು ಒಪ್ಪಿದ್ದಾರೆ. ಈ ಕಾರಣದಿಂದ ಇನ್ನು ಪಂಚಾಯತ್ ವತಿಯಿಂದಲೇ ನಡೆಸುವ ಬಗ್ಗೆ ತೀರ್ಮಾನ ಕ್ರಮ ಕೈಗೊಳ್ಳಲಾಗಿದೆ. ಪಟ್ಟಣ ಪಂ. ಪರಿಸರದಲ್ಲಿ ಎರಡು ಬೀಡಾಡಿ ಹೋರಿಗಳಿಂದ ಬಹಳಷ್ಟು ಸಮಸ್ಯೆಯಾಗಿದೆ. ಮಾಲೀಕರು ಇದಕ್ಕೆ ಸೂಕ್ತ ಕ್ರಮ ಕೈಗೊಳ್ಳದೇ ಹೋದರೆ, ಪಂಚಾಯತ್ ಮುಂದಿನ ಕ್ರಮ ಕೈಗೊಳ್ಳಲಿದೆ.
>
> ● ಕರುಣಾಕರ ನಾಯ್ತೊಟ್ಟು, ಅಧ್ಯಕ್ಷರು, ಪಟ್ಟಣ ಪಂಚಾಯತ್

> **ದೊಡ್ಡಿಯಿಲ್ಲದೆ ಸಮಸ್ಯೆ**
>
> ಬೀಡಾಡಿ ದನಗಳಿಗೆ ಹಾಗೂ ನಾಯಿಗಳಿಗೆ ಸ್ಥಳೀಯಾಡಳಿತ ಜವಾಬ್ದಾರಿಯಾಗಿದೆ. ಹಿಂದೆ ಗ್ರಾಮಗಳಲ್ಲಿ ದೊಡ್ಡಿಯ ವ್ಯವಸ್ಥೆಯಿದ್ದು ಸಮಸ್ಯೆಯಾಗುತ್ತಿರಲಿಲ್ಲ, ಸದ್ಯ ದೊಡ್ಡಿಯಿಲ್ಲದ ಕಾರಣ ಗೋ ಶಾಲೆಗಳಿಗೆ ಸಾಗಾಟಕ್ಕೆ ವ್ಯವಸ್ಥೆ ಮಾಡಬೇಕು. ಕೊಳವೆಬಾವಿಯಲ್ಲಿ ನೀರಿಲ್ಲದೆ ಸಮಸ್ಯೆಯಾಗುತ್ತಿದೆ. ಎಲ್ಲಾ ಕಡೆ ನೀರು ತಳಮಟ್ಟಕ್ಕೆ ಹೋಗಿದೆ. ಕೆಲವು ಪಂಪಿನ ಹೆಡ್ ಸಾಕಷ್ಟು ಇಲ್ಲದೆ ತೊಂದರೆಯಾಗಿದೆ.
>
> ● ಕರುಣಾಕರ ವಿ. ಮುಖ್ಯಾಧಿಕಾರಿ

ಸುತ್ತಮುತ್ತ

ಜಿಲ್ಲಾ ಅಭಿವೃದ್ಧಿ ಸಮಿತಿ ಸಭೆ

ಕಾಸರಗೋಡು: ಜಿಲ್ಲಾ ಅಭಿವೃದ್ಧಿ ಸಮಿತಿ ಸಭೆಯು ಜೂ.27ರಂದು ಬೆಳಗ್ಗೆ 10.30ಕ್ಕೆ ಕಾಸರಗೋಡು ಕಲೆಕ್ಟರೇಟ್‌ನಲ್ಲಿ ನಡೆಯಲಿದೆ.

ಯುವಜನ ಸಂಘ ಬೊಕ್ಕಪಟ್ಣ ನೂತನ ಅಧ್ಯಕ್ಷರ ಆಯ್ಕೆ

ಮಂಗಳೂರು: ಯುವಜನ ಸಂಘ ಬೊಕ್ಕಪಟ್ಣ 58ನೇ ವಾರ್ಷಿಕ ಮಹಾಸಭೆ 'ಅಕ್ಷಯ' ಸಭಾಂಗಣದಲ್ಲಿ ಇತ್ತೀಚೆಗೆ ಜರಗಿತು. ಸಂಘದ



ಅಧ್ಯಕ್ಷ ನರೇಂದ್ರ ಸಾಲ್ಯಾನ್ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ 2025–26ನೇ ಸಾಲಿನ ವಾರ್ಷಿಕ ವರದಿ ಹಾಗೂ ಜಮಾ – ಖರ್ಚಿನ ವಿವರವನ್ನು ಕೋಶಾಧಿಕಾರಿ ವರುಣ್ ಕರ್ಕೇರ ಮಂಡಿಸಿದರು.

ಬಳಿಕ 2026–27ನೇ ಸಾಲಿನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ನೂತನ ಅಧ್ಯಕ್ಷರಾಗಿ ನರೇಂದ್ರ ಸಾಲ್ಯಾನ್, ಉಪಾಧ್ಯಕ್ಷರಾಗಿ ಗಣೇಶ್ ಕುಮಾರ್, ಪ್ರಧಾನ ಕಾರ್ಯದರ್ಶಿಯಾಗಿ ಕಾರ್ತಿಕೇಯ ಬಂಗೇರ, ಕೋಶಾಧಿಕಾರಿಯಾಗಿ ವರುಣ್ ಕರ್ಕೇರ, ಜೊತೆ ಕಾರ್ಯದರ್ಶಿಗಳಾಗಿ ಚೇತನ್ ಸಿ. ಕೋಟ್ಯಾನ್ ಮತ್ತು ಚಿತ್ರಾ ಕುಂದರ್, ಕ್ರೀಡಾ ಕಾರ್ಯದರ್ಶಿಯಾಗಿ ರಾಹುಲ್ ಸುವರ್ಣ, ಲೆಕ್ಕಪರಿಶೋಧಕರಾಗಿ ಮಧುರಾಜ್ ಅವರನ್ನು ಪುನರಾಯ್ಕೆ ಮಾಡಲಾಯಿತು.

ಸಮಿತಿ ಸದಸ್ಯರಾಗಿ ಚಂದ್ರಶೇಖರ್ ಕೋಟ್ಯಾನ್, ಪ್ರಕಾಶ್ ಕರ್ಕೇರ, ಗೋಪಾಲ್ ಬಂಗೇರ, ಜಯರಾಮ್ ಸಾಲ್ಯಾನ್, ಸುನಿಲ್ ಅಮೀನ್, ಕಿಶೋರ್ ಕುಮಾರ್ ಶೆಟ್ಟಿ, ವಿಜಯ್ ಪುತ್ರನ್, ಗೀತಾನಂದ ಶೆಟ್ಟಿ, ಅವಿನಾಶ್, ಅರುಣ್ ಕುಮಾರ್, ಮಹೇಶ್ ಕರ್ಕೇರ, ಜೀವನ್ ಮೆಂಡನ್, ರಮೇಶ್ ಸಾಲ್ಯಾನ್, ಸತೀಶ್ ಸಾಲ್ಯಾನ್, ವಿಖ್ಯಾತ್ ಸಾಲ್ಯಾನ್, ಆಕಾಶ್ ಕರ್ಕೇರ, ರೇವತಿ ಸುರೇಶ್, ಸರಿತಾ ಜೆ.ಕೋಟ್ಯಾನ್, ಸುಚಿತ್ರ ಕುಂದರ್ ಅವರನ್ನು ಆಯ್ಕೆ ಮಾಡಲಾಯಿತು.

ವಿದ್ಯುತ್ ವ್ಯತ್ಯಯ

ಮಂಗಳೂರು: ಬೈಕಂಪಾಡಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ 11 ಕೆವಿ ಬ್ಲೂ ವಾಟರ್, ಮಲಬಾರ್ ಆಕ್ಸಿಜನ್, ವಿಜಯ ನಟ್ಸ್, ಪ್ಲಾಮಾ ಬೋರ್ಡ್ ಮತ್ತು ರಹೇಜಾ ಫೀಡರ್‌ಗಳಲ್ಲಿ ಜೂ. 28ರಂದು ಬೆಳಿಗ್ಗೆ 09.30ರಿಂದ ಮಧ್ಯಾಹ್ನ 2 ಗಂಟೆಯವರೆಗೆ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಹೈಟೆಕ್ ಇಂಡಸ್ಟ್ರಿ, ಓಶಿಯನ್ ಪ್ರೋಟೀನ್, ಎ.ಕೆ. ವೀನರ್ಸ್, ಪ್ಲಾಮಾ ಪ್ಲಾಸ್ಟಿಕ್, ಪ್ರಕಾಶ್ ಪ್ರಿಂಟರ್, ಅವಿನಾಶ್ ಇಂಜಿನಿಯರಿಂಗ್ ಬೈಟ್ ಪ್ಯಾಕೇಜ್, ಸೋಮಯಾಜಿ, ಕಾವೇರಿ ಐಸ್ ಪ್ಲ್ಯಾಂಟ್, ಬಿ.ಕೆ. ಉಚ್ಚಿಲ್, ಪ್ರಜಾವಾಣಿ, ಅಡ್ಕ ಹಾಲ್ ಬಳಿ, ಸೋಲಾರ ಆಕ್ಟಿವ, ಕಲ್ಪಾವಿ ಕ್ಯಾಶ್ಯೂ, ಕಲ್ಯಾಣಿ ಪಾಲಿಮರ್ಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಆರೋಗ್ಯ ಜಾಗೃತಿಗಾಗಿ ರಾಜ್ಯ ಮಟ್ಟದ ಕವನ ಮತ್ತು ಕಥಾ ಸ್ಪರ್ಧೆ

ಪುತ್ತೂರು: ಕನ್ನಡ ಸಾಹಿತ್ಯದ ಮೂಲಕ ಸಮಾಜದಲ್ಲಿ ಆರೋಗ್ಯ ಜಾಗೃತಿ ಮೂಡಿಸುವ ಮಹತ್ವದ ಉದ್ದೇಶದಿಂದ ಕರ್ನಾಟಕ ಆರೋಗ್ಯ ಸಾಹಿತ್ಯ ಪರಿಷತ್ ವತಿಯಿಂದ ಆರೋಗ್ಯ ಜಾಗೃತಿಗಾಗಿ ರಾಜ್ಯ ಮಟ್ಟದ ಕವನ ಮತ್ತು ಕಥಾ ಸ್ಪರ್ಧೆ–2026 ಆಯೋಜಿಸಲಾಗಿದೆ. ವೈದ್ಯಲೋಕ ಆರೋಗ್ಯ ಮಾಸ ಪತ್ರಿಕೆ ಮತ್ತು ಮೀಡಿಯಾ ಐಕಾನ್ ಸಂಸ್ಥೆಗಳು ಈ ಸ್ಪರ್ಧೆಗೆ ಸಹಯೋಗ ನೀಡುತ್ತಿವೆ. ಬರವಣಿಗೆಯ ಮೂಲಕ ಆರೋಗ್ಯ ಮತ್ತು ಸ್ವಾಸ್ಥ್ಯದ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಿ, ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಗೆ ಧ್ವನಿಯಾಗುವುದು. ಪದಗಳು ಆರೋಗ್ಯಕರ ಭವಿಷ್ಯಕ್ಕೆ ಪ್ರೇರಣೆಯಾಗಲಿ ಎಂಬುದು ಪರಿಷತ್ತಿನ ಆಶಯ.

ಸಾರ್ವಜನಿಕರು, ವೈದ್ಯರು ಮತ್ತು ಆರೋಗ್ಯ ವೃತ್ತಿಪರರು, ವೈದ್ಯಕೀಯ ವಿದ್ಯಾರ್ಥಿಗಳು ಎಂಬ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ಸೃಜನಶೀಲತೆಯನ್ನು ಪ್ರದರ್ಶಿಸಲು ಸುವರ್ಣ ಅವಕಾಶ, ಸಾಹಿತ್ಯದ ಮೂಲಕ ಆರೋಗ್ಯ ಜಾಗೃತಿ ಹರಡಲು ವೇದಿಕೆ, ಆಯ್ದ ಬರಹಗಳು ವೈದ್ಯಲೋಕ ಮಾಸಪತ್ರಿಕೆ ಹಾಗೂ ವೆಬ್ ಸೈಟ್‌ನಲ್ಲಿ ಪ್ರಕಟ, ಆರೋಗ್ಯ ವಿಷಯ ಲೇಖಕರಾಗಿ ಗುರುತಿಸಿಕೊಳ್ಳುವ ಅವಕಾಶ ಲಭಿಸಲಿದೆ. ವಿಜೇತರಿಗೆ ಪ್ರಶಸ್ತಿ, ಬಹುಮಾನ ಮತ್ತು ಪ್ರಮಾಣಪತ್ರ ನೀಡಲಾಗುವುದು. ಕಥೆ ಮತ್ತು ಕವನ ಕಳುಹಿಸಲು ಜೂ.30 ಕೊನೆಯ ದಿನಾಂಕವಾಗಿದ್ದು, ಬರಹಗಳನ್ನು ಇಮೇಲ್: mediaicon@ymail.com , ವಾಟ್ಸಪ್: 81975 54373 ಸಂಖ್ಯೆಗೆ ಕಳುಹಿಸುವಂತೆ ಪ್ರಕಟಣೆ ವಿನಂತಿಸಿದೆ.

ಎಸ್‌ಸಿಎಸ್ ಆಸ್ಪತ್ರೆಯಿಂದ ಅಗ್ನಿಶಾಮಕ ದಳ ಸಿಬ್ಬಂದಿಗಳಿಗೆ ಆರೋಗ್ಯ ತಪಾಸಣಾ ಶಿಬಿರ

ಸೂಕ್ತ ಚಿಕಿತ್ಸೆ ದೊರೆತರೆ ಆರೋಗ್ಯ ಫಲಿತಾಂಶ ಉತ್ತಮ

ಮಂಗಳೂರು: ಎಸ್.ಸಿ.ಎಸ್ ಆಸ್ಪತ್ರೆ ವತಿಯಿಂದ ಮಂಗಳೂರಿನ ಪಾಂಡೇಶ್ವರ ದಲ್ಲಿರುವ ಅಗ್ನಿಶಾಮಕ ಕಚೇರಿಯಲ್ಲಿ ಅಗ್ನಿ ಶಾಮಕ ಅಧಿಕಾರಿಗಳು ಹಾಗೂ ರಾಜ್ಯ ವಿಪತ್ತು ಪ್ರತಿಕ್ರಿಯೆ ಪಡೆ ಸಿಬ್ಬಂದಿಗಾಗಿ ಸಮಗ್ರ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಮುಂಚಿತ ಆರೋಗ್ಯ ರಕ್ಷಣೆ, ರೋಗಗಳ ಆರಂಭಿಕ ಹಂತದಲ್ಲೇ ಪತ್ತೆ ಹಾಗೂ ಮುಂಚೂಣಿ ತುರ್ತು ಸೇವಾ ಸಿಬ್ಬಂದಿಯ ಸಮಗ್ರ ಆರೋಗ್ಯ ಮತ್ತು ಕ್ಷೇಮವನ್ನು ಉತ್ತೇಜಿಸುವ ಉದ್ದೇಶದಿಂದ ಈ ಶಿಬಿರವನ್ನು ಆಯೋಜಿಸಲಾಗಿತ್ತು.

ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಮೊಹಮ್ಮದ್ ಜುಲ್ಫಿಕರ್ ನವಾಜ್ ಅವರು ದೀಪ ಬೆಳಗಿಸುವ ಮೂಲಕ ಶಿಬಿರವನ್ನು ಉದ್ಘಾಟಿಸಿದರು.

ಆರಂಭದಲ್ಲೇ ಪತ್ತೆಹಚ್ಚಲು ಸಹಾಯ

ಈ ಸಂದರ್ಭ ಮಾತನಾಡಿದ ಎಸ್‌ಸಿಎಸ್ ಆಸ್ಪತ್ರೆಯ ಪ್ರತಿನಿಧಿಗಳು, ಅಗ್ನಿ ಶಾಮಕ ಅಧಿಕಾರಿಗಳು ನಿಯಮಿತ ಆರೋಗ್ಯ ತಪಾಸಣೆಗೆ ಒಳಪಡುವುದರಿಂದ ಆರೋಗ್ಯ ಸಂಬಂಧಿತ ಸಮಸ್ಯೆಗಳು ಹಾಗೂ ರೋಗಗಳನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಆರಂಭಿಕ ಹಂತದಲ್ಲೇ ರೋಗನಿರ್ಣಯ ಮತ್ತು ಸೂಕ್ತ ಚಿಕಿತ್ಸೆ ದೊರೆತರೆ ಆರೋಗ್ಯ



ಫಲಿತಾಂಶಗಳು ಉತ್ತಮಗೊಳ್ಳುವುದಲ್ಲದೆ, ಸಿಬ್ಬಂದಿ ತಮ್ಮ ಕರ್ತವ್ಯ ಗಳನ್ನು ಸಮರ್ಥವಾಗಿ ನಿರ್ವಹಿಸಲು ದೈಹಿಕವಾಗಿ ಸದೃಢರಾಗಿರಲು ಸಹಕಾರಿಯಾಗುತ್ತದೆ ಎಂದರು.

ಶಿಬಿರದಲ್ಲಿ ಅಗ್ನಿಶಾಮಕ ಅಧಿಕಾರಿಗಳು ಹಾಗೂ ರಾಜ್ಯ ವಿಪತ್ತು ಪ್ರತಿಕ್ರಿಯೆ ಪಡೆ ಸಿಬ್ಬಂದಿಗಳಿಗೆ ಆರೋಗ್ಯ ತಪಾಸಣೆ ಹಾಗೂ ಸಲಹಾ ಸೇವೆಗಳನ್ನು ಒದಗಿಸಲಾಯಿತು. ಅಗ್ನಿಶಾಮಕ ಅಧಿಕಾರಿಗಳು ಹಾಗೂ ಎಸ್‌ಡಿಆರ್‌ಎಫ್ ಸಿಬ್ಬಂದಿ ಉತ್ಸಾಹದಿಂದ ಭಾಗವಹಿಸಿದರು.

ವಿವಿಧ ಆರೋಗ್ಯ ತಪಾಸಣೆ

ಸಾಮಾನ್ಯ ಆರೋಗ್ಯ ತಪಾಸಣೆ, ರಕ್ತದಲ್ಲಿನ ಸಕ್ಕರೆ ಮಟ್ಟ ಪರೀಕ್ಷೆ, ರಕ್ತದೊತ್ತಡ ಹಾಗೂ ಇತರ ಪ್ರಮುಖ ಆರೋಗ್ಯ ಸೂಚಕಗಳ ಪರಿಶೀಲನೆ, ದೇಹದ ತೂಕ, ಎತ್ತರ ಅನುಪಾತ ಮೌಲ್ಯಮಾಪನ, ಇಸಿಜಿ ಪರೀಕ್ಷೆ, ಚಲನಶೀಲತೆ, ಸ್ನಾಯು–ಮೂಳೆ ಸಮಸ್ಯೆಗಳು ಹಾಗೂ ವೃತ್ತಿಪರ ಒತ್ತಡದಿಂದ ಉಂಟಾಗುವ ತೊಂದರೆಗಳ ಮೌಲ್ಯಮಾಪನಕ್ಕಾಗಿ ಫಿಸಿಯೋಥೆರಪಿ ಸಲಹೆ ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸಲು ವೈಯಕ್ತಿಕ ಆಹಾರ ಮತ್ತು ಪೌಷ್ಟಿಕಾಂಶ ಸಲಹೆಗಳನ್ನು ನೀಡಲಾಯಿತು.

ಎಸ್‌ಸಿಎಸ್ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿಗಳು ಆರೋಗ್ಯ ತಪಾಸಣೆ ನಡೆಸಿ, ಹೆಚ್ಚಿನ ಪರೀಕ್ಷೆ ಹಾಗೂ ಚಿಕಿತ್ಸೆ ಅಗತ್ಯವಿರುವ ಆರೋಗ್ಯ ಸಮಸ್ಯೆಗಳನ್ನು ಗುರುತಿಸಿದರು. ಈ ಶಿಬಿರವು ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯೊಂದಿಗೆ ಎಸ್‌ಸಿಎಸ್ ಆಸ್ಪತ್ರೆಯ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವುದರ ಜೊತೆಗೆ, ತುರ್ತು ಸೇವಾ ಸಿಬ್ಬಂದಿಗೆ ವಿಶ್ವಾಸಾರ್ಹ ಮತ್ತು ಆದ್ಯತೆಯ ಆರೋಗ್ಯ ಸೇವಾ ಸಂಸ್ಥೆಯಾಗಿ ತನ್ನ ಬದ್ಧತೆಯನ್ನು ಪ್ರದರ್ಶಿಸುತ್ತದೆ.

ಈ ಸಂದರ್ಭ ಎಸ್.ಸಿ.ಎಸ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ. ಶಾಲಿನಿ ಎಸ್. ರಾವ್ ಹಾಗೂ ಎಸ್.ಸಿ.ಎಸ್ ಆಸ್ಪತ್ರೆಯ ಜನರಲ್ ಮ್ಯಾನೇಜರ್ ರಾಘವೇಂದ್ರ ಸಿಂಗ್ ಉಪಸ್ಥಿತರಿದ್ದರು.

ವಿದ್ಯುತ್ ಖಾಸಗೀಕರಣ ವಿರೋಧಿಸಿ ಒಕ್ಕೂಟದಿಂದ ಕಾಮತ್‌ಗೆ ಮನವಿ

ಬಡಜನರ ತೆರಿಗೆಗೆ ಮಾಡುವ ಅನ್ಯಾಯ

ಮಂಗಳೂರು: ಮೆಸ್ಕಾಂ ವ್ಯಾಪ್ತಿ ಯಲ್ಲಿ ಸಮಾನಾಂತರ ವಿದ್ಯುತ್ ಪರವಾನಿಗೆಗಾಗಿ ಟಾಟಾ ಪವರ್ ಕಾರ್ಪೊರೇಷನ್ ಸಲ್ಲಿಸಿರುವ ಅರ್ಜಿಯನ್ನು ರದ್ದುಪಡಿಸಲು ಹಾಗೂ ವಿದ್ಯುತ್ ಕ್ಷೇತ್ರದ ಖಾಸಗೀಕರಣ ತಡೆಗಟ್ಟಲು ಕೋರಿ ವಿದ್ಯುತ್ ನೌಕರರ ಒಕ್ಕೂಟದ ಪದಾಧಿಕಾರಿಗಳು ಮಂಗಳೂರು ನಗರ ದಕ್ಷಿಣದ ಶಾಸಕ ಡಿ. ವೇದ ವ್ಯಾಸ ಕಾಮತ್ ಅವರಿಗೆ ಮನವಿ ಸಲ್ಲಿಸಿದರು.



ಟಾಟಾ ಪವರ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಯು ಮೆಸ್ಕಾಂ ವ್ಯಾಪ್ತಿಯ ದಕ್ಷಿಣ ಕನ್ನಡ, ಉಡುಪಿ ಹಾಗೂ ಶಿವಮೊಗ್ಗ ಜಿಲ್ಲೆಗಳ ಮಹಾನಗರ ಪಾಲಿಕೆ, ನಗರಸಭೆಗಳಲ್ಲಿ ಸಮಾ ನಾಂತರ ವಿದ್ಯುತ್ ವಿತರಣಾ ಪರವಾನಿಗೆಗಾಗಿ ಅರ್ಜಿ ಸಲ್ಲಿಸಿದ್ದು, ನಗರವನ್ನು ಕೇಂದ್ರವಾಗಿಟ್ಟುಕೊಂಡು ಕೇವಲ ಕೈಗಾರಿಕೆ ಮತ್ತು ವಾಣಿಜ್ಯ ಗ್ರಾಹಕರನ್ನು ಗುರಿಯಾಗಿಸಿಕೊಂಡಿದೆ. ಇದರಿಂದ ಗ್ರಾಮಾಂತರ ಪ್ರದೇಶ, ಬಡವರು, ಮಧ್ಯಮ ವರ್ಗದವರು, ರೈತರಿಗೆ ತೊಂದರೆಯಾಗುವುದಲ್ಲದೇ, ವಿದ್ಯುತ್ ದರ ಹೆಚ್ಚಳದ ಬಿಸಿಯೂ ತಟ್ಟಲಿದೆ. ಈ ಖಾಸಗಿಯವರು ಕಳೆದ ನೂರಾರು ವರ್ಷಗಳಿಂದ ನಾಗರಿಕರ ತೆರಿಗೆ, ವಿದ್ಯುತ್ ಬಿಲ್, ಸರ್ಕಾರಗಳ ಅನುದಾನಗಳಿಂದ ನಿರ್ಮಾಣಗೊಂಡಿರುವ ಮೆಸ್ಕಾಂ ವಿದ್ಯುತ್ ಜಾಲವನ್ನು ಬಳಸಿಕೊಂಡೇ ಕಾರ್ಯ ನಿರ್ವಹಿಸಲಿರುವುದು ಜನರ ತೆರಿಗೆಗೆ ಮಾಡುವ ಅನ್ಯಾಯವಾಗಿದೆ ಎಂದು ಒಕ್ಕೂಟವು ಮನವಿ ಮಾಡಿತು.

ಮನವಿ ಸ್ವೀಕರಿಸಿದ ಶಾಸಕ ಕಾಮತ್ ಅವರು, ಕಾಂಗ್ರೆಸ್ ಸರಕಾರವು ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಯಾವುದೇ ಕ್ಷೇತ್ರದ ಯಾರೊಬ್ಬರನ್ನೂ ನೆಮ್ಮದಿಯಾಗಿ ಬದುಕಲು ಬಿಡುತ್ತಿಲ್ಲ, ಇದೀಗ ಖಾಸಗೀಕರಣ ಹೆಸರಲ್ಲಿ ಮೆಸ್ಕಾಂ ಸಹಿತ ರಾಜ್ಯದ ವಿದ್ಯುತ್ ಕ್ಷೇತ್ರಗಳನ್ನು ಖಾಸಗಿ ಸುಪರ್ದಿಗೆ ವಹಿಸಲು ಹಾತೊರೆಯುತ್ತಿದೆ. ಇದರಿಂದಾಗಿ ಸಾರ್ವಜನಿಕರಿಗೂ ಅನ್ಯಾಯ, ವಿದ್ಯುತ್ ಕಂಪೆನಿಗಳ ಕಾರ್ಮಿಕರ ಜೀವನ ಭದ್ರತೆಗೂ ಧಕ್ಕೆಯಾಗಲಿದೆ. ಹಾಗಾಗಿ ಈ ಖಾಸಗಿ ಅರ್ಜಿಯನ್ನು ಕರ್ನಾಟಕ ಸರಕಾರವು ವಿದ್ಯುಚ್ಛಕ್ತಿ ಕಾಯ್ದೆಯ 108 ನೇ ಪರಿಚ್ಛೇದದ ಮೂಲಕ ರದ್ದುಪಡಿಸಲು ಕ್ರಮ ವಹಿಸಬೇಕು ಮತ್ತು ಯಾವುದೇ ಕಾರಣಕ್ಕೂ ಖಾಸಗೀಕರಣಕ್ಕೆ ಮುಂದಾಗಬಾರದು ಎಂದು ಮುಖ್ಯಮಂತ್ರಿಗೆ, ಇಂಧನ ಸಚಿವರಿಗೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷರಿಗೆ ಪತ್ರ ಮುಖೇನ ಆಗ್ರಹಿಸಿದ್ದಾರೆ.

ಪಾಂಡೇಶ್ವರದಲ್ಲಿ ಬಿಜೆಪಿ ಶಕ್ತಿಕೇಂದ್ರ ಪುನರ್‌ರಚನೆ: ಬೂತ್ ಮಟ್ಟದಿಂದಲೇ ಪಕ್ಷ ಕಟ್ಟಲು ನಾಯಕರ ಕರೆ



ಕೋಟ: ಕುಂದಾಪುರ ಕ್ಷೇತ್ರದ ಪಾಂಡೇಶ್ವರ ಗ್ರಾ.ಪಂ. ವ್ಯಾಪ್ತಿಯ ಬಿಜೆಪಿ ಶಕ್ತಿ ಕೇಂದ್ರಗಳ ಸಭೆ ಬುಧವಾರ ಸಾಸ್ತಾನದ ಶಿವಕೃಪಾ ಸಭಾಗೃಹದಲ್ಲಿ ನಡೆಯಿತು.

ಪಾಂಡೇಶ್ವರ ವ್ಯಾಪ್ತಿಯ ಶಕ್ತಿಕೇಂದ್ರಗಳಿಗೆ ನೂತನ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳನ್ನು ಆಯ್ಕೆ ಮಾಡಲಾಯಿತು.

ಬಿಜೆಪಿ ಕ್ಷೇತ್ರಾಧ್ಯಕ್ಷ ಸುರೇಶ್ ಶೆಟ್ಟಿ ಗೋಪಾಡಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಪಾಂಡೇಶ್ವರ ಭಾಗದಲ್ಲಿ ಪಕ್ಷವನ್ನು ಇನ್ನಷ್ಟು ಗಟ್ಟಿಗೊಳಿಸಲು ಶಕ್ತಿ ಕೇಂದ್ರದ ನೂತನ ತಂಡ ಶ್ರಮಿಸಲಿ. ಮುಂದಿನ ದಿನಗಳಲ್ಲಿ ಕೇಂದ್ರವಾರು ಸದಸ್ಯತ್ವ ಅಭಿಯಾನ ಹಾಗೂ ಪೇಜ್ ಪ್ರಮುಖರ ನೇಮಕಕ್ಕೆ ಆದ್ಯತೆ ನೀಡಲಾಗುವುದು ಎಂದರು.

ಕುಂದಾಪುರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಮಾತನಾಡಿ, ಬಿಜೆಪಿಯ ಬಲ ತಳಮಟ್ಟದ ಸಂಘಟನೆಯಲ್ಲಿದೆ. ಬೂತ್ ಗೆದ್ದರೆ ಎಲ್ಲವನ್ನೂ ಗೆದ್ದಂತೆ. ಹಾಗಾಗಿ ಪ್ರತಿ ಬೂತ್‌ನಲ್ಲಿ ಯುವಕರು, ಮಹಿಳೆಯರು, ಹಿರಿಯರನ್ನು ಸೇರಿಸಿ ಸಮಿತಿ ಬಲಪಡಿ ಎಂದು ಕರೆ ನೀಡಿದರು.

ಉಡುಪಿ– ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ಕೇಂದ್ರದ ಯೋಜನೆಗಳ ಫಲವನ್ನು ಪ್ರತಿಫಲಾನುಭವಿಗೆ ತಲುಪಿಸಿ. 2029ಕ್ಕೆ ಈಗಿಂದಲೇ ತಯಾರಿ ಆರಂಭಿಸಿ ಎಂದರು.

ಬಿಜೆಪಿ ನಿಕಟ ಪೂರ್ವ ಅಧ್ಯಕ್ಷ ಶಂಕರ ಅಂಕದಕಟ್ಟೆ, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಸತೀಶ್ ಪೂಜಾರಿ ವಕ್ವಾಡಿ, ಸುಧೀರ್ ಕೆ.ಎಸ್, ಕೋಟ ಬಿಜೆಪಿ ಮಹಾ ಶಕ್ತಿ ಕೇಂದ್ರದ ಅಧ್ಯಕ್ಷ ಸುರೇಶ್ ಕುಂದರ್, ಪ್ರಧಾನ ಕಾರ್ಯದರ್ಶಿ ಅಜಿತ್ ಶೆಟ್ಟಿ ಕೊತ್ತಾಡಿ, ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ಐರೋಡಿ ವಿಠಲ ಪೂಜಾರಿ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷೆ ಜ್ಯೋತಿ ಉದಯ್ ಪೂಜಾರಿ, ಪಾಂಡೇಶ್ವರ ಶಕ್ತಿ ಕೇಂದ್ರದ ನಿಕಟ ಪೂರ್ವ ಅಧ್ಯಕ್ಷ ಸುರೇಶ್ ಪೂಜಾರಿ ಸೇರಿದಂತೆ ಪ್ರಮುಖರು, ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

ಸ್ವಚ್ಛತಾ ಕಾರ್ಯಕ್ರಮದಿಂದ ಸಮಾಜಕ್ಕೆ ಉತ್ತಮ ಸಂದೇಶ: ಶಾಸಕ ರಾಜೇಶ್ ಶ್ಲಾಘನೆ



ಬಂಟ್ವಾಳ: ಬಿಜೆಪಿ ಬಂಟ್ವಾಳ ಮಂಡಲ ಎಸ್.ಸಿ. ಮೋರ್ಚಾದ ವತಿಯಿಂದ ಮಾಣಿ ಮಹಾಶಕ್ತಿ ಕೇಂದ್ರ ವ್ಯಾಪ್ತಿಯ ಅನಂತಾಡಿ ಶಕ್ತಿ ಕೇಂದ್ರದ ಶ್ರೀ ದೇವಿ ಮಂದಿರ ದೇವಿನಗರ ವಠಾರದಲ್ಲಿ ಸ್ವಚ್ಛತಾ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

ಶಾಸಕ ರಾಜೇಶ್ ನ್ಾಯಕ್ ಮಾತನಾಡಿ, ಬಂಟ್ವಾಳ ಮಂಡಲ ಎಸ್.ಸಿ. ಮೋರ್ಚಾದ ವತಿಯಿಂದ 'ಸೇವಾ ಈ ಪಾಕ್ಷಿಕ' ಎಂಬ ಹೆಸರಿನಲ್ಲಿ ಸ್ವಚ್ಛತಾ ಕಾರ್ಯಕ್ರಮದ ಮೂಲಕ ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡಿರುವುದು ಶ್ಲಾಘನೀಯವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಂಟ್ವಾಳ ಮಂಡಳದ ಅಧ್ಯಕ್ಷ ಚೆನ್ನಪ್ಪ ಕೋಟ್ಯಾನ್ ವಹಿಸಿದ್ದರು. ಬಿಜೆಪಿ ಮಂಡಲ ಎಸ್‌ಸಿ ಮೋರ್ಚಾದ ಅಧ್ಯಕ್ಷ ರಮೇಶ್ ಕುದ್ರೆಬೆಟ್ಟು, ಬಂಟ್ವಾಳ ಮಂಡಲ ಪ್ರಧಾನ ಕಾರ್ಯದರ್ಶಿ ಸುದರ್ಶನ್ ಬಜ, ಮಂಡಲ ಕಾರ್ಯದರ್ಶಿ ಸನತ್ ಕುಮಾರ್ ರೈ, ಮಾಣಿ ಮಹಾಶಕ್ತಿ ಕೇಂದ್ರ ಪ್ರದಾನ ಕಾರ್ಯದರ್ಶಿ ನಾಗೇಶ್ ಭಂಡಾರಿ, ಜಿಲ್ಲಾ ಬಿಜೆಪಿ ಕಾರ್ಯದರ್ಶಿ ದಿನೇಶ್ ಅಮ್ಟೂರು, ಅನಂತಾಡಿ ಶಕ್ತಿ ಕೇಂದ್ರದ ಪ್ರಮುಖ್ ಮಹಾಬಲ ಪೂಜಾರಿ, ಪ್ರದಾನ ಕಾರ್ಯದರ್ಶಿ ಅಶೋಕ್ ಗೋಳಿ ಕೊಟ್ಟೆ, ಮಂಡಲ ಸಹಕಾರ ಸಂಘ ಪ್ರಕೋಷ್ಠ ಸಂಚಾಲಕ ಜಯರಾಮ್ ರೈ, ನೆಟ್ಲಮುಡ್ನೂರು ಶಕ್ತಿ ಕೇಂದ್ರ ಪ್ರಮುಖ್ ಧನಂಜಯ ಗೌಡ, ನೇರಳಕಟ್ಟೆ ಸ. ಸಂಘದ ಉಪಾಧ್ಯಕ್ಷ ತನಿಯಪ್ಪ ಗೌಡ, ನಿರ್ದೇಶಕರಾದ ವೆಂಕಟೇಶ್ ಕೋಟ್ಯಾನ್, ಅಶೋಕ್ ರೈ, ಮಹಿಳಾ ಮೋರ್ಚಾ ಉಪಾಧ್ಯಕ್ಷೆ ಗೀತಾ, ಮಹಿಳಾ ಪ್ರಮುಖ್ ಸುಶೀಲಾ ಆನಂದ್, ಬೂತ್ ಅಧ್ಯಕ್ಷ ನವೀನ್ ಆಚಾರ್, ಪ್ರಮುಖರಾದ ಪ್ರವೀಣ್ ಅಮ್ಟೂರು, ಕೃಷ್ಣಪ್ಪ ಗೌಡ, ಸುಬ್ರಹ್ಮಣ್ಯ ಭಟ್, ದಿನೇಶ್ ಪಿಲಿಚಂಡಿಗುಡ್ಡೆ, ಮಹಾಬಲ ಆಳ್ವ, ಕಿರಣ್ ಗೋಳಿ ಕೊಟ್ಟೆ ಶಿವರಾಮ್ ಶೆಟ್ಟಿ ಮೋನಪ್ಪ ಕೂಡು ರಸ್ತೆ ಅನಂತಾಡಿ, ದೇವಿ ಟ್ರಸ್ಟ್ ಸದಸ್ಯರಾದ ಸಂಜೀವ್ ದೇವಿ ನಗರ, ಗಂಗಾಧರ್, ಶಿವಪ್ರಸಾದ್ ಹಾಗೂ ಕಾರ್ಯಕರ್ತರು ಇದ್ದರು. ನಾಗೇಶ್ ಭಂಡಾರಿ ಸ್ವಾಗತಿಸಿ, ಎಸ್.ಸಿ.ಮೋರ್ಚಾದ ಪ್ರ.ಕಾರ್ಯದರ್ಶಿ ಗೋಪಾಲ ಕಾರಗುಡ್ಡೆ ವಂದಿಸಿದರು.

ರಾಜ್ಯ ಸೌಹಾರ್ದ ಸಹಕಾರಿಗಳ ನಿರ್ದೇಶಕರಿಗೆ ತರಬೇತಿ ಕಾರ್ಯಕ್ರಮ



ಮಂಗಳೂರು: ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ವತಿಯಿಂದ ಮಲ್ಲೇಶ್ವರದ ಸೌಹಾರ್ದ ಸಹಕಾರಿ ಸೌಧದಲ್ಲಿ ಮಂಗಳವಾರ ಹಾಗೂ ಬುಧವಾರದಂದು ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರಿಗೆ ಆಡಳಿತ ಪರಿಣತಿ ಹಾಗೂ ವ್ಯವಹಾರ ಅಭಿವೃದ್ಧಿ ಕುರಿತು ತರಬೇತಿ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮವನ್ನು ಬೆಂಗಳೂರಿನ ಸಹಕಾರಿಗಳ ನಿಬಂಧಕರಾದ ಡಾ. ವೆಂಕಟೇಶ್ ಎಂ. ವಿ. ಅವರು ಉದ್ಘಾಟಿಸಿದರು. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಜಿ. ನಂಜನಗೌಡ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು.

146 ಪ್ರತಿನಿಧಿಗಳು ಭಾಗಿ

ಸಂಯುಕ್ತ ಸಹಕಾರಿಯ ವ್ಯವ ಸ್ಥಾಪಕ ನಿರ್ದೇಶಕ ಶರಣಗೌಡ ಜಿ. ಪಾಟೀಲ್ ಅವರು ತರಬೇತಿ ಕಾರ್ಯಕ್ರಮದ ಕುರಿತು ಪ್ರಾಸ್ತವಿಕ ಮಾತುಗಳನ್ನಾಡಿದರು. ತರಬೇತಿ ಕಾರ್ಯಕ್ರಮದಲ್ಲಿ 96 ಸೌಹಾರ್ದಗಳಿಂದ 146 ಪ್ರತಿನಿಧಿಗಳು ಭಾಗವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಬಿ.ಎಚ್. ಕೃಷ್ಣಾರೆಡ್ಡಿ ಹಾಗೂ ಬಿ.ಎಸ್. ಗುಂಡುರಾವ್, ಸಹಕಾರ ಸಂಘಗಳ ನಿಬಂಧಕರುಗಳಾದ ಡಾ.ಜಗದೀಶ್, ವೆಂಕಟೇಶ್, ಕವಿತಾ, ಶಶಿಧರ್, ಸಹಕಾರ ಸಂಘಗಳ ಅಪರ ನಿಬಂಧಕ ಎಚ್. ಎಸ್. ನಾಗರಾಜಯ್ಯ ಸಹಿತ ಮೊದಲಾದವರು ಉಪಸ್ಥಿತರಿದ್ದರು.

ಸಂಯುಕ್ತ ಸಹಕಾರಿಯ ಸಹ ಪ್ರಧಾನ ವ್ಯವಸ್ಥಾಪಕ ರಾಜಶೇಖರ. ಎಚ್ ಸ್ವಾಗತಿಸಿದರು. ಹರ್ಷಪ್ರಭಾ ಪ್ರಾರ್ಥಿಸಿದರು. ತರಬೇತಿ ಸಲಹೆಗಾರ ವಿ.ಜೆ ಕಾರ್ಕುನ್ ವಂದಿಸಿದರೆ, ತರಬೇತಿ ವಿಭಾಗದ ಅಧಿಕಾರಿ ಕವಿತಾ ಆರ್. ನಿರೂಪಿಸಿದರು.

ಮಂಜನಾಡಿ ಗುಡ್ಡ ಕುಸಿತ ಪ್ರಕರಣದಿಂದ ನೊಂದ ಅಶ್ವಿನಿ ಮನೆಗೆ ಕಿಶೋರ್ ಕುಮಾರ್ ಭೇಟಿ | ಚಿಂತಾಜನಕ ಪರಿಸ್ಥಿತಿ ಕಂಡು ಭಾವುಕ

ಕುಟುಂಬಕ್ಕೆ ಸರ್ಕಾರದ ಮಟ್ಟದಲ್ಲಿ ಸೌಲಭ್ಯ ಒದಗಿಸುವ ಭರವಸೆ ನೀಡಿದ ಶಾಸಕರು

ಕೊಣಾಜೆ: ಕಳೆದ ವರ್ಷ ಮಂಗಳೂರು ಸಮೀಪದ ಮಂಜನಾಡಿಯಲ್ಲಿ ಸಂಭವಿಸಿದ ಭೀಕರ ಗುಡ್ಡ ಕುಸಿತದಲ್ಲಿ ತನ್ನ ಇಡೀ ಪ್ರಪಂಚವನ್ನೇ ಕಳೆದುಕೊಂಡು, ಅತೀವ ಸಂಕಷ್ಟದಲ್ಲಿ ಜೀವನ ಸಾಗಿಸುತ್ತಿರುವ ನೊಂದ ಮಹಿಳೆ ಅಶ್ವಿನಿ ಅವರ ಮನೆಗೆ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಅವರು ಬುಧವಾರ ಭೇಟಿ ನೀಡಿ ಸಾಂತ್ವನ ಹೇಳಿದರು.

ಈ ದುರಂತದ ಬಳಿಕ ಚಿಂತಾಜನಕ ಪರಿಸ್ಥಿತಿಯಲ್ಲಿರುವ ಕುಟುಂಬಕ್ಕೆ ವೈಯಕ್ತಿಕವಾಗಿ ಹಾಗೂ ಸರ್ಕಾರದ ಮಟ್ಟದಲ್ಲಿ ಸಂಪೂರ್ಣ ಬೆಂಬಲವಾಗಿ ನಿಲ್ಲುವ ಭರವಸೆಯನ್ನು ಶಾಸಕರು ತುಂಬಿದರು.

ಕಳೆದ ವರ್ಷ ಸುರಿದ ಭಾರೀ ಮಳೆಯಿಂದಾಗಿ ಮಂಜನಾಡಿಯಲ್ಲಿ ಸಂಭವಿಸಿದ ಗುಡ್ಡ ಕುಸಿತವು ಅಶ್ವಿನಿ ಅವರ ಬದುಕನ್ನೇ ನುಚ್ಚುನೂರು ಮಾಡಿತ್ತು.



ಈ ಭೀಕರ ದುರಂತದಲ್ಲಿ ಅಶ್ವಿನಿ ಅವರು ತಮ್ಮಿಬ್ಬರು ಮುದ್ದಾದ ಮಕ್ಕಳು ಹಾಗೂ ಅತ್ತೆಯನ್ನು ಕಳೆದುಕೊಂಡಿದ್ದರು. ಕೇವಲ ಪ್ರಾಣಹಾನಿಯಷ್ಟೇ ಅಲ್ಲದೆ, ಪ್ರಕೃತಿಯ ವಿಕೋಪಕ್ಕೆ ಅಶ್ವಿನಿ ಅವರು ತಮ್ಮ ಎರಡೂ ಕಾಲುಗಳನ್ನು ಕಳೆದುಕೊಂಡರೆ, ಅವರ ಮಾವ ಒಂದು ಕಾಲನ್ನು ಕಳೆದುಕೊಂಡು ಶಾಶ್ವತ ಅಂಗವೈಕಲ್ಯಕ್ಕೆ ತುತ್ತಾಗಿದ್ದಾರೆ. ಕಣ್ಣಮುಂದೆಯೇ ಇಡೀ ಕುಟುಂಬ ಹಾಗೂ ಕಟ್ಟಿದ ಮನೆ ಮಣ್ಣುಪಾಲಾಗಿ, ಇಂದು ಎರಡು ಕಾಲುಗಳಿಲ್ಲದೆ ದೈನಂದಿನ ಜೀವನ ನಡೆಸಲೂ ಪರದಾಡುತ್ತಿರುವ ಅಶ್ವಿನಿ ಅವರ ಪರಿಸ್ಥಿತಿ ಕಂಡು ಶಾಸಕ ಕಿಶೋರ್ ಕುಮಾರ್ ಅವರು ತೀವ್ರ ಭಾವುಕರಾದರು.

- ಕಳೆದ ವರ್ಷ ಸುರಿದ ಭಾರೀ ಮಳೆಯಿಂದಾಗಿ ಸಂಭವಿಸಿದ ಗುಡ್ಡ ಕುಸಿತ
- ಭೀಕರ ದುರಂತಕ್ಕೆ ಅಶ್ವಿನಿ ಅವರ ಇಬ್ಬರು ಮಕ್ಕಳು ಹಾಗೂ ಅತ್ತೆ ಸಾವು
- ದುರಂತದಲ್ಲಿ ಎರಡೂ ಕಾಲುಗಳನ್ನು ಕಳೆದುಕೊಂಡ ಅಶ್ವಿನಿ
- ಶೋಚನೀಯ ಸ್ಥಿತಿಯಲ್ಲಿ ದೈನಂದಿನ ಜೀವನ

ಅಶ್ವಿನಿ ಅವರ ವೈದ್ಯಕೀಯ ವೆಚ್ಚಗಳು ಹಾಗೂ ಪ್ರಸ್ತುತ ಜೀವನ ನಿರ್ವಹಣೆಯ ಕುರಿತು ಮಾಹಿತಿ ಪಡೆದುಕೊಂಡ ಶಾಸಕರು, ಜಿಲ್ಲಾಡಳಿತದಿಂದ ಹಾಗೂ ಸರ್ಕಾರದ ಮಟ್ಟದಿಂದ ಅವರಿಗೆ ಸಿಗಬೇಕಾದ ಸೌಲಭ್ಯಗಳನ್ನು ತುರ್ತಾಗಿ ಒದಗಿಸಿ ಕೊಡಲು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ತಕ್ಷಣವೇ ಮಾತನಾಡಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಈ ಸಂದರ್ಭ ಮಂಡಲ ಅಧ್ಯಕ್ಷರಾದ ಜಗದೀಶ್ ಕುವತ್ತಬೈಲ್, ಜಿಲ್ಲೆಯ ಉಪಾಧ್ಯಕ್ಷರಾದ ರವೀಂದ್ರ ಶೆಟ್ಟಿ ಉಳಿದೊಟ್ಟು ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ದಯಾನಂದ ತೊಕ್ಕೊಟ್ಟು, ಮೋಹನ್ ರಾಜ್ ಕೆ. ಆರ್., ಯುವಮೋರ್ಚಾ ಅಧ್ಯಕ್ಷರಾದ ಮುರಳಿ ಕೊಣಾಜೆ, ರೈತಮೋರ್ಚಾ ಅಧ್ಯಕ್ಷರಾದ ಪದ್ಮನಾಭ ಶೆಟ್ಟಿ, ಮಂಡಲದ ಕೋಶಾದಿಕಾರಿ ಸುಮಲತಾ ಕೊಣಾಜೆ ಶಕ್ತಿ ಕೇಂದ್ರ ಪ್ರಮುಖ್ ಸುಧಾಕರ ಗಟ್ಟಿ ಮತ್ತಿತರರು ಉಪಸ್ಥಿತರಿದ್ದರು.

> **ನಿಮ್ಮ ಜೊತೆಗೆ ನಾವಿದ್ದೇವೆ**
>
> ಅಶ್ವಿನಿ ಅವರ ಕಣ್ಣೀರು ಒರೆಸಿ ಧೈರ್ಯ ತುಂಬಿದ ಶಾಸಕರು, ನೀವು ಒಂಟಿಯಲ್ಲ, ಈ ಕಷ್ಟದ ಸಮಯದಲ್ಲಿ ನಿಮ್ಮ ಕುಟುಂಬದ ಜೊತೆಗೆ ನಾವಿದ್ದೇವೆ. ನೀವು ಕಳೆದುಕೊಂಡಿರುವ ಜೀವಗಳನ್ನು ಮರಳಿ ತರಲು ಸಾಧ್ಯವಿಲ್ಲ, ಆದರೆ ಮುಂದಿನ ಬದುಕಿಗೆ ಆಸರೆಯಾಗಿ ನಿಲ್ಲುವ ಜವಾಬ್ದಾರಿ ನಮ್ಮದಾಗಿದೆ. ನಿಮ್ಮ ಬದುಕನ್ನು ಕಟ್ಟಿಕೊಳ್ಳಲು ಹಾಗೂ ಸರ್ಕಾರದಿಂದ ನಿಮಗೆ ಸಿಗಬೇಕಾದ ಹಕ್ಕು, ಸೂಕ್ತ ಪರಿಹಾರ ಮತ್ತು ಪುನರ್ವಸತಿಗಾಗಿ ನಡೆಯುವ ಪ್ರತಿ ಹೋರಾಟದಲ್ಲೂ ನಾನು ಜೊತೆ ನಿಲ್ಲುತ್ತೇನೆ ಎಂದು ಆಶ್ವಾಸನೆ ನೀಡಿದರು.

ಸುತ್ತ ಮುತ್ತ

ಉದ್ಯಾವರ ಎಸ್‌ಡಿಎಂ: ಯೋಗ ದಿನ

ಕಟಪಾಡಿ: ಉದ್ಯಾವರ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಉಡುಪಿಯ ಐ.ಕ್ಯೂ.ಎ.ಸಿ., ಸ್ವಸ್ಥವೃತ್ತ ಮತ್ತು ಯೋಗ ವಿಭಾಗ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಸಹಭಾಗಿತ್ವದಲ್ಲಿ ಅಂತಾರಾಷ್ಟ್ರೀಯ ಯೋಗದಿನಾಚರಣೆಯನ್ನು ಕಾಲೇಜಿನಲ್ಲಿ ಆಚರಿಸಲಾಯಿತು.ಕಾರ್ಯಕ್ರಮದಲ್ಲಿ ಹೂಡೆ ಬೀಚ್ವೆಲಿಂಗ್‌ಆರೋಗ್ಯಕೇಂದ್ರ ನಿರ್ದೇಶಕ ಡಾ. ಮಹಮ್ಮದ್ ರಫೀಕ್ ಮಾತನಾಡಿ, ಯೋಗ ಇಂದು ಬಹಳ ಜನಪ್ರಿಯತೆಯನ್ನು ಪಡೆಯುತ್ತಿದ್ದು, ಎಲ್ಲರ ದಿನಂಪ್ರತಿಯ ಹವ್ಯಾಸವಾಗಲಿ ಮತ್ತು ನಿತ್ಯಯೋಗಾಭ್ಯಾಸವು ಜೀವನಶೈಲಿ ಕಾಯಿಲೆಗಳನ್ನು ತಡೆಗಟ್ಟಲು ಸಹಕಾರಿಯಾಗಿದೆ ಎಂದು ಸಂಶೋಧನೆಗಳಿಂದ ತಿಳಿಯಲ್ಪಟ್ಟಿದೆ. ಸುಖಕರ ವೃದ್ಧಾಪ್ಯಕ್ಕೆ ಯೋಗವು ಮಹತ್ವದ್ದಾಗಿದೆ ಎಂದು ಹೇಳಿದರು.ಸಂಸ್ಥೆಯ ಪ್ರಾಂಶುಪಾಲರಾದ ಡಾ. ಮಮತಾ ಕೆ.ವಿ. ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಸ್ನಾತಕ ವಿದ್ಯಾರ್ಥಿಗಳಿಂದ ಯೋಗ ನೃತ್ಯರೂಪಕ ನಡೆಯಿತು.ಸ್ವಸ್ಥವೃತ್ತ ಮತ್ತು ಯೋಗ ವಿಭಾಗದ ಮುಖ್ಯಸ್ಥ ಡಾ.ವಿಜಯ್ ಬಿ. ನೆಗಳೂರು ಸ್ವಾಗತಿಸಿದರು. ಸ್ನಾತಕೋತ್ತರ ವಿದ್ಯಾರ್ಥಿಗಳಾದ ಡಾ.ಶ್ವೇತ ಮತ್ತು ಡಾ.ರಾಜರತ್ನಂ ಕಾರ್ಯಕ್ರಮವನ್ನು ನಿರೂಪಿಸಿದರು. ಡಾ.ಚೇತನಾ ವಂದಿಸಿದರು.

ಗುಣಮಟ್ಟದ ಜೀವನಕ್ಕೆ ಯೋಗ ಸಹಕಾರಿ

ಮಂಗಳೂರು: ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಎಸ್‌ಸಿಎಸ್ ಆಸ್ಪತ್ರೆಯ ಸಿಬ್ಬಂದಿಗಳಿಗೆ ಯೋಗರತ್ನ ಗೋಪಾಲಕೃಷ್ಣ ದೇಲಂಪಾಡಿಯವರಿಂದ ಯೋಗ ತರಬೇತಿಯನ್ನು ನೀಡಲಾಯಿತು.ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದ ಡಾ. ಜೀವರಾಜ್ ಸೊರಕೆಯವರು, ನಿರಂತರ ಯೋಗಾಭ್ಯಾಸವು ಉತ್ತಮ ಗುಣಮಟ್ಟದ ಜೀವನ ನಡೆಸಲು ಸಹಾಯ ಮಾಡುತ್ತದೆ ಮತ್ತು ಮಾನಸಿಕ ಆರೋಗ್ಯ ಹಾಗೂ ಹಲವಾರು ಸಣ್ಣಪುಟ್ಟ ಆರೋಗ್ಯ ಸಮಸ್ಯೆಗಳಿಂದ ಮುಕ್ತರಾಗಲು ನಿರಂತರ ಯೋಗ ಮಾಡುವಂತೆ ತಮ್ಮ ಆಸ್ಪತ್ರೆಯ ಸಿಬ್ಬಂದಿಗಳಿಗೆ ಕರೆ ಕೊಟ್ಟರು. ಕಾರ್ಯಕ್ರಮದಲ್ಲಿ ಯೋಗರತ್ನ ಗೋಪಾಲಕೃಷ್ಣ ದೇಲಂಪಾಡಿಯವರ ಶಿಷ್ಯಂದಿರಾದ ನೀನಾ ಪೈ, ಸುಶೀಲ ಕುಮಾರಿ ವಿ, ಭಾರತಿ ಎಸ್. ರಾವ್ ಮತ್ತು ಸುಮಾ ತರಬೇತಿಗೆ ಸಹಕರಿಸಿದರು. ಆಸ್ಪತ್ರೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಅನೀಸ್ ಕಾರ್ಯಕ್ರಮ ನಿರ್ವಹಿಸಿದರು.

ಫಲಾನುಭವಿ ವಾರ್ಷಿಕ ಯೋಜನೆ: ಫಾರಂ ಲಭ್ಯ

ಕಾಸರಗೋಡು: ಮಧೂರು ಗ್ರಾಮ ಪಂಚಾಯತ್ ನಲ್ಲಿನ ವಿವಿಧ ಫಲಾನುಭವಿ ವಾರ್ಷಿಕ ಯೋಜನೆಗಳ ಅರ್ಜಿ ಫಾರಂಗಳು ಗ್ರಾ.ಪಂ. ಕಚೇರಿ ಮತ್ತು ಕೃಷಿ ಕಚೇರಿಯಲ್ಲಿ ಲಭ್ಯವಿದೆ. ಫಾರಂಗಳನ್ನು ಭರ್ತಿ ಮಾಡಿ ಸಂಬಂಧಿತ ದಾಖಲೆಗಳೊಂದಿಗೆ ಗ್ರಾಮಸಭೆಯ ಮೊದಲು ವಾರ್ಡ್ ಸದಸ್ಯರಿಗೆ ಅಥವಾ ಗ್ರಾಮ ಪಂಚಾಯತ್ ಕಚೇರಿಗೆ ಸಲ್ಲಿಸಬೇಕು. ಅರ್ಜಿಗಳನ್ನು ಸಲ್ಲಿಸುವಾಗ ಪಡಿತರ ಚೀಟಿ, ಆಧಾರ್ ಕಾರ್ಡ್, ಹಸಿರು ಕ್ರಿಯಾ ಸೇನೆ ಬಳಕೆದಾರರ ಶುಲ್ಕ ರಶೀದಿ ಮತ್ತು ಮನೆ ತೆರಿಗೆ ರಶೀದಿಯ ಪ್ರತಿಗಳನ್ನು ಲಗತ್ತಿಸಬೇಕು. ಕೃಷಿ ಯೋಜನೆಗಳಲ್ಲಿಭೂ ತೆರಿಗೆ ರಶೀದಿಯ ಪ್ರತಿಯನ್ನು ಕೂಡಾ ಸಲ್ಲಿಸಬೇಕಾಗಿದೆ.

ಆರ್ಥಿಕ ಸಹಾಯ ವಿತರಣೆ ಆರಂಭ

ಕಾಸರಗೋಡು: 2017ರಲ್ಲಿ ನಡೆಸಲಾದ ಎಂಡೋಸಲ್ಫಾನ್ ವೈದ್ಯಕೀಯ ಶಿಬಿರದಲ್ಲಿ ಭಾಗವಹಿಸಿ ಪ್ರಾಥಮಿಕ ಪಟ್ಟಿಯಲ್ಲಿ ಸೇರಿಸಲ್ಪಟ್ಟು ಅಂತಿಮ ಪಟ್ಟಿಯಲ್ಲಿ ಸೇರಿಸದೆ ಪರಿಹಾರ ಪಡೆಯದವರಿಗೆ ತಲಾ 5 ಲಕ್ಷ ರೂ.ಗಳ ಆರ್ಥಿಕ ಸಹಾಯ ವಿತರಣೆಯನ್ನು ಪ್ರಾರಂಭಿಸಲಾಗಿದೆ. ಇಲ್ಲಿಯ ವರೆಗೆ ಅರ್ಜಿಗಳನ್ನು ಸಲ್ಲಿಸದವರು ಡಿಡಿಡಿ. landrevenue.kerala.gov.in ಎಂಬ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬೇಕಾಗಿದೆ. ಅಗತ್ಯವಿರುವ ದಾಖಲೆಗಳು, ಓ.ಪಿ.ಸಂಖ್ಯೆ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ಪ್ರತಿ, ಪಡಿತರ ಚೀಟಿ ಹಾಜರುಪಡಿಸಬೇಕು. ಹೆಚ್ಚಿನ ಮಾಹಿತಿಗಾಗಿ 04994 257330 ಸಂಪರ್ಕಿಸಬಹುದು.

ಸಂದರ್ಶನ ಮುಂದೂಡಿಕೆ

ಕಾಸರಗೋಡು: ಪರಪ್ಪ ಬುಡಕಟ್ಟು ಅಭಿವೃದ್ಧಿ ಕಚೇರಿಯ ಅಧೀನದಲ್ಲಿರುವ ಕೇಂದ್ರಗಳಿಗೆ ಮಾಹಿತಿ ಸಹಾಯಕರನ್ನು ನೇಮಿಸಲು ಜೂ.26ರಂದು ನಿಗದಿಯಾಗಿರುವ ಸಂದರ್ಶನವನ್ನು ಮುಂದೂಡಲಾಗಿದೆ. ಜುಲೈ 3ರಂದು ಬೆಳಿಗ್ಗೆ 10.30ಕ್ಕೆ ಸಂದರ್ಶನ ನಡೆಯಲಿದೆ.

ಪೊನ್ನಂಪೇಟೆ ತಾಲೂಕು ಗ್ಯಾರಂಟಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆ

ವಿದ್ಯಾರ್ಥಿಗಳಿಗಾಗಿ ಉದ್ಯೋಗ ಮೇಳ ನಡೆಸಿ

ಮಡಿಕೇರಿ: ಪೊನ್ನಂಪೇಟೆ ತಾಲೂಕು ಪಂಚಾಯತ್ ಸಾಮರ್ಥ್ಯ ಸೌಧದಲ್ಲಿ ಪೊನ್ನಂಪೇಟೆ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಪ್ರಗತಿ ಪರಿಶೀಲನಾ ಸಭೆ ತಾಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಪ್ರಶಾಂತ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು.

ಶಕ್ತಿ ಯೋಜನೆಯಿಂದ ಕೆಲಸ ಮಾಡುವ ಮಹಿಳೆಯರಿಗೆ ಹೆಚ್ಚು ಅನುಕೂಲವಾಗಿದ್ದು, ಗೋಣಿಕೊಪ್ಪದಿಂದ- ಮೈಸೂರು, ಬೆಂಗಳೂರು ಮಾರ್ಗವಾಗಿ ಚಲಿಸುವ ಬಸ್ಸುಗಳ ಸಂಖ್ಯೆಯನ್ನು ರಜಾದಿನಗಳಲ್ಲಿ ಹೆಚ್ಚುವರಿ ಮಾಡಬೇಕು. ರಜಾ ದಿನಗಳಲ್ಲಿ ಜನರು ಹೆಚ್ಚು ಪ್ರಯಾಣಿಸುತ್ತಾರೆ. ನೂಕು- ನುಗ್ಗಲುಗಳಂತಹ ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದು ಕೂಡಲೇ ಹೆಚ್ಚುವರಿ ಬಸ್ಸುಗಳನ್ನು ನಿಯೋಜಿಸಿ ಸಮಸ್ಯೆ ಬಗೆಹರಿಸಲು ಚರ್ಚಿಸಲಾಯಿತು.

ಯುವನಿಧಿ: ಪೊನ್ನಂಪೇಟೆ ತಾಲೂಕಿನಲ್ಲಿ ಡಿಪ್ಲೊಮಹಾಗೂಐ.ಟಿ.ಐ.ಕಾಲೇಜುಗಳಿದ್ದು,



ವಿದ್ಯಾರ್ಥಿಗಳನ್ನು ಹೆಚ್ಚು ನೋಂದಣಿ ಮಾಡಿಸಿ, ಇಲಾಖೆಯಿಂದ ಹೆಚ್ಚಿನ ಪ್ರಚಾರ ಮಾಡಬೇಕು. ವಿದ್ಯಾರ್ಥಿಗಳಿಗೆ ಯೋಜನೆಯ ಸದುಪಯೋಗವಾಗಬೇಕು. ಆದ್ದರಿಂದ ತಾಲೂಕು ವ್ಯಾಪ್ತಿಯಲ್ಲಿ ಉದ್ಯೋಗ ಮೇಳ ಕೈಗೊಂಡು ವಿದ್ಯಾರ್ಥಿಗಳಿಗೆ ಉದ್ಯೋಗ ದೊರಕಿಸಿ ಕೊಡುವಲ್ಲಿ ಸಹಕರಿಸಿ ಎಂದು ತಾಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಪ್ರಶಾಂತ್ ಅವರು ತಿಳಿಸಿದರು.

ಗೃಹಲಕ್ಷ್ಮಿ: ಮಾರ್ಚ್ ತಿಂಗಳ ಹಣ ಜಮೆಯಾಗದ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸಂಬಂಧಪಟ್ಟ ಅಧಿಕಾರಿ ಗಳು ಉತ್ತರಿಸಿ ಏಪ್ರಿಲ್ ತಿಂಗಳ ಹಣವು ಫಲಾನುಭವಿಗಳಖಾತೆಗೆಜಮೆಯಾಗಿದ್ದುಅದರಲ್ಲಿ ಪೂರ್ತಿಯಾಗಿ ಎಲ್ಲಾ ಫಲಾ ನುಭವಿಗಳಿಗೆ ಹಣ ಜಮೆಯಾಗಿಲ್ಲ, ಈ ಕುರಿತು ರಾಜ್ಯ ತಂಡದ ಗಮನಕ್ಕೆ ತರಲಾಗಿದ್ದು, ಕೆಲವು ತಾಂತ್ರಿಕ ಸಮಸ್ಯೆಗಳಿಂದ ಹಾಗೂ ಮರಣ ಹೊಂದಿದ ಫಲಾನುಭವಿಗಳಿಗೂ ಸಹ ಹಣ ಜಮೆಯಾಗುತ್ತಿರುವುದು ಕಂಡು ಬಂದಿದ್ದು ಮುಂದಿನ ದಿನಗಳಲ್ಲಿ ಸಮಸ್ಯೆ ಗಳನ್ನು ಬಗೆಹರಿಸಲಾಗುವುದು ಎಂದರು.

ಗೃಹಜ್ಯೋತಿ: ಈಗಾಗಲೇ ಶೇ.98 ರಷ್ಟು ಪ್ರಗತಿಯಾಗಿದ್ದು, ಹೊಸದಾಗಿ ಗೃಹ ಜ್ಯೋತಿಗೆ ಅರ್ಜಿ ಸಲ್ಲಿಸಲು ಹತ್ತಿರದ ಗ್ರಾಮ ಒನ್ ಸೆಂಟರ್'ಗೆ ಭೇಟಿ ನೀಡಲು ಸಭೆಯಲ್ಲಿ ತಿಳಿಸಲಾಯಿತು. ಮಳೆಗಾಲ ಪ್ರಾರಂಭವಾಗಿದ್ದು ತಾಲೂಕಿನ ಕೆಲವು ಕಡೆ ಇರುವ ಕಬ್ಬಿಣದ ಕಂಬಗಳನ್ನು ಬದಲಾಯಿಸಲು ಸೆಸ್ಕ್ ಅಧಿಕಾರಿಗಳಿಗೆ ಸೂಚಿಸಲಾಯಿತು.

ಯೋಜನೆಗಳ ಅನುಷ್ಠಾನ ಹಾಗೂ ಹಲವು ವಿಚಾರಗಳ ಬಗ್ಗೆ ಚರ್ಚಿಸ ಲಾಯಿತು. ವೀರಾಜಪೇಟೆ ಸಹಾಯಕ ಲೆಕ್ಕಾಧಿಕಾರಿ ಗಣೇಶ್ ಕುಮಾರ್, ಗ್ಯಾರಂಟಿ ಯೋಜನೆ ಸದಸ್ಯರು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

> **ಅನ್ನಭಾಗ್ಯ**
> ನ್ಯಾಯಬೆಲೆ ಅಂಗಂಡಿಗಳಿಗೆ ಅಕ್ಕಿಯನ್ನು ತಿಂಗಳಲ್ಲಿ ಬೇಗ ಕಳುಹಿಸಿ 15 ರಿಂದ 20 ದಿನಗಳ ಒಳಗಾಗಿ ಅಕ್ಕಿ ಬರುವ ರೀತಿಯಲ್ಲಿ ನೋಡಿ ಕೊಳ್ಳಬೇಕು. ನ್ಯಾಯ ಬೆಲೆ ಅಂಗಡಿಗಳಲ್ಲಿ ಹೆಚ್ಚಿನ ಹಣ ಪಡೆಯುತ್ತಿದ್ದಾರೆ ಎಂಬ ದೂರು ಕೇಳಿಬ ರುತ್ತಿದ್ದು, ಈ ಸಂಬಂಧ ಗಮನಹರಿಸಿ ಪ್ರಕರಣಗಳು ಆಗದಂತೆ ತಡೆಗಟ್ಟಬೇಕೆಂದು ಅಧ್ಯಕ್ಷರು ಸೂಚಿಸಿದರು.

ಮನಸ್ಸಿನ ಮಲಿನತೆ ನಿರಂತರ ಯೋಗದಿಂದ ದೂರ: ಸಹನಾ



ಪುತ್ತೂರು: ಮಾತಿನ ದೋಷವನ್ನು ವ್ಯಾಕರಣದ ಮೂಲಕ, ದೇಹದ ದೋಷ ವನ್ನು ಆಯುರ್ವೇದದ ಮೂಲಕ ಹಾಗೂ ಮನಸ್ಸಿನ ಮಲಿನತೆಯನ್ನು ನಿರಂತರ ಯೋಗದ ಮೂಲಕ ಸರಿಪಡಿಸಿಕೊಳ್ಳಬಹುದು ಎಂದು ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆಯ ಶಿಕ್ಷಕಿ ಸಹನಾ ಹೇಳಿದರು.

ಅವರು ಸಂಸ್ಥೆಯಲ್ಲಿ ಆಯೋಜಿಸಲಾದ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದರು. ಯಾವುದೇ ಕಾರ್ಯವನ್ನು ಶ್ರದ್ಧೆ, ನಿಷ್ಠೆ ಹಾಗೂ ಏಕಾಗ್ರತೆಯಿಂದ ಮಾಡಿದಾಗ ಅದು ಯೋಗವಾಗುತ್ತದೆ ಎಂದ ಅವರು, ಜ್ಞಾನಯೋಗ, ಭಕ್ತಿಯೋಗ ಹಾಗೂ ಕರ್ಮಯೋಗಗಳ ಮೂಲಕ ಜೀವನದಲ್ಲಿ ಸಮತೋಲನ ಸಾಧಿಸಲು ಸಾಧ್ಯ ಎಂದರು.

ವಿದ್ಯಾಲಯದ ಪ್ರಾಂಶುಪಾಲೆ ಮಾಲತಿ ಡಿ. ಮಾತನಾಡಿ, ಯೋಗವು ದೇಹವನ್ನು ಮಾತ್ರವಲ್ಲದೆ ಮನಸ್ಸು ಮತ್ತು ಆತ್ಮವನ್ನೂ ಬಲಪಡಿಸುತ್ತದೆ. ಸೂರ್ಯನಮಸ್ಕಾರ ಸೇರಿದಂತೆ ವಿವಿಧ ಯೋಗಾಭ್ಯಾಸಗಳು ದೇಹದ ಸಾಮರ್ಥ್ಯವನ್ನು ವೃದ್ಧಿಸುವುದರ ಜೊತೆಗೆ ವ್ಯಕ್ತಿಯ ಮಿತಿಗಳನ್ನು ಮೀರುವ ಶಕ್ತಿಯನ್ನು ನೀಡುತ್ತವೆ ಎಂದರು.

ವಿದ್ಯಾರ್ಥಿಗಳು ಸೂರ್ಯ ನಮಸ್ಕಾರ ಹಾಗೂ ವಿವಿಧ ಯೋಗ ಭಂಗಿಗಳನ್ನು ಪ್ರದರ್ಶಿಸಿದರು. ವಿದ್ಯಾರ್ಥಿಗಳು ಯೋಗ ಗೀತೆಯನ್ನು ಹಾಡಿದರು. ವಿದ್ಯಾರ್ಥಿನಿಯರಾದ ಮೆಹೆಕ್ ಪ್ರಸ್ತಾವಿಸಿದರು. ಶಾರ್ವಿ ಕಾರ್ಯಕ್ರಮ ನಿರ್ವಹಿಸಿದರು.

ನಾಲಂದ ಕಾಲೇಜಿನಲ್ಲಿ ಯೋಗ ದಿನಾಚರಣೆ



ಪೆರ್ಲ: ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಪೆರ್ಲದ ನಾಲಂದ ಕಾಲೇಜ್ ಆಫ್ ಆರ್ಟ್ಸ್ ಆ್ಯಂಡ್ ಸಯನ್ಸ್ ಸಂಸ್ಥೆಯಲ್ಲಿ ಎರಡು ದಿನಗಳ ವಿಶೇಷ ಯೋಗ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಕಾಲೇಜಿನ ಪ್ರಾಂಶುಪಾಲ ಡಾ.ಮೋಹನ ಕುಂಟಾರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಯೋಗ ಗುರು ಪುಂಡರೀಕಾಕ್ಷ ಬೆಳ್ಳೂರು ಭಾಗವಹಿಸಿ ವಿವಿಧ ಯೋಗಾಸನಗಳು, ಪ್ರಾಣಾಯಾಮ ಹಾಗೂ ಧ್ಯಾನದ ಮಹತ್ವವನ್ನು ವಿವರಿಸಿದರು.

ಬೋಧಕ ಹಾಗೂ ಬೋಧ ಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದರು. ಯೋಗಾಭ್ಯಾಸದ ಮೂಲಕ ದೈಹಿಕ ಕ್ಷಮತೆ, ಏಕಾಗ್ರತೆ ಹಾಗೂ ಮಾನಸಿಕ ಶಾಂತಿ ಯನ್ನು ವೃದ್ಧಿಸಿಕೊಳ್ಳುವ ಬಗ್ಗೆ ಅರಿವು ಮೂಡಿಸಲಾಯಿತು.

ಮೂಡ್ಲಕಟ್ಟೆ ನರ್ಸಿಂಗ್ ಕಾಲೇಜಿನಲ್ಲಿ ಯೋಗ ದಿನ



ಕುಂದಾಪುರ: ಮೂಡ್ಲಕಟ್ಟೆಯ ನರ್ಸಿಂಗ್ ಕಾಲೇಜು ಇವರ ಆಶ್ರಯದಲ್ಲಿ ಕುಂದಾಪುರದ ಸರ್ಕಾರಿ ತಾಲೂಕು ಆಯುಷ್ ಆಸ್ಪತ್ರೆಯ ಸಹಯೋಗದೊಂದಿಗೆ ಕಾಲೇಜು ಸಭಾಂಗಣದಲ್ಲಿ ಯೋಗ ದಿನಾಚರಣೆ ಕಾರ್ಯಕ್ರಮ ನಡೆಯಿತು.

ಆಯುಷ್ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಶಿಲ್ಪಾ ಕೆ. ಅವರು ಆರೋಗ್ಯಕರ ಜೀವನ ಶೈಲಿಯನ್ನು ಮುನ್ನಡೆಸುವಲ್ಲಿ ಯೋಗದ ಮಹತ್ವವನ್ನು ತಿಳಿಸಿದರು. ಪ್ರಾಂಶುಪಾಲೆ ಜೆನ್ನಿಫರ್ ಫ್ರೀಡಾ ಮೆನೆಜಸ್, ಉಪ ಪ್ರಾಂಶುಪಾಲೆ ರೂಪಶ್ರೀ ಕೆ. ಎಸ್., ಬೋಧಕ, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಹಂಗಳೂರಿನ ಬಾಲಕಿಯರ ನಿಲಯದಲ್ಲಿ ಯೋಗ ದಿನಾಚರಣೆ



ಕುಂದಾಪುರ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕುಂದಾಪುರ, ಆಯುಷ್ ಇಲಾಖೆ ಕುಂದಾಪುರ, ಲಯನ್ಸ್ ಕ್ಲಬ್ ಕುಂದಾಪುರ ಸಹಾಭಾಗಿತ್ವದಲ್ಲಿ ಮೆಟ್ರಿಕ್ ನಂತರದ ಹಂಗಳೂರಿನ ಬಾಲಕಿಯರ ನಿಲಯದಲ್ಲಿ ಯೋಗ ದಿನಾಚರಣೆಯ ಕಾರ್ಯಕ್ರಮ ನಡೆಯಿತು.

ಮುಖ್ಯ ಅತಿಥಿ ಕುಂದಾಪುರ ತಾಲೂಕು ಆಯುಷ್ ವೈದ್ಯಾಧಿಕಾರಿ ಶಿಲ್ಪಾ ಅವರು ವಿದ್ಯಾರ್ಥಿಗಳಿಗೆ ಯೋಗ ಹಾಗೂ ಯೋಗದ ಮಹತ್ವವನ್ನು ವಿವರಿಸಿದರು. ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಆಶಾದೇವಿ ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಕುಂದಾಪುರ ಲಯನ್ಸ್ ಕ್ಲಬ್ ಅಧ್ಯಕ್ಷೆ ಕಲ್ಪನಾ ಭಾಸ್ಕರ್, ನಿಲಯದ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು. ವಿದ್ಯಾರ್ಥಿ ಪ್ರತಿನಿಧಿ ನಿಸರ್ಗ ಕಾರ್ಯಕ್ರಮ ನಿರೂಪಿಸಿದರು.



ಬದಿಯಡ್ಕದ ಎಡನೀರು ಸಮೀಪದ ಕನ್ನಾಡಿಪಾರೆ ಶ್ರೀ ಧರ್ಮಶಾಸ್ತಾ ಭಜನಾ ಮಂದಿರದಲ್ಲಿ ವಿಶ್ವಯೋಗ ದಿನವನ್ನು ಆಚರಿಸಲಾಯಿತು. ಶ್ರೀ ಮಂದಿರದ ಭಕ್ತರು, ಸ್ಥಳೀಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.ಯೋಗ ಶಿಕ್ಷಕ ವಿನಯಪಾಲ್ ಯೋಗದ ಬಗ್ಗೆ ವಿವಿಧ ವಿಚಾರಗಳನ್ನು ತಿಳಿಸಿಕೊಟ್ಟರು. ಶಾಂತಿ ಮಂತ್ರದೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು.

ಕಯ್ಯಾರಿನಲ್ಲಿ ವಿಶ್ವ ಯೋಗ ದಿನಾಚರಣೆ



ಉಪ್ಪಳ: ದುರ್ಗಾ ಶಕ್ತಿ ಕುಣಿತ ಭಜನಾ ತಂಡ ಪರಂಬಳ ಕಯ್ಯಾರು ಇದರ ವತಿಯಿಂದ ವಿಶ್ವಯೋಗ ದಿನವನ್ನು ಪರಂಬಳ ಕಯ್ಯಾರಿನ ಶ್ರೀ ಭಾರತ ಮಾತಾ ಸೇವಾ ಟ್ರಸ್ಟ್‌ನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಯಿತು.

ಯೋಗ ತರಬೇತಿಯನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥೇಶ್ವರ ಭಜನಾ ಪರಿಷತ್‌ನ ಮಂಜೇಶ್ವರ ತಾಲೂಕು ಪ್ರಧಾನ ಕಾರ್ಯದರ್ಶಿ ರಾಮಕೃಷ್ಣ ಸಂತಡ್ಕ ನೀಡಿದರು. ಸಾಮಾಜಿಕ ಕಾರ್ಯಕರ್ತ ಸುರೇಶ್ ಶೆಟ್ಟಿ ಹೇರೂರು ಉದ್ಘಾಟಿಸಿದರು. ಯೋಗ ಶಿಕ್ಷಕಿ ತೇಜಶ್ರೀ ಸಂತಡ್ಕ ಯೋಗ ತರಬೇತಿ ನಡೆಸಿಕೊಟ್ಟರು. ಸಮಾರೋಪದಲ್ಲಿ ರಾಮಕೃಷ್ಣ ಸಂತಡ್ಕ ಮತ್ತು ತೇಜಶ್ರೀ ಸಂತಡ್ಕ ಅವರನ್ನು ಅಭಿನಂದಿಸಲಾಯಿತು. ದುರ್ಗಾ ಶಕ್ತಿ ಕುಣಿತ ಭಜನಾ ತಂಡದ ಪ್ರಧಾನ ಸಂಚಾಲಕ ಸತೀಶ್ ಕುಮಾರ್ ಕಾವು ಸ್ವಾಗತಿಸಿ, ಭಜನಾ ಸಂಚಾಲಕ ಮಂಜುನಾಥ ಪರಂಬಳ ವಂದಿಸಿದರು. ಭಜನಾ ಸಮಿತಿ ಸಂಚಾಲಕ ಸಂತೋಷ್ ಪೆರಿಯಪ್ಪಾಡಿ, ಸಂಚಾಲಕಿಯರಾದ ಜಯಲಕ್ಷ್ಮಿ ಪರಂಬಳ, ಹೇಮಲತಾ ಬೋಳಂಪಾಡಿ, ಜಯಲಕ್ಷ್ಮಿ ಹೆಬ್ಬಾರಮೂಲೆ, ಸುಜಾತ ಕಯ್ಯಾರು ಉಪಸ್ಥಿತರಿದ್ದರು.



ಹಟ್ಟಿಯಂಗಡಿಯ ಶ್ರೀ ಸಿದ್ಧಿವಿನಾಯಕ ವಸತಿ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನ ಕಾರ್ಯಕ್ರಮ ನಡೆಯಿತು. ಶಾಲೆಯ ಶೈಕ್ಷಣಿಕ ಸಲಹೆಗಾರ ಸುಜಾತಾ ಸದಾರಾಮ್, ಪ್ರಾ.ಶಾಲಾ ವಿಭಾಗದ ಮುಖ್ಯೋಪಾಧ್ಯಾಯಿನಿ ಹೇಮಾಮಾಲಿನಿ ಎಸ್., ಪ್ರಾ. ಶಾಲಾ ವಿಭಾಗ ಸಂಯೋಜಕಿ ದೀಪಿಕಾ ದೇವಾಡಿಗ, ಪ್ರಾ.ಶಾಲಾ ವಿಭಾಗ ಸಂಯೋಜಕಿ ಶ್ರುತಿ, ಸಹ ಶಿಕ್ಷಕಿ ಜ್ಯೋತಿ ಶೆಟ್ಟಿ, ವಿದ್ಯಾರ್ಥಿಗಳಾದ ಪ್ರಮೀಕ್ಷಾ, ಗಗನ್,ಚಿರಾಯು ಮೊದಲಾದವರು ಭಾಗವಹಿಸಿದರು.



ಬದಿಯಡ್ಕ ಗ್ರಾ. ಪಂ. ಆಯುರ್ವೇದ ಆಸ್ಪತ್ರೆಯಲ್ಲಿ ವಿಶ್ವ ಯೋಗ ದಿನವನ್ನು ಆಚರಿಸಲಾಯಿತು. ಬದಿಯಡ್ಕ ಗ್ರಾ.ಪಂ. ಅಧ್ಯಕ್ಷ ಶಂಕರ ಡಿ.,ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಅವಿನಾಶ್ ರೈ ವಿ., ಆರೋಗ್ಯ ಇಲಾಖೆಯ ಅಧಿಕೃತರು ಪಾಲ್ಗೊಂಡಿದ್ದರು.



ವಿಟ್ಲದ ಅಳಿಕೆ ಶ್ರೀ ಸತ್ಯಸಾಯಿ ಲೋಕ ಸೇವಾ ಪದವಿ ಪೂರ್ವ ಕಾಲೇಜಿನ ಎನ್ನೆಸ್ಸೆಸ್ ಘಟಕದ ವತಿಯಿಂದ ಯೋಗ ದಿನಾಚರಣೆ ನಡೆಯಿತು. ಕಾಲೇಜಿನ ಪ್ರಾಂಶುಪಾಲ ವೆಂಕಟಕೃಷ್ಣ ಶರ್ಮ, ಯೋಗ ತರಬೇತುದಾರ ಆನಂದ ಶೆಟ್ಟಿ, ಎನ್ನೆಸ್ಸೆಸ್ ಕಾರ್ಯಕ್ರಮಾಧಿಕಾರಿ ಉದಯ ನಾಯ್ಕ್, ವಿದ್ಯಾರ್ಥಿಗಳು ಭಾಗವಹಿಸಿದರು.



ಗುರುಪುರದ ಬಾಮಿ ಆಂಗ್ಲ ಮಾಧ್ಯಮ ಶಾಲೆ ತೆಲಿಕುಳಿಪಾಡಿಯಲ್ಲಿ ವಿಶ್ವ ಯೋಗ ದಿನಾಚರಣೆ ನಡೆಯಿತು. ಯೋಗಪಟು ಲಕ್ಷ್ಮಣ ಆಕಾಶೆ ಕಾರ್ಕಳ, ಸಂಸ್ಥೆಯ ಸಂಚಾಲಕ ರಿಯಾಜ್, ಕಾರ್ಯದರ್ಶಿ ಲತೀಫ್, ವ್ಯವಸ್ಥಾಪಕ ಅಹಮ್ಮದ್ ಹುಸೈನ್, ಶೈಕ್ಷಣಿಕ ಸಂಯೋಜಕ ಅಬ್ದುಲ್ ರೆಹಮಾನ್ ಅಹಮ್ಮದ್,ಮುಖ್ಯ ಶಿಕ್ಷಕ ಎ. ಎಚ್. ನಾಸಿರ್, ಶಿಕ್ಷಕ ಮೊಹಮ್ಮದ್ ಕಲಂದರ್ ಹಾಗೂ ಶಾಲೆಯ ಶಿಕ್ಷಕ ಶಿಕ್ಷಕೇತರ ವೃಂದದವರು, ವಿದ್ಯಾರ್ಥಿಗಳು ಯೋಗಾಭ್ಯಾಸದಲ್ಲಿ ಪಾಲ್ಗೊಂಡಿದ್ದರು.



ಕುಂದಾಪುರದ ಹೋಲಿ ರೋಜರಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯ ಶಿಕ್ಷಕ ರೊಲ್ವಿನ್ ಫೆರ್ನಾಂಡಿಸ್, ಯೋಗ ಶಿಕ್ಷಕ ಕೆ. ವಿವೇಕ್ ಪೈ, ಶಾಲಾ ದೈಹಿಕ ಶಿಕ್ಷಣ, ಚಿದಾನಂದ ಹಾಗೂ ಅಧ್ಯಾಪಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಬದಿಯಡ್ಕ ಶ್ರೀ ಭಾರತೀ ವಿದ್ಯಾಪೀಠದಲ್ಲಿ ಯೋಗ ದಿನವನ್ನು ಅತ್ಯಂತ ಸಡಗರ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು. ಶಾಲೆಯ 1ನೇ ತರಗತಿಯಿಂದ 10ನೇ ತರಗತಿಯ ವರೆಗಿನ ಎಲ್ಲಾ ವಿದ್ಯಾರ್ಥಿಗಳು ಒಟ್ಟಾಗಿ ವಿವಿಧ ಯೋಗಾಸನಗಳು ಮತ್ತು ಪ್ರಾಣಾಯಾಮಗಳನ್ನು ಅತ್ಯಂತ ವ್ಯವಸ್ಥಿತವಾಗಿ ಪ್ರದರ್ಶಿಸಿದರು.



ಮೀಯಪದವು ಶ್ರೀ ವಿದ್ಯಾವರ್ಧಕ ಪ್ರೌಢಶಾಲೆಯಲ್ಲಿ ಯೋಗ ದಿನದ ಪ್ರಯುಕ್ತ ಯೋಗ ತರಬೇತಿ ನೀಡಲಾಯಿತು. ಶಾಲಾ ಪ್ರಬಂಧಕ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯ ಶಿಕ್ಷಕಿ ಮೃದುಲಾ, ಮೀಂಜ ಸರಕಾರಿ ಹೋಮಿಯೋ ಡಿಸ್ಪೆನ್ಸರಿಯ ತರಬೇತುದಾರೆ ಸಜಿತಾ, ಕನ್ನಡ ಅಧ್ಯಾಪಕ ರಾಜಾರಾಮ, ಜೀವಶಾಸ್ತ್ರ ಅಧ್ಯಾಪಕ ಬ್ರಿಜೇಶ್, ಸಂಸ್ಕೃತ ಅಧ್ಯಾಪಕ ಡಾ.ವಿಘ್ನೇಶ ಶರ್ಮ, ಶಿಕ್ಷಕ ವರ್ಗ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ತೊಕ್ಕೊಟ್ಟು ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಯೋಗ ದಿನಾಚರಣೆ

ಯೋಗ ಜೀವನದ ಅವಿಭಾಜ್ಯ ಅಂಗವಾಗಬೇಕು

ಉಳ್ಳಾಲ: ಯೋಗ ಎನ್ನುವುದು ಭಾರತದಲ್ಲಿಯೇ ಹುಟ್ಟಿರುವಂತದ್ದು. ಯೋಗಾಭ್ಯಾಸಕ್ಕೆ ದಿನಾಚರಣೆ ಬೇಕಿಲ್ಲ, ಅದನ್ನು ಒಂದು ದಿನದ ಆಚರಣೆಯನ್ನಾಗಿ ಮಾಡದೆ ನಮ್ಮ ದಿನನಿತ್ಯದ ಜೀವನದಲ್ಲಿ ಎಲ್ಲಾ ಚಟು ವಟಿಕೆಯಲ್ಲೂ ಜೋಡಿಸಿಕೊಳ್ಳೋಣ ಎಂದು ಯೋಗ ಶಿಕ್ಷಕಿ ಮೇಘಶ್ರೀ ಇವರು ಅಭಿಪ್ರಾಯಪಟ್ಟರು.

ತೊಕ್ಕೊಟ್ಟು ಚೆಂಬುಗುಡ್ಡೆಯ ಮಂಗಳೂರು ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಭಾನುವಾರ ನಡೆದ ಹನ್ನೆರಡನೇ ಯೋಗ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ದೈಹಿಕ, ಮಾನಸಿಕ, ಆಧ್ಯಾತ್ಮಿಕ ಸ್ಥಿತಿಯನ್ನು ಸರಿದೂಗಿಸುವ ಕೆಲಸವನ್ನು ಯೋಗವು ಮಾಡುತ್ತದೆ. ಇಂದು ಕೆಲವು ಶಾಲೆಗಳಲ್ಲಿ ಪಠ್ಯದ ಜೊತೆಗೆ ಯೋಗವನ್ನು ಒಂದು ಪಠ್ಯ ವಿಷಯವನ್ನಾಗಿ ಬೋಧಿಸಲಾಗುತ್ತದೆ ಆದರ ಸದುಪಯೋಗವನ್ನು ನಾವೆಲ್ಲರೂ ಪಡೆದುಕೊಳ್ಳಬೇಕು ಎಂದರು.



ಡಾ. ಅರುಣ್ ಉಳ್ಳಾಲ್ ಹನ್ನೆರಡನೇ ಯೋಗ ದಿನಾಚರಣೆಯ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ವಿದ್ಯಾರ್ಥಿ ಆತೀಕ್ಷ್ ಯೋಗ ದಿನದ ಮಹತ್ವವನ್ನು ತಿಳಿಸಿದರು. ವಿದ್ಯಾರ್ಥಿ ಸಮಿತ್ ಕೃಷ್ಣ ಸ್ವಾಗತಿಸಿ, ಕುಮಾರಿ ತನ್ವಿ ಧನ್ಯವಾದವಿತ್ತರು. ಕುಮಾರಿ ಖುಷಿ ಕಾರ್ಯಕ್ರಮ ನಿರೂಪಿಸಿದರು.

> **ವಿದ್ಯಾರ್ಥಿಗಳಿಂದ ವ್ಯಾಯಾಮ**
> ವಿದ್ಯಾರ್ಥಿಗಳಿಂದ ಕೆಲವು ಸೂಕ್ಷ್ಮ ವ್ಯಾಯಾಮಗಳನ್ನು ಯೋಗದ ಕೆಲವು ಆಸನಗಳನ್ನು, ಸೂರ್ಯ ನಮಸ್ಕಾರವನ್ನು ಮಾಡಿಸಿದರು. ನಿತ್ಯ ಪ್ರಾರ್ಥನೆಯ ನಂತರ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಸಂಸ್ಥೆಯ ಯೋಗ ಶಿಕ್ಷಕಿ ಕವನ ಅವರು ಯೋಗ ಮಂತ್ರವನ್ನು ಉಚ್ಚರಿಸಿದರು.

ಕುವೈಟ್‌ನ ಭಾರತೀಯ ರಾಯಭಾರ ಕಚೇರಿಯಿಂದ ಯೋಗ ದಿನಾಚರಣೆ

2200ಕ್ಕೂ ಅಧಿಕ ಮಂದಿಯಿಂದ ಸಾಮೂಹಿಕ ಯೋಗಾಭ್ಯಾಸ

ಕುವೈಟ್: ಕುವೈಟ್‌ನ ಭಾರತೀಯ ರಾಯಭಾರ ಕಚೇರಿಯು ಜೂ.20ರಂದು ಬೊಲೆವಾರ್ಡ್ ಕ್ರಿಕೆಟ್ ಕ್ರೀಡಾಂಗಣದಲ್ಲಿ 'ಆರೋಗ್ಯಕರ ವಯಸ್ಸಿಗೆ ಯೋಗ' ಎಂಬ ಘೋಷಣೆಯಡಿ 12ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಿತು.

ಜೂ.19ರಿಂದ 21ರವರೆಗೆ ನಡೆದ 3 ದಿನಗಳ ಯೋಗ ಉತ್ಸವದ ಅಂಗವಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ರಾಯಭಾರ ಕಚೇರಿಯ ಕೋರಿಕೆಯ ಮೇರೆಗೆ ಭಾರತೀಯ ಪ್ರವಾಸಿ ಪರಿಷತ್(ಬಿಪಿಪಿ) ಕುವೈಟ್‌ನ 100 ಸದಸ್ಯರು ಸ್ವಯಂಸೇವಕರಾಗಿ ಪಾಲ್ಗೊಂಡರು.

ಕುವೈಟ್ ಯೋಗ ಸಮಿತಿಯ ಅಧ್ಯಕ್ಷೆ ಹಾಗೂ ಪದ್ಮಶ್ರೀ ಪುರಸ್ಕೃತೆ ಎಚ್.ಇ. ಶೇಖ ಶೇಖ ಅಲ್ ಸಬಾ ಮತ್ತು ಸೌದಿ ಅರೇಬಿಯಾದ ಅರಬ್ ಯೋಗ ಫೌಂಡೇಶನ್ ಸಂಸ್ಥಾಪಕಿ ಹಾಗೂ ಏಷ್ಯನ್ ಯೋಗಾಸನ ಕ್ರೀಡಾ ಒಕ್ಕೂಟದ ಅಧ್ಯಕ್ಷೆ ಪದ್ಮಶ್ರೀ ಪುರಸ್ಕೃತೆ ನೌಫ್ ಮರುವಾಯಿ ಮುಖ್ಯ ಅತಿಥಿಗಳಾಗಿದ್ದರು. ಕಾರ್ಯಕ್ರಮದಲ್ಲಿ ರಾಜತಾಂತ್ರಿಕರು, ಸರ್ಕಾರಿ ಅಧಿಕಾರಿ ಗಳು, ಸಮುದಾಯ ಮುಖಂಡರು, ವಿದ್ಯಾರ್ಥಿಗಳು ಹಾಗೂ ಯೋಗಾಸಕ್ತರು ಸೇರಿದಂತೆ 2200ಕ್ಕೂ ಹೆಚ್ಚು ಮಂದಿ ಸಾಮೂಹಿಕ ಯೋಗಾಭ್ಯಾಸದಲ್ಲಿ ಭಾಗವಹಿಸಿದರು. 'ಯೋಗ ಇನ್ ಫೋಕಸ್' ಛಾಯಾಚಿತ್ರ ಸ್ಪರ್ಧೆಯ ಚಿತ್ರಕಲಾ ಪ್ರದರ್ಶನ ಮತ್ತು ಯೋಗ-ವಿಷಯದ ವರ್ಣಚಿತ್ರಗಳ ಪ್ರದರ್ಶನವನ್ನು ಆಯೋಜಿಸಲಾಗಿತ್ತು.



ಸುತ್ತಮುತ್ತ

ಇಂದು ತುರ್ತು ಪರಿಸ್ಥಿತಿ ವಿರೋಧಿ ಚಳವಳಿಯ 51ನೇ ವಾರ್ಷಿಕೋತ್ಸವ

ಕಾಸರಗೋಡು: ತುರ್ತು ಪರಿಸ್ಥಿತಿ ವಿರೋಧಿ ಆಂದೋಲನದ 51ನೇ ವಾರ್ಷಿಕೋತ್ಸವದ ಅಂಗವಾಗಿ ಬಿಜೆಪಿ ಜಿಲ್ಲಾ ಘಟಕದ ಆಶ್ರಯದಲ್ಲಿ ಜ.26ರಂದು ಬೆಳಗ್ಗೆ 10.30ಕ್ಕೆ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಡಾ.ಶ್ಯಾಮ್‌ಪ್ರಸಾದ್ ಮುಖರ್ಜಿ ಮಂದಿರದಲ್ಲಿ ಬಿಜೆಪಿ ರಾಜ್ಯ ವಕ್ತಾರ ಟಿ.ಪಿ.ಜಯಚಂದ್ರ ಉದ್ಘಾಟಿಸುವರು. ಸಮಾರಂಭದಲ್ಲಿ ತುರ್ತು ಹೋರಾಟಗಾರರನ್ನು ಸನ್ಮಾನಿಸಲಾಗುವುದು.

ಜೂ.28ರಂದು ಉಚಿತ ಆಯುರ್ವೇದ ವೈದ್ಯಕೀಯ ಶಿಬಿರ

ಕಾಸರಗೋಡು: ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನದ ಶ್ರೀ ಕೇಶವಾನಂದ ಭಾರತೀ ಸ್ಮೃತಿ ಮಂದಿರದಲ್ಲಿ ಶ್ರೀ ಸತ್ಯಸಾಯಿ ಸೇವಾ ಸಮಿತಿ ಪೆರ್ಲ ಇದರ ಪ್ರಾಯೋಜಕತ್ವದಲ್ಲಿ ಜೂ.28ರಂದು ಅಪರಾಹ್ನ 2.30ರಿಂದ ಉಚಿತ ಆಯುರ್ವೇದ ವೈದ್ಯಕೀಯ ಶಿಬಿರ ನಡೆಯಲಿದೆ.
ತಜ್ಞ ವೈದ್ಯರಾದ ಡಾ.ಕೃಷ್ಣಮೋಹನ ಬಿ.ಆರ್. ಚಿನ್ಮಯ ಕ್ಲಿನಿಕ್ ಪೆರ್ಲ ಹಾಗೂ ಡಾ.ಸತ್ಯನಾರಾಯಣ ಬಿ. ಪ್ರಶಾಂತಿ ಕ್ಲಿನಿಕ್ ಬಾಯಾರುಪದವು ಇವರು ಶಿಬಿರದ ವೈದ್ಯರಾಗಿ ಸಹಕರಿಸಲಿದ್ದಾರೆ. ಎಲ್ಲಾ ರೋಗದ ತಪಾಸಣೆಯ ಜೊತೆಗೆ ರೋಗಿಗಳಿಗೆ ಔಷಧಿಯನ್ನು ಉಚಿತವಾಗಿ ನೀಡಲಾಗುವುದು. ಗೋಪಾಲಕೃಷ್ಣ ಫಾರ್ಮಸಿ ಕುಂಬಳೆ, ಡಾ.ರವಿನಾರಾಯಣ, ಸಂಜೀವಿನಿ ಕ್ಲಿನಿಕ್ ನೆಹರೂ ನಗರ ಪುತ್ತೂರು, ಶ್ರೀ ಸದ್ಗುರು ಡಿಸ್ಟ್ರಿಬ್ಯೂಟರ್ಸ್ ಸುಮತಿ ಕಾಂಪ್ಲೆಕ್ಸ್ ಕಬಕ, ಸಿ.ಕೇಮ್.ಫಾರ್ಮಸಿ ಬೆಂಗಳೂರು ಉಚಿತ ಆರೋಗ್ಯ ಶಿಬಿರಕ್ಕೆ ಸಹಕರಿಸಲಿದ್ದಾರೆ. ಈ ಶಿಬಿರದ ಪ್ರಯೋಜನವನ್ನು ನಾಗರಿಕರು ಪಡೆದುಕೊಳ್ಳಬೇಕಾಗಿ ಸಿರಿಬಾಗಿಲು ಪ್ರತಿಷ್ಠಾನ ಪ್ರಕಟಣೆಯಲ್ಲಿ ತಿಳಿಸಿದೆ.

ಬಂಟರ ಸಂಘ: ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಕಾಸರಗೋಡು: ಜಿಲ್ಲಾ ಬಂಟರ ಸಂಘದ ವತಿಯಿಂದ ಪದವಿ ಪೂರ್ವ ವಿದ್ಯಾಭ್ಯಾಸಕ್ಕೆ ನೀಡಲಾಗುವ ವಿದ್ಯಾರ್ಥಿ ವೇತನಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕಳೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲೂ ಬಿ ಗ್ರೇಡ್ ಮತ್ತು ಅದಕ್ಕಿಂತ ಮೇಲಿನ ಶ್ರೇಣಿಯಲ್ಲಿ ತೇರ್ಗಡೆಗೊಂಡವರು ಮಾತ್ರ ವಿದ್ಯಾರ್ಥಿ ವೇತನಕ್ಕೆ ಅರ್ಹರಾಗಿರುತ್ತಾರೆ. ಈ ವರ್ಷ ಪದವಿ ಪೂರ್ವ ಶಿಕ್ಷಣ ಮುಗಿಸಿರುವ ವಿದ್ಯಾರ್ಥಿಗಳು ಮೊದಲ ವರ್ಷದ ಪರೀಕ್ಷೆಯಲ್ಲಿ ಸರಾಸರಿ ಶೇಕಡಾ 60ರಷ್ಟು ಅಂಕ ಗಳಿಸಿ ಉತ್ತೀರ್ಣರಾಗಿದ್ದರೆ ದ್ವಿತೀಯ ವರ್ಷದ ಪದವಿ ಪೂರ್ವ ವಿದ್ಯಾರ್ಥಿ ವೇತನಕ್ಕೆ ಅವರೂ ಕೂಡಾ ಅರ್ಹರಾಗಿರುತ್ತಾರೆ. ನಿಗದಿತ ನಮೂನೆಯ ಅರ್ಜಿ ಫಾರಂನಲ್ಲಿ ಬರೆದ ಅರ್ಜಿಗಳನ್ನು ಜುಲೈ 10ರೊಳಗೆ ಆಯಾ ಪಂಚಾಯತ್ ಘಟಕಗಳ ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳ ಶಿಫಾರಸಿನೊಂದಿಗೆ ಫಿರ್ಕಾ ಸಂಘಕ್ಕೆ ಜು. 26ರ ಮೊದಲು ತಮ್ಮ ಶಿಫಾರಸ್ಸಿನೊಂದಿಗೆ ಜಿಲ್ಲಾ ಸಂಘಕ್ಕೆ ತಲುಪುವಂತೆ ಕಳುಹಿಸಬೇಕು. ಆರ್ಥಿಕವಾಗಿ ಹಿಂದುಳಿದಿರುವ 8ರಿಂದ ಡಿಗ್ರಿ ವರೆಗಿನ ವಿದ್ಯಾರ್ಥಿಗಳು ಸಂಘವು ಈಗಾಗಲೇ ನೀಡುತ್ತಿರುವ ವಿದ್ಯಾರ್ಥಿ ವೇತನ ಪಡೆಯುತ್ತಿರುವವರು ಕಳೆದ ವರ್ಷದ ಅಂಕ ಪಟ್ಟಿ ಮತ್ತು ಈ ವರ್ಷವೂ ವಿದ್ಯಾಭ್ಯಾಸ ಮುಂದುವರಿಸುತ್ತಿರುವ ಬಗ್ಗೆ ಆಯಾ ಶಾಲಾ ಮುಖ್ಯಸ್ಥರ ಪ್ರಮಾಣ ಪತ್ರ ಸಹಿತ ಜುಲೈ 10ರೊಳಗೆ ಆಯಾ ಪಂಚಾಯತ್ ಘಟಕಗಳಿಗೆ ಕಳುಹಿಸಿಕೊಡಬೇಕು. ಅಲ್ಲದೆ ಪ್ರತಿ ವರ್ಷದಂತೆ ಈ ವರ್ಷವೂ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಯಲ್ಲಿ ಎಲ್ಲಾ ವಿಷಯಗಳಲ್ಲೂ ಎ ಪ್ಲಸ್ ಲಭಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ನಾಡೋಜ ಕವಿ ಡಾ.ಕಯ್ಯಾರ ಕಿಂಞಣ್ಣ ರೈಯವರ ಹೆಸರಿನಲ್ಲಿ ಈ ವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕಾಸರಗೋಡು ಜಿಲ್ಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಅತ್ಯಂತ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾದ ಓರ್ವ ವಿದ್ಯಾರ್ಥಿ ಮತ್ತು ಓರ್ವ ವಿದ್ಯಾರ್ಥಿನಿಯನ್ನು ಪುರಸ್ಕರಿಸಲಾಗುವುದು ಎಂದು ಕಾಸರಗೋಡು ಜಿಲ್ಲಾ ಬಂಟರ ಸಂಘದ ಪ್ರಧಾನ ಕಾರ್ಯದರ್ಶಿ ಮೋಹನ್ ರೈ ಕಯ್ಯಾರು ತಿಳಿಸಿದ್ದಾರೆ.

ಸಂದರ್ಶನ ಮುಂದೂಡಿಕೆ

ಕಾಸರಗೋಡು: ಬಾಳಂತೋಡು ಸರಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಎಚ್‌ಎಸ್‌ಎಸ್‌ಟಿ (ಜೂನಿಯರ್) ಕಂಪ್ಯೂಟರ್ ಸಯನ್ಸ್ ಹುದ್ದೆಯ ಸಂದರ್ಶನಕ್ಕಾಗಿ ಜೂ.26 ರಂದು ನಿಗದಿಯಾಗಿದ್ದ ಸಂದರ್ಶನವನ್ನು ಮುಂದೂಡಲಾಗಿದೆ. ಜುಲೈ 2ರಂದು ಬೆಳಗ್ಗೆ 11 ಗಂಟೆಗೆ ಸಂದರ್ಶನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ ಕಾಮಗಾರಿ | ಕಾಸರಗೋಡು ಶಾಸಕರ ಪ್ರಶ್ನೆಗೆ ಆರೋಗ್ಯ ಸಚಿವರ ಹೇಳಿಕೆ

ಸರ್ಕಾರಿ ಮೆಡಿಕಲ್ ಕಾಲೇಜಿಗೆ ಹೆಚ್ಚುವರಿ ಸಿಬ್ಬಂದಿ ನೇಮಕಾತಿ

ಕಾಸರಗೋಡು: ಉಕ್ಕಿನಡ್ಕದ ಕಾಸರಗೋಡು ಸರ್ಕಾರಿ ಮೆಡಿಕಲ್ ಕಾಲೇಜಿನಲ್ಲಿ ವೈದ್ಯರು ಹಾಗೂ ಇತರ ಸಿಬ್ಬಂದಿ ನೇಮಕಾತಿ ಮೇಲಿನ ಶೇ.50ರಷ್ಟು ಕಡಿತದ ನಿಬಂಧನೆಯನ್ನು ಶೀಘ್ರವೇ ಸಂಪೂರ್ಣವಾಗಿ ತೆಗೆದು ಹಾಕಲಾಗುವುದು ಎಂದು ರಾಜ್ಯ ಆರೋಗ್ಯ ಸಚಿವ ಕೆ.ಮುರಳೀಧರನ್ ಹೇಳಿದ್ದಾರೆ.
ವಿಧಾನಸಭೆಯ ಪ್ರಶೋತ್ತರ ಕಲಾಪದಲ್ಲಿ ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ಅವರ ಪ್ರಶ್ನೆಗಳಿಗೆ ಉತ್ತರಿಸಿದ ಸಚಿವರು, ಉಕ್ಕಿನಡ್ಕ ಮೆಡಿಕಲ್ ಕಾಲೇಜ್‌ನ್ನು ಕೇವಲ ಹೆಸರಿಗಷ್ಟೇ ಸೀಮಿತಗೊಳಿಸದೆ ಕಾಸರಗೋಡು ಜಿಲ್ಲೆಯ ಹಿಂದುಳಿದ ಆರೋಗ್ಯ ರಂಗಕ್ಕೆ ಇದೊಂದು ಸಂಪೂರ್ಣ ಸಂಜೀವಿನಿಯಾಗುವಂತೆ ಪರಿವರ್ತಿಸಲು ಸರಕಾರ ಬದ್ಧವಾಗಿದೆ. ನ್ಯಾಷನಲ್ ಮೆಡಿಕಲ್ ಕೌನ್ಸಿಲ್ (ಎನ್‌ಎಂಸಿ) ಈಗಾಗಲೇ ಕಾಲೇಜಿನ ಪ್ರವೇಶಾತಿಗೆ ಅನುಮೋದನೆ ನೀಡಿರುವುದರಿಂದ ಶೈಕ್ಷಣಿಕ ಮತ್ತು ಚಿಕಿತ್ಸಾ ವಿಭಾಗಗಳ ಗುಣಮಟ್ಟ ಕಾಯ್ದುಕೊಳ್ಳಲು ಪೂರ್ಣ ಪ್ರಮಾಣದ ಸಿಬ್ಬಂದಿ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಅಗತ್ಯವಿರುವ ಎಲ್ಲಾ ವೈದ್ಯರನ್ನು, ನರ್ಸ್ ಹಾಗೂ ಬೋಧಕೇತರ ಸಿಬ್ಬಂದಿಗಳನ್ನು ನೇಮಿಸಲು ಕೋರಿ ವೈದ್ಯಕೀಯ ಶಿಕ್ಷಣ ನಿರ್ದೇಶಕರು (ಡಿಎಂಇ) ಸಲ್ಲಿಸಿರುವ ಪ್ರಸ್ತಾವನೆ ಹಾಗೂ ಶಿಫಾರಸುಗಳನ್ನು ಸರ್ಕಾರ ಅತ್ಯಂತ ಸಕಾರಾತ್ಮಕವಾಗಿ ಪರಿಶೀಲಿಸುತ್ತಿದ್ದು, ಶೀಘ್ರದಲ್ಲೇ ಆದೇಶ ಹೊರಬೀಳಲಿದೆ ಎಂದರು.



ಇತರ ಯೋಜನೆಯಡಿ ಸೇರ್ಪಡೆ

ಪ್ರಸ್ತುತ ಮೆಡಿಕಲ್ ಕಾಲೇಜು ಆವರಣದಲ್ಲಿ ಕಾರ್ಯಾಚರಿಸುತ್ತಿರುವ ಸರ್ಕಾರಿ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳಿಗೆ ಖಾಯಂ ಹಾಸ್ಟೆಲ್ ಸೌಲಭ್ಯ ಒದಗಿಸಲು ಪ್ರಸ್ತುತ ಬಜೆಟ್‌ನಲ್ಲಿ ಪ್ರತ್ಯೇಕ ಹಣ ಮೀಸಲಿಡದಿದ್ದರೂ, ನರ್ಸಿಂಗ್ ವಿದ್ಯಾರ್ಥಿನಿಯರ ಸುರಕ್ಷತೆ ಮತ್ತು ವಸತಿ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್, ವಿಶೇಷ ಯೋಜನಾ ನಿಧಿ ಮೂಲಕ ಹಾಸ್ಟೆಲ್ ನಿರ್ಮಿಸುವ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆ. ನಬಾರ್ಡ್ ಅಥವಾ ಇತರ ಕೇಂದ್ರೀಯ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ ನರ್ಸಿಂಗ್ ಕಾಲೇಜು ಕಟ್ಟಡ ಮತ್ತು ಹಾಸ್ಟೆಲ್ ಸಂಕೀರ್ಣದ ನಿರ್ಮಾಣವನ್ನು ಸೇರ್ಪಡೆಗೊಳಿಸಲು ಯೋಜನೆ ರೂಪಿಸಲಾಗುತ್ತಿದೆ ಎಂದು ಸಚಿವರು ತಿಳಿಸಿದ್ದಾರೆ.

> **160.28 ಕೋಟಿ ರೂ. ಅನುಮೋದನೆ**
> **ಮೆಡಿಕಲ್ ಕಾಲೇಜಿನ ಸಮಗ್ರ ಅಭಿವೃದ್ಧಿಗಾಗಿ ಕೇರಳ ಮೂಲ ಸೌಕರ್ಯ ಹೂಡಿಕೆ ನಿಧಿ ಮಂಡಳಿ (ಕೆಐಐಎಫ್‌ಬಿ) ಮೂಲಕ ಒಟ್ಟು 160.28 ಕೋಟಿ ರೂ. ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಬಾಲಕಿಯರ ಖಾಯಂ ಹಾಸ್ಟೆಲ್ ಕಟ್ಟಡ ಹಾಗೂ ಬೋಧಕ ಸಿಬ್ಬಂದಿ ವಸತಿ ನಿಲಯಗಳ ಕಾಮಗಾರಿಗಳು ಪೂರ್ಣಗೊಂಡಿವೆ.**
> ● **ಕೆ.ಮುರಳೀಧರನ್, ರಾಜ್ಯ ಆರೋಗ್ಯ ಸಚಿವ**

ಕಾಮಗಾರಿ ಪ್ರಗತಿಯಲ್ಲಿ

ಮೆಡಿಕಲ್ ಕಾಲೇಜು ಶೈಕ್ಷಣಿಕ ಬ್ಲಾಕ್‌ನಲ್ಲಿ ಎರಡನೇ ಹಂತದ ಇಎಲ್‌ವಿ ವಿದ್ಯುದ್ದೀಕರಣ ವ್ಯವಸ್ಥೆ ವೆಂಟಿಲೇಷನ್ ಅಳವಡಿಕೆ ಹಾಗೂ ಅಗ್ನಿಶಾಮಕ ದಳದ ನಿರಾಕ್ಷೇಪಣಾ ಪತ್ರಕ್ಕೆ ಅಗತ್ಯವಿರುವ ಹೆಚ್ಚುವರಿ ತಾಂತ್ರಿಕ ಸುರಕ್ಷತಾ ಕೆಲಸಗಳನ್ನು ಹೊರತುಪಡಿಸಿ ಬಹುತೇಕ ಎಲ್ಲಾ ಕೆಲಸಗಳು ಪೂರ್ಣಗೊಂಡಿವೆ. ಸುಸಜ್ಜಿತವಾದ ಆಸ್ಪತ್ರೆ ಬ್ಲಾಕ್ ನಿರ್ಮಾಣ ಕಾರ್ಯ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದೆ. ಬಾಲಕರ ಹಾಸ್ಟೆಲ್, ಹೌಸ್ ಸರ್ಜನ್ಸಿ ಮಾಡುವ ಇಂಟರ್ನ್ಸ್ ಹಾಸ್ಟೆಲ್‌ಗಳು, ಬೋಧಕೇತರ ಸಿಬ್ಬಂದಿ ವಸತಿಗೃಹ ಹಾಗೂ ಸಭಾಂಗಣದ ಕಾಮಗಾರಿಗಳು ಇನ್ನೂ ಆರಂಭವಾಗಬೇಕಿದೆ. ಇವುಗಳನ್ನು ಶೀಘ್ರದಲ್ಲೇ ಟೆಂಡರ್ ಪ್ರಕ್ರಿಯೆಗೊಳಪಡಿಸಿ ಆರಂಭಿಸಲು ಸೂಚಿಸಲಾಗಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ. ಉಕ್ಕಿನಡ್ಕದ ಕಾಸರಗೋಡು ಸರಕಾರಿ ಮೆಡಿಕಲ್ ಕಾಲೇಜಿನ ಕಾಮಗಾರಿಗಳನ್ನು ಶೀಘ್ರದಲ್ಲೇ ಪೂರ್ತಿಗೊಳಿಸಲಾಗುವುದು ಹಾಗೂ ಅಗತ್ಯದ ಸಿಬ್ಬಂದಿಗಳನ್ನು ನೇಮಕಾತಿ ನಡೆಸಲಾಗುವುದೆಂಬ ಆರೋಗ್ಯ ಸಚಿವರ ಹೇಳಿಕೆಯು ಜಿಲ್ಲೆಯ ಜನತೆಗೆ ಸಂತಸವನ್ನುಂಟು ಮಾಡಿದೆ.

ಕಾಞಂಗಾಡು ನಗರಸಭೆಯಲ್ಲಿ ಓಣಂಗೆ ಚೆಂಡು ಹೂವಿನ ಸಸಿ ನಾಟಿ



ಕಾಸರಗೋಡು: ಈ ವರ್ಷದ ಓಣಂ ಆಚರಣೆಗೆ ಹೂವುಗಳನ್ನು ಒದಗಿಸುವ ಗುರಿಯೊಂದಿಗೆ ಕಾಞಂಗಾಡು ನಗರಸಭೆಯಲ್ಲಿ ಚೆಂಡು ಹೂ ಕೃಷಿಗೆ ಗುರುವಾರ ಚಾಲನೆ ನೀಡಲಾಯಿತು. ನಗರಸಭೆಯ ನೌಕರರು ಮತ್ತು ನೈರ್ಮಲ್ಯ ಇಲಾಖೆಯ ನೌಕರರ ಗುಂಪಿನ 'ಓಪರಂ' ಸಿಬ್ಬಂದಿ ಮಂಡಳಿಯ ನೇತೃತ್ವದಲ್ಲಿ ಕೃಷಿಯನ್ನು ಆರಂಭಿಸಲಾಯಿತು. ಕಾಞಂಗಾಡು ಟೌನ್ ಹಾಲ್ ಬಳಿಯ ನೆಹರೂ ಸ್ಮೃತಿ ಮಂಟಪ (ನೆಹರೂ ಪಾರ್ಕ್)ದಲ್ಲಿರುವ ಖಾಲಿ ಜಾಗದಲ್ಲಿ ಚೆಂಡು ಹೂ ಹೂವಿನ ಸಸಿಗಳನ್ನು ನೆಡಲಾಯಿತು.
ಈ ಯೋಜನೆಯನ್ನು ನಗರಸಭಾ ಅಧ್ಯಕ್ಷ ವಿ.ವಿ. ರಮೇಶನ್ ಚೆಂಡು ಹೂವಿನ ಸಸಿಯನ್ನು ನೆಟ್ಟು ಉದ್ಘಾಟಿಸಿ ಮಾತನಾಡಿ, ಈ ಯೋಜನೆಯು ಕಾಞಂಗಾಡು ನಗರಸಭೆಯು ಸಾರ್ವಜನಿಕ ಸ್ಥಳಗಳನ್ನು ತ್ಯಾಜ್ಯಮುಕ್ತಗೊಳಿಸಲು ಮತ್ತು ಅವುಗಳನ್ನು ಸುಂದರಗೊಳಿಸಲು ನಡೆಸುತ್ತಿರುವ ವಿವಿಧ ಚಟುವಟಿಕೆಗಳ ಭಾಗವಾಗಿದೆ ಮತ್ತು ಮುಂದಿನ ದಿನಗಳಲ್ಲಿ ನಗರಸಭೆಯಲ್ಲಿ ಅತ್ಯುತ್ತಮ ಸ್ವಚ್ಛ ವಾರ್ಡ್ ಮತ್ತು ಮನೆಗಳಿಗೆ ಪ್ರಶಸ್ತಿಗಳನ್ನು ನೀಡಲಾಗುವುದು ಎಂದರು.
ಉಪಾಧ್ಯಕ್ಷೆ ಲತಾ ಬಾಲಕೃಷ್ಣನ್ ಅಧ್ಯಕ್ಷತೆ ವಹಿಸಿದ್ದರು. ಫೌಜಿಯಾ ಷರೀಫ್, ಕೌನ್ಸಿಲರ್‌ಗಳಾದ ಸಂತೋಷ್ ಕುಶಾಲ್ ನಗರ, ರಾಜನ್ ಅತ್ತಿಕೋತ್, ಸೆವೆನ್ ಸ್ಟಾರ್ ಅಬ್ದುಲ್ ರೆಹಮಾನ್, ಮೊಯ್ದು ಪಂಜಾಬಿ, ಸೇತು ಕಾಞಂಗಾಡು, ಎಂ.ಬಾಲರಾಜ್, ಎನ್.ವಿ.ದಿವಾಕರನ್, ಕಾರ್ಯದರ್ಶಿ ರಾಕೇಶ್ ನಾರಾಯಣನ್ ಮತ್ತಿತರು ಭಾಗವಹಿಸಿ ಸಸಿಗಳನ್ನು ನೆಟ್ಟರು.
ನಗರಸಭೆ ಕಾರ್ಯದರ್ಶಿ ಎಂ.ಕೆ. ಗಿರೀಶ್ ಸ್ವಾಗತಿಸಿ, ವಾರ್ಡ್ ಕೌನ್ಸಿಲರ್ ಪಿ.ವಿ.ಚಂದ್ರನ್ ಮಾಸ್ಟರ್ ವಂದಿಸಿದರು.

ಶಿರಿಯ ರೈಲ್ವೆ ಅಂಡರ್‌ಪಾಸ್: ರೂಪಾಯಿ 3 ಕೋಟಿ ಮಂಜೂರು

ಉಪ್ಪಳ: ಮಂಜೇಶ್ವರ ವಿಧಾನಸಭಾ ಮಂಡಲದ ಮಂಗಲ್ಪಾಡಿ ಪಂಚಾಯತ್ ಗೊಳಪಟ್ಟ ಶಿರಿಯ ನಿವಾಸಿಗಳ ಹಲವು ಕಾಲದ ಸಂಚಾರ ಸಮಸ್ಯೆಗೆ ಪರಿಹಾರವಾಗಲಿದೆ.
ಐಕ್ಯರಂಗ ಸರಕಾರದ ಮೊದಲ ಬಜೆಟ್‌ನಲ್ಲಿ ಶಿರಿಯ ರೈಲ್ವೆ ಅಂಡರ್‌ಪಾಸ್ ನಿರ್ಮಾಣಕ್ಕಾಗಿ ಮೂರು ಕೋಟಿ ರೂ. ಮಂಜೂರು ಮಾಡಲಾಗಿದೆ. ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ಅವರ ಶಿಫಾರಸ್ಸಿನ ಆಧಾರದಲ್ಲಿ ರಾಜ್ಯ ಸರಕಾರ ಬಜೆಟ್‌ನಲ್ಲಿ ಈ ಮೊತ್ತ ಮೀಸಲಿರಿಸಿದೆ.
ಹಲವಾರು ಮನೆಗಳು, ಶಿಕ್ಷಣ ಸಂಸ್ಥೆಗಳು, ಆರಾಧನಾಲಯಗಳು ನೆಲೆಗೊಂಡಿರುವ ಶಿರಿಯಕ್ಕೆ ಪ್ರಸ್ತುತ ಸಂಚಾರ ಸೌಕರ್ಯ ಬಹಳ ದುಸ್ತರವಾಗಿದೆ. ಹಳಿ ಸಾಗುವ ಕಾರಣ ಮುಟ್ಟಂ ರೈಲ್ವೆ ಗೇಟ್‌ನಲ್ಲಿ ಇಲ್ಲಿನವರು ಸಂಚರಿಸಬೇಕಾಗುತ್ತದೆ. ಗೇಟ್ ಮುಚ್ಚಿದರೆ ಬಹಳ ಹೊತ್ತು ವಾಹನಗಳು ಕಾದು ನಿಲ್ಲಬೇಕಾಗಿ ಬರುತ್ತದೆ. ಇದರಿಂದ ಸರಿಯಾದ ಸಮಯಕ್ಕೆ ಕಚೇರಿಗಳಿಗೆ, ಶಾಲೆಗಳಿಗೆ, ಆಸ್ಪತ್ರೆಗಳಿಗೆ ಹಾಗೂ ಇನ್ನಿತರ ಕಾರ್ಯಗಳಿಗೆ ತಲುಪಲು ಸಾಧ್ಯವಾಗದೆ ಸಾರ್ವಜನಿಕರು ಹೆಚ್ಚಿನ ತೊಂದರೆ ಅನುಭವಿಸುತ್ತಿದ್ದಾರೆ.

ಬಹುದಿನದ ಬೇಡಿಕೆ

ಇದಕ್ಕೆ ಶಾಶ್ವತ ಪರಿಹಾರವಾಗಿ ಶಿರಿಯದಲ್ಲಿ ರೈಲ್ವೆ ಅಂಡರ್‌ಪಾಸ್ ಬೇಕೆಂಬ ಈ ಪ್ರದೇಶದ ಜನರ ಬೇಡಿಕೆಯಾಗಿದೆ. ಶಾಸಕರು ಸಲ್ಲಿಸಿದ ಶಿಫಾರಸ್ಸುಗಳಲ್ಲಿ ಪ್ರಥಮ ಪರಿಗಣನೆಯಲ್ಲಿ ಅನುದಾನ ನೀಡಿದ ಯೋಜನೆಯಾಗಿದೆ ಇದು.

> **ಗ್ರಾ.ಪಂ.ನಿಂದ 25 ಲಕ್ಷ ರೂ. ಪಾವತಿ**
> ಯೋಜನೆಗಾಗಿ ಮಂಗಲ್ಪಾಡಿ ಪಂಚಾಯತ್ ವರ್ಷಗಳ ಹಿಂದೆ 25 ಲಕ್ಷ ರೂ. ರೈಲ್ವೆಗೆ ಪಾವತಿಸಿತ್ತು. ಮೂರು ಕೋಟಿ ರೂ. ಪಾವತಿಸಿದರೆ ಅಂಡರ್‌ಪಾಸ್ ನಿರ್ಮಿಸುವುದಾಗಿ ರೈಲ್ವೆ ತಿಳಿಸಿದ ಹಿನ್ನೆಲೆಯಲ್ಲಿ ಫಂಡ್‌ಗಾಗಿ ಕಳೆದ ಸರಕರದ ಸಮಯದಲ್ಲೂ ಶಾಸಕರು ನಿರಂತರ ಒತ್ತಡ ಹೇರಿದ್ದರು. ಆದರೆ ಈ ಬಾರಿ ಬಜೆಟ್‌ನಲ್ಲಿ ಈ ಬೇಡಿಕೆಗೆ ಮನ್ನಣೆ ನೀಡಿದೆ.

ಶೀಘ್ರ ಕಾಮಗಾರಿ ಆರಂಭ

ಈ ಬಾರಿ ಬಜೆಟ್‌ನಲ್ಲಿ ಈ ಬೇಡಿಕೆಗೆ ಮನ್ನಣೆ ನೀಡಿದೆ. ಮೊತ್ತ ಮಂಜೂರುಗೊಂಡ ಹಿನ್ನೆಲೆಯಲ್ಲಿ ಮುಂದಿನ ತಾಂತ್ರಿಕ ಕ್ರಮಗಳನ್ನು ವಿಳಂಬವಿಲ್ಲದೆ ಜಾರಿಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದು ಶಾಸಕರು ತಿಳಿಸಿದ್ದಾರೆ.

ಪುಸ್ತಕಗಳ ಓದಿನಿಂದ ವ್ಯಕ್ತಿತ್ವ ವಿಕಾಸನ: ಸ್ವಾಮೀ ವಿವಿಕ್ತಾನಂದ



ಕಾಸರಗೋಡು: ವಾಚನ ವಾರದ ಸಮಾರೋಪದ ಅಂಗವಾಗಿ ಕಾಸರಗೋಡಿನ ಚಿನ್ಮಯ ವಿದ್ಯಾಲಯದ ಸಿಬಿಸಿ ಸಭಾಂಗಣದಲ್ಲಿ ಸಾಹಿತ್ಯ ಕ್ಲಬ್‌ನ ವತಿಯಿಂದ ಗುರುವಾರ ಸಮಾರೋಪ ಸಮಾರಂಭವನ್ನು ಆಯೋಜಿಸಲಾಯಿತು.
ಮುಖ್ಯ ಅತಿಥಿಯಾಗಿದ್ದ ಚಿನ್ಮಯ ಮಿಷನ್ ಕೇರಳ ಘಟಕದ ಮುಖ್ಯಸ್ಥ ಸ್ವಾಮೀ ವಿವಿಕ್ತಾನಂದ ಸರಸ್ವತೀ, ಓದು ಮತ್ತು ಬರವಣಿಗೆಯ ಮಹತ್ವದ ಕುರಿತು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಉತ್ತಮ ಪುಸ್ತಕಗಳ ಓದು ವ್ಯಕ್ತಿತ್ವ ವಿಕಾಸಕ್ಕೆ ಹಾಗೂ ಮೌಲ್ಯಬೋಧನೆಯನ್ನು ಬೆಳೆಸಲು ಸಹಕಾರಿಯಾಗುತ್ತದೆ. ಓದು ಮತ್ತು ಬರವಣಿಗೆ ಜೀವನವನ್ನು ಸಮೃದ್ಧಗೊಳಿಸುವ ದಾರಿದೀಪಗಳಾಗಿವೆ ಎಂದು ಹೇಳಿದರು.
ಕಥೆಗಳು ಮನುಷ್ಯನಲ್ಲಿ ಚಿಂತನಾ ಶಕ್ತಿಯನ್ನು ಬೆಳೆಸುತ್ತವೆ ಹಾಗೂ ಉತ್ತಮ ಓದುಗರು ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳುತ್ತಾರೆ ಎಂದು ವಿದ್ಯಾಲಯ ಪ್ರಾಂಶುಪಾಲ ಟಿ.ವಿ. ಸುಕುಮಾರನ್ ವಿದ್ಯಾರ್ಥಿಗಳಿಗೆ ನೆನಪಿಸಿದರು. ನಂತರ ಖ್ಯಾತ ಲೇಖಕಿ ಡಾ.ಎಂ.ಎ.ಮುಂತಾಜ್ ಅವರ ನೇತೃತ್ವದಲ್ಲಿ ನಡೆದ ಕಥಾ ಕಮ್ಮಟ ವಿಶೇಷ ಗಮನ ಸೆಳೆಯಿತು. ಕಥೆ ಬರವಣಿಗೆಯ ವಿವಿಧ ಹಂತಗಳು ಹಾಗೂ ಸೃಜನಾತ್ಮಕ ಬರವಣಿಗೆ ವಿಧಾನಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿದರು. ವಿದ್ಯಾಲಯದ ಉಪಪ್ರಾಂಶುಪಾಲ ಅಭಿಜಿತ್ ಎಂ.ಕೆ., ಮುಖ್ಯ ಶಿಕ್ಷಕಿ ಪೂರ್ಣಿಮಾ ಎಸ್. ಆರ್., ಶಿಕ್ಷಕರು ಭಾಗವಹಿಸಿದ್ದರು.

ಮಂಗಲ್ಪಾಡಿ ಭಜನಾ ಮಂದಿರ ಕಲಾ ಮಂಟಪದ ವಿನಂತಿ ಪತ್ರ ಬಿಡುಗಡೆ



ಉಪ್ಪಳ: ಮಂಗಲ್ಪಾಡಿ ಏಕಾಹ ಭಜನಾ ಮಂದಿರದಲ್ಲಿ ನೂತನವಾಗಿ ನಿರ್ಮಾಣಗೊಳ್ಳಲಿರುವ ಶ್ರೀ ಶಾರದಾ ಕಲಾ ಮಂಟಪದ ವಿನಂತಿ ಪತ್ರವನ್ನು ಶೃಂಗೇರಿ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು ಶೃಂಗೇರಿ ಶಾರದಾ ಪೀಠದಲ್ಲಿ ತಮ್ಮ ದಿವ್ಯ ಹಸ್ತದಿಂದ ಬಿಡುಗಡೆಗೊಳಿಸಿದರು.
ಈ ಸಂದರ್ಭದಲ್ಲಿ ಶ್ರೀ ಶೃಂಗೇರಿ ಶಾರದಾ ಪೀಠದ ಧರ್ಮಾಧಿಕಾರಿ ಬೊಲ್ಲವ ಸತ್ಯಶಂಕರ, ಕರ್ನಾಟಕ ವಿಧಾನ ಪರಿಷತ್ ಮಾಜಿ ಸದಸ್ಯ ಮೋನಪ್ಪ ಭಂಡಾರಿ, ಟ್ರಸ್ಟಿಗಳಾದ ಬಾಲಕೃಷ್ಣ ಅಂಬಾರ್ ಮತ್ತು ಶ್ರೀಧರ್ ಶೆಟ್ಟಿ ಪರಂಕಿಲ, ಸಮಿತಿಯ ಅಧ್ಯಕ್ಷ ವಿಜಯಕುಮಾರ್ ರೈ, ಕಾರ್ಯದರ್ಶಿ ರಾಧಾಕೃಷ್ಣ ತುಂಗಾ ಬಂದ್ಯೋಡು, ರಮೇಶ್ ಹೊಳ್ಳ, ಸುರೇಶ್ ಶೆಟ್ಟಿ ಕುಂಡಲ, ಸುರೇಶ್ ಶೆಟ್ಟಿ ಪರಂಕಿಲ, ರಾಮಚಂದ್ರ ಬಲ್ಲಾಳ್, ರಾಮದಾಸ್ ಶೆಟ್ಟಿಗಾರ್, ಐತಪ್ಪ ಶೆಟ್ಟಿ, ರಾಕೇಶ್ ಪರಂಕಿಲ, ಚಂದ್ರಹಾಸ್ ಶೆಟ್ಟಿ ಪರಂಕಿಲ, ರವಿರಾಜ್ ಶೆಟ್ಟಿ ಪರಂಕಿಲ, ಪ್ರವೀಣ್ ಪರಂಕಿಲ ಮತ್ತು ಜಯಂತಿ ಟಿ.ಶೆಟ್ಟಿ, ಪಂಚಾಯತ್ ಸದಸ್ಯೆ ಸಾಕ್ಷಿ ಶೆಟ್ಟಿ, ತುಳಸಿ ಶೆಟ್ಟಿಗಾರ್, ತಿಲೋತ್ತಮ. ಸುಜಾತಾ ಶೆಟ್ಟಿ ಹಾಗೂ ಅನೇಕ ಕಾರ್ಯಕರ್ತರು ಮಾತೆಯರು ಪಾಲ್ಗೊಂಡರು.

> **ಸ್ವಾಮೀಜಿಗಳಿಂದ ಶುಭ ಹಾರೈಕೆ**
> ಶ್ರೀ ಶಾರದಾ ಕಲಾ ಮಂಟಪ ಆದಷ್ಟು ಬೇಗ ನಿರ್ಮಾಣವಾಗಲಿ ಎಂದು ಸ್ವಾಮೀಜಿಯವರು ಶುಭಹಾರೈಸಿದರು.

ಕಾಳ್ಯಂಗಾಡು ಕ್ಷೇತ್ರ: ತಂತ್ರಿವರ್ಯ ಶ್ರೀ ಕೃಷ್ಣ ಗುರೂಜಿಗೆ ಗೌರವಾರ್ಪಣೆ



ಕಾಸರಗೋಡು: ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಸ್ಥಾನದ ದೃಢ ಕಲಶ ಸಂದರ್ಭದಲ್ಲಿ ಜೀರ್ಣೋದ್ಧಾರ ಸಮಿತಿ, ಬ್ರಹ್ಮಕಲಶೋತ್ಸವ ಸಮಿತಿ, ಮಾತೃ ಸಮಿತಿ ವತಿಯಿಂದ ಕ್ಷೇತ್ರ ತಂತ್ರಿವರ್ಯ ಶ್ರೀ ಕೃಷ್ಣ ಗುರೂಜಿ ಅವರನ್ನು ಗೌರವ ಅಭಿನಂದನಾ ಪತ್ರ ನೀಡಿ ಗೌರವಿಸಲಾಯಿತು.
ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ, ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಡಾ.ಕೆ.ಎನ್. ವೆಂಕಟ್ರಮಣ ಹೊಳ್ಳ ಅಧ್ಯಕ್ಷತೆ ವಹಿಸಿದ್ದರು. ಮೊಕ್ತೇಸರ ಅಚ್ಯುತ ಕಾಳ್ಯಂಗಾಡು, ಧರ್ಮದರ್ಶಿ ನಾರಾಯಣ ಕಾಳ್ಯಂಗಾಡು, ಬ್ರಹ್ಮಕಲಶ ಗೌರವ ಸಲಹೆಗಾರ ಗೋಪಾಲಕೃಷ್ಣ ವಾಂತಿಚಾಲ್, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಮೋಹನ್‌ರಾಜ್ ಕೊರಕ್ಕೋಡು, ಪ್ರಧಾನ ಕಾರ್ಯದರ್ಶಿ ಹರೀಶ್ ಕೆ.ಆರ್., ಬ್ರಹ್ಮಕಲಶ ಸಮಿತಿ ಕಾರ್ಯದರ್ಶಿ ದಯಾನಂದ ಕೊಳ್ಕೆಬೈಲು, ಸಹ ಕೋಶಾಧಿಕಾರಿ ಪುನಿತ್ ಕೆಮ್ಮಣ್ಣು , ಜಗದೀಶ್ ಕೂಡ್ಲು, ಮಹಿಳಾ ಸಮಿತಿ ಕಾರ್ಯದರ್ಶಿ ಹರ್ಷಿತಾ, ಮಾತೃಸಮಿತಿ ಅಧ್ಯಕ್ಷೆ ರಾಧಿಕಾ ರಂಜಿತ್, ಕಾರ್ಯದರ್ಶಿ ದೀಪಾ ರಾಜೇಶ್, ಪುಷ್ಪಲತಾ ಇದ್ದರು.

> **ಊರೇ ಬೆಳಗಿದಂತೆ**
> ಕ್ಷೇತ್ರ ಅಭಿವೃದ್ಧಿಯೊಂದಿಗೆ ಬೆಳಗಿದರೆ ಜೊತೆಗೆ ಪರಿಸರ ಹಾಗೂ ಊರೇ ಬೆಳಗಿದಂತೆ ಎಂದು ಈ ಸಂದರ್ಭದಲ್ಲಿ ತಂತ್ರಿವರ್ಯ ಶ್ರೀ ಕೃಷ್ಣ ಗುರೂಜಿ ಹೇಳಿದರು. ಭಕ್ತರು ಸೇವೆ ಸಲ್ಲಿಸುವುದರಿಂದ ಅವರ ಇಷ್ಟಾರ್ಥ ಸಿದ್ಧಿ ಆಗುವಲ್ಲಿ ಯಾವುದೇ ಸಂಶಯ ಇಲ್ಲ ಎಂದು ಹೇಳಿದರು.

ಕುತ್ಯಾಳಶ್ರೀ ನವಜೀವನ ಸಮಿತಿಯಿಂದ ಗೌರವಾರ್ಪಣೆ



ಕಾಸರಗೋಡು: ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್‌ನ ಕಾಸರಗೋಡು ವಲಯದ ಕುತ್ಯಾಳಶ್ರೀ ನವಜೀವನ ಸಮಿತಿಯ ಸದಸ್ಯರ ಮಕ್ಕಳಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪ್ಲಸ್‌ಟು ಪರೀಕ್ಷೆಗಳಲ್ಲಿ ಉತ್ತೀರ್ಣರಾದವರನ್ನು ಗೌರವಿಸಲಾಯಿತು.
ಸಮಾರಂಭವನ್ನು ಮಧೂರು ಗ್ರಾಮ ಪಂಚಾಯತ್ ಉಪಾಧ್ಯಕ್ಷ ಭಾನುಪ್ರಕಾಶ್ ಉದ್ಘಾಟಿಸಿದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾಸರಗೋಡು ತಾಲೂಕು ಯೋಜನಾಧಿಕಾರಿ ದಿನೇಶ್, ಕಾಸರಗೋಡು ತಾಲೂಕು ಜನಜಾಗೃತಿ ವೇದಿಕೆಯ ಅಧ್ಯಕ್ಷ ಜಯರಾಮ ಪಾಟಾಳಿ, ಕಾಸರಗೋಡು ವಲಯ ಅಧ್ಯಕ್ಷ ಕಿರಣ್‌ಪ್ರಸಾದ್ ಕೂಡ್ಲು , ಸದಸ್ಯರಾದ ರಾಮಕೃಷ್ಣ ಮಜಲು, ಸುಕುಮಾರ ಕುದ್ರೆಪ್ಪಾಡಿ, ಕಾರ್ಯದರ್ಶಿ ಗೋಪಾಲಕೃಷ್ಣ ಶುಭಹಾರೈಸಿದರು.
ಕಾರ್ಯಕ್ರಮದಲ್ಲಿ ನವಜೀವನ ಸಮಿತಿ ಅಧ್ಯಕ್ಷ ನಾರಾಯಣ ಅವರು ಅಧ್ಯಕ್ಷತೆ ವಹಿಸಿದ್ದರು.
ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅನುಷಾ ಎಸ್.ಎ., ಶ್ರೀನಂದನ ಕೆ., ವರ್ಷಾ ಬಿ.ಎಸ್., ವಿಷ್ಣು ಬಿ.ಎಸ್. ಹಾಗೂ ಪ್ಲಸ್‌ಟು ವಿಜೇತರಾದ ಅಭಿನವ್, ವೈಷ್ಣವಿ ಕೆ., ವೈಭವ್ ಕೆ. ಅವರನ್ನು ಪುರಸ್ಕರಿಸಲಾಯಿತು. ನವಜೀವನ ಸಮಿತಿಯ ಜೋಷಿ ಸ್ವಾಗತಿಸಿ, ಸೇವಾ ಪ್ರತಿನಿಧಿ ಜ್ಯೋತಿ ವಂದಿಸಿದರು.

ಕಾಸರಗೋಡಿನಲ್ಲಿ ನಾಶಾ ಮುಕ್ತ್ ಭಾರತ್ ಅಭಿಯಾನ್ 'ಐ ಆಮ್ ಎ ತೂಫಾನ್ ವಾರಿಯರ್' | ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ಸಲಹೆ

ವಿದ್ಯಾರ್ಥಿಗಳು, ಪೋಷಕರು ಮಾದಕ ದ್ರವ್ಯ ವ್ಯಸನ ವಿರುದ್ಧ ಹೋರಾಡಲು ಮುಂದೆ ಬರಲಿ

ಕಾಸರಗೋಡು: ದೇಶದ ಶ್ರೇಷ್ಠ ಆಸ್ತಿಯಾದ ವಿದ್ಯಾರ್ಥಿಗಳನ್ನು ಹಾಗೂ ಯುವಕರನ್ನು ಕಾಡುತ್ತಿರುವ ಪಿಡುಗು ಆಗಿದೆ ಮಾದಕ ವ್ಯಸನ ಎಂದು ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ಹೇಳಿದ್ದಾರೆ.
'ನಾಶಾ ಮುಕ್ತ್ ಭಾರತ್ ಅಭಿಯಾನ್' (ಎನ್‌ಎಂಬಿಎ) ಇದರ ಭಾಗವಾಗಿ ಜಿಲ್ಲಾ ಸಾಮಾಜಿಕ ನ್ಯಾಯ ಇಲಾಖೆ ಮತ್ತು ಜಿಲ್ಲಾ ಪೊಲೀಸರು ಜಂಟಿಯಾಗಿ ಗುರುವಾರ ನಗರಸಭಾ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಎಂಬ ಮಾದಕ ದ್ರವ್ಯ ವಿರೋಧಿ ಜಾಗೃತಿ ಕಾರ್ಯಕ್ರಮದಲ್ಲಿ ಮಾದಕ ದ್ರವ್ಯ ವಿರೋಧಿ ಸಂದೇಶ ನೀಡಿದರು.
ಮಾದಕ ವಸ್ತುಗಳ ವಿರುದ್ಧದ ಹೋರಾಟವು ಕೇವಲ ಪೊಲೀಸ್ ಅಥವಾ ಅಬಕಾರಿ ಇಲಾಖೆಯ ಜವಾಬ್ದಾರಿಯಲ್ಲ, ಬದಲಾಗಿ ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರು ಸಹಿತ ಸಮಾಜದ ಎಲ್ಲಾ ವರ್ಗಗಳು ಇದರಲ್ಲಿ ಭಾಗಿಯಾಗಬೇಕು ಎಂದರು.
ರಾಜ್ಯದಲ್ಲಿ ಗೃಹ ಇಲಾಖೆಯ 'ಆಪರೇಷನ್ ತೂಫಾನ್' ಮೂಲಕ 10 ಕೋಟಿ ರೂ. ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಮತ್ತು 3000 ಮಂದಿಯನ್ನು ಬಂಧಿಸಲಾಗಿದೆ ಎಂದರು.



19ನೇ ಶತಮಾನದಲ್ಲಿ ಚೀನಾ ಮಾದಕ ವಸ್ತುಗಳ ಮಾಫಿಯಾಕ್ಕೆ ಅಫೀಮು ಯುದ್ಧದ ಮೂಲಕ ಪ್ರತಿಕ್ರಿಯಿಸಿದಂತೆ ತೂಫಾನ್ ಮೂಲಕ ಈ ಪಿಡುಗನ್ನು ನಿರ್ಮೂಲನೆ ಮಾಡಲು ನಮಗೆ ಸಾಧ್ಯವಾಗಲಿದೆ ಎಂದು ಸಂಸದರು ಕರೆ ನೀಡಿದರು.
ಸಮಾರಂಭದಲ್ಲಿ ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್, ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಮಾತನಾಡಿದರು. ಪ್ರತಿನಿಧಿಗಳ ಸಂದೇಶದ ನಂತರ ನಡೆದ ಮೌನ ಅಧಿವೇಶನ (ಸೈಲೆಂಟ್ ಸೆಷನ್)ದಲ್ಲಿ ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಶಾಲೆಯ ಶಿಕ್ಷಕಿ ಎಂ.ತುಷಾರ ಮಾದಕ ವ್ಯಸನದಿಂದ ಉಂಟಾಗುವ ದುರಂತಗಳ ಹೃದಯಸ್ಪರ್ಶಿ ಚಿತ್ರವನ್ನು ಮಕ್ಕಳ ಹೃದಯಗಳನ್ನು ಮುಟ್ಟುವ ರೀತಿಯಲ್ಲಿ ಪ್ರಸ್ತುತಪಡಿಸಿದರು.
ಬಳಿಕ ಎಎಸ್‌ಪಿ ಅಚ್ಯುತ್ ಅಶೋಕ್ ವ್ಯಸನ ವಿರೋಧಿ ಪ್ರತಿಜ್ಞೆಯನ್ನು ಬೋಧಿಸಿದರು. ನಂತರದ ಜಿಲ್ಲಾ ಪೊಲೀಸ್ ಮುಖ್ಯಸ್ಥ ಪಿ. ನಿತಿನ್‌ರಾಜ್ ಅವರು ಬೆಳಗಿಸಿದ ತೂಫಾನ್ ಜ್ಯೋತಿಯನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಸ್ವೀಕರಿಸಿ ಕ್ರೀಡಾ ಮೈದಾನದಲ್ಲಿ ಸ್ಥಾಪಿಸಿದರು. ಯೋಗಾಭ್ಯಾಸದಲ್ಲಿ ಏಷ್ಯಾ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಗೆದ್ದ ವಿದ್ಯಾರ್ಥಿನಿ ಅಭಿಜ್ಞಾರನ್ನು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ಮುಖ್ಯಸ್ಥರು ಸನ್ಮಾನಿಸಿದರು. ಅಭಿಜ್ಞಾಳ ಯೋಗಾಭ್ಯಾಸಗಳು ಮತ್ತು ವಿವಿಧ ಶಾಲೆಗಳ ಮಕ್ಕಳು ಭಾಗವಹಿಸಿದ್ದ ಮಾದಕ ದ್ರವ್ಯ ವಿರೋಧಿ ನೃತ್ಯ ಮತ್ತು ಸಂಗೀತ ಕಾರ್ಯಕ್ರಮವನ್ನು ಪ್ರದರ್ಶಿಸಲಾಯಿತು.
ಮೈದಾನದಲ್ಲಿ ಅಕ್ಷರಗಳನ್ನು ವಿನ್ಯಾಸಗೊಳಿಸಿದ ಕಲಾವಿದರಾದ ವರದಾ ನಾರಾಯಣನ್ ಮತ್ತು ವಿಜಯಕುಮಾರ್ ಅವರನ್ನು ಸನ್ಮಾನಿಸಲಾಯಿತು.
ಕಾಸರಗೋಡು ನಗರಸಭಾ ಅಧ್ಯಕ್ಷೆ ಶಾಹಿನಾ ಸಲೀಂ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಿ.ಎಂ.ದೇವದಾಸನ್, ಜಿಲ್ಲಾ ಶಿಕ್ಷಣ ಉಪ ನಿರ್ದೇಶಕಿ ಟಿ.ಶೈಲಾ ಮತ್ತು ಜಿಲ್ಲಾ ಸಾಮಾಜಿಕ ನ್ಯಾಯ ಅಧಿಕಾರಿ ಆರ್ಯ ಪಿ.ರಾಜ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

> **ಕನಸು ನಾಶ ಮಾಡಲು ಸಿದ್ಧರಿದ್ದೀರಾ?**
> ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಮುಖ್ಯಸ್ಥರ ನೇತೃತ್ವದಲ್ಲಿ ಮೈದಾನದಲ್ಲಿ ಸಾಲಾಗಿ ನಿಂತಿದ್ದ ಮಕ್ಕಳನ್ನು ವ್ಯಸನದ ಎದುರು ತಮ್ಮ ಕನಸುಗಳನ್ನು ನಾಶಮಾಡಲು ಸಿದ್ಧರಿದ್ದೀರಾ ಎಂದು ಕೇಳಿದಾಗ, ವಿದ್ಯಾರ್ಥಿಗಳು 'ಇಲ್ಲ' ಎಂದು ಜೋರಾಗಿ ಉತ್ತರಿಸಿದರು. ವಿವಿಧ ಶಾಲೆಗಳಿಂದ 2000ದಷ್ಟು ವಿದ್ಯಾರ್ಥಿಗಳು ಭಾಗವಹಿಸಿದ್ದರು.

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಸುತ್ತ ಮುತ್ತ

ಪಾಂಡೇಶ್ವರ- ಮೂಡಹಡು ಗಣೇಶೋತ್ಸವ ಸಮಿತಿಗೆ ಆಯ್ಕೆ



ಕೋಟ: ಇಲ್ಲಿನ ಪಾಂಡೇಶ್ವರ ಮೂಡಹಡು 14 ನೇ ವರ್ಷದ ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ ಅಧ್ಯಕ್ಷರಾಗಿ ವೆಂಕಟೇಶ್ ಪೂಜಾರಿ ಆಯ್ಕೆಯಾದರು. ಗೌರವಾಧ್ಯಕ್ಷರಾಗಿ ರವಿ ಕುದ್ರು, ನಾರಾಯಣ ವಿ. ಆಚಾರ್, ವಿಜಯ್ ಆಚಾರ್, ಉಪಾಧ್ಯಕ್ಷರಾಗಿ ಗಣೇಶ್ ಆಚಾರ್, ಕಾರ್ಯದರ್ಶಿಯಾಗಿ ವಿಘ್ನೇಶ ಸಾಧನ, ದಿನೇಶ್ ಬಾಂದವ್ಯ , ಜೊತೆ ಕಾರ್ಯದರ್ಶಿ ಮಮತಾ, ಭುವನ, ಸಾಗರ, ರಾಘವೇಂದ್ರ ಆಚಾರ್, ಕೋಶಾಧಿಕಾರಿಯಾಗಿ ನಾಗೇಂದ್ರ, ಕಲಾ ಕಾರ್ಯದರ್ಶಿಯಾಗಿ ವಿಜಯ ಮೂಡಕಟ್ಟು, ವಿಜೇತ್ ಆಚಾರ್, ಜೊತೆ ಕಾರ್ಯದರ್ಶಿಯಾಗಿ ಆದರ್ಶ್ ಆಚಾರ್ ಸುಜಾತಾ ವೆಂಕಟೇಶ,ಜ್ಯೋತಿ ಚಂದ್ರ ನಾಯ್ಕ್, ರತ್ನ, ಕ್ರೀಡಾ ಕಾರ್ಯದರ್ಶಿಯಾಗಿ ರತ್ನಕರ ಆಚಾರ್, ಶ್ಯಾಮಲ ವಿಜಯ್,ಜೊತೆ ಕ್ರೀಡಾ ಕಾರ್ಯದರ್ಶಿ ಮೀನಾ ರವಿ, ಶ್ರೇಯಸ್, ಕಾರ್ತಿಕ್ ಮಣಿ,ಅಭಯ ಅಹನ್,ಜ್ಯೋತಿ, ನಾಗರತ್ನ,ಸೀಮಾ ವಿಜಯ್, ಕಾವೇರಿ, ಅಲಂಕಾರ ಸಮಿತಿಯಲ್ಲಿ ಚಂದ್ರ, ನಾಗರಾಜ, ರವಿಕಿರಣ, ಸುಧಾಕರ್ ಆಚಾರ್, ಮೆರವಣಿಗೆ ಉಸ್ತುವಾರಿಯಾಗಿ ರವೀಶ್ ಶ್ರೀಯಾನ್, ರಕ್ಷಿತ್ ಹೊಳ್ಳ, ಗಣೇಶ್ ಬೆಣ್ಣೆಕುದ್ರು, ಪ್ರಶಾಂತ್, ರಾಘವೇಂದ್ರ ಪೂಜಾರಿ, ಶಾಲಿನಿ, ವಿಮಲಾ, ಗೀತಾ ಮೇಲೆ ಬೆಟ್ಟು,ಪ್ರಾಸದ ಪೂಜಾರಿ, ಸುರೇಶ ಪೂಜಾರಿ ತೀರ್ಥಬೈಲ್, ಚರಣ್ ಪೂಜಾರಿ. ಸಲಹಾ ಸಮಿತಿಯಲ್ಲಿ ನಯನ ಕುದ್ರು,ಸುರೇಂದ್ರ, ರಾಜು ಪೂಜಾರಿ, ಪ್ರಚಾರ ಸಮಿತಿಯಲ್ಲಿ ಆದರ್ಶ, ಶ್ರೀಷಾ, ರಾಹುಲ, ಚರಣ, ಮನಿಷಾ, ಭಾರತ್ ರಾಜ್, ನಾಗರಾಜ್ ಪೂಜಾರಿ, ಸುಮುಖ, ಶ್ರವಂತ್, ವಿನೇಶ್ ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿ ನಾಯಕ ಉಪನಾಯಕರ ಚುನಾವಣೆ

ಕುಂದಾಪುರ : ಕುಂದಾಪುರದ ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಚುನಾವಣೆಯ ಪರಿಕಲ್ಪನೆ ಮತ್ತು ಜವಾಬ್ದಾರಿಯ ಅರಿವು ಮೂಡಿಸುವ ಉದ್ದೇಶದಿಂದ 2026–27ನೇ ಸಾಲಿನ ವಿದ್ಯಾರ್ಥಿ ನಾಯಕ ಮತ್ತು ಉಪನಾಯಕರ ಆಯ್ಕೆಗಾಗಿ ಚುನಾವಣೆ ಶನಿವಾರ ನಡೆಯಿತು. ಸಾರ್ವತ್ರಿಕ ಚುನಾವಣೆಯ ಅರಿವು ಮೂಡಿಸುವ ಸಲುವಾಗಿ ಚುನಾವಣೆಯನ್ನು ಇ.ವಿ.ಎಮ್ ಆಪ್ ಮೂಲಕ ನಡೆಸಲಾಯಿತು. ಶಾಲಾ ವಿದ್ಯಾರ್ಥಿ ನಾಯಕಿಯಾಗಿ ಇಂಚರಾ ಆರ್. ಮತ್ತು ಉಪನಾಯಕನಾಗಿ ಇಬ್ರಾಹಿಂ ಕ್ವೈಸ್ ಖಾನ್ ಆಯ್ಕೆಯಾದರು.

ತಂಬಾಕು ನಿಷೇಧ ಜಾಗೃತಿ

ಕೋಟ: ವಿವೇಕ ಆಂಗ್ಲಮಾಧ್ಯಮ ಪ್ರೌಢಶಾಲೆ ಕೋಟ ಇಲ್ಲಿ ತಂಬೇಕು ನಿಷೇದ ಜಾಗೃತಿ ಜಾಥಾ ಇತ್ತೀಚೆಗೆ ಶಾಲಾ ಆವರಣದಲ್ಲಿ ನಡೆಯಿತು. ಕಾರ್ಯಕ್ರಮಕ್ಕೆ ಮುಖ್ಯ ಶಿಕ್ಷಕಿ ಪ್ರೀತಿರೇಖಾ ಚಾಲನೆ ನೀಡಿದರು. ದೈಹಿಕ ಶಿಕ್ಷಕರಾದ ಅಚ್ಯುತ ಉಪಾಧ್ಯಾಯ, ರಕ್ಷತ್ ಹಾಗೂ ಶಿಕ್ಷಕರಾದ ಪೂರ್ಣೇಶ, ಅಶ್ವಿನಿ ಭಟ್, ಅಶ್ವಿನಿ ಶೆಟ್ಟಿ, ದಿವ್ಯಾ ಹಾಜರಿದ್ದರು.

ಆಯ್ಕೆ



ಬೈಂದೂರು: ನಾವುಂದ ಲಯನ್ಸ್ ಕ್ಲಬ್‌ನ 2026–27ನೇ ಸಾಲಿನ ನೂತನ ಅಧ್ಯಕ್ಷರಾಗಿ ಅಶೋಕ ವಿ. ಆಚಾರ್ಯ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಕಾರ್ಯದರ್ಶಿಯಾಗಿ ಇಲಿಯಾಸ್ ಹಾಗೂ ಖಜಾಂಚಿಯಾಗಿ ರಾಜು ಬಿ. ದೇವಾಡಿಗ ಇವರನ್ನು ಆಯ್ಕೆ ಮಾಡಲಾಗಿದೆ.

ಮೊದಲನೇ ಪುಟದಿಂದ

ಪಾಳು ಬಿದ್ದ ಸೇತುವೆ

ಕಾವೇರಿ ಮಡಿಲಿಗೆ ಕಸ ಎಸೆಯುತ್ತಿದ್ದ ಜಾಗದಲ್ಲೇ ಇಂದುಹೂವುಗಳು ಅರಳುವಂತೆ ಮಾಡಿರುವ ಈ ಬೃಹತ್ ಯೋಜನೆಗೆ ಮಡಿಕೇರಿ ಶಾಸಕ ಡಾ. ಮಂಥರ್ ಗೌಡ, ಕುಶಾಲನಗರ ತಾ.ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್, ಕುಶಾಲನಗರ ಅಭಿವೃದ್ಧಿ ಪ್ರಾಧಿಕಾರ (ಕುಡಾ) ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ಮುಖ್ಯಾಧಿಕಾರಿ ಗಿರೀಶ್ , ಸ್ಥಳೀಯ ದಾನಿಗಳು ಮತ್ತು ಉದ್ದಿಮೆದಾರರ ಆರ್ಥಿಕ ಹಾಗೂ ಸಾಮಾಜಿಕ ಬೆಂಬಲದಿಂದ ಈ ಉದ್ಯಾನವನ ರೂಪುಗೊಂಡಿದೆ. ಇತಿಹಾಸವನ್ನು ಸಮಾಧಿ ಮಾಡದೆ ಅದನ್ನು ಭವಿಷ್ಯದ ಸುಂದರ ಪ್ರವಾಸಿ ತಾಣವನ್ನಾಗಿ ಮಾರ್ಪಡಿಸಬಹುದೆಂಬುದಕ್ಕೆ ಈ ಪಾರ್ಕ್ ಇಡೀ ರಾಜ್ಯಕ್ಕೇ ಮಾದರಿಯಾಗಿದೆ.

ಶಾಸಕ ಕಿರಣ್ ಕುಮಾರ್ ಕೊಡ್ಗಿ ಅವರಿಂದ ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮ

ಜನಸಾಮಾನ್ಯರ ಸಮಸ್ಯೆಗಳನ್ನು ಶೀಘ್ರ ಬಗೆಹರಿಸಲು ಪ್ರಯತ್ನ



ಕೋಟ: ಜನಸಾಮಾನ್ಯ ಸಮಸ್ಯೆಗಳಿಗೆ ಸ್ಪಂದಿಸಲು ಜನಸಂಪರ್ಕ ಸಭೆ ಆಯೋಜಿಸಿ ಪರಿಹಾರ ಕಂಡುಕೊಳ್ಳಲು ವೇದಿಕೆ ಸೃಷ್ಟಿಸಲಾಗಿದೆ ಎಂದು ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ ಹೇಳಿದ್ದಾರೆ.

ಗುರುವಾರ ಕೋಟ ಗ್ರಾ.ಪಂ. ಸಭಾಂಗಣದಲ್ಲಿ ಸಾರ್ವಜನಿಕ ಅಹವಾಲು ಸ್ವೀಕಾರಕ್ಕಾಗಿ ಆಯೋಜಿಸಿದ ಜನಸಂಪರ್ಕ ಸಭೆಯಲ್ಲಿ ಮಾತನಾಡಿ, ಜನಸಾಮಾನ್ಯರ ಭವಣೆಯನ್ನು ಅತಿ ಹತ್ತಿರದಲ್ಲಿ ಶಾಸಕನಾಗಿ ನಾನು ಬಗೆಹರಿಸಲು ಪ್ರಯತ್ನಿಸುತ್ತಿದ್ದೇನೆ, ಸರಕಾರಿ ಸವಲತ್ತುಗಳಲ್ಲಿರುವ ಅಥವಾ ಇಲಾಖೆಗಳ ನಡುವೆ ಸಮನ್ವಯ ಸಾಧಿಸಲು ಈ ಜನಸಂಪರ್ಕ ಸಭೆ ಪರಿಣಾಮಕಾರಿಯಾಗಲಿದೆ ಎಂದರು.

ವಿವಿಧ ಇಲಾಖೆಗಳಿಂದ ಪ್ರಾರಂಭದಲ್ಲಿ ಮಾಹಿತಿಯನ್ನು ನೀಡಲಾಯಿತು. ಬಳಿಕ ಅಹವಾಲು ಸ್ವೀಕಾರ ಜರಗಿತು.

ಪ್ಲೀಸ್ ನಮ್ಮ ಭಾಗದ ರಸ್ತೆ ಸಮಸ್ಯೆ ಬಗೆರಿಸಿ

ಇದೇ ಮೊದಲ ಬಾರಿಗೆ ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಜನಸಾಮಾನ್ಯರ ಸಮಸ್ಯೆಗಳನ್ನು ಅತಿ ಹತ್ತಿರದಲ್ಲಿ ಕಾಣಲು ಜನಸಂಪರ್ಕ ಸಭೆಯನ್ನು ಕಳೆದ ತಿಂಗಳಿಂದ ಶಾಸಕ ಕೊಡ್ಗಿ ಆಯೋಜಿಸಿದ್ದಾರೆ. ಅದರಂತೆ ಗುರುವಾರ ಕೋಟ ಗ್ರಾ.ಪಂ.ಸಭಾಂಗಣದಲ್ಲಿ ಸಮಸ್ಯೆಗಳನಿರಿಸಿಕೊಂಡು ಸಾಕಷ್ಟು ಪ್ರಮಾಣ ದಲ್ಲಿ ಜನಸಾಮಾನ್ಯರು ಕೈಯಲ್ಲಿ ಮನವಿ ಪತ್ರ ಸೇರಿದಂತೆ ವಿವಿಧ ದಾಖಲೆಗಳನ್ನಿಡಿದುಕೊಂಡು ಅಹವಾಲನ್ನು ಶಾಸಕರ ಬಳಿ ತೋಡಿಕೊಂಡರು.

ಪ್ರಮುಖ ಸಮಸ್ಯೆಗಳು

ಮೂಡುಗಿಳಿಯಾರು ಭಾಗದ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಿವೃತ್ತ ಶಿಕ್ಷಕ ಹಂದಕುಂದ ಸೋಮಶೇಖರ್ ಶೆಟ್ಟಿ ತಮ್ಮೂರ ಹೊಳೆ ಹೂಳು ತೆರವು, ಕೇಂದ್ರ ಸರಕಾರದ ಜಲಜೀವನ್ ಯೋಜನೆಯಡಿ ಕುಡಿಯುವ ನೀರಿನ ಸಮಸ್ಯೆಯನ್ನು ಶಾಸಕರಲ್ಲಿ ಪ್ರಸ್ತಾಪಿಸಿದರು.

ಕಾಂಡ್ಲಾ ಗಿಡ ತೆರವು ಆಗ್ರಹ

ಮಣೂರು ಪಡುಕರೆಯ ಉಪ್ಪು ನೀರಿನ ಹೊಳೆಯಲ್ಲಿ ಕಾಂಡ್ಲ ಗಿಡಗಳು ಹೊಳೆಯನ್ನು ಆವರಿಸಿಕೊಂಡಿದೆ ಇದರಿಂದ ನೀರು ಸರಾಗವಾಗಿ ಹರಿಯದೆ ನೂರಾರು ಎಕ್ಕರೆಕೃಷಿ ಭೂಮಿ ಕೃತಕ ನೆರೆಗೆ ಸಿಲುಕುತಿದೆ ಈ ಬಗ್ಗೆ ಸಾಕಷ್ಟು ಬಾರಿ ಪ್ರಸ್ತಾಪಿಸಿದ್ದೆ ಪರಿಹಾರ ಕಂಡಿಲ್ಲ ಎಂದು ಪಂಚಾಯತ್ ಮಾಜಿ ಸದಸ್ಯ ಭುಜಂಗ ಗುರಿಕಾರ ಶಾಸಕರಲ್ಲಿ ಮನವಿ ಇತ್ತರು. ಈ ಬಗ್ಗೆ ಸಂಬಂಧಿಸಿದ ಇಲಾಖೆಯೊಂದಿಗೆ ಮಾತುಕತೆ ನಡೆಸಿ ಪರಿಹಾರಕ್ಕೆ ಕಂಡುಕೊಳ್ಳುವ ಭರವಸೆಯನ್ನು ಶಾಸಕರು ಇತ್ತರು.

> **ರೆಸಾರ್ಟ್‌ಗಳಿಂದ ಸಮಸ್ಯೆ**
>
> ಜನಸಂಪರ್ಕ ಸಭೆಯಲ್ಲಿ ಮಣೂರು ಪಡುಕರೆ ಭಾಗದ ಮೀನುಗಾರರು ಆ ಭಾಗದಲ್ಲಿರುವ ಹಲವು ರೇಸಾರ್ಟ್ ಗಳಿಂದ ಮೀನುಗಾರಿಕೆಗೆ ಸಮಸ್ಯೆ ತಂದೊಡ್ಡಿ ಬೀಚ್ ಸಮೀಪದ ಸರಕಾರಿ ಸ್ಥಳ ಒತ್ತುವರಿ ಪಡಿಸಿಕೊಂಡು ಗೇಟ್ ಅಳವಡಿಸಿ ಸಾಂಪ್ರದಾಯಿಕ ಮೀನುಗಾರಿಕೆಗೆ ಸಮಸ್ಯೆಯಾಗಿಸಿದ್ದಾರೆ ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಮೀನುಗಾರರು ಮನವಿ ಮಾಡಿದರು.

ಕೋಟ ಪಂಚಾಯತ್ ರಸ್ತೆಯದ್ದೆ ಸಮಸ್ಯೆ

ಸಭೆಯಲ್ಲಿ ಮುಕ್ಕಾಲು ಭಾಗ ಸ್ಥಳೀಯ ವ್ಯಾಪ್ತಿಯ ರಸ್ತೆಗಳ ಸಮಸ್ಯೆ ಶಾಸಕರನ್ನು ಹೈರಾಣ ಗೊಳಿಸಿತು. ಮಣೂರು ಪಡುಕರೆ,ಹರ್ತಟ್ಟು ಗಿಳಿಯಾರು ಸೇತುವೆ, ಜಟ್ಟಿಗೇಶ್ವರ ಸಮೀಪ ರಸ್ತೆ, ಪಡುಕರೆ ಚೌಕೋಡಿ ಮನೆ ರಸ್ತೆ ಕಾಮಗಾರಿ ಲೋಪ,ಕಾಸನಗುಂದು ರಸ್ತೆ ಸಮಸ್ಯೆ, ಹರ್ತಟ್ಟು ಭಾಗದಲ್ಲಿ ಹಿಂದೂ ರುದ್ರಭೂಮಿ ಶೀಘ್ರ ನಿರ್ಮಿಸಲುಮನವಿ,ಕಾಸನಗುಂದುದಲಿತಕುಟುಂಬಕ್ಕೆ

ಹಲವು ಸಮಸ್ಯೆಗಳಿಗೆ ಪರಿಹಾರ

ಸಭೆ ಆರಂಭವಾಗುತ್ತಿದ್ದಂತೆ ಸಭೆಯಲ್ಲಿ ಪರಿಹಾರ ಕಂಡುಕೊಳ್ಳಲು ಆಗಮಿಸಿದ್ದ ಸಾರ್ವಜನಿಕರ ಸಮಸ್ಯೆಗಳಿಗೆ ನಗುಮೊಗದಲ್ಲೆ ಶಾಸಕರು ಪರಿಹಾರವನ್ನಿತ್ತರು.ಸುಮಾರು 4 ಗಂಟೆ ಅಧಿಕ ತಾಸು ಕುಳಿತು ಜನಸಾಮಾನ್ಯರ ಸಮಸ್ಯೆ ಬಗೆಹರಿಸುವ ಪ್ರಯತ್ನ ಮಾಡಿದರು.

ವಾಸ್ತವ್ಯ ಸ್ಥಳ ದಾಖಲೆ ವಿಳಂಬ ದೂರು, ಹೊನ್ನಾರಿ ಅಂಗವಾಗಿ ಆರ್‌ಟಿಸಿಯಾಗಿ ಪರಿವರ್ತಿಸುವ ಬಗ್ಗೆ ಅಂಗನವಾಡಿ ಕಾರ್ಯಕರ್ತೆ ಮನವಿ ಸಲ್ಲಿಕೆ, ಕೋಟ ಪಡುಕರೆ ಕೃಷಿ ಭೂಮಿಯಲ್ಲಿ ಭೂಕನ ಕೆರೆ ಅಭಿವೃದ್ಧಿ ಕೂಗು, ಕೋಟ ರಾಷ್ಟ್ರೀಯ ಸಮೀಪ ಕಟ್ಟಡ ಕಾಮಗಾರಿಯಿಂದ ಸಂಚಾರಕ್ಕೆ ಸಮಸ್ಯೆ ಹೀಗೆ ಹಲವು ಸಮಸ್ಯೆಗಳನ್ನು ಶಾಸಕರ ಬಳಿ ಹೇಳಿದರು. ಬ್ರಹ್ಮಾವರ ತಹಶೀಲ್ದಾರ್ ಶ್ರೀಕಾಂತ್ ಎಸ್. ಹೆಗ್ಡೆ ಕೋಟ ಪಂ.ಆಡಳಿತ ಅಧಿಕಾರಿ ಪ್ರತಾಪ್ ಶ್ಚಂದ್ರ ಶೆಟ್ಟಿ, ಕೋಟ ಕ್ರೈಂ ವಿಭಾಗದ ಎಸ್ಐ ಮಹಂತೇಶ್ ,ಪಿಡಿಒ ಉಮೇಶ್, ತಾಪಂ ಸಹಾಯಕ ಕಾರ್ಯನಿರ್ವಹಣಾಧಿಕಾರಿ ಸಂತೋಷ್ ಕುಮಾರ್ ಉಪಸ್ಥಿತರಿದ್ದರು.

ಜನತಾ ಕಾಲೇಜಿನ ವಸತಿ ನಿಲಯ ಜನತಾ 'ಶ್ಲಾಘನ ಶನಯ' ಲೋಕಾರ್ಪಣೆ

ವಿದ್ಯಾಭ್ಯಾಸ ಜೊತೆ ಉತ್ತಮವಾದ ಸಂಸ್ಕಾರವೂ ಅಗತ್ಯ



ಕುಂದಾಪುರ: ವಿದ್ಯಾರ್ಥಿಗೆ ವಿದ್ಯಾಭ್ಯಾಸದ ಜೊತೆ ಉತ್ತಮವಾದ ಸಂಸ್ಕಾರವೂ ಅತ್ಯಗತ್ಯ. ಶ್ರೇಷ್ಠವಾದ ಪರಂಪರೆ ಹೊಂದಿರುವ ನಾವು ಉತ್ತಮವಾದ ವಿದ್ಯಾಭ್ಯಾಸ, ಸಂಸ್ಕಾರ ಬೆಳೆಸಿಕೊಂಡು ಉತ್ತಮವಾದ ರೀತಿಯಲ್ಲಿ ದೇಶ ಕಟ್ಟುವುದರಲ್ಲಿ ಸಮಾಜ ನಿರ್ಮಾಣ ಮಾಡುವುದರಲ್ಲಿ ಪ್ರತಿಯೊಬ್ಬರೂ ಶ್ರಮಿಸಬೇಕು ಎಂದು ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿ ಹೇಳಿದ್ದಾರೆ.

ಹೆಮ್ಮಾಡಿ ಗ್ರಾಮದ ಸುಳ್ಸೆಯಲ್ಲಿ ನಿರ್ಮಿಸಲಾಗಿರುವ ಜನತಾ ಪ.ಪೂ. ಕಾಲೇಜಿನ ಬಾಲಕ- ಬಾಲಕಿಯರ ನೂತನ ವಸತಿ ನಿಲಯ ಜನತಾ 'ಶ್ಲಾಘನ ಶನಯ' ವನ್ನು ಗುರುವಾರ ಅವರು ಲೋಕಾರ್ಪಣೆಗೊಳಿಸಿ, ಆಶೀರ್ವಚನ ನೀಡಿದರು.

ಸಂಸ್ಕಾರ ಅತ್ಯಗತ್ಯ

ವಿದ್ಯಾಭ್ಯಾಸದಿಂದ ಬುದ್ಧಿ ವಿಕಾಸವಾಗುತ್ತದೆ. ಈ ವಿದ್ಯಾಭ್ಯಾಸ ಸಾರ್ಥಕ ಹಾಗೂ ವಿಯೋಗವಾಗಬೇಕು. ಅಂದರೆ ಅದಕ್ಕೆ ಸಂಸ್ಕಾರ ಬೇಕು. ವಿದ್ಯಾಭ್ಯಾಸದ ಜೊತೆಗೆ ಸಂಸ್ಕಾರವನ್ನು ಮೈಗೂಡಿಸಿಕೊಳ್ಳಬೇಕು. ನಮ್ಮ ಸನಾತನ ಪರಂಪರೆ, ಭಾರತೀಯ ಸಂಸ್ಕೃತಿ, ಸನಾತನ ಸಂಸ್ಕೃತಿ ನೀಡುವ ಪರಂಪರೆ ಅದು ನಮಗೆ ಬಹಳ ಮುಖ್ಯವಾದುದುಎಂದರು.

ವಿ.ಗಣೇಶ ಮೊಗವೀರ ಅವರ ತಂಡ ಪರಿಶ್ರಮದ ಮೂಲಕ ಸಂಸ್ಥೆ ಬೃಹದಾಕಾರವಾಗಿ ಬೆಳೆದಿರುವುದು ಪ್ರಶಂಸನೀಯ ಎಂದರು.

> **ಸಂತೋಷಕರ**
>
> ವಿದ್ಯಾರ್ಜನೆಗೆ ಪೂರಕವಾದ ವಾತಾವರ ಣದಲ್ಲಿ ಪ್ರಶಾಂತವಾಗಿ ಅವರ ಅಧ್ಯಯನ, ವಸತಿ ಮಾಡುತ್ತಾ ಅವರ ಅಧ್ಯಯನ ಉತ್ತಮವಾದ ರೀತಿಯಲ್ಲಿಮುಂದುವರಿಸಲು ಬೇಕಾದ ರೀತಿಯಲ್ಲಿ ಜನತಾ ಶಿಕ್ಷಣ ಸಂಸ್ಥೆ ವಸತಿ ಗೃಹ ನಿರ್ಮಾಣ ಮಾಡಿದೆ. ಈ ಸಂಸ್ಥೆ ಅನೇಕ ವರ್ಷಗಳಿಂದ ವಿಶೇಷವಾದ ಪರಿಶ್ರಮದ ಮೂಲಕ ಪ್ರತಿವರ್ಷ ಒಂದೊಂದು ಅಭಿವೃದ್ಧಿ ಹೆಜ್ಜೆ ಹಾಕುತ್ತಾ ಮುಂದೆ ಹೋಗುತ್ತಿದೆ. ಚಿಕ್ಕದಾಗಿ ಪ್ರಾರಂಭವಾದ ಈ ಸಂಸ್ಥೆ ಬಹಳಷ್ಟು ಅಭಿವೃದ್ಧಿ ಹೊಂದಿರುವುದು ಸಂತೋಷಕರ ವಿಷಯ.
>
> ● ಶೃಂಗೇರಿ ಶ್ರೀ

ಪಾದಪೂಜೆ

ಸಂಸ್ಥೆ ಅಧ್ಯಕ್ಷ ಗಣೇಶ್ ಮೊಗವೀರ ಮತ್ತು ಶ್ಯಾಮಲಾ ಗಣೇಶ ದಂಪತಿ ಸ್ವಾಮೀಜಿ ಅವರ ಪಾದಪೂಜೆ ನೆರವೇರಿಸಿದರು. ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠದ ಪ್ರಾಂತೀಯ ಧರ್ಮಾಧಿಕಾರಿ ಲೋಕೇಶ ಅಡಿಗ, ಮತ್ಸ್ಯೋದ್ಯಮಿ ಆನಂದ ಸಿ.ಕುಂದರ್, ಮಾಜಿ ಶಾಸಕ ಕೆ. ಗೋಪಾಲ ಪೂಜಾರಿ, ಬೈಂದೂರು ಮಂಡಲ ಬಿಜೆಪಿ ಅಧ್ಯಕ್ಷೆ ಅನಿತಾ ಆರ್.ಕೆ., ಜಿ.ಪಂ. ಮಾಜಿ ಅಧ್ಯಕ್ಷ ರಾಜು ಪೂಜಾರಿ, ರಾಜೀವ ಶ್ರೀಯಾನ್, ಉದಯ ಕುಮಾರ್ ಹಟ್ಟಿಯಂಗಡಿ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಉದಯ ನಾಯ್ಕ್ ಸ್ವಾಗತಿಸಿ, ದಾಮೋದರ ಶರ್ಮಾ ಕಾರ್ಯಕ್ರಮ ನಿರೂಪಿಸಿದರು.

ಉಡುಪಿ ಯಕ್ಷಗಾನ ಕಲಾರಂಗದ ಐತಿಹಾಸಿಕ ಮೈಲಿಗಲ್ಲು

ಜೂ.28: 'ಸೂರು ನೂರರ ಸಡಗರ' ಕಾರ್ಯಕ್ರಮ



ಉಡುಪಿ: ಉಡುಪಿ ಯಕ್ಷಗಾನ ಕಲಾರಂಗವು ತನ್ನ 'ವಿದ್ಯಾಪೋಷಕ್' ಯೋಜನೆಯಡಿ ನಿರ್ಮಿಸಿದ 100ನೇ ಮನೆಯ ಹಸ್ತಾಂತರ, 'ಸೂರು ನೂರರ ಸಡಗರ' ಬೃಹತ್ ಕಾರ್ಯಕ್ರಮ ಜೂ.28 ರಂದು ಹಮ್ಮಿಕೊಂಡಿದೆ ಎಂದು ಸಂಸ್ಥೆ ಅಧ್ಯಕ್ಷ ಎಂ. ಗಂಗಾಧರ ರಾವ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಲಾರಂಗವು ಕಳೆದ 26 ವರ್ಷಗಳಿಂದ ಕಲಾವಿದರ ಕಲ್ಯಾಣಕ್ಕಾಗಿ ಹಾಗೂ 22 ವರ್ಷಗಳಿಂದ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಶ್ರಮಿಸುತ್ತಿದೆ. ಇದರ ಮಹತ್ವದ ಸಾಧನೆಯಾಗಿ ವಿದ್ಯಾಪೋಷಕ್ ವಿದ್ಯಾರ್ಥಿಗಳಿಗೆ 90 ಹಾಗೂ ಬಡ ಕಲಾವಿದರಿಗೆ 10 ಸೇರಿದಂತೆ ಒಟ್ಟು 100 ಮನೆಗಳ ನಿರ್ಮಾಣ ಕಾರ್ಯ ಯಶಸ್ವಿಯಾಗಿ ಪೂರ್ಣಗೊಂಡಿದೆ ಎಂದು ಹರ್ಷ ವ್ಯಕ್ತಪಡಿಸಿದರು.

'ಶತಸ್ಮೃತಿ'ಯ ಹಸ್ತಾಂತರ

ಜೂ.28ರಂದು ಬೆಳಗ್ಗೆ 9.30ಕ್ಕೆ ಹೆಬ್ರಿ ತಾಲೂಕಿನ ಶಿವಪುರದ ಕಲ್ಕುಂಡದಲ್ಲಿ ವಿದ್ಯಾಪೋಷಕ್‌ನ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಸಿಂಚನಾ ಅವರ 100ನೇ ಮನೆ 'ಶತಸ್ಮೃತಿ'ಯ ಹಸ್ತಾಂತರ ಪ್ರಕ್ರಿಯೆ ನಡೆಯಲಿದೆ. ಪರ್ಯಾಯ ಶೀರೂರು ಮಠದ ದಿವಾನರಾದ ಡಾ. ಉದಯ ಕುಮಾರ್ ಸರಳತ್ತಾಯ ಉದ್ಘಾಟನೆ ನೆರವೇರಿಸಲಿದ್ದು, ಕಾರ್ಕಳ ಶಾಸಕ ವಿ. ಸುನಿಲ್ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಅವರು ಹೇಳಿದರು.

> ■ **ವಿದ್ಯಾರ್ಥಿಗಳಿಗೆ 90 ಹಾಗೂ ಬಡ ಕಲಾವಿದರಿಗೆ 10 ಸೇರಿದಂತೆ ಒಟ್ಟು 100 ಮನೆಗಳ ನಿರ್ಮಾಣ ಕಾರ್ಯ ಪೂರ್ಣ**
>
> ■ **ಜೂ.28ರಂದು ವಿದ್ಯಾರ್ಥಿನಿ ಸಿಂಚನಾ ಅವರ 100ನೇ ಮನೆ 'ಶತಸ್ಮೃತಿ'ಯ ಹಸ್ತಾಂತರ ಕಾರ್ಯಕ್ರಮ**

ಯಕ್ಷಗಾನ ಕಲಾರಂಗದ ಕಾರ್ಯದರ್ಶಿ ಮುರಲಿ ಕಡೆಕ್ಕಾರು ವಿವರಣೆ ನೀಡಿ, ಅಂದು ಮಧ್ಯಾಹ್ನ 2ರಿಂದ 4ರವರೆಗೆ ಸಂಸ್ಥೆಯ ಐವೈಸಿ ಸಭಾಭವನದಲ್ಲಿ ಪ್ರಧಾನ ಸಮಾರಂಭ ಜರುಗಲಿದೆ ಎಂದರು.

ಉಡುಪಿ ಸೋದೆ ವಾದಿರಾಜ ಮಠಾಧಿಶರಾದ ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದರು ದೀಪ ಬೆಳಗಿಸಿ ಆಶೀರ್ವಚನ ನೀಡಲಿದ್ದಾರೆ. ಮಾಹೆಯ ಸಹಕುಲಾಧಿಪತಿ ಡಾ. ಎಚ್. ಎಸ್. ಬಲ್ಲಾಳ ಅಧ್ಯಕ್ಷತೆ ವಹಿಸಲಿದ್ದಾರೆ. ಮಂಗಳೂರಿನ ಕರ್ನಾಟಕ ಬ್ಯಾಂಕ್‌ನ ಎಂ.ಡಿ ಮತ್ತು ಸಿಇಒ ಎಂ. ರಾಘವೇಂದ್ರ ಭಟ್ 'ಸೂರು ನೂರರ' ಸಂಪುಟ ಬಿಡುಗಡೆ ಮಾಡಲಿದ್ದು, ಕೋಟ ಗೀತಾನಂದ ಫೌಂಡೇಶನ್‌ನ ಆನಂದ ಸಿ. ಕುಂದರ್ ಶುಭ ಹಾರೈಸಲಿದ್ದಾರೆ. ಸಂಸದ ಕೋಟ ಶ್ರೀನಿವಾಸ ಪೂಜಾರಿ, ಜಿಲ್ಲೆಯ 5 ಕ್ಷೇತ್ರಗಳ ಶಾಸಕರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಸನ್ಮಾನ, ಕಸಿ ಗಿಡ ವಿತರಣೆ

ಈ ಸಂದರ್ಭ ಮನೆಗಳ ಪ್ರಾಯೋಜಕರು, ಕಾರ್ಮಿಕರನ್ನು ಸನ್ಮಾನಿಸಲಾಗುವುದು ಹಾಗೂ ಫಲಾನುಭವಿಗಳಿಗೆ ಕಸಿ ಮಾವಿನ ಗಿಡ ವಿತರಿಸಲಾಗುವುದು ಎಂದರು.

ಗೋಷ್ಠಿಯಲ್ಲಿ ಸಂಸ್ಥೆಯ ನಾರಾಯಣ ಎಂ. ಹೆಗಡೆ, ಸದಾಶಿವ ರಾವ್ ಮತ್ತು ವಿದ್ಯಾ ಪ್ರಸಾದ್ ಉಪಸ್ಥಿತರಿದ್ದರು.

ಮಾದಕ ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ನಮ್ಮೆಲ್ಲರ ಪ್ರಯತ್ನ ಅತ್ಯಗತ್ಯ: ಸಂತೋಷ್



ಕಾರ್ಕಳ: ಎಸ್‌ವಿಟಿ ವನಿತಾ ಪ.ಪೂ. ಕಾಲೇಜು ಕಾರ್ಕಳ ಹಾಗೂ ಇಂಟರ್‍ಯಾಕ್ಟ್ ಕ್ಲಬ್ ಇವರ ಸಹಕಾರದೊಂದಿಗೆ ನಶಾ ಮುಕ್ತ ಭಾರತ ಅಭಿಯಾನ ಕಾರ್ಯಕ್ರಮದಡಿ ಮಾಹಿತಿ ಕಾರ್ಯಾಗಾರ ನಡೆಯಿತು.

ಉಡುಪಿ ಜಿಲ್ಲಾ ಪೊಲೀಸ್ ಹೆಡ್‌ಕಾನ್ಸ್ಟೇಬಲ್ ಸಂತೋಷ್ ವಿದ್ಯಾರ್ಥಿಗಳಿಗೆ ಪ್ರಮಾಣ ವಚನವನ್ನು ಬೋಧಿಸಿ ಮಾದಕ ದ್ರವ್ಯಗಳ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಕ್ರಮ ಯುವ ಜನತೆಯಲ್ಲಿ ಮಾದಕ ವ್ಯಸನಗಳ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವುದರ ಜೊತೆಗೆ ಕಾನೂನಿನ ಅರಿವನ್ನು ಬೆಳೆಸುವ ಮಹತ್ವದ ಉದ್ದೇಶ ಹೊಂದಿದೆ. ಮಾದಕ ವ್ಯಸನ ಮುಕ್ತ ಸಮಾಜ ನಿರ್ಮಾಣ ನಮ್ಮೆಲ್ಲರ ಜವಾಬ್ದಾರಿಯಾಗಬೇಕು ಎಂದರು.

ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಯೋಗೇಂದ್ರ ನಾಯಕ್, ಇಂಟರ್‍ಯಾಕ್ಟ್ ಕ್ಲಬ್ ಅಧ್ಯಕ್ಷೆ ಕುಮಾರಿ ವಿಶ್ವರಿ ಮೊದಲಾದವರು ಉಪಸ್ಥಿತರಿದ್ದರು.

> **ಉತ್ತಮ ಪ್ರಜೆಗಳಾಗಿ**
>
> ಮಾದಕ ವಸ್ತುಗಳಿಗೆ ಬಲಿಯಾಗುವುದು ಎಷ್ಟು ಹಾನಿಕಾರವೂ ಅವರ ಸಂಪರ್ಕದಲ್ಲಿರುವುದು ಕೂಡ ಅಷ್ಟೇ ಹಾನಿಕಾರಕವಾಗಿದೆ. ಆದ್ದರಿಂದ ವ್ಯಸನಗಳಿಂದ ದೂರವಿರಿ. ಜೀವನವನ್ನು ಪ್ರೀತಿಸಿ. ಕಾನೂನನ್ನು ಗೌರವಿಸಿ. ಉತ್ತಮ ಪ್ರಜೆಗಳಾಗಿ ಜೀವಿಸಿ.
>
> ● ಸಂತೋಷ್

ಕಾಲೇಜಿನ ಪ್ರಾಚಾರ್ಯರಾದ ನೇಮಿರಾಜ ಶೆಟ್ಟಿ ಕೆ.ಅಧ್ಯಕ್ಷತೆ ವಹಿಸಿದ್ದರು. ಇಂಟರ್‍ಯಾಕ್ಟ್ ಕ್ಲಬ್‌ನ ಕಾರ್ಯದರ್ಶಿ ಕುಮಾರಿ ಅರ್ಪಿತ ವಂದಿಸಿದರು. ಇಂಟರ್‍ಯಾಕ್ಟ್ ಕ್ಲಬ್‌ನ ಸಂಯೋಜಕರಾದ ದೇವದಾಸ್ ಕೆರೆಮನೆ ಸ್ವಾಗತಿಸಿ, ನಿರೂಪಿಸಿದರು.

ವಿದ್ಯಾರ್ಥಿಯ ಸರ್ವಾಂಗೀಣ ಅಭಿವೃದ್ದಿಗೆ ಶಿಕ್ಷಣ ಅತಿ ಮುಖ್ಯ: ವಿನಾಯಕ ಗಾಣಿಗ



ಬೈಂದೂರು: ಹಳೆಯ ಶಿಕ್ಷಣ ಪದ್ದತಿ ಈಗ ಅರ್ಥ ಕಳೆದುಕೊಂಡು ಅದರ ಸ್ಥಾನದಲ್ಲಿ ಹೊಸ ವ್ಯಾಖ್ಯೆ ರೂಢಿಗೆ ಬಂದಿದೆ. ವಿದ್ಯಾರ್ಥಿಯ ಸರ್ವಾಂಗೀಣ ಅಭಿವೃದ್ಧಿ ಶಿಕ್ಷಣದ ಗುರಿಯೆನಿಸಿದೆ. ಅದರ ಸಾಧನೆಗೆ ವಿದ್ಯಾರ್ಥಿ, ಶಿಕ್ಷಕ, ಪೋಷಕರ ಸಂಯೋಜಿತ ತ್ರಿಕೋನ ಸ್ಪಂದನೆ ಅಗತ್ಯ ಎಂದು ಆಲಂದೂರು ಸರ್ಕಾರಿ ಕಿ.ಪಾ.ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ವಿನಾಯಕ ಗಾಣಿಗ ಹೇಳಿದ್ದಾರೆ.

ಯಡ್ತರೆ ಗ್ರಾಮದ ಆಲಂದೂರು ಸರ್ಕಾರಿ ಕಿ.ಪ್ರಾ. ಶಾಲೆಯಲ್ಲಿ ಈ ಸಾಲಿನಲ್ಲಿ ಆರಂಭಗೊಂಡ ನೂತನ ಎಲ್‌ಕೆಜಿ , ಯುಕೆಜಿ ತರಗತಿ ಉದ್ಘಾಟಿಸಿ ಮಾತನಾಡಿದರು.

ಬೈಂದೂರು ರೋಟರಿ ಕ್ಲಬ್ ನಿಯೋಜಿತ ಅಧ್ಯಕ್ಷಅರುಣಕುಮಾರ್ ಶಿರೂರುಮಾತನಾಡಿದರು. ಯಡ್ತರೆ ಗ್ರಾ.ಪಂ. ಮಾಜಿ ಸದಸ್ಯ ಉದಯ ಮಾಕೋಡಿ, ಮಾನಸ ಮಿತ್ರ ಮಂಡಳಿ ಅಧ್ಯಕ್ಷ ಸುರೇಶ್ ಎಸ್. ಪೂಜಾರಿ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಮಹೇಶ್ ಮಾಕೋಡಿ, ಮಾನಸ ಮಹಿಳಾ ಮಂಡಳ ಅಧ್ಯಕ್ಷೆ ನೀತಾ ಗಣೇಶ, ಶಾಲಾ ಮುಖ್ಯಶಿಕ್ಷಕಿ ವಿನ್ನಿ ಫೆರ್ನಾಂಡಿಸ್ ಇದ್ದರು. ಶಿಲ್ಪಾ ಭಟ್ ಸ್ವಾಗತಿಸಿ, ಆಲಂದೂರುಮಂಜುನಾಥಗಾಣಿಗ ನಿರೂಪಿಸಿ, ಅಶ್ವಿನಿ ಕೊಠಾರಿ ವಂದಿಸಿದರು.

> **ಸಹಕಾರಿ**
>
> ಸರ್ಕಾರಿ ಶಾಲೆಗಳು ಅಭಿವೃದ್ಧಿಯಾಗಬೇಕಾದರೆ ಸಾರ್ವಜನಿಕರ ಸಹಭಾಗಿತ್ವ-ಕ್ರಿಯಾತ್ಮಕ ಚಿಂತನೆಗಳು ಮುಖ್ಯ. ಹೀಗಾಗಿ ಶಾಲೆಗಳಲ್ಲಿ ಹೊಸತನ ಅಳವಡಿಸಿಕೊಂಡು ಸಂಸ್ಥೆ ಉಳಿಸಿಕೊಳ್ಳಬೇಕಾದ ಅನಿವಾರ್ಯತೆಯಿದೆ. ಶಿಕ್ಷಕರ ಆಸಕ್ತಿ -ಪಾಲಕರ ಪ್ರೋತ್ಸಾಹ ಶಿಕ್ಷಣಾಭಿಮಾನಿಗಳ ಬೆಂಬಲ ಇದ್ದಾಗ ಸರ್ಕಾರಿ ಶಾಲೆಗಳು ಉತ್ತಮವಾಗಿ ಬೆಳೆಯಲು ಸಹಕಾರಿಯಾಗುತ್ತದೆ.
>
> ● ಅರುಣ ಕುಮಾರ್

ಹಿರೇಬೆಟ್ಟು ಶ್ರೀ ಮಹಾಲಿಂಗೇಶ್ವರ ದೇವಳ ಜೀರ್ಣೋದ್ಧಾರ ಶಿಲಾನ್ಯಾಸ





ಹಿರಿಯಡ್ಕ: ಇಲ್ಲಿನ ಹಿರೇಬೆಟ್ಟು ಭಟ್ರಕೋಡಿಯಲ್ಲಿನ ಗ್ರಾಮದ ದೇವರಾದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರದ ಕಾರ್ಯದ ಅಂಗವಾಗಿ ಶಿಲಾಮಯ ಗರ್ಭಗೃಹದ ನಿರ್ಮಾಣಕ್ಕೆ ಬಳಸುವ ನೂತನ ಶಿಲೆಗಳಿಗೆ ಪ್ರಥಮ ಪೂಜೆ ಸಲ್ಲಿಸುವ ಮೂಲಕ ಉಡುಪಿಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ, ಸಿಜೆಎಮ್ ಎಂ. ಪುರುಷೋತ್ತಮ್ ಬುಧವಾರ ಚಾಲನೆ ನೀಡಿದರು.

ಶ್ರೀ ಕ್ಷೇತ್ರದ ತಂತ್ರಿಗಳಾದ ವಿದ್ವಾನ್ ಡಾ.ಸತ್ಯ ಕೃಷ್ಣ ಭಟ್ ಮಂಗಳೂರು ಇವರ ನೇತೃತ್ವದಲ್ಲಿ ಶಿಲಾನ್ಯಾಸದ ಶಿಲೆಗಳಿಗೆ ಅರಶಿನ, ಕುಂಕುಮ, ಹಾಲು, ಹೂಗಳನ್ನು ಸಮರ್ಪಿಸಿ, ಸ್ವತಃ ನ್ಯಾಯಾಧೀಶರೇ ಆರತಿ ಬೆಳಗುವುದರ ಮೂಲಕ ಶುಭ ಕಾರ್ಯ ಆರಂಭಿಸಿದರು.

ಜೀರ್ಣೋದ್ದಾರ ಸಮಿತಿ ಅಧ್ಯಕ್ಷ ಶ್ರೀನಿಧಿ ಹೆಗ್ಡೆ, ಪ್ರಧಾನ ಕಾರ್ಯದರ್ಶಿಗಳಾದ ಪ್ರಕಾಶ್ ನಾಯಕ್, ಸೀತಾರಾಮ್ ಭಟ್, ಜಯಪ್ರಕಾಶ್ ನಾಯಕ್, ಶಂಕರ ನಾಯಕ್, ಚಂದ್ರಶೇಖರ ನಾಯಕ್, ಸುಂದರ ಮೂಲ್ಯ, ನಾರಾಯಣ ಪೂಜಾರಿ, ಚಂದ್ರಯ್ಯ ಆಚಾರ್ಯ, ಪುರಂದರ ಆಚಾರ್ಯ, ರಮೇಶ್ ನಾಯಕ್, ಗುರುನಂದನ್ ನಾಯಕ್, ಗುರುದಾಸ್ ಭಂಡಾರಿ, ಸುಧೀರ್ ಶೆಟ್ಟಿ, ಶ್ಯಾಮ್ ನಾಯ್ಕ್, ಸುರೇಶ್ ನಾಯ್ಕ್, ಶೈಲೇಶ್ ಪೂಜಾರಿ, ಗುರುರಾಜ್ ಆಚಾರ್ಯ, ಶಶೀಂದ್ರ ಪೂಜಾರಿ, ದಿನೇಶ್ ಪ್ರಭು, ಡಾ.ಕೃಷ್ಣಮೂರ್ತಿ, ಕೇಶವ್ ಭಂಡಾರಿ, ಗೋಪಾಲ್ ನಾಯಕ್, ಕೇಶವ್ ನಾಯಕ್, ನಂದಕುಮಾರ್, ಮಹದೇವ್ ಭಟ್, ಮುರುಳೀಧರ್ ಲಾಗ್ವಂಕರ್ ಮತ್ತಿತರರು ಇದ್ದರು.

ಹವಾಮಾನದ ವೈಪರೀತ್ಯದಿಂದಾಗಿ ಆರೋಗ್ಯ ಸಮಸ್ಯೆ | ಆಸ್ಪತ್ರೆಗಳಲ್ಲೂ ಹೆಚ್ಚಿದ ಹೊರರೋಗಿಗಳ ಸಂಖ್ಯೆ

ಜನರನ್ನು ಎಡೆಬಿಡದೆ ಕಾಡುತ್ತಿದೆ ಶೀತ, ಕೆಮ್ಮು, ಜ್ವರ, ವೈರಲ್ ಸೋಂಕಿನ ಭೀತಿ!



ಉಡುಪಿ: ಜಿಲ್ಲೆಯಲ್ಲಿ ಕಳೆದ ಕೆಲವು ದಿನಗಳಿಂದ ಮುಂಗಾರು ಮಳೆ ಕುಂಠಿತಗೊಂಡು, ಬಿಸಿಲು ಮತ್ತು ಅಲ್ಪಸ್ವಲ್ಪ ಮಳೆಯ ಪರಿಣಾಮ ಆರೋಗ್ಯದ ಮೇಲಾಗುತ್ತಿದೆ. ವಾತಾವರಣದಲ್ಲಿನ ಏರುಪೇರಿನಿಂದ ಜಿಲ್ಲೆಯ ಜನಸಾಮಾನ್ಯರು, ಮಕ್ಕಳು ಹಾಗೂ ಹಿರಿಯರಲ್ಲಿ ಜ್ವರ, ವಾಂತಿ, ಭೇದಿ, ಶೀತ ಮತ್ತು ಕೆಮ್ಮಿನಂತಹ ಆರೋಗ್ಯ ಸಮಸ್ಯೆಗಳು ವ್ಯಾಪಕವಾಗಿ ಕಾಣಿಸಿಕೊಳ್ಳುತ್ತಿವೆ.

ಜಿಲ್ಲಾಸ್ಪತ್ರೆ, ಖಾಸಗಿ ಕ್ಲಿನಿಕ್‌ಗಳಲ್ಲಿ ಒಪಿಡಿ ರಶ್ ಹವಾಮಾನ ವೈಪರೀತ್ಯದಿಂದ ಉಡುಪಿಯ ಸರಕಾರಿ ಜಿಲ್ಲಾಸ್ಪತ್ರೆ ಸೇರಿದಂತೆ ಸ್ಥಳೀಯ ಕ್ಲಿನಿಕ್ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಹೊರರೋಗಿಗಳ (ಒಪಿಡಿ) ಸಂಖ್ಯೆ ಗಣನೀಯ ಹೆಚ್ಚಾಗಿದೆ. ಸಾಮಾನ್ಯವಾಗಿ ಜಿಲ್ಲಾಸ್ಪತ್ರೆಗೆ ದಿನವೊಂದಕ್ಕೆ 400 ರಿಂದ 500 ಹೊರರೋಗಿಗಳು ಬರುತ್ತಿದ್ದರು. ಆದರೆ ಪ್ರಸ್ತುತ ವಾತಾವರಣದ ವೈಪರೀತ್ಯದಿಂದ ಈ ಸಂಖ್ಯೆ ದಿನಕ್ಕೆ 600 ರಿಂದ 700 ರ ಆಸುಪಾಸಿಗೆ ಏರಿಕೆಯಾಗಿದೆ. ಖಾಸಗಿ ಆಸ್ಪತ್ರೆ ಮತ್ತು ಸಣ್ಣಪುಟ್ಟ ಕ್ಲಿನಿಕ್‌ಗಳಲ್ಲೂ ಒಳರೋಗಿಗಳು ಸಾಲುಗಟ್ಟಿ ನಿಲ್ಲುತ್ತಿರುವ ದೃಶ್ಯಗಳು ಕಂಡುಬರುತ್ತಿದ್ದು, ವೈದ್ಯಕೀಯ ವಲಯ ಹಗಲಿರುಳು ಶ್ರಮಿಸುವಂತಾಗಿದೆ.

ಸಾರ್ವಜನಿಕರು ವಹಿಸಬೇಕಾದ ಮುಂಜಾಗ್ರತೆ

ಈ ದಿನಗಳಲ್ಲಿ ಆರೋಗ್ಯ ಕಾಪಾಡಿಕೊಳ್ಳಲು ಸಾರ್ವಜನಿಕರು ವಿಶೇಷ ಮುನ್ನೆಚ್ಚರಿಕೆ ವಹಿಸುವುದು ಅನಿವಾರ್ಯವಾಗಿದೆ. ಹೊರಗಿನ ತೆರೆದ ಆಹಾರ ಪದಾರ್ಥ, ಕತ್ತರಿಸಿಟ್ಟ ಹಣ್ಣುಗಳನ್ನು ತಿನ್ನುವುದನ್ನು ನಿಲ್ಲಿಸಬೇಕು. ರಸ್ತೆ ಬದಿಯ ಜ್ಯೂಸ್ ಅಥವಾ ತಂಪು ಪಾನೀಯಗಳ ಸೇವನೆಗಿಂತ ಮನೆ ಯಲ್ಲೇ ಸಿದ್ಧಪಡಿ ಸಿದ ಬಿಸಿಬಿಸಿಯಾದ – ತಾಜಾ ಆಹಾರಕ್ಕೆ ಮೊದಲ ಆದ್ಯತೆ ನೀಡಬೇಕು. ವೈರಲ್ ಜ್ವರ ಅಥವಾ ಕೆಮ್ಮು ಇರುವವರಿಂದ ಸ್ವಲ್ಪ ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು.

> **ಕಲುಷಿತ ನೀರು , ವೈರಲ್ ಸೋಂಕಿನ ಭೀತಿ**
>
> **ಮಳೆ-ಬಿಸಿಲಿನ ಈ ಮಿಶ್ರ ವಾತಾವರಣವು ಬ್ಯಾಕ್ಟೀರಿಯಾ, ವೈರಸ್‌ಗಳ ಬೆಳವಣಿಗೆಗೆ ಪೂರಕವಾಗಿದ್ದು, ಈ ಸಮಯದಲ್ಲಿ ನೀರಿನ ಮೂಲಗಳು ಕಲುಷಿತಗೊಳ್ಳುವ ಸಾಧ್ಯತೆ ದಟ್ಟವಾಗಿರುತ್ತದೆ. ಹವಾಮಾನ ಬದಲಾದ ತಕ್ಷಣ ದೇಹದ ರೋಗನಿರೋಧಕ ಶಕ್ತಿ ತಾತ್ಕಾಲಿಕ ಕುಸಿಯುವು ದರಿಂದ ಜ್ವರ, ಶ್ವಾಸಕೋಶದ ಸೋಂಕು ಸುಲಭವಾಗಿ ಹರಡುತ್ತದೆ. ವಿಶೇಷವಾಗಿ ಕಲುಷಿತ ನೀರು ಮತ್ತು ಆಹಾರ ಸೇವನೆಯಿಂದ ವಾಂತಿ - ಭೇದಿಯಂತಹ ಗ್ಯಾಸ್ಟ್ರೋ- ಎಂಟರೈಟಿಸ್ ಲಕ್ಷಣಗಳು ಎಲ್ಲೆಡೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ.**

ನೀರಿನ ಸಮರ್ಪಕ ಬಳಕೆ - ಜಲಸಂರಕ್ಷಣೆ

ದೇಹದ ಆರೋಗ್ಯ ಕಾಪಾಡುವಲ್ಲಿ ನೀರಿನ ಪಾತ್ರ ದೊಡ್ಡದಾಗಿದ್ದು, ಈ ಹವಾಮಾನದಲ್ಲಿ ಕಡ್ಡಾಯವಾಗಿ ನೀರನ್ನು ಚೆನ್ನಾಗಿ ಕುದಿಸಿ, ಆರಿಸಿ ಕುಡಿಯಬೇಕು. ಬಿಸಿಲಿನ ಬೇಗೆ , ವಾಂತಿ–ಭೇದಿಯಿಂದ ದೇಹದಲ್ಲಿ ನಿರ್ಜಲೀಕರಣ (ಡಿಹೈಡ್ರೇಶನ್) ಉಂಟಾಗುವ ಸಾಧ್ಯತೆ ಹೆಚ್ಚಿದೆ. ದಿನಕ್ಕೆ ಕನಿಷ್ಠ 3 ರಿಂದ 4 ಲೀ. ನೀರು ಕುಡಿಯಬೇಕು. ದಣಿವಾರಿಸಿಕೊಳ್ಳಲು ಒಆರ್‌ಎಸ್ ದ್ರಾವಣ, ಎಳನೀರು ಅಥವಾ ನಿಂಬೆ ಹಣ್ಣಿನ ಶರಬತ್ತನ್ನು ಬಳಸಬಹುದು.

- **ಹವಾಮಾನದ ಏರುಪೇರಿಗೆ ತಕ್ಷಣ ತುತ್ತಾಗುವುದು ಮಕ್ಕಳಾಗಿರುವುದರಿಂದ ಪೋಷಕರು ಈ ಸಮಯ ಜಾಗರೂಕತೆ ವಹಿಸಬೇಕು.**
- **ಮಕ್ಕಳಿಗೆ ಶಾಲೆಗೆ ಹೋಗುವಾಗ ಕುದಿಸಿ ಆರಿಸಿದ ನೀರನ್ನು ಕೊಡಬೇಕು. ಮಳೆಯಲ್ಲಿ ನೆನೆಯದಂತೆ , ಶೀತ ಗಾಳಿಗೆ ಒಡ್ಡಿಕೊಳ್ಳದಂತೆ ಜೋಪಾನ ಮಾಡಬೇಕು.**
- **ಒಂದು ವೇಳೆ ಮಗುವಿಗೆ ಜ್ವರ, ಅತಿಯಾದ ಆಲಸ್ಯ , ವಾಂತಿ ಕಾಣಿಸಿಕೊಂಡರೆ ನಿರ್ಲಕ್ಷ್ಯ ವಹಿಸದೆ ತಕ್ಷಣ ತಜ್ಞ ವೈದ್ಯರ ಬಳಿ ಕರೆದೊಯ್ದು ಚಿಕಿತ್ಸೆ ಕೊಡಿಸಬೇಕು**
- **ಸ್ವಯಂ ವೈದ್ಯ ಪದ್ಧತಿ ಮಾಡಬಾರದು.**